ಕರ್ನಾಟಕ ಸರ್ಕಾರ

ಪದವಿ ಪೂರ್ವ ಶಿಕ್ಷಣ ಇಲಾಖೆ

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012

# ಸೂಕ್ಷ್ಮ ಅರ್ಥಶಾಸ್ತ್ರ ಪರಿಚಯ

## ದ್ವಿತೀಯ ಪಿ.ಯು.ಸಿ. ಅರ್ಥಶಾಸ್ತ್ರ ಪಠ್ಯಪುಸ್ತಕ

# *Introductory Microeconomics*

## Textbook in Economics for Second PUC

NATIONAL COUNCIL OF EDUCATIONAL RESEARCH AND TRAINING

ISBN 81-7450-678-0

***First Edition***
February 2007 Phalguna 1928

***Reprinted***
December 2007 Agrahayana 1929
December 2008 Pausa 1930
January 2010 Magha 1931
March 2013 Phalguna 1934
November 2013 Kartik 1935
December 2014 Pausa 1936
December 2015 Pausa 1937
February 2017 Magha 1938

***PD 120T MJ***

© **National Council of Educational Research and Training, 2007**

Printed on 80 GSM paper with NCERT watermark

Published at the Publication Division by the Secretary, National Council of Educational Research and Training, Sri Aurobindo Marg, New Delhi 110 016 and printed at Bengal Offset Works, G-181, Sector-63, Noida 201 301

**ALL RIGHTS RESERVED**

- No part of this publication may be reproduced, stored in a retrieval system or transmitted, in any form or by any means, electronic, mechanical, photocopying, recording or otherwise without the prior permission of the publisher.
- This book is sold subject to the condition that it shall not, by way of trade, be lent, re-sold, hired out or otherwise disposed of without the publisher's consent, in any form of binding or cover other than that in which it is published.
- The correct price of this publication is the price printed on this page, Any revised price indicated by a rubber stamp or by a sticker or by any other means is incorrect and should be unacceptable.

**OFFICES OF THE PUBLICATION DIVISION, NCERT**

NCERT Campus
Sri Aurobindo Marg
**New Delhi 110 016** **Phone : 011-26562708**

108, 100 Feet Road
Hosdakere Halli Extension
Banashankari III Stage
**Bengaluru 560 085** **Phone : 080-26725740**

Navjivan Trust Building
P.O.Navjivan
**Ahmedabad 380 014** **Phone : 079-27541446**

CWC Campus
Opp. Dhankal Bus Stop
Panihati
**Kolkata 700 114** **Phone : 033-25530454**

CWC Complex
Maligaon
**Guwahati 781 021** **Phone : 0361-2674869**

**Publication Team**

| | |
|---|---|
| Head, Publication Division | : *M. Siraj Anwar* |
| Chief Editor | : *Shveta Uppal* |
| Chief Business Manager | : *Gautam Ganguly* |
| Chief Production Officer (incharge) | : *Arun Chitkara* |
| Assistant Editor | : *R.N. Bharadwaj* |
| Production Assistant | : *Sunil Kumar* |

**Cover, Layout and Illustrations**
*Nidhi Wadhwa*

# Foreword

THE National Curriculum Framework (NCF), 2005, recommends that children's life at school must be linked to their life outside the school. This principle marks a departure from the legacy of bookish learning which continues to shape our system and causes a gap between the school, home and community. The syllabi and textbooks developed on the basis of NCF signify an attempt to implement this basic idea. They also attempt to discourage rote learning and the maintenance of sharp boundaries between different subject areas. We hope these measures will take us significantly further in the direction of a childcentered system of education outlined in the National Policy of Education (1986).

The success of this effort depends on the steps that school principals and teachers will take to encourage children to reflect on their own learning and to pursue imaginative activities and questions. We must recognise that, given space, time and freedom, children generate new knowledge by engaging with the information passed on to them by adults. Treating the prescribed textbook as the sole basis of examination is one of the key reasons why other resources and sites of learning are ignored. Inculcating creativity and initiative is possible if we perceive and treat children as participants in learning, not as receivers of a fixed body of knowledge.

These aims imply considerable change in school routines and mode of functioning. Flexibility in the daily time-table is as necessary as rigour in implementing the annual calendar so that the required number of teaching days are actually devoted to teaching. The methods used for teaching and evaluation will also determine how effective this textbook proves for making children's life at school a happy experience, rather than a source of stress or boredom. Syllabus designers have tried to address the problem of curricular burden by restructuring and reorienting knowledge at different stages with greater consideration for child psychology and the time available for teaching. The textbook attempts to enhance this endeavour by giving higher priority and space to opportunities for contemplation and wondering, discussion in small groups, and activities requiring hands-on experience.

The National Council of Educational Research and Training (NCERT) appreciates the hard work done by the textbook development committee responsible for this book. We wish to thank the Chairperson of the advisory group in Social Sciences, at the higher secondary level, Professor Hari Vasudevan and the Chief Advisor for this book, Professor Tapas Majumdar, for guiding the work of this committee. Several teachers contributed to the development of this textbook; we are grateful to their principals for making this possible. We are indebted to the institutions and organisations which have generously permitted us to draw upon their resources,

materials and personnel. We are especially grateful to the members of the National Monitoring Committee, appointed by the Department of Secondary and Higher Education, Ministry of Human Resource Development under the Chairpersonship of Professor Mrinal Miri and Professor G.P. Deshpande for their valuable time and contribution. As an organisation committed to systemic reform and continuous improvement in the quality of its products, NCERT welcomes comments and suggestions which will enable us to undertake further revision and refinements.

**Director**

**National Council of Educational Research and Training**

**New Delhi**
***20 November 2006***

# Text book Development Committee

**CHAIRPERSON, ADVISORY COMMITTEE FOR SOCIAL SCIENCE TEXTBOOKS AT THE HIGHER SECONDARY LEVEL**

Hari Vasudevan, *Professor,* Department of History, University of Calcutta, Kolkata

**CHIEF ADVISOR**

Tapas Majumdar, *Professor Emeritus of Economics,* Jawaharlal Nehru University, New Delhi

**ADVISOR**

Satish Jain, *Professor,* Centre for Economics Studies and Planning, School of Social Sciences, Jawaharlal Nehru University, New Delhi

**MEMBERS**

Harish Dhawan, *Lecturer,* Ramlal Anand College (Evening) New Delhi

Papiya Ghosh, *Research Associate,* Delhi School of Economics, New Delhi

Rajendra Prasad Kundu, *Lecturer*, Economics Department, Jadavpur University, Kolkata

Sugato Das Gupta, *Associate Professor*, CESP, Jawaharlal Nehru, University, New Delhi

Tapasik Bannerjee, *Research Fellow*, Centre for Economics studies and Planning, Jawaharlal Nehru University, New Delhi

**MEMBER-COORDINATOR**

Jaya Singh, *Lecturer,* Economics, Department of Education in Social Sciences and Humanities, NCERT, New Delhi

# Acknowledgements

The National Council of Educational Research and Training (NCERT) acknowledges the invaluable contribution of academicians and practising school teachers for bringing out this textbook. We are grateful to Anjan Mukherjee, *Professor*, JNU, for going through the manuscript and suggesting relevant changes. We thank Jhaljit Singh, *Reader*, Department of Economics, University of Manipur for his contribution. We also thank our colleagues Neeraja Rashmi, *Reader*, Curriculum Group; M.V. Srinivasan, Ashita Raveendran, *Lecturers*, Department of Education in Social Sciences and Humanities (DESSH) for their feedback and suggestions.

We would like to place on record the precious advise of (Late) Dipak Banerjee, *Professor* (Retd.), Presidency College, Kolkata. We could have benefited much more of his expertise, had his health permitted.

The practising school teachers have helped in many ways. The Council expresses its gratitude to A.K.Singh, *PGT* (Economics), Kendriya Vidyalaya, Varanasi, Uttar Pradesh; Ambika Gulati, *Head*, Department of Economics, Sanskriti School; B.C. Thakur, *PGT* (Economics), Government Pratibha Vikas Vidyalaya, Surajmal Vihar; Ritu Gupta, *Principal*, Sneh International School, Shoban Nair, *PGT* (Economics), Mother's International School, Rashmi Sharma, *PGT* (Economics), Kendriya Vidalaya, JNU Campus, New Delhi.

We thank Savita Sinha, *Professor and Head*, DESSH for her support.

Special thanks are due to Vandana R. Singh, *Consultant Editor*, NCERT for going through the manuscript.

The council also gratefully acknowledges the contributions of Dinesh Kumar, *Incharge,* Computer Station; Amar Kumar Prusty and NeenaChandra, *Copy Editors* in shaping this book. The contribution of the Publication Department in bringing out this book is duly acknowledged.

# ನಿರ್ದೇಶಕರ ಸಂದೇಶ

ಆತ್ಮೀಯ ವಿದ್ಯಾರ್ಥಿಗಳೇ,

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

ಶ್ರೀಮತಿ ಸಿ. ಶಿಖಾ ಭಾ.ಆ.ಸೇ.
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

# ಅರ್ಥಶಾಸ್ತ್ರ ಪಠ್ಯ ಪುಸ್ತಕ ಅನುವಾದ ಸಮಿತಿ

**ಗೌರವಾಧ್ಯಕ್ಷರು:**

**ಶ್ರೀಮತಿ ಸಿ. ಶಿಖಾ** ಭಾ.ಆ.ಸೇ., ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ನಂ. 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.

**ಅಧ್ಯಕ್ಷರು:**

**ಶ್ರೀಮತಿ ನಾಗರತ್ನಮ್ಮ ಜಿ.ಬಿ.** ಪ್ರಾಂಶುಪಾಲರು, ಸರ್ಕಾರಿ ಪದವಿಪೂರ್ವ ಕಾಲೇಜು, ಸಿರಿವರ, ತುಮಕೂರು ತಾಲ್ಲೂಕು.

**ಸಂಚಾಲಕರು:**

**ಶ್ರೀ ವೀರರಾಜು. ಎಂ.ವಿ.** ಉಪನ್ಯಾಸಕರು, ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಎಚ್.ಎಸ್.ಆರ್. ಬಡಾವಣೆ, ಅಗರ, ಬೆಂಗಳೂರು ದಕ್ಷಿಣ – 102.

**ಸದಸ್ಯರು:**

**ಶ್ರೀಮತಿ ಸಂಗೀತಾ ಎನ್. ಕಟ್ಟಿಮನಿ.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, (MPHS) ಸೂಪರ್ ಮಾರ್ಕೆಟ್, ಕಲಬುರ್ಗಿ.

**ಶ್ರೀ ಶಿವೇಗೌಡ ಈ.** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಜೋಡಿರಸ್ತೆ, ಮೈಸೂರು.

**ಶ್ರೀ ದಿನೇಶ್ ಕೆ.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಹಲಗೇರಿ, ಸಿದ್ದಾಪುರ (ತಾ), ಉತ್ತರ ಕನ್ನಡ ಜಿಲ್ಲೆ.

**ಶ್ರೀ ಷಣ್ಮುಕ ಎಸ್.** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ನ್ಯೂ ಟೌನ್, ಭದ್ರಾವತಿ.

**ಶ್ರೀ ರಾಜಗೋಪಾಲ್ ಆರ್.** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಿ.ಪಿ. ವಾಡಿಯರ್ ರಸ್ತೆ, ಬಸವನಗುಡಿ, ಬೆಂಗಳೂರು.

**ಶ್ರೀ ದಿವಾಕರ್ ಕೆ.ಜೆ.** ಉಪನ್ಯಾಸಕರು, ಕಾವೇರಿ ಪದವಿ ಪೂರ್ವ ಕಾಲೇಜು, ಬಾಗಮಂಡಲ, ಕೊಡಗು ಜಿಲ್ಲೆ.

**ಶ್ರೀ ವಿರೂಪಾಕ್ಷಪ್ಪ ಎಸ್. ದಲಾಲಿ.** ಉಪನ್ಯಾಸಕರು, ಕೆ.ವಿ.ಎಸ್.ಆರ್. ಪದವಿ ಪೂರ್ವ ಕಾಲೇಜು, ಗದಗ, ಗದಗ ಜಿಲ್ಲೆ.

**ಡಾ॥ ಅಬ್ದುಲ್‌ರಜಾಕ್ ಕೆ.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕಾಟಿಪಳ್ಳ, ಕೃಷ್ಣಾಪುರ, ಮಂಗಳೂರು.

**ಶ್ರೀ ರವಿಕುಮಾರ ಅಂಬೋರೆ.** ಉಪನ್ಯಾಸಕರು, ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಹಾವೇರಿ.

**ಶ್ರೀ ಬಸವರಾಜ, ಎಸ್.ಡಿ.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಡೊಡ್ಡೇರಿ, ಚಳ್ಳಕೆರೆ (ತಾ), ಚಿತ್ರದುರ್ಗ ಜಿಲ್ಲೆ.

**ಡಾ॥ ಸಾಧನ ಹೆಚ್.ವಿ** ಉಪನ್ಯಾಸಕರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಆರ್.ಸಿ.ರಸ್ತೆ, ಹಾಸನ.

# ಪರಿಶೀಲನಾ ಸಮಿತಿ

**ಡಾ. ಸಿ.ಕೆ. ರೇಣುಕಾರ್ಯ,** ಆರ್ಥಿಕ ತಜ್ಞರು,

ನಿವೃತ್ತ ಪ್ರೊಫೆಸರ್, ಮಾನಸ ಗಂಗೋತ್ರಿ, ಮೈಸೂರ ವಿಶ್ವವಿದ್ಯಾಲಯ, ಮೈಸೂರು.

**ಡಾ. ಪದ್ಮಿನಿ ರಾವ್,** ಸಂಚಾಲಕರು, ಅರ್ಥಶಾಸ್ತ್ರ ಸ್ನಾತಕೊತ್ತರ ವಿಭಾಗ, ನ್ಯಾಷನಲ್ ಕಾಲೇಜು ಬಸವನಗುಡಿ ಬೆಂಗಳೂರು.

**ಶ್ರೀ. ಎಂ.ಎಸ್. ಚಿದಾನಂದ,** ಪ್ರಾಂಶುಪಾಲರು, ಬಾಪೂಜಿ ಪದವಿಪೂರ್ವ ಕಾಲೇಜು, ಹೊರಪೇಟೆ, ತುಮಕೂರು.

# ಸಹಕಾರ

**ಶ್ರೀ. ದೊರೆಸ್ವಾಮಿ,** ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಶ್ರೀ. ಅಶೋಕ್ ಕುಮಾರ್,** ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಶ್ರೀ ಮಹಮದ್ ಜಿಯವುಲ್ಲಾ ಖಾನ್,** ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಡಾ. ಶ್ರೀನಾಥ್ ಕೆ.ಎಸ್.,** ಶಾಖಾಧಿಕಾರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

# ಪರಿವಿಡಿ *Contents*


| ಅಧ್ಯಾಯ | ಪಠ್ಯಾಂಶ | ಪುಟ ಸಂಖ್ಯೆ |
|---|---|---|
| **ಅಧ್ಯಾಯ –1** | **ಪರಿಚಯ** | **1 - 8** |
| 1.1 | ಒಂದು ಸರಳ ಆರ್ಥಿಕತೆ | 1 |
| 1.2 | ಆರ್ಥಿಕತೆಯ ಕೇಂದ್ರೀಯ ಸಮಸ್ಯೆಗಳು | 3 |
| 1.3 | ಆರ್ಥಿಕ ಚಟುವಟಿಕೆಗಳ ಸಂಘಟನೆ | 5 |
| | 1.3.1 ಕೇಂದ್ರೀಯ ಯೋಜಿತ ಆರ್ಥಿಕತೆ | 5 |
| | 1.3.2 ಮಾರುಕಟ್ಟೆ ಅರ್ಥವ್ಯವಸ್ಥೆ | 5 |
| 1.4 | ವಾಸ್ತಾವಿಕ ಮತ್ತು ಮಾದರಿಯ ಅರ್ಥಶಾಸ್ತ್ರ | 6 |
| 1.5 | ಸೂಕ್ಷ್ಮ ಅರ್ಥಶಾಸ್ತ್ರ ಮತ್ತು ಸಮಗ್ರ ಅರ್ಥಶಾಸ್ತ್ರ | 7 |
| 1.6 | ಪುಸ್ತಕದ ಯೋಜನೆ | 7 |
| **ಅಧ್ಯಾಯ –2** | **ಅನುಭೋಗಿಯ ವರ್ತನೆಯ ಸಿದ್ಧಾಂತ** | **9-43** |
| 2.1 | ಅನುಭೋಗಿಯ ಬಜೆಟ್ | 9 |
| | 2.1.1 ಬಜೆಟ್‌ಗಣ | 10 |
| | 2.1.2 ಬಜೆಟ್ ರೇಖೆ | 11 |
| | 2.1.3 ಬಜೆಟ್ ಗಣದಲ್ಲಿ ಬದಲಾವಣೆಗಳು | 14 |
| 2.2 | ಅನುಭೋಗಿಯ ಆದ್ಯತೆಗಳು | 15 |
| | 2.2.1 ಏಕತಾನಾತ್ಮಕ ಒಲವು (ಏಕತಾನಾತ್ಮಕ ಆದ್ಯತೆಗಳು) | 16 |
| | 2.2.2 ಸರಕುಗಳ ನಡುವೆ ಬದಲಿಕೆ | 17 |
| | 2.2.3 ಇಳಿಮುಖ ಬದಲಿಕೆಯ ದರ | 18 |
| | 2.2.4 ಔದಾಸೀನ್ಯ ವಕ್ರರೇಖೆ | 18 |
| | 2.2.5 ಔದಾಸೀನ್ಯ ವಕ್ರರೇಖೆಯ ಆಕಾರ | 19 |
| | 2.2.6 ಔದಾಸೀನ್ಯ ವಕ್ರರೇಖೆ ನಕ್ಷೆ | 20 |
| | 2.2.7 ತುಷ್ಟಿಗುಣ | 20 |
| 2.3 | ಅನುಭೋಗಿಯ ಆದರ್ಶ ಆಯ್ಕೆ | 21 |
| 2.4 | ಬೇಡಿಕೆ | 24 |
| | 2.4.1 ಬೇಡಿಕೆ ರೇಖೆ ಮತ್ತು ಬೇಡಿಕೆಯ ನಿಯಮ | 25 |
| | 2.4.2 ಸಾಮಾನ್ಯ ಮತ್ತು ಕೆಳದರ್ಜೆಯ ಸರಕುಗಳು | 29 |

2.4.3 ಬದಲಿ ಸರಕುಗಳು ಮತ್ತು ಪೂರಕ ಸರಕುಗಳು 30
2.4.4 ಬೇಡಿಕೆ ರೇಖೆಯಲ್ಲಿನ ಪಲ್ಲಟಗಳು 30
2.4.5 ಬೇಡಿಕೆ ರೇಖೆಯೊಂದಿಗೆ ಚಲನೆಗಳು ಮತ್ತು ಬೇಡಿಕೆ ರೇಖೆಯ ಪಲ್ಲಟಗಳು. 31
2.5 ಮಾರುಕಟ್ಟೆ ಬೇಡಿಕೆ 32
2.6 ಬೇಡಿಕೆ ಸ್ಥಿತಿಸ್ಥಾಪಕತ್ವ 33
2.6.1 ಸರಳಾರೇಖಾ ಬೇಡಿಕೆ ರೇಖೆಯೊಂದಿಗಿನ ಸ್ಥಿತಿಸ್ಥಾಪಕತ್ವ 35
2.6.2 ಒಂದು ಸರಕಿನ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ನಿರ್ಧರಿಸುವ ಅಂಶಗಳು 38
2.6.3. ಸ್ಥಿತಿಸ್ಥಾಪಕತ್ವ ಮತ್ತು ವೆಚ್ಚ 38

**ಅಧ್ಯಾಯ –3 ಉತ್ಪಾದನೆ ಮತ್ತು ವೆಚ್ಚಗಳು 44-64**

3.1 ಉತ್ಪಾದನಾ ಬಿಂಬಕ 44
3.2 ಅಲ್ಪಾವಧಿ ಮತ್ತು ದೀರ್ಘಾವಧಿ 47
3.3 ಒಟ್ಟು ಉತ್ಪನ್ನ, ಸರಾಸರಿ ಉತ್ಪನ್ನ ಮತ್ತು ಸೀಮಾಂತ ಉತ್ಪನ್ನ 47
3.3.1. ಒಟ್ಟು ಉತ್ಪನ್ನ 47
3.3.2. ಸರಾಸರಿ ಉತ್ಪನ್ನ 48
3.3.3. ಸೀಮಾಂತ ಉತ್ಪನ್ನ 48
3.4 ಇಳಿಮುಖ ಸೀಮಾಂತ ಉತ್ಪನ್ನ ನಿಯಮ ಮತ್ತು ಬದಲಾಗುವ ಪರಿಮಾಣಗಳ ನಿಯಮ 50
3.5 ಒಟ್ಟು ಉತ್ಪನ್ನ, ಸೀಮಾಂತ ಉತ್ಪನ್ನ ಮತ್ತು ಸರಾಸರಿ ಉತ್ಪನ್ನಗಳ ರೇಖೆಗಳ ಆಕಾರಗಳು 50
3.6 ಪ್ರತಿಫಲಗಳ ಪ್ರಮಾಣ 51
3.7 ವೆಚ್ಚಗಳು 52
3.7.1 ಅಲ್ಪಾವಧಿ ವೆಚ್ಚಗಳು 53
3.7.2. ದೀರ್ಘಾವಧಿ ವೆಚ್ಚಗಳು 59

**ಅಧ್ಯಾಯ –4 ಪರಿಪೂರ್ಣ ಪೈಪೋಟಿಯಲ್ಲಿ ಉದ್ಯಮ ಘಟಕದ ಸಿದ್ಧಾಂತ 65-86**

4.1 ಪರಿಪೂರ್ಣ ಪೈಪೋಟಿ ಮಾರುಕಟ್ಟೆಯನ್ನು ನಿರೂಪಿಸುವ ಲಕ್ಷಣಗಳು 65
4.2 ಆದಾಯ 66
4.3 ಲಾಭ ಗರಿಷ್ಠಗೊಳಿಸುವಿಕೆ 69
4.3.1 ಷರತ್ತು 01(ಒಂದು) 69
4.3.2 ಎರಡನೇ ಷರತ್ತು 70
4.3.3 ಮೂರನೇ ಷರತ್ತು 71

4.3.4 ಲಾಭ ಗರಿಷ್ಠಗೊಳಿಸುವ ಸಮಸ್ಯೆ: ರೇಖಾತ್ಮಕ ನಿರೂಪಣೆ 72
4.4 ಒಂದು ಉದ್ಯಮ ಘಟಕದ ಪೂರೈಕೆ ರೇಖೆ: 73
4.4.1 ಒಂದು ಉದ್ಯಮ ಘಟಕದ ಅಲ್ಪಾವಧಿ ಪೂರೈಕೆ ರೇಖೆ 73
4.4.2 ಉದ್ಯಮ ಘಟಕದ ಧೀರ್ಘಾವಧಿ ಪೂರೈಕೆ ರೇಖೆ 74
4.4.3 ಸ್ಥಗಿತತೆಯ ಬಿಂದು 75
4.4.4 ಸಾಮಾನ್ಯ ಲಾಭ ಮತ್ತು ಸಮಸ್ಥಿತಿ ಬಿಂದು 75
4.5 ಉದ್ಯಮಘಟಕದ ಪೂರೈಕೆ ರೇಖೆಯನ್ನು ನಿರ್ಧರಿಸುವ ಅಂಶಗಳು 76
4.5.1 ತಂತ್ರಜ್ಞಾನದ ಪ್ರಗತಿ 77
4.5.2 ಆದಾನದ ಬೆಲೆಗಳು 78
4.5.3 ಘಟಕ ತೆರಿಗೆ 77
4.6 ಮಾರುಕಟ್ಟೆ ಪೂರೈಕೆ ರೇಖೆ 78
4.7 ಪೂರೈಕೆ ಬೆಲೆ ಸ್ಥಿತಿಸ್ಥಾಪಕತ್ವ 80
4.7.1 ಜ್ಯಾಮಿತಿಯ ವಿಧಾನ 81

**ಅಧ್ಯಾಯ –5 ಮಾರುಕಟ್ಟೆ ಸಮತೋಲನ 87-108**

5.1 ಸಮತೋಲನ, ಅಧಿಕ ಬೇಡಿಕೆ, ಅಧಿಕ ಪೂರೈಕೆ 87
5.1.1 ಮಾರುಕಟ್ಟೆ ಸಮತೋಲನ: ಸ್ಥಿರ ಸಂಖ್ಯೆಯ ಉದ್ಯಮಘಟಕಗಳು 88
5.1.2 ಮಾರುಕಟ್ಟೆ ಸಮತೋಲನ: ಮುಕ್ತ ಪ್ರವೇಶ ಮತ್ತು ನಿರ್ಗಮನ 99
5.2 ಅನ್ವಯಿಕೆಗಳು 103
5.2.1 ಬೆಲೆಮಿತಿ 103
5.2.2 ಬೆಲೆಯ ಕನಿಷ್ಠದ ಮಟ್ಟ 104

**ಅಧ್ಯಾಯ –6 ಪೈಪೋಟಿ ರಹಿತ ಮಾರುಕಟ್ಟೆಗಳು 109-127**

6.1 ಸರಕು ಮಾರುಕಟ್ಟೆಯಲ್ಲಿ ಸರಳ ಏಕಸ್ವಾಮ್ಯ 110
6.1.1 ಮಾರುಕಟ್ಟೆ ಬೇಡಿಕೆ ರೇಖೆಯೇ ಸರಾಸರಿ ಆದಾಯ ರೇಖೆ 111
6.1.2 ಒಟ್ಟು, ಸರಾಸರಿ ಮತ್ತು ಸೀಮಾಂತ ಆದಾಯಗಳು 114
6.1.3 ಸೀಮಾಂತ ಆದಾಯ ಮತ್ತು ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ 115
6.1.4 ಏಕಸ್ವಾಮ್ಯ ಉದ್ಯಮ ಘಟಕದ ಅಲ್ಪಾವಧಿ ಸಮತೋಲನ 116
6.2 ಇತರ ಪರಿಪೂರ್ಣ ಪೈಪೋಟಿಯೇತರ ಮಾರುಕಟ್ಟೆಗಳು 121
6.2.1 ಸ್ವಾಮ್ಯಯುತ ಪೈಪೋಟಿ 121
6.2.2 ಕೆಲಜನ ಸ್ವಾಮ್ಯದಲ್ಲಿ ಉದ್ಯಮ ಘಟಕಗಳು ಹೇಗೆ ವರ್ತಿಸುತ್ತವೆ? 122

**ಶಬ್ಧಕೋಶ 128-132**

# ಅಧ್ಯಾಯ 1

# ಪರಿಚಯ

# *Introduction*



## 1.1 ಒಂದು ಸರಳ ಆರ್ಥಿಕತೆ *A Simple Economy*

ಯಾವುದೇ ಒಂದು ಸಮಾಜವನ್ನು ಪರಿಗಣಿಸಿ. ಸಹಜವಾಗಿ, ಆ ಸಮಾಜದಲ್ಲಿನ ಜನರಿಗೆ ತಮ್ಮ ದೈನಂದಿನ ಜೀವನದಲ್ಲಿ, ಆಹಾರ, ಉಡುಪು, ವಸತಿ, ಸಾರಿಗೆ ಸೌಲಭ್ಯಗಳಾದ ರಸ್ತೆಗಳು ಮತ್ತು ರೈಲುಗಳು, ಅಂಚೆ ಸೇವೆಗಳು ಸೇರಿದಂತೆ ಶಿಕ್ಷಕರು ಹಾಗು ವೈದ್ಯರ ಸೇವೆಗಳಂತಹ ಇತರೆ ಹಲವು ಸರಕು ಮತ್ತು ಸೇವೆಗಳ[1] ಅಗತ್ಯವಿರುತ್ತದೆಂಬುದು ಕಂಡುಬರುತ್ತದೆ. ವಾಸ್ತವದಲ್ಲಿ ಒಬ್ಬ ವ್ಯಕ್ತಿಗೆ[2] ಅಗತ್ಯವಿರುವ ಸರಕು ಮತ್ತು ಸೇವೆಗಳ ಪಟ್ಟಿಯು ತುಂಬಾ ದೊಡ್ಡದಾಗಿದ್ದು, ಆರಂಭದಲ್ಲಿ ಸಮಾಜದ ಯಾವ ವ್ಯಕ್ತಿಯು ಕೂಡ ತನಗೆ ಬೇಕಾದ ಎಲ್ಲಾ ವಸ್ತುಗಳನ್ನು ಹೊಂದಿರುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ತಾನು ಉಪಯೋಗಿಸಲು ಬಯಸುವ ಸರಕು ಮತ್ತು ಸೇವೆಗಳಲ್ಲಿ ಕೆಲವನ್ನು ಮಾತ್ರ ಹೊಂದಿರುತ್ತಾಳೆ. ಒಂದು ಕೃಷಿ ಕುಟುಂಬವು ಸ್ವಂತವಾಗಿ ಜಮೀನು, ಧಾನ್ಯಗಳು, ಬೇಸಾಯ ಸಲಕರಣೆಗಳಾದ, ನೇಗಿಲು ಒಂದು ಜೊತೆ ಎತ್ತು ಹಾಗು ಕುಟುಂಬ ಸದಸ್ಯರ ಸೇವೆಗಳನ್ನು ಹೊಂದಿರಬಹುದು. ಒಬ್ಬ ನೇಕಾರನು ಹತ್ತಿ, ನೂಲು ಹಾಗು ಬಟ್ಟೆ ನೇಯುವುದಕ್ಕೆ ಬೇಕಾದ ಇತರೆ ಸಲಕರಣೆಗಳನ್ನು ಹೊಂದಿರಬಹುದು. ಸ್ಥಳಿಯ ಶಾಲೆಯ ಶಿಕ್ಷಕ/ಶಿಕ್ಷಕಿಯರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಅಗತ್ಯವಿರುವ ಕೌಶಲ್ಯವನ್ನು ಹೊಂದಿರುತ್ತಾರೆ. ಸಮಾಜದ ಇನ್ನು ಕೆಲವರು ತಮ್ಮ ಶ್ರಮ ಸೇವೆ ಹೊರತುಪಡಿಸಿ ಯಾವುದೇ ಸಂಪನ್ಮೂಲಗಳನ್ನು[3] ಹೊಂದಿರುವುದಿಲ್ಲ. ಇವರಲ್ಲಿ ಪ್ರತಿಯೊಂದು ನಿರ್ಣಯ ತೆಗೆದುಕೊಳ್ಳುವ ಘಟಕಗಳೂ ತಮ್ಮಲ್ಲಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕೆಲವು ಸರಕು ಮತ್ತು ಸೇವೆಗಳನ್ನು ಉತ್ಪಾದಿಸಬಹುದು ಮತ್ತು ಅಗತ್ಯವಿರುವ ಇತರೆ ಸರಕು ಮತ್ತು ಸೇವೆಗಳನ್ನು ಪಡೆಯಲು ಉತ್ಪನ್ನದ ಒಂದು ಭಾಗವನ್ನು ಬಳಸಬಹುದು. ಉದಾಹರಣೆಗೆ ಒಂದು ಕೃಷಿ ಕುಟುಂಬವು ಧಾನ್ಯಗಳನ್ನು ಉತ್ಪಾದಿಸಬಹುದು. ಉತ್ಪನ್ನದ ಒಂದು ಭಾಗವನ್ನು ಅನುಭೋಗದ ಉದ್ದೇಶಕ್ಕಾಗಿ ಬಳಸಿ ಉಳಿದ ಉತ್ಪನ್ನದ ಭಾಗವನ್ನು ಉಡುಪುಗಳು, ವಸತಿ ಮತ್ತು ವಿವಿಧ ಸೇವೆಗಳ ವಿನಿಮಯಕ್ಕಾಗಿ ಸಂಗ್ರಹಿಸಿಟ್ಟುಕೊಳ್ಳಬಹುದು. ಅದೇ ರೀತಿ, ಒಬ್ಬ ನೇಕಾರ ತನ್ನಲಿರುವ ನೂಲಿನಿಂದ ತಯಾರಿಸಿದ ಬಟ್ಟೆಯನ್ನು ವಿನಿಮಯ ಮಾಡಿ ತಾನು ಬಯಸುವ ಸರಕು ಮತ್ತು ಸೇವೆಗಳನ್ನು ಪಡೆಯಬಹುದು. ಶಿಕ್ಷಕರು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಿ ಹಣವನ್ನು ಸಂಪಾದಿಸಬಹುದು ಮತ್ತು ಆ ಹಣವನ್ನು ಉಪಯೋಗಿಸಿಕೊಂಡು ತಮಗೆ ಬೇಕಾದ ಸರಕು ಮತ್ತು ಸೇವೆಗಳನ್ನು ಪಡೆಯಬಹುದು. ಒಬ್ಬ ಕೆಲಸಗಾರ ಸಹ ಬೇರೆಯವರಿಗಾಗಿ ಕೆಲಸ ಮಾಡುವ ಮೂಲಕ ತಾನು ಸಂಪಾದಿಸಬಹುದಾದಷ್ಟು ಹಣದಿಂದ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸಬಹುದು. ಹೀಗೆ ಪ್ರತಿಯೊಬ್ಬ ವ್ಯಕ್ತಿಯು ತನ್ನಲ್ಲಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ಯಾವುದೇ ವ್ಯಕ್ತಿಯು

[1] ಸರಕುಗಳೆಂದರೆ ಮಾನವನ ಬಯಕೆಗಳು ಮತ್ತು ಅಗತ್ಯಗಳನ್ನು ಪೂರೈಸುವ ಭೌತಿಕ/ಗೋಚರ ಪದಾರ್ಥಗಳು (ಸ್ಪರ್ಶಸಬಹುದಾದ), ಸರಕು ಎಂಬ ಪದವು ಸೇವೆಗಳು ಎಂಬ ಪದಕ್ಕೆ ವಿರುದ್ಧವಾಗಿದೆ. ಸೇವೆಗಳು ಮಾನವನ ಬಯಕೆಗಳಿಗೆ ಮತ್ತು ಅಗತ್ಯಗಳಿಗೆ ಅಗೋಚರ ತೃಪ್ತಿಯನ್ನು ನೀಡುತ್ತವೆ. ಆಹಾರ ಪದಾರ್ಥಗಳು ಮತ್ತು ಉಡುಪುಗಳು, ಸರಕುಗಳ ಉತ್ತಮ ಉದಾಹರಣೆಗಳಾದರೆ, ವೈದ್ಯರು ಮತ್ತು ಶಿಕ್ಷಕರು ನಮಗಾಗಿ ನಿರ್ವಹಿಸುವ ಕಾರ್ಯಗಳನ್ನು ಸೇವೆಗಳ ಉದಾಹರಣೆಯಾಗಿ ನಾವು ಯೋಚಿಸಬಹುದು.

[2] ವ್ಯಕ್ತಿ ಎಂದರೆ ವೈಯಕ್ತಿಕ ನಿರ್ಣಯ ತೆಗೆದುಕೊಳ್ಳುವ ಘಟಕ. ಈ ಘಟಕವು ಒಬ್ಬ ವ್ಯಕ್ತಿ, ಅಥವಾ ಕುಟುಂಬದ ಹಾಗೆ ಗುಂಪು, ಉದ್ದಿಮೆ ಅಥವಾ ಸಂಸ್ಥೆ/ಸಂಘವಾಗಿರಬಹುದು.

[3] ಸಂಪನ್ಮೂಲವೆಂದರೆ ಇತರೆ ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ಉಪಯೋಗಿಸಲಾಗುವ ಸರಕು ಮತ್ತು ಸೇವೆಗಳು ಉದಾ. ಭೂಮಿ, ಶ್ರಮ, ಉಪಕರಣಗಳು ಮತ್ತು ಯಂತ್ರಗಳು ಇತ್ಯಾದಿ.

ತನ್ನ ಅಗತ್ಯಗಳಿಗೆ ಹೋಲಿಸಿದಾಗ ಅಪರಿಮಿತ ಸಂಪನ್ಮೂಲಗಳನ್ನು ಹೊಂದಿರುವುದಿಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಒಂದು ಕೃಷಿ ಕುಟುಂಬ ಉತ್ಪಾದಿಸುವ ಧಾನ್ಯಗಳ ಪ್ರಮಾಣವು, ಅದು ಹೊಂದಿರುವ ಸಂಪನ್ಮೂಲಗಳ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ. ಆದ್ದರಿಂದ ಆ ಕೃಷಿ ಕುಟುಂಬವು ಧಾನ್ಯಗಳ ವಿನಿಮಯದಿಂದ ಪಡೆಯಬಹುದಾದ ಇತರ ವಿವಿಧ ಸರಕು ಮತ್ತು ಸೇವೆಗಳ ಪ್ರಮಾಣವು ಸಹ ಮಿತವಾಗಿರುತ್ತದೆ. ಇದರ ಪರಿಣಾಮವಾಗಿ ಕುಟುಂಬಕ್ಕೆ ಲಭ್ಯವಿರುವ ವಿವಿಧ ಸರಕು ಮತ್ತು ಸೇವೆಗಳ ನಡುವೆ ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ಒಂದು ಸರಕು ಅಥವಾ ಸೇವೆಯನ್ನು ಅಧಿಕ ಪ್ರಮಾಣದಲ್ಲಿ ಪಡೆಯಲು ಇತರೆ ಸರಕು ಮತ್ತು ಸೇವೆಗಳ ಸ್ವಲ್ಪ ಪ್ರಮಾಣವನ್ನು ಬಿಟ್ಟು ಕೊಡಲೇಬೇಕಾಗುತ್ತದೆ. ಉದಾಹರಣೆಗೆ– ಒಂದು ಕುಟುಂಬವು ಒಂದು ದೊಡ್ಡ ಮನೆಯನ್ನು ಕಟ್ಟಲು ಬಯಸಿದರೆ, ಅದು ಇನ್ನಷ್ಟು ಸಾಗಾವಳಿ ಭೂಮಿಯನ್ನು ಕೊಳ್ಳುವ ವಿಚಾರವನ್ನು ಕೈಬಿಡಬೇಕಾಗುತ್ತದೆ. ಅದು ತನ್ನ ಮಕ್ಕಳಿಗೆ ಹೆಚ್ಚಿನ ಮತ್ತು ಉತ್ತಮ ಶಿಕ್ಷಣವನ್ನು ನೀಡಲು ಬಯಸಿದರೆ, ಜೀವನದ ಕೆಲವು ಐಷಾರಾಮಗಳನ್ನು ತ್ಯಜಿಸಬೇಕಾಗುತ್ತದೆ ಸಮಾಜದಲ್ಲಿರುವ ಇತರ ಎಲ್ಲಾ ವ್ಯಕ್ತಿಗಳ ಸಂಗತಿಯೂ ಇದೇ ಆಗಿರುತ್ತದೆ. ಪ್ರತಿಯೊಬ್ಬರೂ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿರುತ್ತಾರೆ. ಅದುದರಿಂದ ಅವರ ಅಗತ್ಯಗಳನ್ನು ಪೂರೈಸಿಕೊಳ್ಳಲು ಮಿತವಾದ ಸಂಪನ್ಮೂಲಗಳನ್ನು ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಉಪಯೋಗಿಸಬೇಕಾಗುತ್ತದೆ.

ಸಾಮಾನ್ಯವಾಗಿ ಸಮಾಜದಲ್ಲಿ ಪ್ರತಿಯೊಬ್ಬರೂ ಒಂದೊಂದು ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ತೊಡಗಿರುತ್ತಾರೆ ಮತ್ತು ತಾವು ಉತ್ಪಾದಿಸದೆ ಇರುವ ಸರಕು ಮತ್ತು ಸೇವೆಗಳ ಸಂಯೋಜನೆಯನ್ನು ಅವರು ಬಯಸುತ್ತಾರೆ. ಸಮಾಜದಲ್ಲಿ ಜನರು ಸಾಮೂಹಿಕವಾಗಿ ಏನನ್ನು ಬಯಸುತ್ತಾರೆ, ಮತ್ತು ಏನನ್ನು ಉತ್ಪಾದಿಸುತ್ತಾರೆ, ಇವರೆಡರ ನಡುವೆ ಹೊಂದಾಣಿಕೆ ಏಕೆ ಅಗತ್ಯ ಎಂಬುದನ್ನು ಹೇಳುವ ಅಗತ್ಯವಿಲ್ಲ. [4]ಉದಾ: ಒಂದು ಸಮಾಜದಲ್ಲಿ ಕೃಷಿ ಕುಟುಂಬವು ಇತರ ಕೃಷಿ ಘಟಕಗಳ ಜೊತೆಗೆ ಸೇರಿ ಉತ್ಪಾದಿಸುವ ಒಟ್ಟು ಧಾನ್ಯಗಳ ಪ್ರಮಾಣವು ಆ ಸಮಾಜದಲ್ಲಿ ಜನರು ಸಾಮೂಹಿಕವಾಗಿ ಅನುಭೋಗಿಸುವ ಧಾನ್ಯಗಳ ಪ್ರಮಾಣಕ್ಕೆ ಹೊಂದಾಣಿಕೆಯಾಗಬೇಕು. ಒಂದು ವೇಳೆ ಕೃಷಿ ಘಟಕಗಳು ಸಾಮೂಹಿಕವಾಗಿ ಧಾನ್ಯಗಳ ಉತ್ಪಾದಿಸುವ ಸಾಮರ್ಥ್ಯಕ್ಕಿಂತ, ಸಮಾಜದಲ್ಲಿನ ಜನರ ಧಾನ್ಯಗಳ ಅವಶ್ಯಕತೆಯು, ಕಡಿಮೆ ಇದ್ದಾಗ, ಆ ಕೃಷಿ ಘಟಕಗಳು ತಮ್ಮಲ್ಲಿರುವ ಸಂಪನ್ಮೂಲಗಳ ಒಂದು ಭಾಗವನ್ನು ಹೆಚ್ಚಿನ ಬೇಡಿಕೆಯಲ್ಲಿರುವ ಇತರ ಸರಕಿನ ಅಥವಾ ಸೇವೆಗಳ ಉತ್ಪಾದನೆಯಲ್ಲಿ ಉಪಯೋಗಿಸಬೇಕಾಗುತ್ತದೆ. ಮತ್ತೊಂದೆಡೆ ಸಮಾಜದಲ್ಲಿನ ಜನರ ಧಾನ್ಯಗಳ ಅವಶ್ಯಕತೆಯು ಕೃಷಿ ಘಟಕಗಳು ಸಾಮೂಹಿಕವಾಗಿ ಉತ್ಪಾದಿಸುತ್ತಿರುವ ಧಾನ್ಯಗಳ ಪ್ರಮಾಣಕ್ಕಿಂತ ಅಧಿಕವಿದ್ದಲ್ಲಿ, ಇತರೆ ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ಬಳಸುತ್ತಿರುವ ಸಂಪನ್ಮೂಲಗಳನ್ನು ಕೃಷಿ ಘಟಕಗಳು ಧಾನ್ಯಗಳ ಉತ್ಪಾದನೆಯಲ್ಲಿ ಮರು ಹಂಚಿಕೆ ಮಾಡಬೇಕಾಗುತ್ತದೆ. ಈ ವಿಷಯ ಎಲ್ಲಾ ಸರಕು ಮತ್ತು ಸೇವೆಗಳಿಗೆ ಅನ್ವಯಿಸುತ್ತದೆ. ಒಬ್ಬ ವ್ಯಕ್ತಿಗೆ ಸಂಪನ್ಮೂಲಗಳ ಕೊರತೆ ಇರುವಂತೆ ಸಮಾಜದಲ್ಲಿನ ಜನರು ಸಾಮೂಹಿಕವಾಗಿ ಹೊಂದಲು ಬಯಸುವಷ್ಟು ಪ್ರಮಾಣಕ್ಕೆ ಹೋಲಿಸಿದಾಗ ಸಮಾಜದಲ್ಲಿ ಸಂಪನ್ಮೂಲಗಳು ಕೊರತೆಯಲ್ಲಿರುತ್ತವೆ. ಕೊರತೆಯ ಸಂಪನ್ಮೂಲಗಳನ್ನು ಸಮಾಜದ ಜನರ ಬೇಕು–ಬೇಡಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ಹಂಚಿಕೆ ಮಾಡಬೇಕಾಗುತ್ತದೆ.

ಸಮಾಜದ ಸಂಪನ್ಮೂಲಗಳು ಯಾವುದೇ ಹಂಚಿಕೆಯಿಂದ[5] ಒಂದು ನಿರ್ದಿಷ್ಟ ಸಂಯೋಜನೆಯ ವಿವಿಧ ಸರಕು ಮತ್ತು ಸೇವೆಗಳ ಉತ್ಪಾದನೆಗೆ ಕಾರಣವಾಗುವಂತಿರಬೇಕು. ಹೀಗೆ ಉತ್ಪಾದಿಸಿದ ಸರಕು ಮತ್ತು ಸೇವೆಗಳು ಸಮಾಜದ ವ್ಯಕ್ತಿಗಳಲ್ಲಿ ವಿತರಣೆಯಾಗಬೇಕು. ಮಿತ ಸಂಪನ್ಮೂಲಗಳ ಹಂಚಿಕೆ ಹಾಗು ಅಂತಿಮ ಸರಕು ಮತ್ತು ಸೇವೆಗಳ ವಿತರಣೆಯು, ಸಮಾಜ ಎದುರಿಸುವ ಎರಡು ಮೂಲ ಆರ್ಥಿಕ ಸಮಸ್ಯೆಗಳಾಗಿವೆ.

---

[4] ಇಲ್ಲಿ ನಾವು ಸಮಾಜದಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಮತ್ತು ಸೇವೆಗಳನ್ನು ಸಮಾಜದ ಜನರು ಅನುಭೋಗಿಸುತ್ತಾರೆ ಮತ್ತು ಸಮಾಜದ ಹೊರಗಿನಿಂದ ಏನ್ನನ್ನೂ ಪಡೆಯುವ ಸಾಧ್ಯತೆ ಇರುವುದಿಲ್ಲವೆಂದು ಕಲ್ಪಿಸಿಕೊಳ್ಳುತ್ತೇವೆ ಅದಾಗ್ಯೂ ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಅನುಭೋಗದ ಹೊಂದಾಣಿಕೆಯ ಬಗ್ಗೆ ಇಲ್ಲಿ ಮಾಡಲಾಗಿರುವ ಸಾಮಾನ್ಯ ಅಂಶವು ಯಾವುದೆ ದೇಶಕ್ಕೆ ಅಥವಾ ಇಡೀ ವಿಶ್ವಕ್ಕೆ ಅನ್ವಯಿಸುತ್ತದೆ.

[5] ಸಂಪನ್ಮೂಲಗಳ ಹಂಚಿಕೆಯೆಂದರೆ ಪ್ರತಿ ಸರಕು ಮತ್ತು ಸೇವೆಗಳ ಉತ್ಪಾದನೆಗೆ ಎಷ್ಟು ಸಂಪನ್ಮೂಲಗಳನ್ನು ಮೀಸಲಿಡಲಾಗಿದೆ ಎಂದರ್ಥ.

ವಾಸ್ತವದಲ್ಲಿ ಯಾವುದೇ ಆರ್ಥಿಕತೆಯು, ಮೇಲೆ ಚರ್ಚಿಸಿದ ಸಮಾಜಕ್ಕೆ ಹೋಲಿಸಿದಾಗ ಹೆಚ್ಚು ಸಂಕೀರ್ಣವಾಗಿರುತ್ತದೆ. ಸಮಾಜದ ಬಗ್ಗೆ ನಾವು ತಿಳಿದಿರುವ ವಿಷಯಗಳ ಬೆಳಕಿನಲ್ಲಿ ಅರ್ಥಶಾಸ್ತ್ರದ ಕೆಲವು ಮೂಲಭೂತ ಚಿಂತನೆಗಳನ್ನು ಚರ್ಚಿಸಿ ಈ ಪುಸ್ತಕದುದ್ದಕ್ಕೂ ಅಧ್ಯಯನ ಮಾಡೋಣ.

## 1.2 ಆರ್ಥಿಕತೆಯ ಕೇಂದ್ರೀಯ ಸಮಸ್ಯೆಗಳು *Central Problems of An Economy*

ಸರಕು ಮತ್ತು ಸೇವೆಗಳ ಉತ್ಪಾದನೆ, ವಿನಿಮಯ ಮತ್ತು ಅನುಭೋಗವು ನಮ್ಮ ಬದುಕಿನ ಮೂಲಭೂತ ಆರ್ಥಿಕ ಚಟುವಟಿಕೆಗಳಾಗಿವೆ. ಈ ಮೂಲ ಆರ್ಥಿಕ ಚಟುವಟಿಕೆಗಳ ಮಾರ್ಗದಲ್ಲಿ ಪ್ರತಿಯೊಂದು ಸಮಾಜವು ಸಂಪನ್ಮೂಲಗಳ ಕೊರತೆಯನ್ನು ಎದುರಿಸಬೇಕಾಗುತ್ತದೆ. ಸಂಪನ್ಮೂಲಗಳ ಈ ಕೊರತೆಯು ಆಯ್ಕೆಯ ಸಮಸ್ಯೆಯನ್ನು ಹುಟ್ಟು ಹಾಕುತ್ತದೆ. ಒಂದು ಆರ್ಥಿಕತೆಯ ಕೊರತೆ ಸಂಪನ್ಮೂಲಗಳು ಪರ್ಯಾಯ (ಪೈಪೋಟಿಯುತ) ಉಪಯೋಗಳನ್ನು ಹೊಂದಿವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪ್ರತಿ ಸಮಾಜವು ತನ್ನ ಕೊರತೆಯ ಸಂಪನ್ಮೂಲಗಳನ್ನು ಹೇಗೆ ಬಳಸಬೇಕೆಂದು ನಿರ್ಧರಿಸಬೇಕಾಗುತ್ತದೆ. ಒಂದು **ಆರ್ಥಿಕತೆಯ ಸಮಸ್ಯೆಗಳ ಸಾರಾಂಶವನ್ನು** ಈ ಕೆಳಗಿನಂತೆ ವಿವರಿಸಬಹುದಾಗಿದೆ.

### ಏನನ್ನು ಉತ್ಪಾದಿಸಬೇಕು ಮತ್ತು ಎಷ್ಟು ಪ್ರಮಾಣದಲ್ಲಿ ?

ಪ್ರತಿಯೊಂದು ಸಮಾಜವು ತಾನು ಉತ್ಪಾದಿಸಬಹುದಾದ ಸರಕು ಮತ್ತು ಸೇವೆಗಳನ್ನು ಎಷ್ಟು ಪ್ರಮಾಣದಲ್ಲಿ ಉತ್ಪಾದಿಸಲು ಸಾಧ್ಯ ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಹೆಚ್ಚು ಆಹಾರ, ಬಟ್ಟೆ, ವಸತಿ ಉತ್ಪಾದಿಸಬೇಕೆ ಅಥವಾ ಹೆಚ್ಚು ಐಷಾರಾಮಿ ಸರಕುಗಳನ್ನು ಹೊಂದಬೇಕೆ? ಹೆಚ್ಚು ಕೃಷಿ ಸರಕುಗಳನ್ನು ಹೊಂದಬೇಕೆ ಅಥವಾ ಕೈಗಾರಿಕಾ ಉತ್ಪನಗಳನ್ನು ಮತ್ತು ಸೇವೆಗಳನ್ನು ಹೊಂದಬೇಕೆ? ಶಿಕ್ಷಣ ಮತ್ತು ಆರೋಗ್ಯದ ಮೇಲೆ ಹೆಚ್ಚು ಸಂಪನ್ಮೂಲಗಳನ್ನು ಬಳಸಬೇಕೆ ಅಥವಾ ಮಿಲಿಟರಿ ಸೇವೆಗಳನ್ನು ನಿರ್ಮಿಸುವಲ್ಲಿ ಹೆಚ್ಚು ಸಂಪನ್ಮೂಲಗಳನ್ನು ಬಳಸಬೇಕೆ ? ಮೂಲ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಬೇಕೆ ಅಥವಾ ಉನ್ನತ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಬೇಕೆ? ಅನುಭೋಗದ ಸರಕುಗಳನ್ನು ಹೆಚ್ಚು ಹೊಂದಬೇಕೆ ಅಥವಾ ನಾಳಿನ ಉತ್ಪಾದನೆ ಮತ್ತು ಅನುಭೋಗವನ್ನು ವೃದ್ಧಿಸುವ ಹೂಡಿಕೆ ಸರಕುಗಳನ್ನು (ಯಂತ್ರದಂತಹ) ಹೊಂದಬೇಕೆ ?

### ಈ ಸರಕುಗಳನ್ನು ಹೇಗೆ ಉತ್ಪಾದಿಸಲಾಗುತ್ತವೆ ?

ಪ್ರತಿಯೊಂದು ಸಮಾಜವು ವಿವಿಧ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಯಾವ ಸಂಪನ್ಮೂಲಗಳನ್ನು ಎಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕೆಂಬ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಅಧಿಕ ಶ್ರಮವನ್ನು ಅಥವಾ ಯಂತ್ರಗಳನ್ನು ಬಳಸಬೇಕೆ ? ಪ್ರತಿಯೊಂದು ಸರಕಿನ ಉತ್ಪಾದನೆಯಲ್ಲಿ ಲಭ್ಯವಿರುವ ಯಾವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ?

### ಯಾರಿಗಾಗಿ ಈ ಸರಕುಗಳನ್ನು ಉತ್ಪಾದಿಸಬೇಕು ?

ಆರ್ಥಿಕತೆಯಲ್ಲಿ ಉತ್ಪಾದಿಸಲಾದ ಸರಕುಗಳನ್ನು ಯಾರು, ಎಷ್ಟು ಪ್ರಮಾಣದಲ್ಲಿ ಪಡೆಯುತ್ತಿದ್ದಾರೆ ? ಆರ್ಥಿಕತೆಯಲ್ಲಿನ ಉತ್ಪನ್ನವನ್ನು ವ್ಯಕ್ತಿಗಳಲ್ಲಿ ಹೇಗೆ ವಿತರಣೆ ಮಾಡಬೇಕು ? ಯಾರು ಹೆಚ್ಚು ಪಡೆಯುತ್ತಾರೆ. ಮತ್ತು ಯಾರು ಕಡಿಮೆ ಪಡೆಯುತ್ತಾರೆ ? ಆರ್ಥಿಕತೆಯಲ್ಲಿ ಕನಿಷ್ಟ ಪ್ರಮಾಣದ ಅನುಭೋಗ ಪ್ರತಿಯೊಬ್ಬರಿಗೂ ದೊರೆಯುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕೇ ಅಥವಾ ಬೇಡವೇ ? ಆರ್ಥಿಕತೆಯಲ್ಲಿ ಪ್ರತಿಯೊಬ್ಬರಿಗೂ ಪ್ರಾಥಮಿಕ ಶಿಕ್ಷಣ ಮತ್ತು ಮೂಲ ಆರೋಗ್ಯ ಸೇವೆಗಳು ಉಚಿತವಾಗಿ ಲಭ್ಯವಾಗಬೇಕೇ ಅಥವಾ ಬೇಡವೇ ?

ಹೀಗೆ ಪ್ರತಿಯೊಂದು ಆರ್ಥಿಕತೆಯು, ಕೊರತೆಯ ಸಂಪನ್ಮೂಲಗಳನ್ನು ವಿಭಿನ್ನ ಸರಕು ಮತ್ತು ಸೇವೆಗಳ ಸಂಭವನೀಯ ಉತ್ಪಾದನೆಯಲ್ಲಿ ಹೇಗೆ ಹಂಚಿಕೆ ಮಾಡಬೇಕು ಮತ್ತು ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಜನರಲ್ಲಿ ಹೇಗೆ ವಿತರಣೆ ಮಾಡಬೇಕೆಂಬ ಸಮಸ್ಯೆಯನ್ನು ಎದುರಿಸುತ್ತದೆ. ಕೊರತೆಯ ಸಂಪನ್ಮೂಲಗಳ ಹಂಚಿಕೆ ಮತ್ತು ಅಂತಿಮ ಸರಕು ಮತ್ತು ಸೇವೆಗಳ ವಿತರಣೆಯು ಯಾವುದೇ ಆರ್ಥಿಕತೆಯ ಕೇಂದ್ರೀಯ ಸಮಸ್ಯೆಗಳಾಗಿವೆ.



**ಉತ್ಪಾದನಾ ಸಾಧ್ಯತಾ ಗಡಿ.**

ವ್ಯಕ್ತಿಗಳು ಸಂಪನ್ಮೂಲಗಳ ಕೊರತೆಯನ್ನು ಎದುರಿಸುವಂತೆಯೇ, ಇಡಿ ಆರ್ಥಿಕತೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳೊಂದಿಗೆ ಹೋಲಿಸಿದಾಗ ಜನರು ಸಾಮೂಹಿಕವಾಗಿ ಹೊಂದಲು ಬಯಸುವ ಸಂಪನ್ಮೂಲಗಳು ಮಿತವಾಗಿರುತ್ತವೆ. ವಿರಳವಾದ ಈ ಸಂಪನ್ಮೂಲಗಳು ಪರ್ಯಾಯ ಉಪಯೋಗಗಳನ್ನು ಹೊಂದಿದ್ದು, ಪ್ರತಿಯೊಂದು ಸಮಾಜವು ವಿವಿಧ ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ಈ ಸಂಪನ್ಮೂಲಗಳನ್ನು ಎಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕೆಂದು ನಿರ್ಧರಿಸಬೇಕಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವಿವಿಧ ಸರಕು ಮತ್ತು ಸೇವೆಗಳಿಗೆ ವಿರಳವಾದ ಸಂಪನ್ಮೂಲಗಳನ್ನು ಹೇಗೆ ಹಂಚಿಕೆ ಮಾಡಬೇಕೆಂದು ಪ್ರತಿಯೊಂದು ಸಮಾಜವು ನಿರ್ಧರಿಸಬೇಕಾಗುತ್ತದೆ.

ಆರ್ಥಿಕತೆಯ ಕೊರತೆಯ ಸಂಪನ್ಮೂಲಗಳ ಹಂಚಿಕೆಯು, ಒಂದು ನಿರ್ದಿಷ್ಟ ಸಂಯೋಜನೆಯ ವಿವಿಧ ಸರಕು ಮತ್ತು ಸೇವೆಗಳಿಗೆ ಕಾರಣವಾಗುತ್ತದೆ. ನೀಡಲಾದ ಒಟ್ಟು ಪ್ರಮಾಣದ ಸಂಪನ್ಮೂಲಗಳನ್ನು ಹಲವು ವಿಧಗಳಲ್ಲಿ ಹಂಚಿಕೆ ಮಾಡುವ ಸಾಧ್ಯತೆಗಳಿದ್ದು, ಮತ್ತು ಆ ಮೂಲಕ ಸರಕು ಮತ್ತು ಸೇವೆಗಳ ವಿಭಿನ್ನ ಸಂಯೋಜನೆಗಳನ್ನು ಪಡೆಯಬಹುದಾಗಿದೆ. ಲಭ್ಯವಿರುವ ಒಟ್ಟು ಸಂಪನ್ಮೂಲಗಳ ಮೊತ್ತ ಮತ್ತು ತಾಂತ್ರಿಕ ಜ್ಞಾನದಿಂದ ಉತ್ಪಾದಿಸಲಾಗುವ ಎಲ್ಲಾ ಸರಕು ಮತ್ತು ಸೇವೆಗಳ ಸಾಧ್ಯತೆಗಳ ಸಂಯೋಜನೆಗಳ ಸಂಗ್ರಹವನ್ನು **"ಉತ್ಪಾದನೆಯ ಸಾಧ್ಯತೆಗಳ ಗಣ"** ಎನ್ನುತ್ತಾರೆ.

**ಉದಾಹರಣೆ — 1**

ತನ್ನ ಸಂಪನ್ಮೂಲಗಳನ್ನು ಬಳಸಿಕೊಂಡು ಧಾನ್ಯ ಅಥವಾ ಹತ್ತಿಯನ್ನು ಉತ್ಪಾದಿಸುವ ಒಂದು ಆರ್ಥಿಕತೆಯನ್ನು ಪರಿಗಣಿಸಿ. ಆರ್ಥಿಕತೆಯಲ್ಲಿ ಉತ್ಪಾದಿಸಬಹುದಾದ ಧಾನ್ಯ ಮತ್ತು ಹತ್ತಿಯ ಸಂಯೋಜನೆಗಳನ್ನು ಕೋಷ್ಟಕ 1.1 ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1 ಉತ್ಪಾದನೆ ಸಾಧ್ಯತೆಗಳು**

| ಸಾಧ್ಯತೆಗಳು | ಧಾನ್ಯ | ಹತ್ತಿ |
|---|---|---|
| A | 0 | 10 |
| B | 1 | 9 |
| C | 2 | 7 |
| D | 3 | 4 |
| E | 4 | 0 |

ಎಲ್ಲಾ ಸಂಪನ್ಮೂಲಗಳನ್ನು ಧಾನ್ಯಗಳ ಉತ್ಪಾದನೆಯಲ್ಲಿ ಬಳಸಿದರೆ ಉತ್ಪಾದಿಸಬಹುದಾದ ಧಾನ್ಯಗಳ ಗರಿಷ್ಠ ಪ್ರಮಾಣವು 4 ಯೂನಿಟ್‌ಗಳು (ಘಟಕಗಳು) ಮತ್ತು ಎಲ್ಲಾ ಸಂಪನ್ಮೂಲಗಳನ್ನು ಹತ್ತಿಯ ಉತ್ಪಾದನೆಯಲ್ಲಿ ಬಳಸಿದರೆ ಹೆಚ್ಚು ಅಂದರೆ 10 ಯೂನಿಟ್‌ಗಳಷ್ಟು (ಘಟಕಗಳಷ್ಟು) ಹತ್ತಿಯನ್ನು ಉತ್ಪಾದಿಸಬಹುದು. ಆರ್ಥಿಕತೆಯು 1 ಯೂನಿಟ್‌ಗಳಷ್ಟು (ಘಟಕಗಳಷ್ಟು) ಧಾನ್ಯ ಮತ್ತು 9 ಯೂನಿಟ್‌ಗಳಷ್ಟು (ಘಟಕಗಳಷ್ಟು) ಹತ್ತಿ ಅಥವಾ 2 ಯೂನಿಟ್‌ಗಳ (ಘಟಕಗಳ) ಧಾನ್ಯ ಮತ್ತು 7 ಯೂನಿಟ್‌ಗಳಷ್ಟು (ಘಟಕಗಳಷ್ಟು) ಹತ್ತಿ ಅಥವಾ 3 ಯೂನಿಟ್‌ಗಳಷ್ಟು (ಘಟಕಗಳಷ್ಟು) ಧಾನ್ಯ ಮತ್ತು 4 ಯೂನಿಟ್‌ಗಳಷ್ಟು (ಘಟಕಗಳಷ್ಟು) ಹತ್ತಿಯನ್ನು ಸಹ ಉತ್ಪಾದಿಸಬಹುದು. ಇತರೆ ಅನೇಕ ಸಾಧ್ಯತೆಗಳು ಕೂಡ ಇರುತ್ತವೆ. ಈ ಕೆಳಗಿನ ಚಿತ್ರವು ಆರ್ಥಿಕತೆಯ ಉತ್ಪಾದನಾ ಸಾಧ್ಯತೆಗಳನ್ನು ವಿವರಿಸುತ್ತದೆ. ರೇಖೆಯ ಮೇಲೆ ಅಥವಾ ಕೆಳಗೆ ಇರುವ ಯಾವುದೇ ಬಿಂದುವು ಆರ್ಥಿಕತೆಯ ಸಂಪನ್ಮೂಲಗಳಿಂದ ಉತ್ಪಾದಿಸಬಹುದಾದ ಧಾನ್ಯ ಮತ್ತು ಹತ್ತಿಯ ಸಂಯೋಜನೆಯನ್ನು ಪ್ರತಿನಿಧಿಸುತ್ತದೆ. ಈ ರೇಖೆಯು ಯಾವುದೇ ಪ್ರಮಾಣದ ಹತ್ತಿಗಾಗಿ ಆರ್ಥಿಕತೆಯಲ್ಲಿ ಉತ್ಪಾದಿಸಬಹುದಾದ ಗರಿಷ್ಠ ಪ್ರಮಾಣದ ಧಾನ್ಯವನ್ನು ನೀಡುತ್ತದೆ. ಇದಕ್ಕೆ ತದ್ವಿರುದ್ಧವು ಅನ್ವಯಿಸುತ್ತದೆ. ಈ ರೇಖೆಯನ್ನು ಉತ್ಪಾದನಾ **ಸಾಧ್ಯತೆ ಗಡಿ** ಎನ್ನುತ್ತೇವೆ. ಆರ್ಥಿಕತೆಯು ತನ್ನ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಂಡು ಉತ್ಪಾದಿಸಬಹುದಾದ ಧಾನ್ಯ ಮತ್ತು ಹತ್ತಿಯ ಸಂಯೋಜನೆಯನ್ನು ಉತ್ಪಾದನಾ ಸಾಧ್ಯತಾ ಗಡಿಯು ನೀಡುತ್ತದೆ. ಉತ್ಪಾದನಾ ಸಾಧ್ಯತಾ ಗಡಿಯ ಕೆಳಗಿನ ಯಾವುದೇ ಬಿಂದುವಿನಲ್ಲಿ ಉತ್ಪಾದಿಸಿದ ಧಾನ್ಯ ಮತ್ತು ಹತ್ತಿಯ ಸಂಯೋಜನೆಯು ಎಲ್ಲಾ ಅಥವಾ ಕೆಲವು ಸಂಪನ್ಮೂಲಗಳ ಅಪೂರ್ಣ ಬಳಕೆ ಅಥವಾ ವ್ಯರ್ಥ ಬಳಕೆಯನ್ನು ಪ್ರತಿನಿಧಿಸುತ್ತದೆ.



ಧಾನ್ಯ ಉತ್ಪಾದನೆಗೆ ವಿರಳ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸಿದರೆ ಹತ್ತಿಯ ಉತ್ಪಾದನೆಗೆ ಕಡಿಮೆ ಸಂಪನ್ಮೂಲಗಳು ಲಭಿಸುತ್ತವೆ ಮತ್ತು ಇದಕ್ಕೆ ತದ್ವಿರುದ್ಧವೂ ಅನ್ವಯಿಸುತ್ತದೆ. ಆದುದರಿಂದ ಸರಕುಗಳಲ್ಲಿ ನಾವು ಒಂದನ್ನು ಹೆಚ್ಚು ಬಯಸಿದರೆ, ಇನ್ನೊಂದನ್ನು ಕಡಿಮೆ ಪಡೆಯುತ್ತೇವೆ. ಹೀಗಾಗಿ ಒಂದು ಸರಕನ್ನು ಸ್ವಲ್ಪ ಅಧಿಕ ಪ್ರಮಾಣದಲ್ಲಿ ಪಡೆಯಲು ಬಯಸಿದರೆ ಅದರ ಬದಲಾಗಿ ಇನ್ನೊಂದು ಸರಕಿನ ಸ್ವಲ್ಪ ಪ್ರಮಾಣವನ್ನು ಬಿಟ್ಟು ಬಿಡಬೇಕಾಗುತ್ತದೆ. ಇದನ್ನು ಸರಕೊಂದರ ಹೆಚ್ಚುವರಿ ಘಟಕದ **'ಸದಾವಕಾಶ ವೆಚ್ಚ'**[a] ಎನ್ನುವರು.

ಪ್ರತಿಯೊಂದು ಆರ್ಥಿಕತೆಯು ಅದು ಹೊಂದಿರುವ ಹಲವಾರು ಸಾಧ್ಯತೆಗಳಲ್ಲಿ ಒಂದನ್ನು ಆಯ್ಕೆ ಮಾಡಬೇಕಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಹಲವು ಉತ್ಪಾದನಾ ಸಾಧ್ಯತೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವುದು ಆರ್ಥಿಕತೆಯ ಕೇಂದ್ರೀಯ ಸಮಸ್ಯೆಗಳಲ್ಲಿ ಒಂದಾಗಿದೆ.

[a]**ಗಮನಿಸಿ:** ಸದಾವಕಾಶ ವೆಚ್ಚದ ಪರಿಕಲ್ಪನೆಯು ವ್ಯಕ್ತಿಗೆ ಮತ್ತು ಸಮಾಜಕ್ಕೆ ಅನ್ವಯಿಸುತ್ತದೆ. ಈ ಪರಿಕಲ್ಪನೆಯು ಅರ್ಥಶಾಸ್ತ್ರದಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಅದರ ಪ್ರಾಮುಖ್ಯತೆ ಕಾರಣದಿಂದಾಗಿ ಕೆಲವೊಮ್ಮೆ ಸದಾವಕಾಶದ ವೆಚ್ಚವನ್ನು ಆರ್ಥಿಕ ವೆಚ್ಚವೆಂದು ಕರೆಯುತ್ತಾರೆ.

## 1.3 ಆರ್ಥಿಕ ಚಟುವಟಿಕೆಗಳ ಸಂಘಟನೆ *Organisation of Economic Activities*

ಮಾರುಕಟ್ಟೆಯಲ್ಲಿ ವ್ಯಕ್ತಿಗಳು ಮುಕ್ತಸಂವಾದದಿಂದ ತಮ್ಮದೇ ಆದ ಉದ್ದೇಶಗಳನ್ನು ಈಡೇರಿಸಿಕೊಳ್ಳುವಂತೆ ಅಥವಾ ಸರಕಾರದಂತಹ ಕೆಲವು ಕೇಂದ್ರೀಯ ಪ್ರಾಧಿಕಾರಗಳು, ಯೋಜಿತ ರೀತಿಯಲ್ಲಿ ತಮ್ಮ ಗುರಿಗಳನ್ನು ಸಾಧಿಸುವಂತೆ, ಆರ್ಥಿಕತೆಯ ಮೂಲ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.

### 1.3.1 ಕೇಂದ್ರೀಯ ಯೋಜಿತ ಆರ್ಥಿಕತೆ *The Centrally Planned Economy*

ಕೇಂದ್ರೀಯ ಯೋಜಿತ ಆರ್ಥಿಕತೆಯಲ್ಲಿ ಸರ್ಕಾರ ಅಥವಾ ಕೇಂದ್ರೀಯ ಪ್ರಾಧಿಕಾರವು ಆರ್ಥಿಕತೆಯ ಎಲ್ಲಾ ಪ್ರಮುಖ ಚಟುವಟಿಕೆಗಳನ್ನು ಯೋಜಿಸುತ್ತದೆ. ಉತ್ಪಾದನೆ, ವಿನಿಮಯ ಮತ್ತು ಸರಕು ಹಾಗು ಸೇವೆಗಳ ಅನುಭೋಗಕ್ಕೆ ಸಂಬಂಧಿಸಿದ ಎಲ್ಲಾ ಪ್ರಮುಖ ನಿರ್ಧಾರಗಳನ್ನು ಸರ್ಕಾರವೇ ಕೈಗೊಳ್ಳುತ್ತದೆ. ಕೇಂದ್ರೀಯ ಪ್ರಾಧಿಕಾರವು ಸಂಪನ್ಮೂಲಗಳ ಒಂದು ನಿರ್ದಿಷ್ಟ ಹಂಚಿಕೆಗೆ ಪ್ರಯತ್ನಿಸಬಹುದು ಮತ್ತು ಅದರ ಪರಿಣಾಮವಾಗಿ ಸಮಾಜಕ್ಕೆ ಅಪೇಕ್ಷಣೀಯವೆಂದು ಭಾವಿಸುವ ಸರಕು ಮತ್ತು ಸೇವೆಗಳ ಅಂತಿಮ ಸಂಯೋಜನೆಗಳ ಹಂಚಿಕೆಗೆ ಪ್ರಯತ್ನಿಸಬಹುದು. ಉದಾಹರಣೆಗಾಗಿ ಇಡೀ ಆರ್ಥಿಕತೆಯ ಸಮೃದ್ಧಿಗೆ ಮತ್ತು ಯೋಗಕ್ಷೇಮಕ್ಕೆ ತುಂಬಾ ಮಹತ್ವದ್ದು ಎಂದು ಕಂಡುಬರುವ ಸರಕು ಮತ್ತು ಸೇವೆಗಳನ್ನು ಉದಾ: ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ವ್ಯಕ್ತಿಗಳು ಸ್ವಂತವಾಗಿ ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸದಿದ್ದಾಗ, ಸರ್ಕಾರವು ವ್ಯಕ್ತಿಗಳಿಗೆ ಅಂತಹ ಸರಕು ಮತ್ತು ಸೇವೆಯನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಲು ಪ್ರೇರೇಪಿಸಬಹುದು, ಅಥವಾ ಪರ್ಯಾಯವಾಗಿ ಸರ್ಕಾರವೇ ಅಂತಹ ಅಪೇಕ್ಷಣೀಯ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ನಿರ್ಧರಿಸಬಹುದು. ಬೇರೆ ಸಂದರ್ಭಗಳಲ್ಲಿ, ಆರ್ಥಿಕತೆಯಲ್ಲಿ ಉತ್ಪಾದಿಸಿದ ಸರಕು ಮತ್ತು ಸೇವೆಗಳ ಅಂತಿಮ ಸಂಯೋಜನೆಯಲ್ಲಿ ಕೆಲವು ಜನರಿಗೆ ಬಹಳ ಕಡಿಮೆ ಪಾಲು ದೊರತಿದ್ದು, ಅವರ ಉಳಿಯುವಿಕೆಯು ಸಂಕಷ್ಟದಲ್ಲಿದ್ದಾಗ, ಕೇಂದ್ರೀಯ ಪ್ರಾಧಿಕಾರ ಮಧ್ಯ ಪ್ರವೇಶಿಸಿ ಸರಕು ಮತ್ತು ಸೇವೆಗಳ ಅಂತಿಮ ಸಂಯೋಜನೆಯನ್ನು ಎಲ್ಲರಿಗೂ ಸಮಾನವಾಗಿ ಹಂಚಿಕೆ ಮಾಡುವ ಪ್ರಯತ್ನ ಮಾಡಬಹುದು.

### 1.3.2 ಮಾರುಕಟ್ಟೆ ಅರ್ಥವ್ಯವಸ್ಥೆ *The Market Economy*

ಕೇಂದ್ರೀಯ ಯೋಜಿತ ಆರ್ಥಿಕತೆಗೆ ವಿರುದ್ಧವಾಗಿ, ಮಾರುಕಟ್ಟೆ ಆರ್ಥಿಕತೆಯಲ್ಲಿ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಮಾರುಕಟ್ಟೆಯ ಮೂಲಕ ಸಂಘಟಿಸಲಾಗುತ್ತದೆ. ಅರ್ಥಶಾಸ್ತ್ರದಲ್ಲಿ ಅಧ್ಯಯನ ಮಾಡುವಂತೆ ಮಾರುಕಟ್ಟೆಯು ಒಂದು ಸಂಸ್ಥೆಯಾಗಿದ್ದು[6] ಅದು ತಮ್ಮ ಆರ್ಥಿಕ ಚಟುವಟಿಕೆಗಳನ್ನು ಅನುಸರಿಸುವ ವ್ಯಕ್ತಿಗಳ ಮುಕ್ತ ಅಂತಃಕ್ರಿಯೆಯನ್ನು ಸಂಘಟಿಸುತ್ತದೆ. ಮತ್ತೊಂದು ಅರ್ಥದಲ್ಲಿ, ಮಾರುಕಟ್ಟೆಯು, ಆರ್ಥಿಕ ಪ್ರತಿನಿಧಿಗಳು ಪರಸ್ಪರ ತಮ್ಮ ನಿಧಿ ಅಥವಾ ಉತ್ಪನ್ನಗಳನ್ನು ಮುಕ್ತವಾಗಿ ವಿನಿಮಯ ಮಾಡಿಕೊಳ್ಳುವ ವ್ಯವಸ್ಥೆಗಳ ಸಮೂಹವಾಗಿದೆ. ಮಾರುಕಟ್ಟೆ ಎಂಬ ಪದವನ್ನು ಸಾಮಾನ್ಯ ಅರ್ಥದಲ್ಲಿ ಅರ್ಥೈಸುವುದಕ್ಕಿಂತ ವಿಭಿನ್ನವಾಗಿ

[6] ಒಂದು ಸಂಸ್ಥೆಯನ್ನು ಸಾಮಾನ್ಯವಾಗಿ ಕೆಲವು ಉದ್ದೇಶಗಳಿಗಾಗಿ ಸಂಘಟನೆ ಎಂದು ವ್ಯಾಖ್ಯಾನಿಸಲಾಗುತ್ತದೆ.

ಅರ್ಥಶಾಸ್ತ್ರದಲ್ಲಿ ಬಳಸುವುದನ್ನು ಗಮನಿಸುವುದು ಮುಖ್ಯವಾಗಿದೆ. ನೀವು ಯೋಚಿಸಬಹುದಾದಂತೆ ಮಾರುಕಟ್ಟೆಗೆ ನಿರ್ದಿಷ್ಟ ಸ್ಥಳದ ಅವಶ್ಯಕತೆ ಇರುವುದಿಲ್ಲ. ವಸ್ತುಗಳನ್ನು ಕೊಳ್ಳಲು ಮತ್ತು ಮಾರಾಟ ಮಾಡಲು ವ್ಯಕ್ತಿಗಳು ನಿರ್ದಿಷ್ಟ ಸ್ಥಳದಲ್ಲಿ ಭೇಟಿ ಆಗಬಹುದು ಅಥವಾ ಆಗದೇ ಇರಬಹುದು.

ಮಾರಾಟಗಾರರ ಮತ್ತು ಗ್ರಾಹಕರ ನಡುವೆ ಅಂತಃಕ್ರಿಯೆಯು ವಿವಿಧ ಸನ್ನಿವೇಶಗಳಲ್ಲಿ ನಡೆಯಬಹುದು ಉದಾಹರಣೆಗಾಗಿ ಮಾರಾಟಗಾರರು ಮತ್ತು ಗ್ರಾಹಕರು ಗ್ರಾಮದಲ್ಲಿನ ಚೌಕ ಅಥವಾ ನಗರದ ಸೂಪರ್ ಬಜಾರನಲ್ಲಿ ಅಥವಾ ಪರ್ಯಾಯವಾಗಿ ದೂರವಾಣಿ ಅಥವಾ ಅಂತರ್ಜಾಲದಲ್ಲಿ ಪರಸ್ಪರ ಸಂವಹನ ಮಾಡುವ ಮೂಲಕ ಸರಕುಗಳನ್ನು ವಿನಿಮಯ ಮಾಡಿಕೊಳ್ಳಬಹುದು. ಜನರಿಗೆ ಮುಕ್ತವಾಗಿ ವಸ್ತುಗಳನ್ನು ಖರೀದಿ ಮತ್ತು ಮಾರಾಟ ಮಾಡಲು ಅನುಮತಿಸುವ ವ್ಯವಸ್ಥೆಗಳು ಮಾರುಕಟ್ಟೆಯನ್ನು ವ್ಯಾಖ್ಯಾನಿಸುವ ಲಕ್ಷಣಗಳಾಗಿವೆ.

ಯಾವುದೇ ವ್ಯವಸ್ಥೆಯ ಸುಗುಮ ಕಾರ್ಯ ನಿರ್ವಹಣೆಗೆ, ಆ ವ್ಯವಸ್ಥೆಯನ್ನೊಳಗೊಂಡ ಭಾಗಗಳ ಚಟುವಟಿಕೆಗಳ ನಡುವೆ ಸಮನ್ವಯತೆ ಅನಿವಾರ್ಯವಾಗಿರುತ್ತದೆ. ಇಲ್ಲವಾದಲ್ಲಿ ಗೊಂದಲ ಉಂಟಾಗುತ್ತದೆ. ಒಂದು ಮಾರುಕಟ್ಟೆ ವ್ಯವಸ್ಥೆಯಲ್ಲಿ ಲಕ್ಷಾಂತರ ವ್ಯಕ್ತಿಗಳ ಪ್ರತ್ಯೇಕ ಚಟುವಟಿಕೆಗಳ ನಡುವೆ ಸಮನ್ವಯವನ್ನು ತರುವ ಶಕ್ತಿಗಳು ಯಾವುವು ಎಂದು ನೀವು ಆಶ್ಚರ್ಯಪಡಬಹುದು.

ಒಂದು ಮಾರುಕಟ್ಟೆ ವ್ಯವಸ್ಥೆಯಲ್ಲಿ ಎಲ್ಲಾ ಸರಕುಗಳು ಅಥವಾ ಸೇವೆಗಳು ಒಂದು ಬೆಲೆಯನ್ನು (ಕೊಳ್ಳುವವರು ಮತ್ತು ಮಾರಾಟಗಾರರು ಪರಸ್ಪರ ಒಪ್ಪಿಕೊಂಡ) ಹೊಂದಿರುತ್ತದೆ ಮತ್ತು ಆ ಬೆಲೆಯಲ್ಲಿ ಅವು ವಿನಿಮಯಗೊಳ್ಳುತ್ತವೆ. ಸಾಮಾನ್ಯವಾಗಿ ಬೆಲೆಯು, ಸಮಾಜವು ನಿರ್ಣಯಿಸಿದ ಸಂಬಂಧಪಟ್ಟ ಸರಕು ಅಥವಾ ಸೇವೆಯ ಮೌಲ್ಯವನ್ನು ಬಿಂಬಿಸುತ್ತದೆ. ಕೊಳ್ಳುವವರು ಯಾವುದೇ ಒಂದು ನಿರ್ದಿಷ್ಟ ಸರಕಿಗೆ ಬೇಡಿಕೆಯನ್ನು ಒಡ್ಡಿದರೆ ಆ ಸರಕಿನ ಬೆಲೆಯು ಹೆಚ್ಚಾಗುತ್ತದೆ. ಇದು ಸಮಾಜವು ಒಟ್ಟಾರೆಯಾಗಿ ಆ ಸರಕಿನ ಪ್ರಸ್ತುತ ಉತ್ಪಾದನೆಗಿಂತ ಹೆಚ್ಚಿನ ಪ್ರಮಾಣವನ್ನು ಬಯಸುತ್ತದೆ ಎಂಬ ಸಂಕೇತವನ್ನು ಉತ್ಪಾದಕರಿಗೆ ಕಳುಹಿಸುತ್ತದೆ. ಇದಕ್ಕೆ ಪ್ರತಿಯಾಗಿ ಉತ್ಪಾದಕರು ಆ ಸರಕಿನ ಉತ್ಪಾದನೆಯನ್ನು ಹೆಚ್ಚಿಸುತ್ತಾರೆ. ಈ ರೀತಿಯಾಗಿ ಸರಕು ಮತ್ತು ಸೇವೆಗಳ ಬೆಲೆಗಳು ಮಾರುಕಟ್ಟೆಯಾದ್ಯಂತ ಎಲ್ಲಾ ವ್ಯಕ್ತಿಗಳಿಗೆ ಪ್ರಮುಖ ಮಾಹಿತಿಯನ್ನು ರವಾನಿಸಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಮನ್ವಯತೆಯನ್ನು ಸಾಧಿಸುತ್ತವೆ. ಹೀಗೆ ಮಾರುಕಟ್ಟೆ ವ್ಯವಸ್ಥೆಯಲ್ಲಿ ಬೆಲೆ ಸಂಕೇತಗಳು ಆರ್ಥಿಕ ಚಟುವಟಿಕೆಗಳಲ್ಲಿ ಸಮನ್ವಯತೆಯನ್ನು ತರುವ ಮೂಲಕ ಏನನ್ನು ಮತ್ತು ಎಷ್ಟನ್ನು ಉತ್ಪಾದಿಸಬೇಕು ಎಂಬ ಕೇಂದ್ರೀಯ ಸಮಸ್ಯೆಗಳನ್ನು ಪರಿಹರಿಸುತ್ತವೆ.



ವಾಸ್ತವಾಗಿ ಎಲ್ಲಾ ಆರ್ಥಿಕತೆಗಳು ಮಿಶ್ರ ಆರ್ಥಿಕತೆಗಳಾಗಿದ್ದು, ಅಲ್ಲಿ ಕೆಲವು ಪ್ರಮುಖ ನಿರ್ಧಾರಗಳನ್ನು ಸರ್ಕಾರವೇ ತೆಗೆದುಕೊಳ್ಳುತ್ತದೆ. ಮತ್ತು ಆರ್ಥಿಕ ಚಟುವಟಿಕೆಗಳು ಮಾರುಕಟ್ಟೆ ಮೂಲಕವೇ ನಡೆಯುತ್ತವೆ. ಒಂದೇ ವ್ಯತ್ಯಾಸವೆಂದರೆ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರ ನಿರ್ವಹಿಸುವ ಪಾತ್ರದ ವ್ಯಾಪಕತೆ. ಅಮೇರಿಕೆ ಸಂಯುಕ್ತ ಸಂಸ್ಥಾನಗಳಲ್ಲಿ ಸರಕಾರದ ಪಾತ್ರ ಕಡಿಮೆಯಿರುತ್ತದೆ. ಸೋವಿಯತ್ ಒಕ್ಕೂಟವು ಕೇಂದ್ರಿಯ ಯೋಜಿತ ಆರ್ಥಿಕತೆಗೆ ಇಪ್ಪತ್ತನೆಯ ಶತಮಾನದ ಬಹು ಕಾಲದವರೆಗೂ ಹತ್ತಿರದ ಉದಾಹರಣೆಯಾಗಿದೆ. ಭಾರತದಲ್ಲಿ ಸ್ವಾತಂತ್ರ್ಯದಿಂದೀಚೆಗೆ ಸರ್ಕಾರವು ಆರ್ಥಿಕ ಚಟುವಟಿಕೆಗಳನ್ನು ಯೋಜಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಆದಾಗ್ಯೂ ಕಳೆದ ಎರಡು ದಶಕಗಳಲ್ಲಿ ಭಾರತದ ಆರ್ಥಿಕತೆಯಲ್ಲಿ ಸರ್ಕಾರದ ಪಾತ್ರ ಗಣನೀಯವಾಗಿ ಕಡಿಮೆಯಾಗಿದೆ.

## 1.4 ವಾಸ್ತಾವಿಕ ಮತ್ತು ಮಾದರಿಯ ಅರ್ಥಶಾಸ್ತ್ರ *Positive and Normative Economics*

ಈ ಮೊದಲೇ ಉಲ್ಲೇಖಿಸಿದಂತೆ ತಾತ್ವಿಕವಾಗಿ ಆರ್ಥಿಕತೆಯ ಕೇಂದ್ರೀಯ ಸಮಸ್ಯೆಗಳನ್ನು ಬಗೆಹರಿಸಲು ಒಂದಕ್ಕಿಂತ ಹೆಚ್ಚು ಮಾರ್ಗಗಳಿವೆ. ಈ ವಿವಿಧ ಕಾರ್ಯತಂತ್ರಗಳು ಸಾಮಾನ್ಯವಾಗಿ ಆ ಸಮಸ್ಯೆಗಳಿಗೆ ಬೇರೆ ಬೇರೆ ಪರಿಹಾರಗಳನ್ನು ಹುಟ್ಟು ಹಾಕುವ ಸಾಧ್ಯತೆಗಳು ಇರುತ್ತವೆ. ಆ ಮೂಲಕ ಆರ್ಥಿಕತೆಯ ಸಂಪನ್ಮೂಲಗಳು ವಿವಿಧ ರೀತಿಯಲ್ಲಿ ಹಂಚಿಕೆಯಾಗುವುದರ ಜೊತೆಗೆ ಉತ್ಪಾದಿಸಿದ ಸರಕು ಮತ್ತು ಸೇವೆಗಳ ಅಂತಿಮ ಸಂಯೋಜನೆ ಸಹ ವಿಭಿನ್ನವಾಗಿ ವಿತರಣೆಯಾಗುತ್ತದೆ. ಆದುದರಿಂದ ಈ ಕಾರ್ಯತಂತ್ರಗಳಲ್ಲಿ ಯಾವುದು

ಒಟ್ಟಾರೆ ಆರ್ಥಿಕತೆಗೆ ಹೆಚ್ಚು ಅಪೇಕ್ಷಣೆಯವಾಗಿದೆಯೆಂದು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗಿದೆ. ಅರ್ಥಶಾಸ್ತ್ರದಲ್ಲಿ ನಾವು ಈ ಕಾರ್ಯತಂತ್ರಗಳಿಂದ ಹೊರಹೊಮ್ಮುವ ಪರಿಣಾಮಗಳು (*Outcome*) ಎಷ್ಟು ಅಪೇಕ್ಷಣೀಯವಾಗಿವೆ ಎಂಬುದನ್ನು ಅಭ್ಯಸಿಸುವುದರ ಮೂಲಕ ಈ ಕಾರ್ಯತಂತ್ರಗಳನ್ನು ಮೌಲ್ಯಮಾಪನ ಮಾಡಲು ಪ್ರಯತ್ನಿಸುತ್ತೇವೆ. ಅರ್ಥಶಾಸ್ತ್ರದಲ್ಲಿ ವಿಭಿನ್ನ ಕಾರ್ಯತಂತ್ರಗಳನ್ನು ವಿಶ್ಲೇಷಿಸಲು ನಾವು ಪ್ರಯತ್ನಿಸುತ್ತೇವೆ ಮತ್ತು ಈ ಪ್ರತಿಯೊಂದು ಕಾರ್ಯತಂತ್ರಗಳಿಂದ ಹೊರಹೊಮ್ಮುವ ಫಲಿತಾಂಶಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತೇವೆ. ಈ ಪಲಿತಾಂಶಗಳು ಎಷ್ಟು ಅಪೇಕ್ಷಣೀಯವಾಗಿವೆ ಎಂಬುದನ್ನು ಅಧ್ಯಯನ ಮಾಡುವುದರ ಮೂಲಕ ಈ ಕಾರ್ಯತಂತ್ರಗಳ ಮೌಲ್ಯ ಮಾಪನ ಮಾಡಲು ಪ್ರಯತ್ನಿಸುತ್ತೇವೆ. ಹೆಚ್ಚಿನ ವೇಳೆ, ಒಂದು ನಿರ್ದಿಷ್ಟ ಕಾರ್ಯತಂತ್ರ ಹೇಗೆ ಕಾರ್ಯನಿರ್ವಹಿಸುತ್ತಿದೆಯೆಂದು ಗೊತ್ತುಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆಯೋ ಅಥವಾ ಅದರ ಮೌಲ್ಯಮಾಪನದ ಪ್ರಯತ್ನ ಮಾಡುತ್ತಿದ್ದೇವೆಯೋ ಎಂಬುದರ ಮೇಲೆ ವಾಸ್ತವಿಕ ಆರ್ಥಿಕ ವಿಶ್ಲೇಷಣೆ ಮತ್ತು ಮಾದರಿ ಆರ್ಥಿಕ ವಿಶ್ಲೇಷಣೆಯ ನಡುವೆ ವ್ಯತ್ಯಾಸವನ್ನು ಗುರುತಿಸಲಾಗುತ್ತದೆ. ವಾಸ್ತವಿಕ ಅರ್ಥಶಾಸ್ತ್ರದ ವಿಶ್ಲೇಷಣೆಯಲ್ಲಿ ವಿವಿಧ ಕಾರ್ಯತಂತ್ರಗಳು ಹೇಗೆ ಕಾರ್ಯನಿರ್ವಹಿಸುತ್ತವೆಂದು ಅಧ್ಯಯನ ಮಾಡುತ್ತೇವೆ ಮತ್ತು ಮಾದರಿ ಅರ್ಥಶಾಸ್ತ್ರದಲ್ಲಿ ಈ ಕಾರ್ಯತಂತ್ರಗಳು ಅಪೇಕ್ಷಣೀಯವಾಗಿವೆಯೇ ಅಥವಾ ಇಲ್ಲವೇ ಎಂದು ತಿಳಿಯಲು ಪ್ರಯತ್ನಿಸುತ್ತೇವೆ. ಆದಾಗ್ಯೂ ವಾಸ್ತವಿಕ ಮತ್ತು ಮಾದರಿಯ ಆರ್ಥಿಕ ವಿಶ್ಲೇಷಣೆಗಳ ನಡುವಿನ ಈ ವ್ಯತ್ಯಾಸಗಳು ತೀಕ್ಷ್ಣವಾದುದಲ್ಲ. ಕೇಂದ್ರೀಯ ಆರ್ಥಿಕ ಸಮಸ್ಯೆಗಳ ಅಧ್ಯಯನದಲ್ಲಿ ವಾಸ್ತವಿಕ ಮತ್ತು ಮಾದರಿಯ ಸಮಸ್ಯೆಗಳು ಒಂದಕ್ಕೊಂದು ಪರಸ್ಪರ ಸಂಬಂಧಿಸಿರುತ್ತವೆ. ಮತ್ತು ಇವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ.



## 1.5 ಸೂಕ್ಷ್ಮ ಅರ್ಥಶಾಸ್ತ್ರ ಮತ್ತು ಸಮಗ್ರ ಅರ್ಥಶಾಸ್ತ್ರ *Microeconomics and Macroeconomics*

ಸಾಂಪ್ರದಾಯಿಕವಾಗಿ, ಅರ್ಥಶಾಸ್ತ್ರದ ವಿಷಯ ವಸ್ತುವನ್ನು ಎರಡು ವಿಶಾಲ ವಿಭಾಗಗಳಲ್ಲಿ ಅಧ್ಯಯನ ಮಾಡಲಾಗಿದೆ: ಸೂಕ್ಷ್ಮ ಅರ್ಥಶಾಸ್ತ್ರ ಮತ್ತು ಸಮಗ್ರ ಅರ್ಥಶಾಸ್ತ್ರ. ಸೂಕ್ಷ್ಮ ಅರ್ಥಶಾಸ್ತ್ರದಲ್ಲಿ ನಾವು ವಿವಿಧ ಸರಕು ಮತ್ತು ಸೇವೆಗಳ ಮಾರುಕಟ್ಟೆಗಳಲ್ಲಿ ವೈಯಕ್ತಿಕ ಆರ್ಥಿಕ ಪ್ರತಿನಿಧಿಗಳ ವರ್ತನೆಯನ್ನು ಅಧ್ಯಯನ ಮಾಡುತ್ತೇವೆ. ಈ ಮಾರುಕಟ್ಟೆಗಳಲ್ಲಿ ವ್ಯಕ್ತಿಗಳ ಪರಸ್ಪರ ಸಂವಹನದ ಮೂಲಕ ಸರಕು ಮತ್ತು ಸೇವೆಗಳ ಬೆಲೆಗಳು ಮತ್ತು ಪ್ರಮಾಣಗಳು ಹೇಗೆ ನಿರ್ಧಾರವಾಗುತ್ತದೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತೇವೆ. ಮತ್ತೊಂದೆಡೆ ಸಮಗ್ರ ಅರ್ಥಶಾಸ್ತ್ರದಲ್ಲಿ ನಾವು ಸಮಗ್ರವಾದ ಮಾಪನಗಳು ಅಂದರೆ ಸಮಗ್ರ ಉತ್ಪಾದನೆ, ಉದ್ಯೋಗ ಮತ್ತು ಸಮಗ್ರ ಬೆಲೆಗಳ ಮಟ್ಟಗಳಂತಹ ವಿಷಯಗಳ ಮೇಲೆ ಗಮನವನ್ನು ಕೇಂದ್ರಿಕರಿಸುವ ಮೂಲಕ ಸಮಗ್ರವಾಗಿ ಇಡೀ ಆರ್ಥಿಕತೆಯ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುತ್ತೇವೆ. ಇಲ್ಲಿ ಈ ಸಮಗ್ರ ಮಾಪನಗಳ ಮಟ್ಟವು ಹೇಗೆ ನಿರ್ಧಾರಿತವಾಗುತ್ತೆಂಬುದನ್ನು ಮತ್ತು ಕಾಲಾಂತರದಲ್ಲಿ ಈ ಸಮಗ್ರ ಮಟ್ಟಗಳು ಹೇಗೆ ಬದಲಾಗುತ್ತದೆಂದು ಕಂಡುಕೊಳ್ಳಲು ನಾವು ಉತ್ಸುಕರಾಗಿದ್ದೇವೆ. ಸಮಗ್ರ ಅರ್ಥಶಾಸ್ತ್ರದಲ್ಲಿ ಅಧ್ಯಯನ ಮಾಡಲಾಗುವ ಕೆಲವು ಪ್ರಮುಖ ಪ್ರಶ್ನೆಗಳು ಮುಂದಿನಂತಿವೆ. ಆರ್ಥಿಕತೆಯ ಒಟ್ಟು ಉತ್ಪನ್ನದ ಮಟ್ಟ ಎಷ್ಟು? ಒಟ್ಟು ಉತ್ಪನ್ನವನ್ನು ಹೇಗೆ ನಿರ್ಧರಿಸಲಾಗುತ್ತದೆ ? ಕಾಲಾಂತರದಲ್ಲಿ ಒಟ್ಟು ಉತ್ಪನ್ನ ಹೇಗೆ ಬೆಳೆಯುತ್ತದೆ ? ಆರ್ಥಿಕತೆಯ ಸಂಪನ್ಮೂಲಗಳು (ಉದಾ: ಶ್ರಮ) ಸಂಪೂರ್ಣವಾಗಿ ಬಳಕೆಯಲ್ಲಿವೆಯೇ ? ಸಂಪನ್ಮೂಲಗಳು ಅಪೂರ್ಣ ಬಳಕೆಯಾಗಲು ಕಾರಣಗಳಾವುವು ? ಬೆಲೆಗಳು ಏಕೆ ಏರಿಕೆಯಾಗುತ್ತವೆ ? ಹೀಗೆ ಸೂಕ್ಷ್ಮ ಅರ್ಥಶಾಸ್ತ್ರದ ವಿವಿಧ ಮಾರುಕಟ್ಟೆಗಳನ್ನು ಕುರಿತು ಅಧ್ಯಯನ ಮಾಡುವುದರ ಬದಲು ಸಮಗ್ರ ಅರ್ಥಶಾಸ್ತ್ರದಲ್ಲಿ ಆರ್ಥಿಕತೆಯ ಕಾರ್ಯಕ್ಷಮತೆಯ ಒಟ್ಟಾರೆ ಅಥವಾ ಸಮಗ್ರ ಮಾಪನಗಳ ವರ್ತನೆಯನ್ನು ಅಧ್ಯಯನ ಮಾಡಲು ಪ್ರಯತ್ನಿಸುತ್ತೇವೆ.



## 1.6 ಪುಸ್ತಕದ ಯೋಜನೆ *Plan of The Book*

ಈ ಪುಸ್ತಕವು ಸೂಕ್ಷ್ಮ ಅರ್ಥಶಾಸ್ತ್ರದ ಮೂಲ ವಿಚಾರಗಳಿಗೆ ನಿಮ್ಮನ್ನು ಪರಿಚಯಿಸುತ್ತದೆ. ಈ ಪುಸ್ತಕದಲ್ಲಿ ನಾವು ಒಂದು ಸರಕಿನ ಬಗ್ಗೆ ವೈಯಕ್ತಿಕ ಅನುಭೋಗಿಗಳು ಮತ್ತು ಉತ್ಪಾದಕರ ವರ್ತನೆಯನ್ನು ಕೇಂದ್ರಿಕರಿಸುತ್ತೇವೆ. ಮತ್ತು ಮಾರುಕಟ್ಟೆಯಲ್ಲಿ ಒಂದು ಸರಕಿನ ಬೆಲೆ ಹಾಗು ಪ್ರಮಾಣವು ಹೇಗೆ ನಿರ್ಧಾರವಾಗುತ್ತದೆಂಬುದನ್ನು

ವಿಶ್ಲೇಷಿಸಲು ಪ್ರಯತ್ನಿಸುತ್ತೇವೆ. ಅಧ್ಯಾಯ–2 ರಲ್ಲಿ ನಾವು ಅನುಭೋಗಿಯ ವರ್ತನೆಯನ್ನು ಅಧ್ಯಯನ ಮಾಡುತ್ತೇವೆ. ಅಧ್ಯಾಯ–3 ರಲ್ಲಿ ಉತ್ಪಾದನೆ ಮತ್ತು ವೆಚ್ಚ ಪರಿಕಲ್ಪನೆಯ ಕುರಿತು ಚರ್ಚೆ ಮಾಡಲಾಗಿದೆ. ಅಧ್ಯಾಯ–4ರಲ್ಲಿ ನಾವು ಉತ್ಪಾದಕರ ವರ್ತನೆಯನ್ನು ಅಧ್ಯಯನ ಮಾಡುತ್ತೇವೆ. 5ನೆಯ ಅಧ್ಯಾಯದಲ್ಲಿ ಒಂದು ವಸ್ತುವಿಗೆ ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಬೆಲೆ ಮತ್ತು ಪ್ರಮಾಣ ಹೇಗೆ ನಿರ್ಧರಿಸಲಾಗುವುದು ಎಂಬುದನ್ನು ಅಧ್ಯಯನ ಮಾಡುತ್ತೇವೆ. ಅಧ್ಯಾಯ–6ರಲ್ಲಿ ಇತರೆ ಪ್ರಕಾರದ ಮಾರುಕಟ್ಟೆಯ ಕುರಿತು ಅಧ್ಯಯನ ಮಾಡುತ್ತೇವೆ.

## ಪ್ರಮುಖ ಪರಿಭಾಷೆಗಳು *Key Concepts*

| ಅನುಭೋಗ | ಉತ್ಪಾದನೆ | ವಿನಿಮಯ |
|---|---|---|
| ಕೊರತೆ | ಉತ್ಪಾದನೆಯ ಸಾಧ್ಯತೆಗಳು | ಅವಕಾಶ ವೆಚ್ಚ |
| ಮಾರುಕಟ್ಟೆ | ಮಾರುಕಟ್ಟೆ ಅರ್ಥವ್ಯವಸ್ಥೆ | ಕೇಂದ್ರಿಯ ಯೋಜಿತ ಆರ್ಥಿಕತೆ |
| ಮಿಶ್ರ ಆರ್ಥಿಕತೆ | ವಾಸ್ತವಿಕ ವಿಶ್ಲೇಷಣೆ | ಮಾದರಿಯ ವಿಶ್ಲೇಷಣೆ |
| ಸೂಕ್ಷ್ಮ ಅರ್ಥಶಾಸ್ತ್ರ | ಸಮಗ್ರ ಅರ್ಥಶಾಸ್ತ್ರ | |



## ಅಭ್ಯಾಸಗಳು *Exercises*

1. ಆರ್ಥಿಕತೆಯ ಕೇಂದ್ರೀಯ ಸಮಸ್ಯೆಗಳನ್ನು ಚರ್ಚಿಸಿ.
2. ಒಂದು ಆರ್ಥಿಕತೆಯ ಉತ್ಪಾದನಾ ಸಾಧ್ಯತೆಗಳೆಂದರೇನು ?
3. ಉತ್ಪಾದನಾ ಸಾಧ್ಯತಾ ಗಡಿ ಎಂದರೇನು ?
4. ಅರ್ಥಶಾಸ್ತ್ರದ ವಿಷಯ ವಸ್ತುವನ್ನು ಚರ್ಚಿಸಿ.
5. ಕೇಂದ್ರೀಯ ಯೋಜಿತ ಆರ್ಥಿಕತೆ ಮತ್ತು ಮಾರುಕಟ್ಟೆ ಆರ್ಥಿಕತೆಯ ನಡುವೆ ಇರುವ ವ್ಯತ್ಯಾಸವೇನು?
6. ವಾಸ್ತವಿಕ ಆರ್ಥಿಕ ವಿಶ್ಲೇಷಣೆಯನ್ನು ನೀವು ಏನೆಂದು ಅರ್ಥ ಮಾಡಿಕೊಳ್ಳುವಿರಿ ?
7. ಮಾದರಿಯ ಆರ್ಥಿಕ ವಿಶ್ಲೇಷಣೆಯನ್ನು ನೀವು ಏನೆಂದು ಅರ್ಥ ಮಾಡಿಕೊಳ್ಳುವಿರಿ ?
8. ಸೂಕ್ಷ್ಮ ಮತ್ತು ಸಮಗ್ರ ಅರ್ಥಶಾಸ್ತ್ರದ ನಡುವೆ ಇರುವ ವ್ಯತ್ಯಾಸ ತಿಳಿಸಿರಿ ?

❖ ❖ ❖ ❖

# ಅಧ್ಯಾಯ 2



# ಅನುಭೋಗಿಯ ವರ್ತನೆಯ ಸಿದ್ಧಾಂತ

## *Theory of Consumer Behaviour*

ಅಂತಿಮ ಸರಕುಗಳ[1] ಮಾರುಕಟ್ಟೆಯಲ್ಲಿ ಅನುಭೋಗಿಯ ವರ್ತನೆ ಹೇಗಿರುತ್ತದೆ ಎಂಬುದನ್ನು ಈ ಅಧ್ಯಾಯದಲ್ಲಿ ನಾವು ಅಭ್ಯಸಿಸುತ್ತೇವೆ. ಲಭ್ಯವಿರುವ ವಿಭಿನ್ನ ಸರಕುಗಳನ್ನು ಯಾವ ಪ್ರಮಾಣದಲ್ಲಿ ಅನುಭೋಗಿಸಬೇಕೆಂಬುದನ್ನು ಅನುಭೋಗಿಯೇ ನಿರ್ಧರಿಸುತ್ತಾಳೆ. ಇಲ್ಲಿ ಆಯ್ಕೆಯ ಸಮಸ್ಯೆಯನ್ನು ವಿವರವಾಗಿ ಚರ್ಚಿಸುವುದೇ ಈ ಅಧ್ಯಾಯದ ಪ್ರಮುಖ ಉದ್ದೇಶವಾಗಿದೆ. ನಾವು ನೋಡಿದಂತೆ, ಅನುಭೋಗಿಯ ಆಯ್ಕೆಯು, ಅವನ ಅಥವಾ ಅವಳ, ಅಭಿರುಚಿ ಮತ್ತು ಆದ್ಯತೆಗನುಸಾರವಾಗಿ ಲಭ್ಯವಿರುವ ಪರ್ಯಾಯಗಳನ್ನು ಅವಲಂಬಿಸಿರುತ್ತದೆ. ಅನುಭೋಗಿಯ ಅಭಿರುಚಿ, ಆದ್ಯತೆ ಮತ್ತು ಲಭ್ಯವಿರುವ ಪರ್ಯಾಯಗಳನ್ನು ನಿಖರ ಹಾಗೂ ಅನುಕೂಲಕರ ರೀತಿಯಲ್ಲಿ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡೋಣ. ನಂತರ ಈ ವಿವರಣೆಯನ್ನು ನಾವು ಮಾರುಕಟ್ಟೆಯಲ್ಲಿ ಅನುಭೋಗಿಯ ಆಯ್ಕೆಯನ್ನು ಅಭ್ಯಸಿಸಲು ಬಳಸಿಕೊಳ್ಳೋಣ.

### ಪೂರ್ವ ಸಂಕೇತನಗಳು ಮತ್ತು ಕಲ್ಪನೆಗಳು *Preliminary Notations and Assumptions*

ಸಾಮಾನ್ಯವಾಗಿ ಒಬ್ಬ ಅನುಭೋಗಿಯು ಹಲವಾರು ಸರಕುಗಳನ್ನು ಅನುಭೋಗಿಸುತ್ತಾಳೆ. ಆದರೆ ನಾವಿಲ್ಲಿ ಸರಳವಾಗಿ ಕೇವಲ ಎರಡು ಸರಕುಗಳು[2] ಲಭ್ಯವಿರುವ ಸನ್ನಿವೇಶದಲ್ಲಿ ಅನುಭೋಗಿಯ ಆಯ್ಕೆಯ ಸಮಸ್ಯೆಯನ್ನು ಪರಿಗಣಿಸೋಣ. ಸರಕು1 ಮತ್ತು ಸರಕು2 ಎಂದು ಎರಡು ಸರಕುಗಳನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಈ ಎರಡು ಸರಕುಗಳನ್ನು ಒಳಗೊಂಡ ಯಾವುದೇ ಸಂಯೋಜನೆಯ ಮೊತ್ತವನ್ನು ಅನುಭೋಗದ ಒಂದು ಸಂಯೋಜನೆ (ಕಂತೆ–*Bundle*) ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ನಾವು ಮೊದಲನೆ ಸರಕಿನ ಪ್ರಮಾಣವನ್ನು ವ್ಯಕ್ತಪಡಿಸಲು $x_1$ ಚಲಕವನ್ನು, ಎರಡನೆ ಸರಕಿನ ಪ್ರಮಾಣವನ್ನು ವ್ಯಕ್ತಪಡಿಸಲು $x_2$ ಚಲಕವನ್ನು ಬಳಸುತ್ತೇವೆ. $x_1$ ಮತ್ತು $x_2$ ಸರಕುಗಳು ಧನಾತ್ಮಕವಾಗಿರಬಹುದು ಅಥವಾ ಶೂನ್ಯವಾಗಿರಬಹುದು. $(x_1, x_2)$ ಸಂಯೋಜನೆಯು, $x_1$ ಪ್ರಮಾಣದಷ್ಟು ಸರಕು1ನ್ನು (ಮೊದಲನೇ ಸರಕನ್ನು) ಮತ್ತು $x_2$ ಪ್ರಮಾಣದಷ್ಟು ಸರಕು2ನ್ನು (ಎರಡನೇ ಸರಕನ್ನು) ಒಳಗೊಂಡಿರುತ್ತದೆ. ನಿರ್ದಿಷ್ಟ ಮೌಲ್ಯದ $x_1$ ಮತ್ತು $x_2$ ಗಳು $(x_1, x_2)$ ನಿರ್ದಿಷ್ಟ ಸಂಯೋಜನೆಯನ್ನು ನೀಡುತ್ತದೆ. ಉದಾಹರಣೆಗೆ (5,10) ಸಂಯೋಜನೆಯು 5 ಯೂನಿಟ್‌ಗಳಷ್ಟು ಸರಕು1 ನ್ನು ಮತ್ತು 10 ಯೂನಿಟ್‌ಗಳಷ್ಟು ಸರಕು2 ನ್ನು ಒಳಗೊಂಡಿರುತ್ತದೆ; (10,5) ಸಂಯೋಜನೆಯು 10 ಘಟಕಗಳಷ್ಟು ಸರಕು1 ನ್ನು ಮತ್ತು 5 ಯೂನಿಟ್‌ಗಳಷ್ಟು ಸರಕು2 ನ್ನು ಒಳಗೊಂಡಿರುತ್ತದೆ.

## 2.1 ಅನುಭೋಗಿಯ ಬಜೆಟ್ *The Consumer's Budget*

ಒಬ್ಬ ಅನುಭೋಗಿಯು ನೀಡಿದ ಬೆಲೆಯಲ್ಲಿ ಲಭ್ಯವಿರುವ ಎರಡು ಸರಕುಗಳನ್ನು ಕೊಂಡುಕೊಳ್ಳಲು ನಿರ್ದಿಷ್ಟ ಮೊತ್ತದ ಹಣವನ್ನು (ಆದಾಯವನ್ನು) ಹೊಂದಿರುತ್ತಾಳೆಂದು ಭಾವಿಸೋಣ. ಆ ಅನುಭೋಗಿಗೆ ತಾನು ಬಯಸಿದ ಎರಡು ಸರಕುಗಳ ಎಲ್ಲಾ ಸಂಯೋಜನೆಗಳನ್ನು ಕೊಂಡುಕೊಳ್ಳುವುದು ಸಾಧ್ಯವಿಲ್ಲ. ಅನುಭೋಗಿಗೆ ಲಭ್ಯವಿರುವ ಎರಡು ಸರಕುಗಳ

---

[1] ನಾವು ಸಾಮಾನ್ಯವಾಗಿ ಸರಕು ಎಂಬ ಪದವನ್ನು ಬಳಸುತ್ತೇವೆ. ಆದರೆ ಇದರ ಅರ್ಥ ಸರಕು ಸೇವೆಗಳೆರಡನ್ನು ಹೊಂದಿರುತ್ತದೆ.

[2] ಎರಡು ಸರಕುಗಳನ್ನು ಮಾತ್ರ ಪರಿಗಣಿಸಿರುವ ಕಲ್ಪನೆಯು ವಿಶ್ಲೇಷಣೆಯನ್ನು ಗಮನಾರ್ಹವಾಗಿ ಸರಳಗೊಳಿಸಿದೆ. ಮತ್ತು ಸರಳ ರೇಖಾಚಿತ್ರಗಳ ಮೂಲಕ ಮುಖ್ಯ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ.

ಸಂಯೋಜನೆಗಳು ಆ ಎರಡು ಸರಕುಗಳ ಬೆಲೆ ಮತ್ತು ಅನುಭೋಗಿಯ ಆದಾಯವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಅನುಭೋಗಿಯ ಬಜೆಟ್, ಅನುಭೋಗಿ ಹೊಂದಿರುವ ನಿರ್ದಿಷ್ಟ ಆದಾಯ ಮತ್ತು ನಿರ್ದಿಷ್ಟ ಬೆಲೆಗಳಲ್ಲಿ ಕೊಂಡುಕೊಳ್ಳಬಹುದಾದ ನಿರ್ದಿಷ್ಟ ಪ್ರಮಾಣದ ಎರಡು ಸರಕುಗಳ ಸಂಯೋಜನೆಗಳನ್ನು ತಿಳಿಸುತ್ತದೆ. ಅಂದರೆ ಅನುಭೋಗಿಯು ತನ್ನ ಆದಾಯಕ್ಕೆ ಸಮನಾದ ಅಥವಾ ಅದಕ್ಕಿಂತ ಕಡಿಮೆ ವೆಚ್ಚದ ಸರಕುಗಳ ಸಂಯೋಜನೆಗಳನ್ನು ಮಾತ್ರ ಕೊಂಡುಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾಳೆ.




ಆಯ್ಕೆಗಳಿಗಾಗಿ ಕುತೂಹಲ



### 2.1.1 ಬಜೆಟ್ ಗಣ *Budget set*

ಒಬ್ಬ ಅನುಭೋಗಿಯ ಆದಾಯ '*M*' ಆಗಿದೆಯೆಂದು, ಮತ್ತು ಎರಡು ಸರಕುಗಳ ಬೆಲೆಗಳು ಅನುಕ್ರಮವಾಗಿ $p_1$ ಮತ್ತು $p_2$ ಆಗಿದೆಯೆಂದು ಭಾವಿಸೋಣ[3]. ಆ ಅನುಭೋಗಿಯು ಸರಕು1ರ $x_1$ ಘಟಕಗಳನ್ನು ಕೊಂಡುಕೊಳ್ಳಲು ಬಯಸಿದರೆ $p_1x_1$ ಮೊತ್ತದ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಅದೇ ರೀತಿ ಅನುಭೋಗಿಯು ಸರಕು2ರ $x_2$ ಘಟಕಗಳನ್ನು ಕೊಂಡುಕೊಳ್ಳಲು ಬಯಸಿದರೆ $p_2x_2$ ಮೊತ್ತದ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಅನುಭೋಗಿಯು ಸರಕು1ರ $x_1$ ಘಟಕಗಳನ್ನು ಸರಕು2ರ $x_2$ ಘಟಕಗಳನ್ನೊಳಗೊಂಡ ಸಂಯೋಜನೆಯನ್ನು (*Bundle*) ಕೊಂಡುಕೊಳ್ಳಲು ಬಯಸಿದರೆ, $p_1x_1+P_2x_2$ ಮೊತ್ತದ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅನುಭೋಗಿಯು $p_1x_1+p_2x_2$ ಮೊತ್ತದ ಆದಾಯವನ್ನು ಹೊಂದಿದ್ದಾಗ ಮಾತ್ರ ಅನುಭೋಗಿಗೆ ಈ ಸರಕುಗಳ ಸಂಯೋಜನೆಯನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತದೆ. ಅನುಭೋಗಿಯು ತನ್ನ ನಿರ್ದಿಷ್ಟ ಆದಾಯದಲ್ಲಿ ಮತ್ತು ನಿರ್ದಿಷ್ಟ ಬೆಲೆಗಳಲ್ಲಿ ಕೊಂಡುಕೊಳ್ಳಬಹುದಾದ ಎರಡು ಸರಕುಗಳ ವಿವಿಧ ಸಂಯೋಜನೆಗಳನ್ನು ತನ್ನ ಆದಾಯಕ್ಕೆ ಸಮನಾಗುವವರೆಗೂ ಅಥವಾ ಆದಾಯಕ್ಕಿಂತ ಕಡಿಮೆಯಿರುವವರೆಗೂ ಆಯ್ಕೆ ಮಾಡಿಕೊಳ್ಳಬಹುದು. ಇನ್ನೊಂದು ಅರ್ಥದಲ್ಲಿ, $(x_1,x_2)$ ಸಂಯೋಜನೆಯು ಯಾವುದೇ ಸಂಯೋಜನೆಗಳನ್ನು,

$$p_1x_1+p_2x_2 \leq M \qquad (2.1)$$

ಆಗಿರುವಂತೆ ಕೊಂಡುಕೊಳ್ಳಬಹುದು.

---

[3] ಒಂದು ಸರಕಿನ ಬೆಲೆಯೆಂದರೆ, ಅನುಭೋಗಿಯು ತಾನು ಕೊಂಡುಕೊಳ್ಳಲು ಬಯಸುವ ಸರಕಿನ ಒಂದು ಯೂನಿಟ್‌ಗೆ ಪಾವತಿ ಮಾಡಬಹುದಾದ ಹಣದ ಮೊತ್ತ ಸರಕಿನ ಪ್ರಮಾಣವನ್ನು ಕಿಲೋಗ್ರಾಂಗಳಲ್ಲಿ ಮತ್ತು ಹಣವನ್ನು ರೂಪಾಯಿಗಳಲ್ಲಿ ವ್ಯಕ್ತಪಡಿಸಿದರೆ, ಮೊದಲನೆ ಸರಕಿನ ಬೆಲೆಯು $P_1$, ಅಂದರೆ ಅನುಭೋಗಿಯು ಕೊಂಡುಕೊಳ್ಳಲು ಬಯಸುವ 1 ಕಿಲೋಗ್ರಾಂ ಸರಕಿಗೆ ಬೆಲೆಯು $P_1$ ಆಗಿರುತ್ತದೆ.

[2.1]ರಲ್ಲಿನ ಅಸಮಾನತೆಯನ್ನು ಅನುಭೋಗಿಯ **ಬಜೆಟ್ ಮಿತಿಯೆಂದು** ಕರೆಯಲಾಗುತ್ತದೆ. **ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳ ಸಮೂಹವನ್ನು ಬಟೆಟ್ ಗಣ** ಎನ್ನುತ್ತೇವೆ. ಪ್ರಸ್ತುತ ಮಾರುಕಟ್ಟೆ ಬೆಲೆಗಳಲ್ಲಿ ಅನುಭೋಗಿಯು ತನ್ನ ಆದಾಯದಿಂದ ಕೊಂಡುಕೊಳ್ಳಬಹುದಾದ ಎಲ್ಲಾ ಸಂಯೋಜನೆಗಳ ಸಂಗ್ರಹವೇ ಬಜೆಟ್ ಗಣವಾಗಿದೆ.

**ಉದಾಹರಣೆ 2.1**

ಒಬ್ಬ ಅನುಭೋಗಿಯು ₹20 ಆದಾಯವನ್ನು ಹೊಂದಿದ್ದಾಳೆಂದುಕೊಳ್ಳೋಣ. ಎರಡು ಸರಕುಗಳ ಬೆಲೆ ₹5 ಆಗಿದೆ ಮತ್ತು ಅವುಗಳು ಕೇವಲ ಪೂರ್ಣ ಘಟಕಗಳಲ್ಲಿ ಮಾತ್ರ ಲಭ್ಯವಿದೆ ಎಂದುಕೊಳ್ಳೋಣ. ಈ ನಿರ್ದಿಷ್ಟ ಆದಾಯ ಮತ್ತು ನಿರ್ದಿಷ್ಟ ಬೆಲೆಯಲ್ಲಿ ಅನುಭೋಗಿಯು ಕೊಂಡುಕೊಳ್ಳಬಹುದಾದ ಅನುಭೋಗದ ಸಂಯೋಜನೆಗಳು (0,0), (0,1), (0,2), (0,3), (0,4), (1,0), (1,1), (1,2), (1,3), (2,0), (2,1), (2,2), (3,0), (3,1) ಮತ್ತು (4,0) ಆಗಿರುತ್ತದೆ. ಈ ಸಂಯೊಜನೆಗಳಲ್ಲಿ (0,4), (1,3), (2,2), (3,1) ಮತ್ತು (4,0) ಸಂಯೋಜನೆಗಳ ಮೇಲೆ ಮಾಡಿದ ವೆಚ್ಚವು, ಅನುಭೋಗಿಯು ಹೊಂದಿರುವ ₹20 ಆದಾಯಕ್ಕೆ ಸಮನಾಗಿದೆ. ಆದರೆ ಉಳಿದ ಎಲ್ಲಾ ಸಂಯೋಜನೆಗಳು ಅನುಭೋಗಿಯ ₹20 ಆದಾಯಕ್ಕಿಂತಲೂ ಕಡಿಮೆ ವೆಚ್ಚವನ್ನು ವ್ಯಕ್ತಪಡಿಸುತ್ತವೆ. ಹಾಗೆಯೇ ಪ್ರಚಲಿತ ಬೆಲೆಗಳಲ್ಲಿ (3,3) ಮತ್ತು (4,5) ಅನುಭೋಗದ ಸಂಯೋಜನೆಗಳು ಅನುಭೋಗಿಯ ₹20 ಆದಾಯಕ್ಕಿಂತಲೂ ಹೆಚ್ಚಿನ ವೆಚ್ಚದ್ದಾಗಿವೆ. ಈ ಸಂಯೋಜನೆಗಳನ್ನು ಅನುಭೋಗಿಗೆ ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ.

### 2.1.2 ಬಜೆಟ್ ರೇಖೆ. *Budget line*

ಒಂದು ವೇಳೆ ಎರಡು ಸರಕುಗಳು ಪರಿಪೂರ್ಣವಾಗಿ ವಿಭಜಿಸಲಾಗುವ[4] ಸರಕುಗಳಾಗಿ ಇದ್ದರೆ ಅನುಭೋಗಿಯ ಬಜೆಟ್‌ಗಣವು ಎಲ್ಲಾ $(x_1, x_2)$ ಸಂಯೋಜನೆಗಳನ್ನು ಒಳಗೊಂಡಿರುತ್ತದೆ. ಅಂದರೆ ಶೂನ್ಯಕ್ಕೆ ಸಮನಾದ ಅಥವಾ ಶೂನ್ಯಕ್ಕಿಂತ ಹೆಚ್ಚಾಗಿರುವ ಯಾವುದೇ ಸಂಖ್ಯೆಯು $x_1$ ಮತ್ತು $x_2$ ಘಟಕಗಳು ಆಗಿರಬಹುದು ಮತ್ತು $p_1x_1+p_2x_2 \leq M$ ಸಂಯೋಜನೆಗಳನ್ನು ಒಳಗೊಂಡಿರುತ್ತದೆ. ರೇಖಾಚಿತ್ರ 2.1 ರಲ್ಲಿ ಬಜೆಟ್ ಗಣವನ್ನು ಪ್ರತಿನಿಧಿಸಲಾಗಿದೆ.




**ರೇಖಾಚಿತ್ರ 2.1 ಬಜೆಟ್ ಗಣ :** ಸರಕು1ನ್ನು *ox* ತಲಾಕ್ಷದಲ್ಲಿ ಸರಕು2ನ್ನು *oy* ಲಂಬಾಕ್ಷದಲ್ಲಿ ಮಾಪನ ಮಾಡಲಾಗಿದೆ. ಈ ರೇಖೆದಲ್ಲಿನ ಯಾವುದೇ ಬಿಂದುವು ಎರಡು ಸರಕುಗಳ ಒಂದು ಸಂಯೋಜನೆಯನ್ನು ವ್ಯಕ್ತಪಡಿಸುತ್ತವೆ. $p_1x_1 + p_2x_2 = M$ ಸಮೀಕರಣವನ್ನು ಹೊಂದಿರುವ ಸರಳರೇಖೆಯ ಮೇಲ್ಭಾಗದಲ್ಲಿ ಅಥವಾ ಕೆಳಭಾಗದಲ್ಲಿ ಬರುವ ಎಲ್ಲಾ ಬಿಂದುಗಳನ್ನು ಬಜೆಟ್ ಗಣ ಒಳಗೊಂಡಿರುತ್ತದೆ.

ಧನಾತ್ಮಕ ಪಾದದಲ್ಲಿರುವ ರೇಖೆಯ ಮೇಲಿರುವ ಅಥವಾ ಕೆಳಭಾಗದಲ್ಲಿರುವ ಎಲ್ಲಾ ಸಂಯೋಜನೆಗಳನ್ನು ಬಜೆಟ್ ಗಣವು ಒಳಗೊಂಡಿರುತ್ತದೆ. ಈ ರೇಖೆಯ ಸಮೀಕರಣವು

$$p_1x_1+p_2x_2 = M \qquad (2.2)$$

ಆಗಿರುತ್ತದೆ. ಈ ರೇಖೆಯು ಎಲ್ಲಾ ಸಂಯೋಜನೆಗಳನ್ನು ಒಳಗೊಂಡಿದ್ದು ಅವುಗಳ ವೆಚ್ಚ '*M*' ಗೆ (*M* ಆದಾಯಕ್ಕೆ) ಸಮನಾಗಿರುತ್ತದೆ. ಈ ರೇಖೆಯನ್ನು **ಬಜೆಟ್ ರೇಖೆ** ಎಂದು ಕರೆಯಲಾಗುತ್ತದೆ. ಬಜೆಟ್ ರೇಖೆಯ ಕೆಳಭಾಗದಲ್ಲಿ ಬರುವ ಸಂಯೋಜನೆಗಳು ಅನುಭೋಗಿಯು ಕೊಂಡುಕೊಳ್ಳಬಹುದಾದ '*M*' ಆದಾಯಕ್ಕಿಂತಲೂ ಕಡಿಮೆ ವೆಚ್ಚದ ಸಂಯೋಜನೆಗಳನ್ನು ವ್ಯಕ್ತಪಡಿಸುತ್ತವೆ.

[4] ಉದಾಹರಣೆ 2.1 ರಲ್ಲಿ ಕೊಟ್ಟಿರುವ ಸರಕುಗಳನ್ನು ವಿಭಜಿಸಲು ಸಾಧ್ಯವಿಲ್ಲ. ಅವುಗಳು ಪೂರ್ಣ ಪ್ರಮಾಣದಲ್ಲಿ ಮಾತ್ರ ಲಭ್ಯವಿರುತ್ತವೆ. ಹಲವಾರು ಸರಕುಗಳು ವಿಭಜಿಸುವ ರೂಪದಲ್ಲೂ ಲಭ್ಯವಿರುತ್ತವೆ. ಅರ್ಧ ಕಿತ್ತಲೆಹಣ್ಣನ್ನು, ಕಾಲುಭಾಗ ಬಾಳೆಹಣ್ಣನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಆದರೆ ಅರ್ಧ ಕಿಲೋಗ್ರಾಂ ಅಕ್ಕಿಯನ್ನು, 1/4 ಲೀಟರ್ ಹಾಲನ್ನು ಖಂಡಿತವಾಗಿಯೂ ಕೊಂಡುಕೊಳ್ಳಬಹುದು.

ಸಮೀಕರಣ 2.2 ನ್ನು ಈ ಕೆಳಗಿನಂತೆಯೂ ಸಹ ಬರೆಯಬಹುದು[5]

$$x_2 = \frac{M}{p_2} - \frac{p_1}{p_2} x_1 \qquad (2.3)$$

ಬಜೆಟ್ ರೇಖೆಯು ಒಂದು ಸರಳ ರೇಖೆಯಾಗಿದ್ದು $\frac{M}{p_1}$ ಸಮಾನಾಂತರ ಛೇದಕವನ್ನು, ಮತ್ತು $\frac{M}{p_2}$ ಲಂಬಾಂತರ ಛೇದಕವನ್ನು ಹೊಂದಿರುತ್ತದೆ. ಅನುಭೋಗಿಯು ತನ್ನ ಇಡೀ ಆದಾಯವನ್ನು ಸರಕು1ನ್ನು ಕೊಳ್ಳಲು ಖರ್ಚು ಮಾಡಿದಾಗ ಕೊಂಡುಕೊಳ್ಳಬಹುದಾದ ಸಂಯೋಜನೆಯನ್ನು ಸಮನಾಂತರ ಛೇದಕವು ಪ್ರತಿನಿಧಿಸುತ್ತದೆ. ಅದೇ ರೀತಿ ಇಡೀ ಆದಾಯವನ್ನು ಸರಕು2ನ್ನು ಕೊಳ್ಳಲು ಖರ್ಚು ಮಾಡಿದರೆ ಆ ಅನುಭೊಗಿಯು ಕೊಂಡುಕೊಳ್ಳಬಹುದಾದ ಸಂಯೋಜನೆಯನ್ನು ಲಂಬಾಂತರ ಛೇದಕವು ಪ್ರತಿನಿಧಿಸುತ್ತದೆ. ಹಾಗೆಯೇ ಲಂಬಾಂತರ ಛೇದಕವು ಎರಡನೇ ಸರಕನ್ನು ಸಂಪೂರ್ಣವಾಗಿ ಕೊಂಡುಕೊಳ್ಳಬಹುದಾದ ಸಂಯೋಜನೆಯನ್ನು ವ್ಯಕ್ತ ಪಡಿಸುತ್ತದೆ. ಬಜೆಟ್ ರೇಖೆಯ ಇಳಿಜಾರು (*Slope*)$-\frac{p_1}{p_2}$ ಆಗಿರುತ್ತದೆ.

**ಬಜೆಟ್ ರೇಖೆಯ ಇಳಿಜಾರಿನ ನಿಷ್ಪತ್ತಿ**




ಬಜೆಟ್ ರೇಖೆಯ ಮೇಲೆ ಸರಕು1 ರ ಪ್ರತಿ ಘಟಕದ ಬದಲಾವಣೆಗೆ ಸರಕು2 ರಲ್ಲಿ ಬೇಕಾಗುವ ಬದಲಾವಣೆಯ ಪ್ರಮಾಣವನ್ನು ಬಜೆಟ್ ರೇಖೆಯ ಇಳಿಜಾರು ಮಾಪನ ಮಾಡುತ್ತದೆ. ಬಜೆಟ್ ರೇಖೆಯ ಮೇಲಿನ ಯಾವುದೇ ಎರಡು ಬಿಂದುಗಳನ್ನು $(x_1, x_2)$ ಮತ್ತು $(x_1 + \Delta x_1, x_2 + \Delta x_2)$ ಪರಿಗಣಿಸಿದಾಗ ಅದರ ಬೀಜಗಣಿತೀಯ ಸ್ವರೂಪವು ಈ ರೀತಿ ಇರುತ್ತದೆ.[a]

$$p_1 x_1 + p_2 x_2 = M \qquad (2.4)$$

ಮತ್ತು

$$p_1(x_1 + \Delta x_1) + p_2(x_2 + \Delta x_2) = M \qquad (2.5)$$

ಸಮೀಕರಣ 2.5 ರಿಂದ ಸಮೀಕರಣ 2.4ನ್ನು ವ್ಯವಕಲನ ಮಾಡಿದಾಗ ನಾವು ಈ ಕೆಳಗಿನ ಸಮೀಕರಣವನ್ನು ಪಡೆಯುತ್ತೇವೆ.

$$p_1 \Delta x_1 + p_2 \Delta x_2 = 0 \qquad (2.6)$$

ಸಮೀಕರಣ 2.6 ರಲ್ಲಿ ವ್ಯಕ್ತಪಡಿಸಿರುವ ಅಂಶಗಳನ್ನು ಮರುಹೊಂದಿಸಿದಾಗ ನಾವು ಈ ಕೆಳಗಿನ ಸ್ವರೂಪದ ಸಮೀಕರಣವನ್ನು ಪಡೆಯುತ್ತೇವೆ.

$$\frac{\Delta x_2}{\Delta x_1} = -\frac{p_1}{p_2} \qquad (2.7)$$

[a] $\Delta$ (ಡೆಲ್ಟಾ) ಇದು ಗ್ರೀಕ್ ಅಕ್ಷರವಾಗಿದೆ. ಗಣಿತ ಶಾಸ್ತ್ರದಲ್ಲಿ $\Delta$ ವನ್ನು ಬದಲಾವಣೆಯನ್ನು ಸೂಚಿಸಲು ಬಳಸಲಾಗುತ್ತದೆ. ಆದ್ದರಿಂದ $\Delta x_1$ ಅನ್ನು $x_1$ ನಲ್ಲಿ ಆದ ಬದಲಾವಣೆಯನ್ನು ಮತ್ತು $\Delta x_2$ ಅನ್ನು $x_2$ ನಲ್ಲಿ ಆದ ಬದಲಾವಣೆಯನ್ನು ಸೂಚಿಸಲು ಬಳಸಲಾಗಿದೆ.



[5] ಸರಳಾರೇಖಾ ಸಮೀಕರಣ $y = c + mx$ ಎಂಬುದನ್ನು ಶಾಲಾ ಗಣಿತ ಪಠ್ಯದಲ್ಲಿ ಕಲಿತಿದ್ದೀರಿ. ಈ ಸಮೀಕರಣದಲ್ಲಿ 'C' ಸ್ಥಿರಾಂಕವಾಗಿದ್ದು ಲಂಬಾಂತರ ಛೇದಕವಾಗಿದೆ $m$ ಸರಳಾರೇಖೆಯ ಇಳಿಜಾರಾಗಿದೆ. ಸಮೀಕರಣ 2.3 ಸಹ ಇದೇ ರೀತಿಯ ರೂಪವನ್ನು ಹೊಂದಿದೆ ಎಂಬುದನ್ನು ನಾವಿಲ್ಲಿ ಗಮನಿಸಬಹುದು.

### ಬೆಲೆಯ ಅನುಪಾತ ಮತ್ತು ಬಜೆಟ್‌ರೇಖೆಯ ಇಳಿಜಾರು

ಬಜೆಟ್ ರೇಖೆಯ ಮೇಲಿನ ಯಾವುದೇ ಬಿಂದುವನ್ನು ಪರಿಗಣಿಸಿ. ಆ ಬಿಂದುವು ಅನುಭೋಗಿಯ ಸಂಪೂರ್ಣ ಆದಾಯವು ವೆಚ್ಚವಾಡುವ ಒಂದು ಸಂಯೋಜನೆಯನ್ನು ಪ್ರತಿನಿಧಿಸುತ್ತದೆ. ಅನುಭೋಗಿಯು ಸರಕು1ರ ಒಂದು ಹೆಚ್ಚುವರಿ ಘಟಕವನ್ನು ಕೊಂಡುಕೊಳ್ಳಲು ಬಯಸಿದರೆ, ಮತ್ತೊಂದು ಸರಕನ್ನು ಸ್ವಲ್ಪ ಪ್ರಮಾಣದಲ್ಲಿ ಬಿಟ್ಟುಕೊಡಬೇಕಾಗುತ್ತದೆ. ಸರಕು1 ರ ಹೆಚ್ಚುವರಿ ಘಟಕವನ್ನು ಪಡೆಯಲು ಎಷ್ಟು ಪ್ರಮಾಣದಲ್ಲಿ ಸರಕು2 ನ್ನು ಬಿಟ್ಟುಕೊಡಬೇಕಾಗುತ್ತದೆ? ಇದು ಎರಡು ಸರಕುಗಳ ಬೆಲೆಯನ್ನು ಅವಲಂಬಿಸಿರುತ್ತದೆ. ಸರಕು1 ರ ಒಂದು ಘಟಕಕ್ಕೆ ತಗಲುವ ವೆಚ್ಚ $p_1$ ಆಗಿದೆ. ಆದುದರಿಂದ ಅನುಭೋಗಿಯು ಸರಕು 2ರ ಮೇಲೆ ಮಾಡಬಹುದಾದ $p_1$ ಮೊತ್ತದಷ್ಟು ವೆಚ್ಚವನ್ನು ಕಡಿಮೆ ಮಾಡಬೇಕಾಗುತ್ತದೆ.ಆಗ ಅನುಭೋಗಿಯು $p_1$ ಬೆಲೆಯಲ್ಲಿ $\frac{p_1}{p_2}$ ಘಟಕದಷ್ಟು ಸರಕು 2ನ್ನು ಪಡೆಯಬಹುದು. ಆದ್ದರಿಂದ ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಸರಕು 1ರ ಮೊದಲನೆ ಸರಕಿನ ಹೆಚ್ಚುವರಿ ಘಟಕಗಳನ್ನು ಪಡೆಯಲು ಬಯಸಿದರೆ, $\frac{p_1}{p_2}$ ಘಟಕಗಳಷ್ಟು ಸರಕು2 ನ್ನು ಬಿಟ್ಟುಕೊಡಬೇಕಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ನಿರ್ದಿಷ್ಟ ಮಾರುಕಟ್ಟೆ ಸನ್ನಿವೇಶಗಳಲ್ಲಿ ಅನುಭೋಗಿಗೆ $\frac{p_1}{p_2}$ ದರದಲ್ಲಿ ಸರಕು1 ನ್ನು ಸರಕು2ಕ್ಕೆ ಬದಲಿಕೆ ಮಾಡಲು ಸಾಧ್ಯವಿರುತ್ತದೆ. ಬಜೆಟ್ ರೇಖೆಯ ಇಳಿಜಾರಿನ ನಿರಪೇಕ್ಷಾ ಮೌಲ್ಯವು[6], ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡುವ ಸಂಧರ್ಭದಲ್ಲಿ, ಯಾವ ದರದಲ್ಲಿ ಸರಕು1ನ್ನು ಸರಕು2ಕ್ಕೆ ಬದಲಿಕೆ ಮಾಡುತ್ತಾಳೆಂಬುದನ್ನು ವ್ಯಕ್ತಪಡಿಸುತ್ತದೆ.

### ಬಜೆಟ್ ರೇಖೆಯ ಕೆಳಭಾಗದ ಬಿಂದುಗಳು

ಬಜೆಟ್‌ರೇಖೆಯ ಕೆಳಭಾಗದ ಯಾವುದೇ ಬಿಂದುವನ್ನು ಪರಿಗಣಿಸಿ. ಆ ಬಿಂದುವು ಅನುಭೋಗಿಯ ಆದಾಯಕ್ಕಿಂತಲೂ ಕಡಿಮೆವೆಚ್ಚದ ಸಂಯೋಜನೆಯನ್ನು ಪ್ರತಿನಿಧಿಸುತ್ತವೆ. ಅನುಭೊಗಿಯು ಈ ಸಂಯೋಜನೆಯನ್ನು ಕೊಂಡುಕೊಂಡರೆ ಅನುಭೋಗಿಯ ಬಳಿ ಸ್ವಲ್ಪ ಮೊತ್ತದ ಹಣ ಉಳಿಯುತ್ತದೆ. ಈ ರೀತಿ ಉಳಿದ ಆದಾಯವನ್ನು ಅನುಭೋಗಿಯ ಎರಡೂ ಸರಕಗಳಲ್ಲಿ ಯಾವುದಾದರೂ ಒಂದು ಸರಕನ್ನು ಹೆಚ್ಚುವರಿಯಾಗಿ ಪಡೆಯಲು ವೆಚ್ಚ ಮಾಡುತ್ತಾಳೆ. ಆದ್ದರಿಂದ ಅನುಭೋಗದ ಸಂಯೋಜನೆಯಲ್ಲಿ ಒಂದು ಸರಕಿನ ಪ್ರಮಾಣ ಹೆಚ್ಚಾಗುತ್ತದೆ. ಆದರೆ ಮತ್ತೊಂದು ಸರಕಿನ ಪ್ರಮಾಣ ಬಜೆಟ್ ರೇಖೆಯ ಕೆಳಭಾಗದಲ್ಲಿ ಬರುವ ಅನುಭೊಗದ ಸಂಯೋಜನೆಗಿಂತ ಕಡಿಮೆಯಾಗುವುದಿಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಬಜೆಟ್‌ರೇಖೆಯ ಮೇಲಿರುವ ಬಿಂದುವನ್ನು ಬಜೆಟ್‌ರೇಖೆಯ ಕೆಳಭಾಗದಲ್ಲಿ ಬರುವ ಬಿಂದುವಿಗೆ ಹೋಲಿಸಿದರೆ, ಆ ಬಿಂದುವು ಒಂದು ಸರಕಿನ ಹೆಚ್ಚುವರಿ ಘಟಕಗಳನ್ನು ಮತ್ತು ಮೊದಲಿನ ಸಂಯೋಜನೆಗಿಂತಲೂ ಕಡಿಮೆಯಿಲ್ಲದಂತೆ ಮತ್ತೊಂದು ಸರಕಿನ ಘಟಕಗಳನ್ನು ಹೊಂದಿರುತ್ತದೆ. ಈ ವಿವರಣೆಯನ್ನು ರೇಖಾಚಿತ್ರ 2.2 ಪ್ರತಿನಿಧಿಸುತ್ತದೆ. ಈ ರೇಖಾಚಿತ್ರದಲ್ಲಿ 'C' ಬಿಂದುವು ಬಜೆಟ್‌ರೇಖೆಯ ಕೆಳಭಾಗದಲ್ಲಿ, 'A' ಮತ್ತು 'B' ಬಿಂದುವು ಬಜೆಟ್‌ರೇಖೆಯ ಮೇಲೆಯೇ ಕಂಡುಬರುತ್ತದೆ. 'A' ಬಿಂದುವು ಸರಕು2ನ್ನು ಹೆಚ್ಚಿನ ಪ್ರಮಾಣದಲ್ಲಿ ಮತ್ತು 'C' ಬಿಂದುವಿನಲ್ಲಿ ಕಂಡುಬರುವಷ್ಟೇ ಪ್ರಮಾಣದ ಸರಕು1ರ ಸಂಯೋಜನೆಯನ್ನು ಒಳಗೊಂಡಿದೆ. 'B' ಬಿಂದುವು ಸರಕು1 ನ್ನು ಹೆಚ್ಚಿನ ಪ್ರಮಾಣದಲ್ಲಿ ಮತ್ತು ಸರಕು2 ನ್ನು'C' ಬಿಂದುವಿನಲ್ಲಿರುವಷ್ಟೆ ಪ್ರಮಾಣದ ಸಂಯೋಜನೆಯನ್ನು ಹೊಂದಿದೆ. 'AB' ರೇಖೆಯ ಭಾಗದಲ್ಲಿ




**ರೇಖಾಚಿತ್ರ 2.2: ಬಜೆಟ್‌ರೇಖೆಯ ಕೆಳಗಿನ ಒಂದು ಬಿಂದು :** ಬಜೆಟ್ ರೇಖೆಯ ಕೆಳಗಿನ ಒಂದು ಬಿಂದುವಿಗೆ ಹೋಲಿಸಿದರೆ, ಬಜೆಟ್ ರೇಖೆಯು ಯಾವಾಗಲೂ, ಕನಿಷ್ಟ ಒಂದು ಸರಕನ್ನು ಹೆಚ್ಚಾಗಿ ಮತ್ತು ಮತ್ತೊಂದು ಸರಕನ್ನು ಕಡಿಮೆಯಿಲ್ಲದಂತೆ ಹೊಂದಿರುವ ಕೆಲವು ಸಂಯೋಜನೆಗಳನ್ನು ಹೊಂದಿರುತ್ತದೆ

[6] '$x$' ನ ನಿರಪೇಕ್ಷ ಮೌಲ್ಯವು '$x$' ಗೆ ಸಮಾನಾಗಿರುತ್ತದೆ. ಯಾವಾಗ ಎಂದರೆ $x \geq 0$ ಮತ್ತು $x < 0$ ಆದರೆ '$x$' ನ ಮೌಲ್ಯ '$-x$' ಗೆ ಸಮನಾಗಿರುತ್ತದೆ. '$x$' ನ ನಿರಪೇಕ್ಷ ಮೌಲ್ಯವು ಸಾಮಾನ್ಯವಾಗಿ $|x|$ ಎಂದು ಗುರುತಿಸಲಾಗುತ್ತದೆ.

ಬರುವ ಇತರ ಯಾವುದೇ ಬಿಂದುವು 'C' ಬಿಂದುವಿಗೆ ಹೋಲಿಸಿದರೆ, ಎರಡೂ ಸರಕುಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿರುವ ಸಂಯೋಜನೆಗಳನ್ನು ಪ್ರತಿನಿಧಿಸುತ್ತದೆ.

### 2.1.3 ಬಜೆಟ್ ಗಣದಲ್ಲಿ ಬದಲಾವಣೆಗಳು *Changes in the budget set*

ಒಬ್ಬ ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳ ಗಣವು, ಎರಡೂ ಸರಕುಗಳ ಬೆಲೆ ಮತ್ತು ಅನುಭೋಗಿಯ ಆದಾಯವನ್ನು ಅವಲಂಬಿಸಿರುತ್ತದೆ. ಅಂದರೆ ಸರಕುಗಳ ಬೆಲೆ ಅಥವಾ ಅನುಭೋಗಿಯ ಆದಾಯದಲ್ಲಿ ಬದಲಾವಣೆಯಾದಾಗ, ಲಭ್ಯವಿರುವ ಸಂಯೋಜನೆಗಳ ಗಣವೂ ಬದಲಾಗುವ ಸಾಧ್ಯತೆಯಿರುತ್ತದೆ. ಅನುಭೋಗಿಯ ಆದಾಯವು 'M' ನಿಂದ 'M$^1$' ಗೆ ಬದಲಾವಣೆಯಾಗುತ್ತದೆ ಎಂದುಕೊಳ್ಳೋಣ. ಆದರೆ ಎರಡು ಸರಕುಗಳ ಬೆಲೆಗಳಲ್ಲಿ ಬದಲಾವಣೆಯಾಗುವುದಿಲ್ಲ ಎಂದುಕೊಳ್ಳೋಣ ಈ ಹೊಸ ಆದಾಯದಲ್ಲಿ ಅನುಭೋಗಿಯು $p_1x_1 + p_2x_2 \leq M^1$ ಆಗುವಂತೆ $(x_1\, x_2)$ ನ ಎಲ್ಲಾ ಸಂಯೋಜನೆಗಳನ್ನು ಕೊಂಡುಕೊಳ್ಳಲು ಸಮರ್ಥನಾಗುವನು. ಈಗ ಬಜೆಟ್ ರೇಖೆಯ ಸಮೀಕರಣವು ಈ ಕೆಳಗಿನಂತಿರುತ್ತದೆ.

$$p_1x_1+p_2x_2 = M^1 \qquad (2.8)$$

ಈ ಮೇಲಿನ ಸಮೀಕರಣ 2.8 ನ್ನು ಈ ಕೆಳಗಿನಂತೆಯೂ ಬರೆಯಬಹುದು.

$$x_2 = \frac{M^1}{p_2} - \frac{p_1}{p_2}x_1 \qquad (2.9)$$



ಇಲ್ಲಿ ಗಮನಿಸಬೇಕಾದ ಪ್ರಮುಖ ಸಂಗತಿಯೆಂದರೆ ಹೊಸ ಬಜೆಟ್‌ರೇಖೆಯ ಇಳಿಜಾರು, ಅನುಬೋಗಿಯ ಆದಾಯ ಬದಲಾಗುವುದಕ್ಕಿಂತ ಮುಂಚೆ ಇದ್ದ ಬಜೆಟ್‌ರೇಖೆಯ ಇಳಿಜಾರಿನಂತಯೇ ಇರುತ್ತದೆ. ಆದಾಗ್ಯೂ ಆದಾಯದಲ್ಲಿ ಬದಲಾವಣೆಯಾದ ನಂತರ ಲಂಬಾಂತರ ಛೇದಕದಲ್ಲಿ ಬದಲಾವಣೆಯಾಗುತ್ತದೆ. ಆದಾಯ ಹೆಚ್ಚಾದರೆ ಅಂದರೆ $M^1 > M$ ಆದಾಗ ಲಂಬಾಂತರ ಛೇದಕ ಹೆಚ್ಚಾಗುತ್ತದೆ. ಬಜೆಟ್‌ರೇಖೆಯು ಸಮಾನಾಂತರವಾಗಿ ಹೊರಭಾಗಕ್ಕೆ (ಬಲಭಾಗ)ಕ್ಕೆ ಪಲ್ಲಟಗೊಳ್ಳುತ್ತದೆ. ಆದಾಯ ಹೆಚ್ಚಾದರೆ ಅನುಭೋಗಿಯು ಲಭ್ಯವಿರುವ ಮಾರುಕಟ್ಟೆ ಬೆಲೆಯಲ್ಲಿ ಹೆಚ್ಚು ಸರಕುಗಳನ್ನು ಕೊಂಡುಕೊಳ್ಳಬಹದು.

ಇದೇ ರೀತಿಯಲ್ಲಿ ಅನುಭೋಗಿಯ ಆದಾಯ ಕಡಿಮೆಯಾದರೆ ಅಂದರೆ $M^1 < M$ ಆದಾಗ ಲಂಬಾಂತರ ಛೇದಕ ಕಡಿಮೆಯಾಗುತ್ತದೆ. ಹೀಗಾಗಿ ಬಜೆಟ್‌ರೇಖೆಯು ಸಮಾನಾಂತರವಾಗಿ ಒಳಭಾಗಕ್ಕೆ (ಎಡಭಾಗ)ಕ್ಕೆ ಪಲ್ಲಟಗೊಳ್ಳುತ್ತದೆ. ಆದಾಯ ಕಡಿಮೆಯಾದರೆ ಅನುಭೋಗಿಗೆ ಲಭ್ಯವಾಗುವ ಸರಕುಗಳ ಪ್ರಮಾಣ ಕಡಿಮೆಯಾಗುತ್ತದೆ. ಎರಡು ಸರಕುಗಳ ಬೆಲೆಗಳು ಬದಲಾವಣೆಗೊಳ್ಳದಿದ್ದಾಗ, ಅನುಭೋಗಿಯ ಆದಾಯದಲ್ಲಾದ ಬದಲಾವಣೆಯ ಪರಿಣಾಮವಾಗಿ ಲಭ್ಯವಾಗುವ ಸಂಯೋಜನೆಗಳ ಬದಲಾವಣೆಗಳನ್ನು ರೇಖಾಚಿತ್ರ 2.3 ರಲ್ಲಿ ತೋರಿಸಲಾಗಿದೆ.




**ರೇಖಾಚಿತ್ರ 2.3: ಅನುಭೋಗಿಯ** ಆದಾಯದಲ್ಲಿನ ಬದಲಾವಣೆಯ ಪರಿಣಾಮದಿಂದ ಲಭ್ಯವಾಗಬಹುದಾದ ಸರಕುಗಳ ಸಂಯೋಜನೆಗಳ ಗಣದಲ್ಲಿ ಆಗುವ ಬದಲಾವಣೆಗಳು. ಫಲಕ (*a*)ನಲ್ಲಿ ತೋರಿಸಿರುವಂತೆ ಆದಾಯ ಕಡಿಮೆಯಾದಂತೆ ಬಜೆಟ್‌ರೇಖೆಯು ಸಮಾನಾಂತರವಾಗಿ ಒಳಭಾಗಕ್ಕೆ ಪಲ್ಲಟಗೊಳ್ಳುತ್ತದೆ. ಫಲಕ (*b*)ನಲ್ಲಿ ತೋರಿಸಿರುವಂತೆ ಆದಾಯ ಹೆಚ್ಚುತ್ತಾ ಹೋದಂತೆ ಬಜೆಟ್ ರೇಖೆಯು ಸಮನಾಂತರವಾಗಿ ಹೊರಭಾಗಕ್ಕೆ ಪಲ್ಲಟಗೊಳ್ಳುತ್ತದೆ.

ಸರಕು1ರ ಬೆಲೆ $p_1$ ನಿಂದ $p'_1$ ಗೆ ಬದಲಾಗಿದೆ. ಆದರೆ ಸರಕು2ರಬೆಲೆ ಮತ್ತು ಅನುಭೋಗಿಯ ಆದಾಯ ಸ್ಥಿರವಾಗಿರುತ್ತದೆ ಎಂದುಕೊಳ್ಳೋಣ. ಸರಕು1 ರ ಹೊಸ ಬೆಲೆಯಲ್ಲಿ ಅನುಭೋಗಿಯು $P'_1 x_1 + p_2 x_2 \leq$ M ಆಗುವಂತೆ $(x_1 x_2)$ ನ ಎಲ್ಲಾ ಸಂಯೋಜನೆಗಳನ್ನು ಕೊಂಡುಕೊಳ್ಳಲು ಸಮರ್ಥನಾಗುವನು. ಆಗ ಬಜೆಟ್ ರೇಖೆಯ ಸಮೀಕರಣವು ಈ ಕೆಳಗಿನಂತಿರುತ್ತದೆ.

$$P'_1 x_1 + p_2 x_2 = M \quad (2.10)$$

ಸಮೀಕರಣ 2.10 ನ್ನು ಮತ್ತೊಂದು ರೀತಿಯಲ್ಲಿ ಬರೆಯಬಹುದು.

$$x_2 = \frac{M}{p_2} - \frac{p'_1}{p_2} x_1 \quad (2.11)$$

ಹೊಸ ಬಜೆಟ್‌ರೇಖೇಯ ಲಂಬಾಂತರ ಛೇದಕವು ಬೆಲೆ ಬದಲಾವಣೆಯ ಪೂರ್ವದಲ್ಲಿ ಬಜೆಟ್ ರೇಖೆಯ ಲಂಬಾಂತರ ಛೇದಕದಂತೆಯೇ ಇರುತ್ತದೆ. ಸರಕು1ರ ಬೆಲೆಯ ಬದಲಾವಣೆಯ ನಂತರ ಬಜೆಟ್‌ರೇಖೆಯ ಇಳಿಜಾರು ಬದಲಾಗಿದೆ. ಸರಕು1ರ ಬೆಲೆ ಹೆಚ್ಚಾದರೆ, ಅಂದರೆ $p'_1 > p_1$ ಆದರೆ ಬಜೆಟ್‌ರೇಖೆಯ ಇಳಿಜಾರಿನ ನಿರಪೇಕ್ಷ ಮೌಲ್ಯವು ಹೆಚ್ಚಾಗುತ್ತದೆ ಮತ್ತು ಬಜೆಟ್‌ರೇಖೆಯು ಹೆಚ್ಚು ಕಡಿದಾದ (ಲಂಬಾಂತರ ಛೇದಕದ ಸುತ್ತಮುತ್ತ ಒಳಭಾಗಕ್ಕೆ ಚಲಿಸುತ್ತದೆ) ಸ್ವರೂಪವನ್ನು ಹೊಂದುತ್ತದೆ. ಸರಕು1ರ ಬೆಲೆ ಕಡಿಮೆಯಾದರೆ, ಅಂದರೆ $p'_1 < p_1$ ಬಜೆಟ್‌ರೇಖೆಯ ಇಳಿಜಾರಿನ ನಿರಪೇಕ್ಷ ಮೌಲ್ಯ ಕಡಿಮೆಯಾಗುತ್ತದೆ. ಹೀಗಾಗಿ ಬಜೆಟ್ ರೇಖೆಯು ಸಮತಲವಾಗುತ್ತದೆ. ಲಂಬಾಂತರ ಛೇದಕದ ಬಜೆಟ್‌ರೇಖೆಯ ಹೊರಭಾಗಕ್ಕೆ ಚಲಿಸುತ್ತದೆ. ಅನುಭೋಗಿಯ ಆದಾಯ ಮತ್ತು ಸರಕು2 ರ ಬೆಲೆಯಲ್ಲಿ ಬದಲಾವಣೆಯಾಗದೇ ಸರಕು1 ರ ಬೆಲೆಯಲ್ಲಿ ಮಾತ್ರ ಬದಲಾವಣೆಯಾದಾಗ ಲಭ್ಯವಿರುವ ಸಂಯೋಜನೆಗಳ ಗಣವನ್ನು ರೇಖಾಚಿತ್ರ 2.4 ರಲ್ಲಿ ಪ್ರತಿನಿಧಿಸಲಾಗಿದೆ.




**ರೇಖಾಚಿತ್ರ 2.4: ಸರಕು1ರ ಬೆಲೆಯಲ್ಲಿನ ಬದಲಾವಣೆಯ ಪರಿಣಾಮವಾಗಿ ಲಭ್ಯವಿರುವ ಅನುಭೋಗದ ಸಂಯೋಜನೆಗಳ ಗಣದಲ್ಲಿ ಆದ ಬದಲಾವಣೆ.**

ಫಲಕ($a$) : ಸರಕು1ರ ಬೆಲೆಯು ಹೆಚ್ಚಾದಂತೆ ಬಜೆಟ್‌ರೇಖೆಯು ಹೆಚ್ಚು ಕಡಿದಾದ ಸ್ವರೂಪವನ್ನು ಹೊಂದಿದೆ.

ಫಲಕ($b$) : ಸರಕು1ರ ಬೆಲೆಯು ಕಡಿಮೆಯಾದಂತೆ ಬಜೆಟ್‌ರೇಖೆಯು ಹೆಚ್ಚು ಸಮತಲವಾಗಿರುತ್ತದೆ.

ಅನುಭೋಗಿಯ ಆದಾಯ ಮತ್ತು ಸರಕು1ರ ಬೆಲೆ ಬದಲಾಗದೇ ಸ್ಥಿರವಾಗಿದ್ದು, ಸರಕು2 ರ ಬೆಲೆಯಲ್ಲಿನ ಬದಲಾವಣೆಯು ಬಜೆಟ್ ಗಣದಲ್ಲಿ ಇದೇ ರೀತಿಯ ಬದಲಾವಣೆಯನ್ನು ತರುತ್ತದೆ.

## 2.2 ಅನುಭೋಗಿಯ ಆದ್ಯತೆಗಳು *Preferences of the Consumer*

ಬಜೆಟ್ ಗಣವು ಅನುಭೋಗಿಗೆ ಲಭ್ಯವಿರುವ ಎಲ್ಲಾ ಸಂಯೋಜನೆಗಳನ್ನು ಒಳಗೊಂಡಿರುತ್ತದೆ. ಈ ಬಜೆಟ್ ಗಣದಿಂದ ಅನುಭೋಗಿಯು ತನಗೆ ಬೇಕಾಗುವ ಅನುಭೋಗದ ಸಂಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಆದರೆ ಅನುಭೋಗಿಯು ತನಗೆ ಲಭ್ಯವಿರುವ ಸಂಯೋಜನೆಗಳಲ್ಲಿ ಯಾವುದನ್ನು

ಆಯ್ಕೆ ಮಾಡಿಕೊಳ್ಳುತ್ತಾಳೆ? ಬಜೆಟ್ ಗಣದಲ್ಲಿರುವ ಸಂಯೋಜನೆಗಳಲ್ಲಿ ಅನುಭೋಗಿಯು ತನ್ನ ಅನುಭೋಗದ ಸಂಯೋಜನೆಯನ್ನು ತನ್ನ ಅಭಿರುಚಿ ಮತ್ತು ಆದ್ಯತೆಗಳ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುತ್ತಾಳೆ ಎಂದು ಅರ್ಥಶಾಸ್ತ್ರದಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಸಾಮಾನ್ಯವಾಗಿ ಎಲ್ಲಾ ಸಾಧ್ಯವಾದ ಸಂಯೋಜನೆಗಳ ಗಣದ ಮೇಲೆ ಅನುಭೋಗಿಗೆ ಸ್ಪಷ್ಟ ಆದ್ಯತೆಗಳಿರುತ್ತದೆಂದು ಕಲ್ಪಸಿಕೊಳ್ಳಲಾಗಿದೆ. ಅನುಭೋಗಿಯು ಯಾವುದಾದರೂ ಎರಡು ಸಂಯೋಜನೆಗಳನ್ನು ಹೋಲಿಕೆ ಮಾಡಬಹುದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಯಾವುದೇ ಎರಡು ಸಂಯೋಜನೆಗಳಲ್ಲಿ ಒಂದಕ್ಕಿಂತ ಇನ್ನೊಂದಕ್ಕೆ ಆದ್ಯತೆ ನೀಡಬಹುದು ಅಥವಾ ಎರಡರ ನಡುವೆ ಉದಾಸೀನವಾಗಿರಬಹುದು. ಮುಂದುವರೆದು, ಅನುಭೋಗಿಯು ತನ್ನ ಆದ್ಯತಾನುಸಾರವಾಗಿ ಸಂಯೋಜನೆಗಳಿಗೆ ಶ್ರೇಣಿಯನ್ನು[7] ನೀಡಬಹುದೆಂದು ಕಲ್ಪಿಸಿಕೊಳ್ಳಲಾಗಿದೆ.

**ಉದಾಹರಣೆ ——— 2.2**

ಉದಾಹರಣೆಗೆ 2.1ರ ಅನುಭೋಗಿಯನ್ನು ಪರಿಗಣಿಸಿ, ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳ ಗಣದಲ್ಲಿ ಆಕೆಯ ಆದ್ಯತೆಗಳು ಈ ಕೆಳಕಂಡಂತಿದೆ ಎಂದುಕೊಳ್ಳೋಣ.

ಅನುಭೋಗಿಯು ಅತ್ಯಧಿಕ ಆದ್ಯತೆ ನೀಡುವ ಸಂಯೋಜನೆಯು (2, 2) ಆಗಿದೆ. (1, 3) ಮತ್ತು (3, 1) ಸಂಯೋಜನೆಗಳ ನಡುವೆ ಅನುಭೋಗಿಯು ಔದಾಸೀನ್ಯದಿಂದಿರುತ್ತಾಳೆ. ಸಂಯೋಜನೆ (2, 2) ನ್ನು ಹೊರತು ಪಡಿಸಿ ಬೇರೆ ಯಾವುದೇ ಅನುಭೋಗದ ಸಂಯೋಜನೆಗಳಿಗೆ ಹೋಲಿಸಿದರೆ ಈ ಎರಡು ಕಂತೆಗಳಿಗೆ ಹೆಚ್ಚಿನ ಒಲವನ್ನು ತೋರಿಸುತ್ತಾಳೆ. ಸಂಯೋಜನೆ (1, 2) ಮತ್ತು (2, 1) ರ ನಡುವೆ ಅನುಭೋಗಿಯು ಔದಾಸೀನ್ಯತೆಯನ್ನು ಹೊಂದಿದ್ದು, (2, 2), (1, 3)) ಮತ್ತು (3, 1) ಸಂಯೋಜನೆಗಳನ್ನು ಹೊರತು ಪಡಿಸಿ ಬೇರೆ ಸಂಯೋಜನೆಗಳಿಗೆ ಹೋಲಿಸಿದರೆ ಈ ಎರಡು ಸಂಯೋಜನೆಗಳಿಗೆ ಆದ್ಯತೆ ನೀಡುತ್ತಾಳೆ. ಎರಡು ಸರಕುಗಳಲ್ಲಿ ಕೇವಲ ಒಂದು ಸರಕಿನ ಘಟಕಗಳನ್ನು ಮಾತ್ರ ಹೊಂದಿರುವ ಸಂಯೋಜನೆ ಹಾಗೂ (0, 0) ಸಂಯೋಜನೆಯ ನಡುವೆ ಉದಾಸೀನತೆ ಹೊಂದಿರುತ್ತಾಳೆ. ಒಂದೇ ಒಂದು ಸರಕಿರುವ ಸಂಯೋಜನೆಗಿಂತ ಎರಡು ಸರಕುಗಳು ಧನಾತ್ಮಕ ಪ್ರಮಾಣದಲ್ಲಿರುವ ಸಂಯೋಜನೆಗೆ ಆದ್ಯತೆ ನೀಡುತ್ತಾಳೆ.



ಅನುಭೋಗಿಗೆ ಲಭ್ಯವಿರುವ ಅನುಭೋಗದ ಸಂಯೋಜನೆಗಳನ್ನು ಆದ್ಯತಾನುಸಾರವಾಗಿ ಉತ್ತಮ ಆದ್ಯತೆಯಿಂದ ಕನಿಷ್ಠ ಆದ್ಯತೆಯವರೆಗೆ ಶ್ರೇಣೀಕರಿಸಬಹುದಾಗಿದೆ. ಆದ್ಯತಾ ಸಂಯೋಜನೆಗಳು ಉನ್ನತ ಶ್ರೇಣಿಯನ್ನು ಹೊಂದಿದರೆ, ಯಾವುದೇ ಎರಡು (ಅಥವಾ ಹೆಚ್ಚು) ಉದಾಸೀನತೆ ಹೊಂದಿರುವ ಸಂಯೋಜನೆಗಳು ಒಂದೇ ಶ್ರೇಣಿಯನ್ನು ಪಡೆಯುತ್ತವೆ. ಕೋಷ್ಟಕ 2.1ರಲ್ಲಿ ಶ್ರೇಣಿಯನ್ನು ಪ್ರಸ್ತುತ ಪಡಿಸಲಾಗಿದೆ. ಉದಾಹರಣೆ 2.1ರಲ್ಲಿ ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳ ಶ್ರೇಣಿಯನ್ನು ಗಮನಿಸೋಣ.

**ಕೋಷ್ಟಕ 2.1** ಅನುಭೋಗಿಗೆ ಲಭ್ಯವಿರುವ ಅನುಭೋಗದ ಸಂಯೋಜನೆಗಳ ಶ್ರೇಣೀಕರಣ

| ಸಂಯೋಜನೆಗಳು | ಶ್ರೇಣಿ |
|---|---|
| (2,2) | ಪ್ರಥಮ |
| (1,3), (3,1) | ದ್ವಿತೀಯ |
| (1,2), (2,1) | ತೃತೀಯ |
| (1,1) | ನಾಲ್ಕನೆ |
| (0,0), (0,1), (0,2), (0,3), (0,4), (1,0), (2,0), (3,0), (4,0) | ಐದನೆ |

### 2.2.1 ಏಕತಾನಾತ್ಮಕ ಒಲವು (ಏಕತಾನಾತ್ಮಕ ಆದ್ಯತೆಗಳು) *Monotonic preferences*

ಯಾವುದೇ ಎರಡು $(x_1, x_2)$ ಮತ್ತು $(y_1, y_2)$ ಸಂಯೋಜನೆಗಳ ನಡುವೆ ಅನುಭೋಗಿಯ ಅದ್ಯತೆಗಳು ಹೇಗಿರುತ್ತವೆಂದರೆ, ಒಂದು ವೇಳೆ $(x_1, x_2)$ ಸಂಯೋಜನೆಯನ್ನು $(y_1, y_2)$ ಸಂಯೋಜನೆಗೆ ಹೋಲಿಸಿದಾಗ

[7] ಶ್ರೇಣೀಕರಿಸುವುದಕ್ಕೆ ಸರಳ ಉದಾಹರಣೆಯೆಂದರೆ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳ ಆಧಾರದ ಮೇಲೆ ಪ್ರತಿಯೊಬ್ಬ ವಿದ್ಯಾರ್ಥಿಗೆ ಶ್ರೇಣಿಗಳನ್ನು ನೀಡುವುದು.

ಕೊನೆಯ ಪಕ್ಷ ಒಂದು ಸರಕನ್ನು ಹೆಚ್ಚಾಗಿ ಮತ್ತು ಇನ್ನೊಂದು ಸರಕನ್ನು ಕಡಿಮೆಯಾಗದಂತೆ ಹೊಂದಿದ್ದರೆ, ಆಗ ಅನುಭೋಗಿಯು $(y_1, y_2)$ಗೆ ಬದಲಾಗಿ $(x_1, x_2)$ ಗೆ ಅದ್ಯತೆ ತೋರುತ್ತಾಳೆ. ಈ ರೀತಿಯ ಅದ್ಯತೆಗಳನ್ನು **ಏಕತಾನಾತ್ಮಕ ಒಲವು** ಎನ್ನುತ್ತೇವೆ. ಹೀಗೆ ಯಾವುದೇ ಎರಡು ಸಂಯೋಜನೆಗಳ ನಡುವೆ ಅನುಭೋಗಿಯು ಕೊನೆಪಕ್ಷ ಒಂದು ಸರಕು ಹೆಚ್ಚಾಗಿರುವ ಮತ್ತು ಇನ್ನೊಂದು ಸರಕು ಎರಡನೆ ಸಂಯೋಜನೆಗಿಂತ ಕಡಿಮೆಯಾಗದಂತಿರುವ ಸಂಯೋಜನೆಗೆ ಅದ್ಯತೆ ನೀಡಿದಾಗ ಮಾತ್ರ ಅನುಭೋಗಿಯ ಒಲವು ಏಕತಾನಾತ್ಮಕವಾಗಿರುತ್ತದೆ.

**ಉದಾಹರಣೆ 2.3**

ಉದಾಹರಣೆ 2.1ರಲ್ಲಿ ಅನುಭೋಗದ ಸಂಯೋಜನೆ (2, 2) ನ್ನು ಗಮನಿಸೋಣ. ಈ ಸಂಯೋಜನೆ (1, 1) ಸಂಯೋಜನೆಗೆ ಹೋಲಿಸಿದರೆ ಎರಡು ಸರಕುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದೆ; (2,1) ನೇ ಸಂಯೋಜನೆಗೆ ಹೋಲಿಸಿದರೆ ಸರಕು1 ನ್ನು ಅದೇ ಪ್ರಮಾಣದಲ್ಲಿ, ಸರಕು2 ನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದೆ; ಅದೇ ರೀತಿ ಸಂಯೋಜನೆ (1, 2)ಕ್ಕೆ ಹೋಲಿಸಿದರೆ ಸರಕು1 ನ್ನೂ ಹೆಚ್ಚಿನ ಪ್ರಮಾಣದಲ್ಲಿ ಸರಕು2 ನ್ನು ಅದೇ ಪ್ರಮಾಣದಲ್ಲಿ ಹೊಂದಿದೆ; ಅನುಭೋಗಿಯು ಏಕತಾನಾತ್ಮಕ ಒಲವನ್ನು ಹೊಂದಿದ್ದರೆ ಆಕೆಯು (1, 1), (2, 1) ಮತ್ತು (1, 2) ಎಂಬ ಮೂರು ಸಂಯೋಜನೆಗಳಿಗಿಂತ (2, 2) ಸಂಯೋಜನೆಗೆ ಆದ್ಯತೆ ನೀಡುತ್ತಾಳೆ.

### 2.2.2 ಸರಕುಗಳ ನಡುವೆ ಬದಲಿಕೆ *Substitution between goods*

ನಾವಿಲ್ಲಿ ಎರಡು ಅನುಭೋಗದ ಸಂಯೋಜನೆಯನ್ನು ಪರಿಗಣಿಸೋಣ. ಅದರಲ್ಲಿ ಒಂದು ಸಂಯೋಜನೆ, ಮತ್ತೊಂದು ಸಂಯೋಜನೆಗಿಂತ ಹೆಚ್ಚಿನ ಪ್ರಮಾಣದ ಮೊದಲನೆ ಸರಕನ್ನು ಹೊಂದಿರುತ್ತದೆ ಎಂದುಕೊಳ್ಳೋಣ. ಅನುಭೋಗಿಯ ಆದ್ಯತೆ(ಒಲವು)ಗಳು ಏಕತಾನಾತ್ಮಕವಾಗಿದ್ದರೆ, ಮೊದಲನೆ ಸರಕನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವ ಸಂಯೋಜನೆಯು ಇನ್ನೊಂದು ಸರಕಿಗೆ ಹೋಲಿಸಿದರೆ ಎರಡನೇ ಸರಕನ್ನು ಕಡಿಮೆ ಹೊಂದಿದ್ದರೆ ಮಾತ್ರ ಈ ಎರಡು ಸಂಯೋಜನೆಗಳ ಬಗ್ಗೆ ಅನುಭೋಗಿಗೆ ಔದಾಸೀನ್ಯತೆ ಇರುಬಹುದು. ಒಬ್ಬ ಅನುಭೋಗಿಯು $(x_1\ x_2)$ ಮತ್ತು $(x_1+\Delta x_1\ ,\ x_2+\Delta x_2)$ ಎಂಬ ಎರಡು ಸಂಯೋಜನೆಗಳ ನಡುವೆ ಔದಾಸೀನ್ಯತೆ ಹೊಂದಿರುತ್ತಾಳೆ ಎಂದುಕೊಳ್ಳೋಣ. ಇಲ್ಲಿ ಏಕತಾನಾತ್ಮಕ ಒಲವು ಹೇಳುವುದೇನೆಂದರೆ, $\Delta x_1 > 0$ ಆದರೆ ಆಗ $\Delta x_2 < 0$ ಆಗಿರುತ್ತದೆ ಮತ್ತು $\Delta x_1 < 0$ ಆದರೆ ಆಗ $\Delta x_2 > 0$ ಆಗಿರುತ್ತದೆ. ಅನುಭೋಗಿಯು ಒಂದು ಸರಕಿಗೆ ಮತ್ತೊಂದು ಸರಕನ್ನು ಬದಲಿಕೆ ಮಾಡುವುದರ ಮೂಲಕ $(x_1\ x_2)$ ಸಂಯೋಜನೆಯಿಂದ $(x_1+\Delta x_1\quad x_2+\Delta x_2)$ ಸಂಯೋಜನೆಯತ್ತ ಚಲಿಸಬಹುದು. ಸರಕು1 ಮತ್ತು ಸರಕು2ರ ನಡುವಿನ ಬದಲಿಕೆಯದರವು $\dfrac{\Delta x_2}{\Delta x_1}$ ನ ನಿರಪೇಕ್ಷ ಮೌಲ್ಯವೇ ಆಗಿರುತ್ತದೆ. ಸರಕು1ರ ಹೆಚ್ಚುವರಿ ಘಟಕವನ್ನು ಪಡೆಯಲು ಅನುಭೋಗಿಯು ತ್ಯಾಗ ಮಾಡಲು ಇಚ್ಚಿಸಿದ ಸರಕು2ರ ಮೊತ್ತವೇ **ಬದಲಿಕೆಯ ದರ**ವಾಗಿರುತ್ತದೆ. ಇದು ಸರಕು1ನ್ನು ಪಡೆಯಲು ಸರಕು2 ನ್ನು ಪಾವತಿಸುವ ಅನುಭೋಗಿಯ ಇಚ್ಛೆಯನ್ನು ಮಾಪನ ಮಾಡುತ್ತದೆ. ಈ ರೀತಿ ಎರಡು ಸರಕುಗಳ ನಡುವಿನ ಬದಲಿಕೆಯ ದರವು ಅನುಭೋಗಿಯ ಆದ್ಯತೆಯ ಪ್ರಮುಖ ಸಂಗತಿಗಳನ್ನು ವಿವರಿಸುತ್ತದೆ.

**ಉದಾಹರಣೆ 2.4**

ಅನುಭೋಗಿಯು ಸಂಯೋಜನೆ (1, 2) ಮತ್ತು (2, 1) ರ ನಡುವೆ ಔದಾಸೀನ್ಯದಿಂದ ಇರುತ್ತಾಳೆ. ಸಂಯೋಜನೆ (1, 2)ರಲ್ಲಿ ಅನುಭೋಗಿಯು ಸರಕು1 ರ ಒಂದು ಹೆಚ್ಚುವರಿ ಘಟಕವನ್ನು ಪಡೆಯಲು ಸರಕು2 ರ ಒಂದು ಘಟಕವನ್ನು ಬಿಟ್ಟುಕೊಡಲು ಸಿದ್ಧನಿರುತ್ತಾಳೆ. ಆದ್ದರಿಂದ ಸರಕು2 ಮತ್ತು ಸರಕು1 ರ ನಡುವಿನ ಬದಲಿಕೆ ದರವು 1 ಆಗಿರುತ್ತದೆ.

### 2.2.3 ಇಳಿಮುಖ ಬದಲಿಕೆಯ ದರ *Diminishing Rate of Substitution*

ಅನುಭೋಗಿಯು ಸರಕು1 ನ್ನು ಹೆಚ್ಚಾಗಿ ಮತ್ತು ಸರಕು2 ನ್ನು ಕಡಿಮೆ ಹೊಂದಿರುತ್ತಾಳೆ ಎಂದುಕೊಳ್ಳೋಣ. ಆಕೆಯು ಸರಕು1ರ ಒಂದು ಹೆಚ್ಚುವರಿ ಘಟಕ್ಕಾಗಿ ಸರಕು2 ನ್ನು ಬಿಟ್ಟುಕೊಡುವ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆಂಬುದು ಅನುಭೋಗಿಯ ಆದ್ಯತೆಗಳಾಗಿರುತ್ತವೆಂದು ಕಲ್ಪಿಸಿಕೊಳ್ಳಲಾಗಿದೆ. ಸರಕು1 ರ ಪ್ರಮಾಣ ಹೆಚ್ಚಾದಂತೆ ಸರಕು2ರ ಬದಲಿಗೆ ಸರಕು1 ನ್ನು ಪಡೆಯುವ ಇಚ್ಛೆ ಕಡಿಮೆಯಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸರಕು1ರ ಪ್ರಮಾಣ ಹೆಚ್ಚಿದಂತೆ ಸರಕು2 ಮತ್ತು ಸರಕು1 ರ ನಡುವಿನ ಬದಲಿಕೆಯ ದರ ಇಳಿಮುಖವಾಗುತ್ತದೆ. ಇಂತಹ ಆದ್ಯತೆಗಳನ್ನು **ಪೀನಮಧ್ಯ** (*convex*) ಆದ್ಯತೆಗಳೆನ್ನುತ್ತೇವೆ.

### 2.2.4 ಔದಾಸೀನ್ಯ ವಕ್ರರೇಖೆ *Indifference Curve*

ಲಭ್ಯವಿರುವ ಸಂಯೋಜನೆಗಳ ಮೇಲಿನ ಅನುಭೋಗಿಯೊಬ್ಬಳ ಆದ್ಯತೆಗಳನ್ನು ರೇಖಾತ್ಮಕವಾಗಿ ಪ್ರತಿನಿಧಿಸಬಹುದು. ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳನ್ನು ಎರಡು ಆಯಾಮಗಳುಳ್ಳ ರೇಖಾಚಿತ್ರದಲ್ಲಿ ಬಿಂದುಗಳಾಗಿ ಗುರುತಿಸಬಹುದೆಂದು ಈಗಾಗಲೇ ನೋಡಿದ್ದೇವೆ (ತಿಳಿದುಕೊಂಡಿದ್ದೇವೆ). ಅನುಭೋಗಿಯು ಔದಾಸೀನ್ಯತೆ ಹೊಂದಿರುವನೆಂದು ಪರಿಗಣಿಸಿರುವ ಸಂಯೋಜನೆಗಳನ್ನು ಪ್ರತಿನಿಧಿಸುವ ಬಿಂದುಗಳನ್ನು ಸೇರಿಸಿ ರೇಖಾಚಿತ್ರ 2.5ರಲ್ಲಿ ತೋರಿಸಿರುವಂತೆ ಒಂದು ವಕ್ರರೇಖೆಯನ್ನು ಪಡೆಯಬಹುದು. ಅನುಭೋಗಿಯು ಔದಾಸೀನ್ಯತೆ ಹೊಂದಿರುವ ಸಂಯೋಜನೆಗಳ ಬಿಂದುಗಳನ್ನು ಸೇರಿಸುವಂತಹ ವಕ್ರ ರೇಖೆಯನ್ನು **ಔದಾಸೀನ್ಯ ವಕ್ರರೇಖೆ** ಎನ್ನುತ್ತೇವೆ.




**ರೇಖಾಚಿತ್ರ 2.5: ಔದಾಸೀನ್ಯ ವಕ್ರರೇಖೆ:** ಔದಾಸೀನ್ಯ ವಕ್ರರೇಖೆಯು, ಅನುಭೋಗಿಯ ಔದಾಸೀನ್ಯತೆಯನ್ನು ಪರಿಗಣಿಸುವ ಸಂಯೋಜನೆಗಳ ಎಲ್ಲಾ ಬಿಂದುಗಳನ್ನು ಸೇರಿಸುತ್ತದೆ.

ಔದಾಸೀನ್ಯ ವಕ್ರರೇಖೆಯ ಮೇಲ್ಭಾಗದಲ್ಲಿರುವ ಒಂದು ಬಿಂದುವನ್ನು ಪರಿಗಣಿಸೋಣ. ಆ ಬಿಂದುವನ್ನು ಔದಾಸೀನ್ಯ ವಕ್ರರೇಖೆಯ ಮೇಲಿರುವ ಮತ್ತೊಂದು ಬಿಂದುವಿಗೆ ಹೋಲಿಸಿದರೆ ಅದು ಒಂದು ಸರಕನ್ನು ಮೊದಲಿಗಿಂತ ಕಡಿಮೆಯಿಲ್ಲದಂತೆ ಮತ್ತೊಂದು ಸರಕನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುತ್ತದೆ.

ರೇಖಾಚಿತ್ರ 2.6ರಲ್ಲಿ 'C' ಬಿಂದುವು ಔದಾಸೀನ್ಯ ವಕ್ರರೇಖೆಗಿಂತ ಮೇಲೆ ಇದೆ. ಹಾಗೆಯೇ 'A' ಮತ್ತು 'B' ಬಿಂದುಗಳು ಔದಾಸೀನ್ಯ ವಕ್ರರೇಖೆಯ ಮೇಲೆಯೇ ಇವೆ. 'A' ಬಿಂದುವಿಗೆ ಹೋಲಿಸಿದರೆ 'C' ಬಿಂದುವು ಸರಕು1 ನ್ನು ಹೆಚ್ಚಾಗಿ ಮತ್ತು ಸರಕು2 ನ್ನು ಅಷ್ಟೆ ಪ್ರಮಾಣದಲ್ಲಿ ಒಳಗೊಂಡಿರುತ್ತದೆ. '*B*' ಬಿಂದುವಿಗೆ ಹೋಲಿಸಿದರೆ 'C' ಬಿಂದುವು 2ನೇ ಸರಕನ್ನು ಹೆಚ್ಚಿನ ಪ್ರಮಾಣದಲ್ಲಿ ಮತ್ತು ಮೊದಲನೆ ಸರಕನ್ನು ಅದೇ ಪ್ರಮಾಣದಲ್ಲಿ ಹೊಂದಿದೆ. ಔದಾಸೀನ್ಯ ವಕ್ರರೇಖೆಯ ಮೇಲೆ 'AB' ವಲಯದಲ್ಲಿ ಕಂಡುಬರುವ ಯಾವುದೇ ಬಿಂದುವಿಗೆ ಹೋಲಿಸಿದರೆ 'C' ಸಂಯೋಜನೆಯು ಎರಡೂ ಸರಕನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುತ್ತದೆ.




**ರೇಖಾಚಿತ್ರ 2.6:** ಔದಾಸೀನ್ಯ ವಕ್ರರೇಖೆಯ ಮೇಲಿನ ಬಿಂದುಗಳು ಮತ್ತು ಕೆಳಗಿನ ಬಿಂದುಗಳು, ಔದಾಸೀನ್ಯ ವಕ್ರರೇಖೆಯ ಮೇಲ್ಭಾಗದಲ್ಲಿರುವ (*above*) ಬಿಂದುಗಳು, ಔದಾಸೀನ್ಯ ವಕ್ರರೇಖೆಯ ಮೇಲಿರುವ (*on*) ಬಿಂದುಗಳಿಂತ ಆದ್ಯತೆ ನೀಡಿದ ಸಂಯೋಜನೆಗಳನ್ನು ಪ್ರತಿನಿಧಿಸುತ್ತದೆ. ಔದಾಸೀನ್ಯ ವಕ್ರರೇಖೆಯ ಮೇಲಿರುವ (*on*) ಬಿಂದುಗಳು, ಔದಾಸೀನ್ಯ ವಕ್ರರೇಖೆಯ ಕೆಳಭಾಗದಲ್ಲಿರುವ ಬಿಂದುಗಳಿಗಿಂತ ಹೆಚ್ಚು ಆದ್ಯತೆ ಪಡೆದ ಬಿಂದುಗಳ ಸಂಯೋಜನೆಯನ್ನು ಪ್ರತಿನಿಧಿಸುತ್ತದೆ.

ಅನುಭೋಗಿಯ ಒಲವು ಏಕತಾನಾತ್ಮಕವಾಗಿದ್ದರೆ, ಔದಾಸೀನ್ಯ ವಕ್ರರೇಖೆಯ 'AB' ವಲಯದಲ್ಲಿ ಕಂಡುಬರುವ ಎಲ್ಲಾ ಬಿಂದುಗಳಿಗಿಂತಲೂ ಅನುಭೋಗಿಯು 'C' ಬಿಂದುವು ಪ್ರತಿನಿಧಿಸುವ ಸಂಯೋಜನೆಗೆ ಆದ್ಯತೆ ನೀಡುತ್ತಾಳೆ. ಔದಾಸೀನ್ಯ ವಕ್ರರೇಖೆಯ ಮೇಲಿರುವ ಎಲ್ಲಾ ಬಿಂದುಗಳಿಗೆ ಹೋಲಿಸಿದರೆ, ಅನುಭೋಗಿಯು 'C' ಬಿಂದುವಿಗೆ ಆದ್ಯತೆಯನ್ನು ಸೂಚಿಸಬಹುದು. ಆದ್ದರಿಂದ ಔದಾಸೀನ್ಯ ವಕ್ರರೇಖೆಗಿಂತ ಮೇಲ್ಭಾಗದಲ್ಲಿರುವ ಬಿಂದುವು ಔದಾಸೀನ್ಯ ವಕ್ರರೇಖೆಯ ಮೇಲಿರುವ ಸಂಯೋಜನೆಗಳಿಗಿಂತ ಆಧ್ಯತೆಯುಳ್ಳದೆಂದು ಏಕತಾನಾತ್ಮಕ ಒಲವು ಸೂಚಿಸುತ್ತದೆ. ಇದೇ ರೀತಿಯ ವಾದದಿಂದ ಅನುಭೋಗಿಯು ಏಕತಾನಾತ್ಮಕ ಒಲವನ್ನು ಹೊಂದಿದ್ದರೆ, ಔದಾಸೀನ್ಯ ವಕ್ರರೇಖೆಯ ಮೇಲಿನ ಬಿಂದುಗಳಿಗೆ ಹೋಲಿಸಿದರೆ ರೇಖೆಯ ಕೆಳಭಾಗದಲ್ಲಿ ಬರುವ ಬಿಂದುಗಳು ಕೆಳಮಟ್ಟದ ಸಂಯೋಜನೆಯನ್ನು ಹೊಂದಿರುತ್ತವೆಂದು ಸಾಧಿಸಬಹುದು. ರೇಖಾಚಿತ್ರ 2.6ರಲ್ಲಿ ಅನುಭೋಗಿಯು ಆದ್ಯತೆ ನೀಡುವ ಸಂಯೋಜನೆ (C) ಮತ್ತು ಔದಾಸೀನ್ಯ ವಕ್ರರೇಖೆಯ ಕೆಳಭಾಗದಲ್ಲಿ ಬರುವ ಕೆಳಮಟ್ಟದ ಸಂಯೋಜನೆಯನ್ನು (D) ಚಿತ್ರಿಸುತ್ತದೆ.

### 2.2.5 ಔದಾಸೀನ್ಯ ವಕ್ರರೇಖೆಯ ಆಕಾರ *Shape of the Indifference Curve*

**ಬದಲಿಕೆಯ ದರ ಮತ್ತು ಔದಾಸೀನ್ಯ ವಕ್ರರೇಖೆಯ ಇಳಿಜಾರು**

ಔದಾಸೀನ್ಯ ವಕ್ರರೇಖೆಯ ಮೇಲಿರುವ ಎರಡು ಬಿಂದುಗಳನ್ನು ಅಂದರೆ $(x_1,x_2)$ ಮತ್ತು $(x_1+\Delta x_1\ x_2+\Delta x_2)$ ಎಂಬ ಬಿಂದುಗಳನ್ನು ಗಮನಿಸೋಣ. ಔದಾಸೀನ್ಯ ವಕ್ರರೇಖೆಯ ಮೇಲಿರುವ $(x_1,x_2)$ ಬಿಂದುವಿನಿಂದ $(x_1+\Delta x_1\ x_2+\Delta x_2)$ ಬಿಂದುವಿಗೆ ಚಲನೆಯನ್ನು ಪರಿಗಣಿಸೋಣ. ಔದಾಸೀನ್ಯ ವಕ್ರರೇಖೆಯ ಈ ಎರಡು ಬಿಂದುಗಳನ್ನು ಸೇರಿಸಿದಾಗ, ಸರಳರೇಖೆಯ ಇಳಿಜಾರು, ಸರಕು1 ರ ಪ್ರಮಾಣದಲ್ಲಾದ ಬದಲಾವಣೆಯ ಕಾರಣದಿಂದ ಸರಕು2 ರ ಪ್ರಮಾಣದಲ್ಲಾದ ಬದಲಾವಣೆಯ ಮೊತ್ತವನ್ನು ವ್ಯಕ್ತಪಡಿಸುತ್ತದೆ. ಈ ಎರಡು ಬಿಂದುಗಳನ್ನು ಸೇರಿಸುವ ಸರಳರೇಖೆಯ ನಿರಪೇಕ್ಷ ಮೌಲ್ಯದ ಇಳಿಜಾರು $(x_1,x_2)$ ಮತ್ತು $(x_1+\Delta x_1\ x_2+\Delta x_2)$ ಬಿಂದುಗಳ ನಡುವಿನ ಬದಲಿಕೆಯ ದರವನ್ನು ನೀಡುತ್ತದೆ. ಯಾವುದೇ ಚಿಕ್ಕ ಬದಲಾವಣೆಗಾಗಿ $(x_1,x_2)$ ಮತ್ತು $(x_1+\Delta x_1\ x_2+\Delta x_2)$ ಬಿಂದುಗಳನ್ನು ಸೇರಿಸಿದಾಗ ರೇಖೆಯ ಇಳಿಜಾರು, ಔದಾಸೀನ್ಯ ವಕ್ರರೇಖೆಯ ಮೇಲಿರುವ $(x_1,x_2)$ ಬಿಂದುವಿನವರೆಗೂ ಕಡಿಮೆಯಾಗುತ್ತಾ ಹೋಗುತ್ತದೆ. ಈ ರೀತಿ ಪ್ರತಿ ಸಣ್ಣ ಬದಲಾವಣೆಗೂ ಔದಾಸೀನ್ಯ ವಕ್ರರೇಖೆಯ ಇಳಿಜಾರಿನ ನಿರಪೇಕ್ಷ ಮೌಲ್ಯ ಯಾವುದೇ ಬಿಂದುವಿನಲ್ಲಿ, ಅನುಭೋಗಿಯ ಬದಲಿಕೆಯ ದರವನ್ನು ಮಾಪನ ಮಾಡುತ್ತದೆ. ಸಾಮಾನ್ಯವಾಗಿ ಸರಕು1 ಮತ್ತು ಸರಕು2 ರ ನಡುವಿನ ಬದಲಿಕೆಯ ದರದಲ್ಲಿ ಆದ ಸಣ್ಣ ಬದಲಾವಣೆಯನ್ನು **ಸೀಮಾಂತ ಬದಲಿಕೆಯದರ** (*MRS*) ಎಂದು ಕರೆಯಲಾಗುತ್ತದೆ.

ಆದ್ಯತೆಗಳು ಏಕತಾನಾತ್ಮಕವಾಗಿದ್ದರೆ, ಔದಾಸೀನ್ಯ ವಕ್ರರೇಖೆಯ ಉದ್ದಕ್ಕೂ ಸರಕು1ರ ಮೊತ್ತದಲ್ಲಿ ಹೆಚ್ಚಳದೊಂದಿಗೆ ಸರಕು2ರ ಮೊತ್ತದಲ್ಲಿನ ಇಳಿಕೆಗೆ ಸಂಬಂಧಿಸಿದೆ. ಇದು ಔದಾಸೀನ್ಯ ವಕ್ರರೇಖೆಯ ಇಳಿಜಾರು ಋಣಾತ್ಮಕ (*Negative*) ವಾಗಿರುತ್ತದೆಂದು ಸೂಚಿಸುತ್ತದೆ. ಹೀಗೆ ಆದ್ಯತೆಗಳ ಏಕತಾನಾತ್ಮಕತೆಯು ಔದಾಸೀನ್ಯ ವಕ್ರರೇಖೆಗಳ ಇಳಿಮುಖ ಇಳಿಜಾರನ್ನು ಸೂಚಿಸುತ್ತದೆ. ರೇಖಾಚಿತ್ರ 2.7 ಔದಾಸೀನ್ಯ ವಕ್ರರೇಖೆಯ ಋಣಾತ್ಮಕ ಇಳಿಜಾರನ್ನು ವ್ಯಕ್ತಪಡಿಸುತ್ತದೆ.




**ರೇಖಾಚಿತ್ರ 2.7: ಔದಾಸೀನ್ಯ ವಕ್ರರೇಖೆಯ ಇಳಿಜಾರು:** ಔದಾಸೀನ್ಯ ವಕ್ರರೇಖೆಯ ಇಳಿಜಾರು ಇಳಿಮುಖವಾಗಿರುತ್ತದೆ. ಸರಕು1ರ ಮೊತ್ತದಲ್ಲಿನ ಹೆಚ್ಚಳವು ಮೊತ್ತವು ಔದಾಸೀನ್ಯ ವಕ್ರರೇಖೆಯುದ್ದಕ್ಕೂ ಸರಕು2 ರ ಮೊತ್ತದಲ್ಲಿನ ಇಳಿಕೆಗೆ ಸಂಬಂಧಿಸಿದೆ. $\Delta x_1 > 0$ ಆದಾಗ $\Delta x_2 < 0$ ಆಗುತ್ತದೆ.

ರೇಖಾಚಿತ್ರ 2.8 ಇಳಿಮುಖ ಸೀಮಾಂತ ಬದಲಿಕೆಯದರವನ್ನು ಹೊಂದಿರುವ ಔದಾಸೀನ್ಯ ವಕ್ರರೇಖೆಯನ್ನು ವಿವರಿಸುತ್ತದೆ. ಇಲ್ಲಿ ಔದಾಸೀನ್ಯ ವಕ್ರರೇಖೆಯು ಮೂಲಕ್ಕೆ ಪೀನಮಧ್ಯವಾಗಿದೆ.




**ರೇಖಾಚಿತ್ರ 2.8:** ಇಳಿಮುಖ ಬದಲಿಕೆಯ ದರ : ಅನುಭೋಗಿಯು ಸರಕ1 ನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಪಡೆದರೆ ಸರಕು1 ರ ಒಂದು ಹೆಚ್ಚುವರಿ ಘಟಕವನ್ನು ಪಡೆಯಲು ಬಿಟ್ಟುಕೊಡಲಿಚ್ಛಿಸುವ ಸರಕು2 ರ ಪ್ರಮಾಣವು ಇಳಿಕೆಯಾಗುತ್ತಿದೆ.




**ರೇಖಾಚಿತ್ರ 2.9: ಔದಾಸೀನ್ಯ ನಕ್ಷೆ:** ಕೆಳಗಿನ ಔದಾಸೀನ್ಯ ವಕ್ರರೇಖೆಗಳ ಸಂಯೋಜನೆಗಳಿಗಿಂತ ಎತ್ತರದ ಔದಾಸೀನ್ಯ ವಕ್ರರೇಖೆಗಳ ಸಂಯೋಜನೆಗಳಿಗೆ ಅನುಭೋಗಿಯು ಒಲವನ್ನು ತೋರಿಸುತ್ತಾಳೆ ಎಂಬುದನ್ನು ಬಾಣವು ಸೂಚಿಸುತ್ತದೆ.

### 2.2.6 ಔದಾಸೀನ್ಯ ವಕ್ರರೇಖೆ ನಕ್ಷೆ *Indifference Map*

ರೇಖಾ ಚಿತ್ರ 2.9ರಲ್ಲಿ ತೋರಿಸಿರುವಂತೆ ಎಲ್ಲಾ ಸಂಯೋಜನೆಗಳ ಮೇಲೆ ಅನುಭೋಗಿಗೆ ಇರುವ ಆದ್ಯತೆಗಳನ್ನು ಔದಾಸೀನ್ಯ ವಕ್ರರೇಖೆಗಳ ಕುಟುಂಬದಿಂದ (ಗುಂಪಿನಿಂದ) ಪ್ರತಿನಿಧಿಸಬಹುದಾಗಿದೆ. ಇದನ್ನು ಅನುಭೋಗಿಯ ಔದಾಸೀನ್ಯ ವಕ್ರರೇಖೆಗಳ ನಕ್ಷೆ ಎನ್ನುತ್ತೇವೆ. ಔದಸೀನ್ಯ ವಕ್ರರೇಖೆಯ ಮೇಲಿರುವ ಎಲ್ಲಾ ಬಿಂದುಗಳು, ಅನುಭೋಗಿಯು ಔದಾಸೀನ್ಯತೆ ಹೊಂದಿರುವ ಸಂಯೋಜನೆಗಳನ್ನು ಪ್ರತಿನಿಧಿಸುತ್ತದೆ. ಯಾವುದೇ ಎರಡು ಔದಾಸೀನ್ಯ ವಕ್ರರೇಖೆಗಳಲ್ಲಿ ಕೆಳಗಿರುವ ಔದಸೀನ್ಯ ವಕ್ರರೇಖೆಗಿಂತ ಮೇಲಿರುವ ಔದಾಸೀನ್ಯ ವಕ್ರರೇಖೆಗೆ ಆದ್ಯತೆ ನೀಡಲಾಗುತ್ತದೆ ಎಂಬುದನ್ನು ಆದ್ಯತೆಗಳ ಏಕತಾನಾತ್ಮಕತೆಯು ತಿಳಿಸುತ್ತದೆ.

### 2.2.7 ತುಷ್ಟಿಗುಣ *Utility*

ಆದ್ಯತೆಗಳನ್ನು ಪ್ರತಿನಿಧಿಸಲು ಕೆಲವೊಮ್ಮೆ ಸಂಯೋಜನೆಗಳಿಗೆ ಸಂಖ್ಯೆಗಳನ್ನು ನೀಡುವುದರ ಮೂಲಕ ಅವುಗಳ ಶ್ರೇಣಿಗಳನ್ನು ಕಾಪಾಡಿಕೊಂಡು ಬರುವ ಸಾಧ್ಯತೆಯಿದೆ. ಶ್ರೇಣಿಗಳನ್ನು ಕಾಪಾಡಿಕೊಳ್ಳಲು ಔದಾಸೀನ್ಯತೆ ಇರುವ ಸಂಯೋಜನೆಗಳಿಗೆ ಒಂದೇ ಸಂಖ್ಯೆಯನ್ನು ನೀಡಬೇಕಾಗುತ್ತದೆ ಮತ್ತು ಆದ್ಯತೆ ಸಂಯೋಜನೆಗಳಿಗೆ ಹೆಚ್ಚಿನ ಸಂಖ್ಯೆಗಳನ್ನು ನೀಡಬೇಕಾಗುತ್ತದೆ. ಈ ರೀತಿ ಸಂಯೋಜನೆಗಳಿಗೆ ನೀಡಿದ ಸಂಖ್ಯೆಗಳನ್ನು ಸಂಯೋಜನೆಗಳ ತುಷ್ಟಿಗುಣ ಎನ್ನುತ್ತೇವೆ, ಮತ್ತು ತುಷ್ಟಿಗುಣ ಸಂಖ್ಯೆಗಳ ಮೂಲಕ ಆದ್ಯತೆಗಳನ್ನು ಪ್ರತಿನಿಧಿಸುವುದನ್ನು **ತುಷ್ಟಿಗುಣ ಬಿಂಬಿಕ ಅಥವಾ ತುಷ್ಟಿಗುಣ ಪ್ರಾತಿನಿಧ್ಯತೆ** ಎನ್ನುತ್ತೇವೆ. ಈ ರೀತಿ ತುಷ್ಟಿಗುಣ ಬಿಂಬಕವು ಅನುಭೋಗಿಗೆ ಲಭ್ಯವಿರುವ ಪ್ರತಿಯೊಂದು ಸಂಯೋಜನೆಗಳಿಗೂ ಸಂಖ್ಯೆಗಳನ್ನು ನೀಡುತ್ತದೆ. ಯಾವ ರೀತಿ ಎಂದರೆ ಒಂದು ಸಂಯೋಜನೆಗಿಂತ ಮತ್ತೊಂದು ಸಂಯೋಜನೆಗೆ ಅನುಭೋಗಿಯು ಹೆಚ್ಚಿನ ಒಲವನ್ನು ವ್ಯಕ್ತಪಡಿಸಿದರೆ ಅದಕ್ಕೆ ಹೆಚ್ಚಿನ ಸಂಖ್ಯೆಯನ್ನು, ಒಂದು ವೇಳೆ ಎರಡು ಸಂಯೋಜನೆಗಳಿಗೆ ಒಂದೇ ರೀತಿಯ ಒಲವನ್ನು ವ್ಯಕ್ತಪಡಿಸಿದರೆ, ಅವುಗಳಿಗೆ ಒಂದೇ ಸಂಖ್ಯೆಯನ್ನು ನೀಡಲಾಗುವುದು.

ಇಲ್ಲಿ ಗಮನಿಸಬೇಕಾದ ಪ್ರಮುಖ ಸಂಗತಿಯೆಂದರೆ ಅನುಭೋಗಿಯ ಆದ್ಯತೆಗಳು ಮೂಲವಾದದ್ದು ಮತ್ತು ತುಷ್ಟಿಗುಣದ ಸಂಖ್ಯೆಗಳು ಕೇವಲ ಆದ್ಯತೆಗಳನ್ನು ಪ್ರತಿನಿಧಿಸುತ್ತವೆ. ಒಂದೇ ರೀತಿಯ ಆಯ್ಕೆಗಳು ಅನೇಕ ವಿದಧ ತುಷ್ಟಿಗುಣ ಪ್ರಾತಿನಿಧ್ಯತೆಗಳನ್ನು ಹೊಂದಿರುತ್ತವೆ. ಉದಾಹರಣೆ 2.2ರ $U_1$ ಮತ್ತು $U_2$ ಆದ್ಯತೆಗಳ ಎರಡು ಬೇರೆ ಬೇರೆ ತುಷ್ಟಿಗುಣ ಪ್ರಾತಿನಿದ್ಯತೆಗಳನ್ನು ಕೋಷ್ಟಕ 2.2 ತೋರಿಸುತ್ತದೆ.

**ಕೋಷ್ಟಕ 2.2** ಅನುಭೋಗಿಯ ಆದ್ಯತೆಗಳ ತುಷ್ಟಿಗುಣದ ನಿರೂಪಣೆ

| ಎರಡು ಸರಕುಗಳ ಸಂಯೋಜನೆಗಳು | $U_1$ | $U_2$ |
|---|---|---|
| (2,2) | 5 | 40 |
| (1,3), (3,1) | 4 | 35 |
| (1,2), (2,1) | 3 | 28 |
| (1,1) | 2 | 20 |
| (0,0), (0,1), (0,2), (0,3), (0,4), (1,0), (2,0), (3,0) (4,0) | 1 | 10 |

## 2.3 ಅನುಭೋಗಿಯ ಆದರ್ಶ ಆಯ್ಕೆ *Optimal Choice of the Consumer*

ಈ ಹಿಂದಿನ ಎರಡು ವಿಭಾಗಗಳಲ್ಲಿ ನಾವು ಅನುಭೋಗಿಗೆ ಲಭ್ಯವಿರುವ ಅನುಭೋಗದ ವಿವಿದ ಸಂಯೋಜನೆಗಳ ಗಣ ಮತ್ತು ಈ ಸಂಯೋಜನೆಗಳಿಗೆ ಅನುಭೋಗಿಯು ವ್ಯಕ್ತಪಡಿಸಬಹುದಾದ ಆದ್ಯತೆಗಳ ಬಗ್ಗೆ ಕುರಿತು ಚರ್ಚಿಸಿದ್ದೇವೆ. ಹಾಗಾದರೆ ಅನುಭೋಗಿಯು ಯಾವ ಸಂಯೋಜನೆಯನ್ನು ಆಯ್ಕೆ ಮಾಡುತ್ತಾಳೆ? ಸಾಮಾನ್ಯವಾಗಿ ಅರ್ಥಶಾಸ್ತ್ರದಲ್ಲಿ ಅನುಭೋಗಿಯು ವಿವೇಚನಾಶೀಲತೆ ಹೊಂದಿರುತ್ತಾಳೆಂದು ಊಹಿಸಿಕೊಳ್ಳಲಾಗುತ್ತದೆ. ಒಬ್ಬ ವಿವೇಚನಾಶೀಲ ಅನುಭೋಗಿಗೆ ಯಾವುದೇ ನಿರ್ದಿಷ್ಟ ಸನ್ನಿವೇಶದಲ್ಲಿ ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದ್ದು (ಉತ್ತಮವಲ್ಲದ್ದು) ಎಂಬುದರ ಬಗ್ಗೆ ಸ್ಪಷ್ಟ ಅರಿವು ಇರುತ್ತದೆ. ಆದ್ದರಿಂದ ಅನುಭೋಗಿಯು ಯಾವಾಗಲೂ ತನಗೆ ಅತ್ಯುತ್ತುಮವೆನಿಸಿದ್ದನ್ನೆ ಆಯ್ಕೆ ಮಾಡಲು ಪ್ರಯತ್ನಿಸುತ್ತಾಳೆ.

ಈ ರೀತಿ ಅನುಭೋಗಿಯು ತನಗೆ ಲಭ್ಯವಿರುವ ಅನುಭೋಗದ ಸಂಯೋಜನೆಗಳಿಗೆ ನೀಡಬಹುದಾದ ಆದ್ಯತೆಗಳ ಬಗ್ಗೆ ಸ್ಪಷ್ಟತೆಯನ್ನು ಹೊಂದಿರುವುದಷ್ಟೇಯಲ್ಲದೆ ಅನುಭೋಗಿಯ ವರ್ತನೆ ಕೂಡ ಆದ್ಯತೆಗಳಿಗನುಸಾರವಾಗಿ ಇರುತ್ತದೆ. ಒಬ್ಬ ವಿವೇಚನಾಶೀಲ ಅನುಭೋಗಿಯು ತನಗೆ ದೊರಕಬಹುದಾದ ಅನುಭೋಗದ ವಿವಿದ ಸಂಯೋಜನೆಗಳ ಸಮೂಹದಲ್ಲಿ, ತಾನು ಅತಿ ಹೆಚ್ಚು ಆದ್ಯತೆಯನ್ನು ವ್ಯಕ್ತಪಡಿಸುವ ಒಂದು ಸಂಯೋಜನೆಯನ್ನು ಆಯ್ಕೆ ಮಾಡುತ್ತಾಳೆ.

**ಉದಾಹರಣೆ 2.5**

ಉದಾಹರಣೆ 2.2ರಲ್ಲಿನ ಅನುಭೋಗಿಯನ್ನು ಪರಿಗಣಿಸಿ. ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳಲ್ಲಿ (2, 2) ಸಂಯೋಜನೆಗೆ ಆದ್ಯತೆ ನೀಡಲಾಗಿದೆ. ಆದ್ದರಿಂದ ಒಬ್ಬ ವಿವೇಚನಾಶೀಲ ಅನುಭೋಗಿ (2, 2) ಸಂಯೋಜನೆಯನ್ನೇ ಆಯ್ಕೆಮಾಡಿಕೊಳ್ಳುತ್ತಾಳೆ.

---

ಹಿಂದಿನ ಭಾಗಗಳಲ್ಲಿ ಬಜೆಟ್‌ಗಣವು ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳನ್ನು ವಿವರಿಸುತ್ತದೆ ಮತ್ತು ಲಭ್ಯವಿರುವ ಸಂಯೋಜನೆಗಳ ಮೇಲೆ ಅನುಭೋಗಿಗೆ ಇರುವ ಆದ್ಯತೆಗಳನ್ನು ಒಂದು ಔದಾಸೀನ್ಯ ನಕ್ಷೆಯಿಂದ ಪ್ರತಿನಿಧಿಸಬಹುದೆಂಬುದನ್ನು ಅರಿತುಕೊಳ್ಳಲಾಗಿದೆ. ಆದ್ದರಿಂದ ಅನುಭೋಗಿಯ ಸಮಸ್ಯೆಯನ್ನು ಈ ರೀತಿಯಲ್ಲೂ ವ್ಯಾಖ್ಯಾನಿಸಬಹದು: ನೀಡಲಾದ ಬಜೆಟ್ ಗಣದ ಮೂಲಕ ಔದಾಸೀನ್ಯ ವಕ್ರರೇಖೆಯ ಮೇಲೆ ಸಾಧ್ಯವಿರುವಷ್ಟು ಎತ್ತರವಾದ ಸಂಯೋಜನಾ ಬಿಂದುವಿನತ್ತ ಚಲಿಸುವುದೇ ವಿವೇಚನಾಶೀಲ ಅನುಭೋಗಿಯ ಸಮಸ್ಯೆಯಾಗಿದೆ.

ಒಂದು ವೇಳೆ ಅಂತಹ ಬಿಂದು ಇರುವುದೇ ಆದರೆ ಅದನ್ನು ಎಲ್ಲಿ ಗುರಿತಿಸಬಹುದು? ಸಮತೋಲನದ ಅಥವಾ ಆದರ್ಶ ಬಿಂದುವನ್ನು ಬಜೆಟ್‌ರೇಖೆಯ ಮೇಲೆಯೇ ಗುರುತಿಸಬೇಕಾಗುತ್ತದೆ. ಬಜೆಟ್ ರೇಖೆಗಿಂತ ಕೆಳಗಿನ ಬಿಂದುವಿಗೆ ಹೋಲಿಸಿದರೆ, ಕೊನೆಪಕ್ಷ ಒಂದು ಸರಕನ್ನು ಅಧಿಕವಾಗಿ ಮತ್ತು ಇನ್ನೊಂದು ಸರಕಿಗೆ

ಕಡಿಮೆ ಇಲ್ಲದಂತಹ ಒಂದು ಬಿಂದುವು ಸದಾ ಬಜೆಟ್ ರೇಖೆಯ ಮೇಲೆ ಇರುತ್ತದೆ ಮತ್ತು ಏಕತಾನಾತ್ಮಕ ಒಲವನ್ನು ಹೊಂದಿರುವ ಅನುಭೋಗಿಯು ಆ ಬಿಂದುವಿನ ಸಂಯೋಜನೆಯ ಬಗ್ಗೆ ಹೆಚ್ಚು ಆದ್ಯತೆ ನೀಡುತ್ತಾಳೆ. ಆದ್ದರಿಂದ, ಅನುಭೋಗಿಯ ಆದ್ಯತೆಗಳು, ಏಕತಾನಾತ್ಮಕವಾಗಿದ್ದರೆ, ಬಜೆಟ್‌ರೇಖೆಯ ಕೆಳಭಾಗದಲ್ಲಿರುವ ಯಾವುದೇ ಬಿಂದುವಿಗೆ ಅನುಭೋಗಿಯು ಆದ್ಯತೆ ನೀಡುವ ಕೆಲವು ಬಿಂದುಗಳು ಬಜೆಟ್ ರೇಖೆಯ ಮೇಲೆ ಇರುತ್ತದೆ. ಬಜೆಟ್ ರೇಖೆಯ ಮೇಲ್ಭಾಗದಲ್ಲಿ ಬರುವ ಬಿಂದುಗಳು ಅನುಭೋಗಿಗೆ ಲಭ್ಯವಾಗುವುದಿಲ್ಲ ಆದ್ದರಿಂದ ಅನುಭೋಗಿಯು ಆದ್ಯತೆ ನೀಡುವ ಆದರ್ಶ ಸಂಯೋಜನೆಯು (ಹೆಚ್ಚಿನ ಆದ್ಯತೆಯ) ಬಜೆಟ್ ರೇಖೆಯ ಮೇಲೆಯೇ ಇರುತ್ತದೆ.

**ಸೀಮಾಂತ ಬದಲಿಕೆಯ ದರ ಮತ್ತು ಬೆಲೆಗಳ ಅನುಪಾತದ ನಡುವಿನ ಸಮಾನತೆ**

ಬಜೆಟ್‌ರೇಖೆಯು ಯಾವುದಾದರೊಂದು ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸಿರುವ ಬಿಂದುವಿನಲ್ಲಿ ಅನುಭೋಗಿಯ ಆದರ್ಶ ಸಂಯೋಜನೆ ಕಂಡುಬರುತ್ತದೆ. ಬಜೆಟ್‌ರೇಖೆಯು ಔದಾಸೀನ್ಯವಕ್ರರೇಖೆಯ ಮೇಲಿನ ಒಂದು ಬಿಂದುವನ್ನು ಸ್ಪರ್ಶಿಸಿದರೆ, ಆ ಬಿಂದುವಿನಲ್ಲಿ ಔದಾಸೀನ್ಯ ವಕ್ರರೇಖೆಯ ಇಳಿಜಾರಿನ (*MRS*) ನಿರಪೇಕ್ಷಾಮೌಲ್ಯ ಮತ್ತು ಬಜೆಟ್‌ರೇಖೆಯ ಇಳಿಜಾರು (ಬೆಲೆಯ ಅನುಪಾತ) ಒಂದೇ ಆಗಿರುತ್ತವೆ. ಔದಾಸೀನ್ಯ ವಕ್ರರೇಖೆಯ ಇಳಿಜಾರು ಅನುಭೋಗಿಯು ಒಂದು ಸರಕನ್ನು ಇನ್ನೊಂದು ಸರಕಿಗೆ ಬದಲಿಸಲು ಇಚ್ಛಿಸುವ ದರವಾಗಿದೆ ಎಂಬುದನ್ನು ನಮ್ಮ ಹಿಂದಿನ ಚರ್ಚೆಯಿಂದ ಸ್ಮರಿಸಬಹುದಾಗಿದೆ. ಬಜೆಟ್ ರೇಖೆಯ ಇಳಿಜಾರು, ಮಾರುಕಟ್ಟೆಯಲ್ಲಿ ಒಬ್ಬ ಅನುಭೋಗಿಯು ಒಂದು ಸರಕನ್ನು ಇನ್ನೊಂದು ಸರಕಿಗೆ ಬದಲಿಸಿಕೊಳ್ಳಲು ಸಾಧ್ಯವಾಗುವ ದರವಾಗಿದೆ. ಆದರ್ಶ ಮಟ್ಟದಲ್ಲಿ ಎರಡೂ ದರಗಳು ಒಂದೇ ಆಗಿರಬೇಕು.

ಇದು ಏಕೆ ಎಂದು ತಿಳಿದು ಕೊಳ್ಳಬೇಕಾದರೆ, ಎರಡೂ ದರಗಳು ಸಮವಿಲ್ಲದ ಬಿಂದುವನ್ನು ಪರಿಗಣಿಸಿ. ಆ ಬಿಂದುವಿನಲ್ಲಿ ಸೀಮಾಂತ ಬದಲಿಕೆಯ ದರ (*MRS*) 2 ಆಗಿದೆ ಮತ್ತು ಎರಡೂ ಸರಕುಗಳ ಬೆಲೆ ಒಂದೇ ಆಗಿದೆ ಎಂದು ಕೊಳ್ಳೋಣ. ಆ ಬಿಂದುವಿನಲ್ಲಿ ಅನುಭೋಗಿಯು **ಸರಕು1ರ** ಒಂದು ಹೆಚ್ಚುವರಿ ಘಟಕವನ್ನು ಪಡೆಯಲು **ಸರಕು2ರ 2** ಘಟಕಗಳನ್ನು ತ್ಯಾಗ ಮಾಡಲು ಇಚ್ಛಿಸುತ್ತಾಳೆ. ಆದರೆ ಮಾರುಕಟ್ಟೆಯಲ್ಲಿ ಅನುಭೋಗಿಯು ಸರಕು1ರ ಒಂದು ಹೆಚ್ಚುವರಿ ಘಟಕವನ್ನು ಪಡೆಯಲು ಸರಕು2ರ ಒಂದು ಘಟಕವನ್ನು ಮಾತ್ರ ತ್ಯಜಿಸುತ್ತಾಳೆ. ಆದ್ದರಿಂದ ಅನುಭೋಗಿಯು ಸರಕು1ರ ಹೆಚ್ಚುವರಿ ಘಟಕವನ್ನು ಕೊಂಡುಕೊಂಡರೆ, ಬೇರೆ ಸಂಯೋಜನಾ ಬಿಂದುಗಳಿಗೆ ಹೋಲಿಸಿದರೆ ಈ ಬಿಂದುವಿನಲ್ಲಿ ಎರಡೂ ಸರಕುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದು. ಈ ರೀತಿ ಅನುಭೋಗಿಯು ಹೆಚ್ಚು ಆದ್ಯತೆಯನ್ನು ವ್ಯಕ್ತಪಡಿಸುವ ಬಿಂದುವಿನತ್ತ ಚಲಿಸುತ್ತಾಳೆ. ಹೀಗೆ (*MRS*) ಅಧಿಕವಾಗಿರುವ ಬಿಂದುವಿನಲ್ಲಿ ಬೆಲೆಯ ಅನುಪಾತ ಆದರ್ಶವಾಗಿರುವುದಿಲ್ಲ. ಬೆಲೆಯ ಅನುಪಾತಕ್ಕಿಂತ (*MRS*) ನ್ನು ಕಡಿಮೆ ಹೊಂದಿರುವ ಯಾವುದೇ ಬಿಂದುವಿಗೂ ಇದೇ ವಿವರಣೆಯನ್ನು ನೀಡಬಹುದು.





ಬಜೆಟ್‌ರೇಖೆಯ ಮೇಲೆ ಆದರ್ಶ ಸಂಯೋಜನೆ ಹೊಂದಿರುವ ಬಿಂದುವನ್ನು ಎಲ್ಲಿ ಗುರುತಿಸಲಾಗುತ್ತದೆ? ಎಲ್ಲಿ ಬಜೆಟ್‌ರೇಖೆಯು ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸಿರುತ್ತದೆಯೋ ಅದುವೇ ಆದರ್ಶ ಸಂಯೋಜನೆಯ ಬಿಂದುವಾಗಿರುತ್ತದೆ[8]. ಏಕೆಂದರೆ ಈ ಬಿಂದುವನ್ನು ಹೊರತು ಪಡಿಸಿ ಔದಾಸೀನ್ಯ ವಕ್ರರೇಖೆಯ ಮೇಲಿರುವ ಇನ್ಯಾವುದೇ ಬಿಂದುವು ಅನುಭೋಗಿಯು ಹೊಂದಬಹುದಾದ ಕೆಳಮಟ್ಟದ ಸಂಯೋಜನೆಗಳನ್ನು ವ್ಯಕ್ತಪಡಿಸುವ ಬಿಂದುವಾಗಿರುತ್ತವೆ. ಆದ್ದರಿಂದ ಆ ಬಿಂದುವು ಆದರ್ಶ ಸಂಯೋಜನಾ ಬಿಂದು ಆಗಲಾರದು. ಆದರ್ಶ ಸಂಯೋಜನೆಯು ಬಜೆಟ್‌ರೇಖೆ ಮತ್ತು ಔದಾಸೀನ್ಯವಕ್ರರೇಖೆ ಪರಸ್ಪರ ಸ್ಪರ್ಶಿಸುವ ಬಿಂದುವಿನಲ್ಲಿಯೇ ಕಂಡುಬರುತ್ತದೆ.

[8] ರೇಖಾಚಿತ್ರ 2.10 ರಲ್ಲಿ ಖಚಿತವಾಗಿ ಹೇಳುವುದಾದರೆ, ರೇಖಾಚಿತ್ರ 2.10ರಲ್ಲಿ ತೋರಿಸಿರುವಂತೆ ಬಜೆಟ್‌ರೇಖೆಯು, ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸಿದೆಯೋ ಆ ಬಿಂದುವೇ ಆದರ್ಶಬಿಂದುವಾಗಿದೆ. ಆದಾಗ್ಯೂ ಅನುಭೋಗಿಯು ತನ್ನೆಲ್ಲಾ ಆದಾಯವನ್ನು ಕೇವಲ ಒಂದು ಸರಕನ್ನು ಕೊಂಡುಕೊಳ್ಳಲು ಬಳಸುವ ಬೇರೆ ಸನ್ನಿವೇಶಗಳೂ ಸಹ ಕಂಡುಬರುತ್ತವೆ.

ರೇಖಾಚಿತ್ರ 2.10 ಅನುಭೋಗಿಯ ಆದರ್ಶವನ್ನು ವಿವರಿಸುತ್ತದೆ. $(x^*_1, x^*_2)$ ದಲ್ಲಿ ಬಜೆಟ್ ರೇಖೆಯು ಕಪ್ಪು ಬಣ್ಣದ ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸಿದೆ. ಮೊಟ್ಟ ಮೊದಲಾಗಿ ಗಮನಿಸಬೇಕಾದ ವಿಷಯವೆಂದರೆ, ಬಜೆಟ್ ರೇಖೆಯನ್ನು ಸ್ಪರ್ಶಿಸುವ ಔದಾಸೀನ್ಯ ವಕ್ರರೇಖೆಯು, ಅನುಭೊಗಿಯ ನಿರ್ದಿಷ್ಟ ಬಜೆಟ್‌ನಲ್ಲಿ ಪಡೆಯಬಹುದಾದ ಹೆಚ್ಚಿನ ಮಟ್ಟದ ಔದಾಸೀನ್ಯ ವಕ್ರರೇಖೆಯಾಗಿರುತ್ತದೆ. ಇದಕ್ಕಿಂತ ಉನ್ನತ ಮಟ್ಟದ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳು. ಉದಾಹರಣೆಗೆ ಕಂದು ಬಣ್ಣದ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳು ಪಡೆಯಲಸಾಧ್ಯವಾದ ಸಂಯೋಜನೆಗಳಾಗಿವೆ. ಇದಕ್ಕಿಂತ ಕೆಳಗೆ ಇರುವ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳು ಉದಾಹರಣೆಗೆ ನೀಲಿ ಬಣ್ಣದ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳು ಬಜೆಟ್ ರೇಖೆಯನ್ನು ಸ್ಪರ್ಶಿಸುವ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳಿಗಿಂತ ಕೆಳಮಟ್ಟದ್ದಾಗಿರುತ್ತದೆ. ಬಜೆಟ್ ರೇಖೆಯ ಮೇಲಿನ ಇತರ ಯಾವುದೇ ಬಿಂದುವು ಕೆಳಮಟ್ಟದ ಔದಾಸೀನ್ಯ ವಕ್ರರೇಖೆಯ ಮೇಲಿರುತ್ತದೆ ಮತ್ತು $(x^*_1, x^*_2)$ ಗಿಂತ ಕೆಳಮಟ್ಟದ್ದಾಗಿರುತ್ತದೆ. ಆದ್ದರಿಂದ $(x^*_1, x^*_2)$ ಅನುಭೋಗಿಯ ಆದರ್ಶ ಸಂಯೋಜನೆಯಾಗಿದೆ.




**ರೇಖಾಚಿತ್ರ 2.10: ಅನುಭೋಗಿಯ ಆದರ್ಶ:** ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸುವ ಬಜೆಟ್ ರೇಖೆಯ ಮೇಲಿನ $(x^*_1, x^*_2)$ ಬಿಂದು ಅನುಭೋಗಿಯ ಆದರ್ಶ ಸಂಯೋಜನೆಯನ್ನು ವ್ಯಕ್ತಪಡಿಸುತ್ತದೆ.

### ಆಯ್ಕೆಯ ಸಮಸ್ಯೆ

ಜೀವನದ ವಿವಿದ ಸನ್ನಿವೇಶಗಳಲ್ಲಿ ಆಯ್ಕೆ ಸಮಸ್ಯೆ ಕಂಡುಬರುತ್ತದೆ. ಯಾವುದೇ ಆಯ್ಕೆಯ ಸಮಸ್ಯೆಗೆ ಸಾದ್ಯತಾ ಪರ್ಯಾಯಗಳ ಗಣ ಲಭ್ಯವಿರುತ್ತದೆ. ಈ ಸಾದ್ಯತಾ ಪರ್ಯಾಯಗಳ ಗಣ ಅನುಭೋಗಿಯೊಬ್ಬನಿಗೆ ಲಭ್ಯವಾಗುವ ಪರ್ಯಾಯವನ್ನು ಒಳಗೊಂಡಿರುತ್ತದೆ. ಸಾದ್ಯತಾ ಪರ್ಯಾಯಗಳಿಗೆ ಅನುಭೋಗಿಯು ಸ್ಪಷ್ಟ ಆದ್ಯತೆಗಳನ್ನು ಹೊಂದಿರುತ್ತಾಳೆಂದು ಕಲ್ಪಿಸಿಕೊಳ್ಳಲಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅನುಭೋಗಿಯು ತನ್ನ ಬೇಕು, ಬೇಡಗಳ ಬಗ್ಗೆ ನಿರ್ದಿಷ್ಟತೆಯನ್ನು ಹೊಂದಿರುತ್ತಾಳೆ, ಮತ್ತು ಸಾದ್ಯತಾ ಗಣದಲ್ಲಿ ಯಾವುದೇ ಎರಡು ಪರ್ಯಾಯಗಳನ್ನು ಪರಸ್ಪರ ಹೋಲಿಸಬಹುದು. ಆದ್ಯತೆಯ ಆಧಾರದ ಮೇರೆಗೆ ವ್ಯಕ್ತಿಯು ಪರ್ಯಾಯಗಳನ್ನು ಉತ್ತಮ ಶ್ರೇಣಿಯಿಂದ ಪ್ರಾರಂಭಿಸಿ, ವಿವಿಧ ಶ್ರೇಣಿ ನೀಡಬಹುದು. ಸಾಧ್ಯತಾ ಗಣ ಮತ್ತು ಆದ್ಯತೆಗಳು ಇವೆರಡನ್ನು ಸೂತ್ರೀಕರಿಸುವ ಪರ್ಯಾಯಗಳ ಗಣವು ಆಯ್ಕೆಯ ಆಧಾರದ ಮೂಲವಾಗಿದೆ. ಸಾಮಾನ್ಯವಾಗಿ ಅನುಭೋಗಿಯು ವಿವೇಚನಾಶೀಲಳಾಗಿರುತ್ತಾಳೆ ಮತ್ತು ತನ್ನ ಆದ್ಯತೆಗಳ ಬಗ್ಗೆ ಸಷ್ಟತೆ ಹೊಂದಿರುತ್ತಾಳೆ ಯಾವುದೇ ಸನ್ನೀವೇಶದಲ್ಲಿ ಅನುಭೋಗಿಯು ಯಾವಾಗಲೂ ಉತ್ತಮವಾದುದ್ದನ್ನೆ ಆಯ್ಕೆ ಮಾಡಲು ಪ್ರಯತ್ನಿಸುತ್ತಾಳೆ.

ಈ ಅಧ್ಯಾಯದಲ್ಲಿ ಅನುಭೋಗಿಯ ಆಯ್ಕೆಯ ನಿರ್ದಿಷ್ಟ ಸನ್ನಿವೇಶದಲ್ಲಿ ಮಾತ್ರ ಅನುಭೋಗಿಯ ಆಯ್ಕೆಸಮಸ್ಯೆಯನ್ನು ಚರ್ಚಿಸಿದ್ದೇವೆ. ಇಲ್ಲಿ ಬಜೆಟ್‌ಸೆಟ್ ಅನುಭೋಗಿಯ ಸಾಧ್ಯತಾಗಣವಾದರೆ, ನಿದಿಷ್ಟ ಮಾರುಕಟ್ಟೆ ಬೆಲೆಯಲ್ಲಿ ಅನುಭೋಗಿಯು ಕೊಂಡುಕೊಳ್ಳಬಹುದಾದ ಎರಡು ಸರಕುಗಳ ಸಂಯೋಜನೆಗಳು ಪರ್ಯಾಯಗಳಾಗಿರುತ್ತವೆ. ಅನುಭೋಗಿಯು ವಿವೇಚನಾಶೀಲಳಾಗಿದ್ದು, ಬಜೆಟ್‌ಸೆಟ್‌ಗೆ ಸಂಬಂದಿಸಿದಂತೆ ಆಕೆಯು ವ್ಯಕ್ತಪಡಿಸುವ ಆದ್ಯತೆ ನಿರ್ದಿಷ್ಟವಾಗಿದ್ದು ಅತಿಹೆಚ್ಚಿನ ಆದ್ಯತಾ ಸಂಯೋಜನೆಯನ್ನೆ ಆಯ್ಕೆ ಮಾಡುತ್ತಾಳೆ. ನಿರ್ದಿಷ್ಟ ಸನ್ನಿವೇಶದಲ್ಲಿ ಅನುಭೋಗಿಯು ಮಾಡುವ ಆಯ್ಕೆಯೇ ಅನುಭೋಗಿಯ ಆದರ್ಶ ಆಯ್ಕೆಯಾಗಿರುತ್ತದೆ.

## 2.4. ಬೇಡಿಕೆ *Demand*

ಈ ಹಿಂದಿನ ಭಾಗದಲ್ಲಿ ನಾವು, ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ ಮತ್ತು ಅದ್ಯತೆಗಳನ್ನು ನೀಡಿದ ಸಂದರ್ಭದಲ್ಲಿ ಅನುಭೋಗಿಯ ಆಯ್ಕೆಯ ಸಮಸ್ಯೆಯನ್ನು ಮತ್ತು ಅನುಭೋಗಿಯ ಆದರ್ಶ ಸಂಯೋಜನೆಯನ್ನು ಪಡೆಯುವ ಬಗ್ಗೆ ಅಭ್ಯಾಸ ಮಾಡಿದ್ದೇವೆ. ಅನುಭೋಗಿಯು, ಆದರ್ಶಮಟ್ಟದಲ್ಲಿ ಆಯ್ಕೆ ಮಾಡಿಕೊಳ್ಳುವ ಒಂದು ಸರಕಿನ ಪ್ರಮಾಣವು ಆ ಸರಕಿನ ಬೆಲೆಯನ್ನು, ಇತರೆ ಸರಕುಗಳ ಬೆಲೆಗಳನ್ನು, ಅನುಭೋಗಿಯ ಆದಾಯ, ಅಭಿರುಚಿ ಮತ್ತು ಅದ್ಯತೆಗಳನ್ನು ಅವಲಂಬಿಸಿರುತ್ತದೆ. ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಚಲಕಗಳಲ್ಲಿ ಬದಲಾವಣೆಯಾದರೆ ಅನುಭೋಗಿಯು ಆಯ್ಕೆ ಮಾಡುವ ಸರಕಿನ ಪ್ರಮಾಣದಲ್ಲಿಯೂ ಸಹಜವಾಗಿಯೇ ಬದಲಾವಣೆಯಾಗುತ್ತದೆ. ನಾವಿಲ್ಲಿ ಈ ಚಲಕಗಳಲ್ಲಿ ಯಾವುದಾದರು ಒಂದು ಚಲಕವನ್ನು ಏಕ ಕಾಲದಲ್ಲಿ ಬದಲಾಯಿಸೋಣ. ಅ ಚಲಕದ ಮೇಲೆ ಅನುಭೋಗಿಯು ಆಯ್ಕೆ ಮಾಡಿಕೊಂಡ ಸರಕಿನ ಪ್ರಮಾಣ ಯಾವ ಸಂಬಂಧವನ್ನು ಹೊಂದಿದೆ ಎಂಬುದನ್ನು ನೋಡೋಣ.

**ಬಿಂಬಕಗಳು**

ಯಾವುದಾದರು ಎರಡು ಚಲಕಗಳನ್ನು ಪರಿಗಣಿಸೋಣ. ಅವು $x$ ಮತ್ತು $y$ ಆಗಿರಲಿ.

$y = f(x)$ ಒಂದು ಬಿಂಬಕವಾಗಿದೆ. ಇದು $x$ ಮತ್ತು $y$ ಎಂಬ ಎರಡು ಚಲಕಗಳ ನಡುವಿನ ಸಂಬಂಧವಾಗಿದೆ. ಅಂದರೆ $x$ ನ ಪ್ರತಿಯೊಂದು ಮೌಲ್ಯಕ್ಕೆ $y$ ಚಲಕವು ವಿಶಿಷ್ಟ ಮೌಲ್ಯವನ್ನು ಹೊಂದುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ $f(x)$ ಒಂದು ನಿಯಮವಾಗಿದ್ದು, ಇದು $x$ ನ ಪ್ರತಿಯೊಂದು ಮೌಲ್ಯಕ್ಕೆ ಒಂದು ವಿಶೇಷ ಮೌಲ್ಯ $y$ ಅನ್ನು ನೀಡುತ್ತದೆ. ಹೀಗೆ $y$ ನ ಮೌಲ್ಯವು $x$ ನ ಮೌಲ್ಯವನ್ನು ಅವಲಂಬಿಸಿರುತ್ತದೆ. ಆದ್ದರಿಂದ $y$ ಅವಲಂಬಿತ ಚಲಕವೆಂದು $x$ ನ್ನು ಸ್ವತಂತ್ರ ಚಲಕವೆಂದು ಕರೆಯಲಾಗುತ್ತದೆ.

**ಉದಾಹರಣೆ — 1**

ಉದಾಹರಣೆಗೆ '$x$' 0, 1, 2, 3 ಮೌಲ್ಯಗಳನ್ನು ತೆಗೆದುಕೊಂಡಾಗ ಅನುಕ್ರಮವಾಗಿ '$y$' ನ ಮೌಲ್ಯವು 10, 15, 18, 20 ಆಗುವ ಒಂದು ಸನ್ನಿವೇಶವನ್ನು ಉದಾಹರಣೆಯಾಗಿ ಪರಿಗಣಿಸಿ $y = f(x)$ ನ. ಮೂಲಕ '$x$' ಮತ್ತು '$y$' ಸಂಬಂಧವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಬಹುದು.

$f(0)=10$; $f(1)=15$; $f(2)=18$ ಮತ್ತು $f(3)=20$

**ಉದಾಹರಣೆ — 2**

'$x$' ನ ಮೌಲ್ಯವು 0, 5, 10 ಮತ್ತು 20 ಆಗಿರುವ ಇನ್ನೊಂದು ಸನ್ನಿವೇಶವನ್ನು ಪರಿಗಣಿಸೋಣ ಮತ್ತು ಇದಕ್ಕೆ ಅನುಗುಣವಾದ '$y$' ನ ಮೌಲ್ಯವು ಅನುಕ್ರಮವಾಗಿ 100, 90, 70 ಮತ್ತು 40 ಆಗಿರಲಿ. ಈ ಎರಡು ಚಲಕಗಳ ಸಂಬಂದವನ್ನು ಇಲ್ಲಿ $y = f(x)$ ಬಿಂಬಕದ ಮೂಲಕ $y$ ಮತ್ತು $x$ ಸಂಬಂಧಿಸಿವೆ. ಅದನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

$f(0) = 100$; $f(10) = 90$; $f(15) = 70$ ಮತ್ತು $f(20) = 40$

ಎರಡು ಚಲಕಗಳ ಕಾರ್ಯವಲಂಬಿ ಸಂಬಂದವನ್ನು ಬೀಜ ಗಣತೀಯ ರೂಪದಲ್ಲಿ ಈ ಕೆಳಗಿನಂತೆ ವ್ಯಕ್ತಪಡಿಸಬಹುದು.

$$y = 5 + x \text{ ಮತ್ತು } y = 50 - x$$

'$x$' ನ ಮೌಲ್ಯದ ಏರಿಕೆಯೊಂದಿಗೆ '$y$' ನ ಮೌಲ್ಯ ಕಡಿಮೆಯಾಗದಿದ್ದಾಗ ಮಾತ್ರ. $y = f(x)$ ಒಂದು ಏರಿಕೆಯ ಬಿಂಬಕವಾಗಿದೆ '$x$' ನ ಮೌಲ್ಯದ ಹೆಚ್ಚಳದೊಂದಿಗೆ '$y$' ನ ಮೌಲ್ಯದಲ್ಲಿ ಹೆಚ್ಚಳವಾಗದಿದ್ದರೆ ಆ ಬಿಂಬಕವನ್ನು **ಇಳಿಕೆಯ ಬಿಂಬಕ** ಎನ್ನುತ್ತೇವೆ.

ಉದಾಹರಣೆ 1ರ ಬಿಂಬಕವು ಏರಿಕೆಯ ಬಿಂಬಕವಾಗಿದೆ ಹಾಗೆಯೇ, $y = x + 5$ ಬಿಂಬಕವಾಗಿದೆ.

ಉದಾಹರಣೆ 2ರ ಬಿಂಬಕವು ಇಳಿಕೆಯ ಬಿಂಬಕವಾಗಿದೆ. ಬಿಂಬಕ $y = 50 - x$ ಸಹ ಇಳಿಕೆಯ ಬಿಂಬಕವಾಗಿದೆ.

### ಬಿಂಬಕದ ರೇಖಾತ್ಮಕ ನಿರೂಪಣೆ

$y = f(x)$ ರೇಖಾನಕ್ಷೆಯ ಬಿಂಬಕವು ರೇಖಾತ್ಮಕ ನಿರೂಪಣೆಯಾಗಿದೆ. ಮೇಲೆ ವಿವರಿಸಿದ ಉದಾಹರಣೆಗಳಲ್ಲಿನ ಬಿಂಬಕಗಳನ್ನು ಈ ಕೆಳಗಿನ ರೇಖಾಚಿತ್ರಗಳ ಮೂಲಕ ನಿರೂಪಿಸಲಾಗಿದೆ.




ಸಾಮಾನ್ಯವಾಗಿ ರೇಖಾನಕ್ಷೆಗಳಲ್ಲಿ ಸಮಾನಾಂತರ ಅಕ್ಷದಲ್ಲಿ (OX) ಸ್ವತಂತ್ರ ಚಲಕವನ್ನು, ಲಂಬಾಂತರ (OY) ಅಕ್ಷದಲ್ಲಿ ಅವಲಂಬಿ ಚಲಕವನ್ನು ಮಾಪನ ಮಾಡಲಾಗುತ್ತದೆ. ಆದರೆ ಅರ್ಥಶಾಸ್ತ್ರದಲ್ಲಿ ಇದಕ್ಕೆ ವಿರುದ್ಧವಿರುತ್ತದೆ. ಉದಾಹರಣೆಗೆ ಬೇಡಿಕೆ ರೇಖೆಯನ್ನು ಪಡೆಯುವಾಗ ಸ್ವತಂತ್ರ ಚಲಕವನ್ನು (ಬೆಲೆ) ಲಂಬಾಂತರ OY ಅಕ್ಷದಲ್ಲಿ ಅವಲಂಬಿ ಚಲಕವನ್ನು (ಪ್ರಮಾಣ) ಸಮನಾಂತರ (OX) ಅಕ್ಷದಲ್ಲಿ ಮಾಪನ ಮಾಡಲಾಗುತ್ತದೆ. ಏರಿಕೆಯ ಬಿಂಬಕವನ್ನು ವ್ಯಕ್ತಪಡಿಸುವ ರೇಖೆಯು ಮೇಲ್ಮುಖ ಇಳಿಜಾರನ್ನು, ಇಳಿಕೆಯ ಬಿಂಬಕವನ್ನು ಸೂಚಿಸುವ ರೇಖೆಯು ಇಳಿಮುಖ ಇಳಿಜಾರನ್ನು ಹೊಂದಿರುತ್ತವೆ. ಮೇಲಿನ ರೇಖಾಚಿತ್ರವನ್ನು ಗಮನಿಸಿದಾಗ $y=5+x$. ಬಿಂಬಕವು ಮೇಲ್ಮುಖ ಇಳಿಜಾರನ್ನು, $y = 50 - x$. ಬಿಂಬಕವು ಇಳಿಮುಖ ಇಳಿಜಾರನ್ನು ಹೊಂದಿರುವುದು ಕಂಡುಬರುತ್ತದೆ.

### 2.4.1 ಬೇಡಿಕೆ ರೇಖೆ ಮತ್ತು ಬೇಡಿಕೆಯ ನಿಯಮ *Demand Curve and the Law of Demand*

ಇತರೆ ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ, ಅಭಿರುಚಿ ಮತ್ತು ಒಲವು ಸ್ಥಿರವಾಗಿದ್ದಾಗ, ಅನುಭೋಗಿಯು ಆದರ್ಶ ಆಯ್ಕೆ ಮಾಡುವ ಸರಕಿನ ಪ್ರಮಾಣವು ಸಂಪೂರ್ಣವಾಗಿ ಆ ಸರಕಿನ ಬೆಲೆಯನ್ನು ಅವಲಂಬಿಸಿರುತ್ತದೆ. ಅನುಭೋಗಿಯು ಕೊಂಡುಕೊಳ್ಳಲು ಬಯಸುವ ಒಂದು ನಿರ್ದಿಷ್ಟ ಪ್ರಮಾಣದ ಸರಕಿನ ಆದರ್ಶ ಆಯ್ಕೆ ಮತ್ತು ಅದರ ಬೆಲೆಯ ನಡುವಿನ ಸಂಬಂಧವು ಬಹಳ ಮುಖ್ಯವಾಗಿದ್ದು ಈ ಸಂಬಂಧವನ್ನೇ ಬೇಡಿಕೆಯ ಬಿಂಬಕವೆಂದು ಕರೆಯಲಾಗುತ್ತದೆ. ಹೀಗೆ ಅನುಭೋಗಿಯ ಬೇಡಿಕೆ ಬಿಂಬಕವು ಇತರೆ ಸ್ಥಿತಿಗತಿಗಳು ಸ್ಥಿರವಾಗಿದ್ದಾಗ ಅನುಭೋಗಿಯು ವಿವಿಧ ಬೆಲೆಯ ಮಟ್ಟದಲ್ಲಿ ಆಯ್ಕೆ ಮಾಡಬಹುದಾದ ಒಂದು ನಿರ್ದಿಷ್ಟ ಸರಕಿನ ಪ್ರಮಾಣವನ್ನು ವ್ಯಕ್ತಪಡಿಸುತ್ತದೆ. ಒಂದು ಸರಕಿಗೆ ಇರುವ ಅನುಭೋಗಿಯ ಬೇಡಿಕೆಯನ್ನು ಬೆಲೆಯ ಬಿಂಬಕವಾಗಿ ಈ ಕೆಳಗಿನಂತೆ ಬರೆಯಬಹುದು.

$$q=d(p) \qquad (2.12)$$

ಇಲ್ಲಿ $q$ ಸರಕಿನ ಪ್ರಮಾಣವನ್ನು, $p$ ಸರಕಿನ ಬೆಲೆಯನ್ನು ಸೂಚಿಸುತ್ತವೆ.

ಬೇಡಿಕೆ ಬಿಂಬಕವನ್ನು ರೇಖಾಚಿತ್ರ 2.11ರಲ್ಲಿ ತೋರಿಸಿರುವಂತೆ ರೇಖಾತ್ಮಕವಾಗಿ ನಿರೂಪಿಸಬಹುದು. ಬೇಡಿಕೆಯ ಬಿಂಬಕದ ರೇಖಾತ್ಮಕ ನಿರೂಪಣೆಯನ್ನು ಬೇಡಿಕೆಯ ರೇಖೆಯೆಂದು ಕರೆಯಲಾಗುತ್ತದೆ. ಒಂದು ಸರಕಿಗೆ ಇರುವ ಅನುಭೋಗಿಯ ಬೇಡಿಕೆ ಪ್ರಮಾಣ ಮತ್ತು ಅದರ ಬೆಲೆಯ ನಡುವೆ ಇರುವ ಸಂಬಂಧವು ಸಾಮಾನ್ಯವಾಗಿ ಋಣಾತ್ಮಕವಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ನಿರ್ದಿಷ್ಟ ಸರಕಿನ ಬೆಲೆ ಕಡಿಮೆಯಾದರೆ, ಅನುಭೋಗಿಯು ಆದರ್ಶವಾಗಿ ಆಯ್ಕೆಮಾಡಿ ಕೊಳ್ಳಬಹುದಾದ ಆ ಸರಕಿನ ಪ್ರಮಾಣ ಹೆಚ್ಚಾಗುತ್ತದೆ ಮತ್ತು ಸರಕಿನ ಬೆಲೆ ಹೆಚ್ಚಳದೊಂದಿಗೆ ಅನುಭೋಗಿಯು ಆಯ್ಕೆ ಮಾಡಿಕೊಳ್ಳುವ ಸರಕಿನ ಪ್ರಮಾಣ ಕಡಿಮೆಯಾಗುತ್ತದೆ.




**ರೇಖಾಚಿತ್ರ 2.11 ಬೇಡಿಕೆರೇಖೆ:** ನಿರ್ದಿಷ್ಟ ಸರಕಿನ ಬೆಲೆ ಮತ್ತು ಅನುಭೋಗಿಗಳಿಂದ ಆಯ್ಕೆ ಮಾಡಲ್ಪಡುವ ಆ ಸರಕಿನ ಪ್ರಮಾಣಗಳ ನಡುವಿನ ಸಂಬಂದವೇ ಬೇಡಿಕೆಯ ರೇಖೆ. ಲಂಬಾಕ್ಷದ ಮೂಲಕ ಸ್ವತಂತ್ರ ಚಲಕ (ಬೆಲೆ)ವನ್ನು ಮಾಪನ ಮಾಡಲಾಗಿದೆ, ಮತ್ತು ತಲಾಕ್ಷದ ಮೂಲಕ ಅವಲಂಬಿ ಚಲಕ(ಪ್ರಮಾಣ)ವನ್ನು ಮಾಪನ ಮಾಡಲಾಗಿದೆ. ಬೇಡಿಕೆಯ ರೇಖೆಯು ಅನುಭೋಗಿಯು ಪ್ರತಿಯೊಂದು ಬೆಲೆಯಲ್ಲಿ ವ್ಯಕ್ತಪಡಿಸುವ ಬೇಡಿಕೆ ಪ್ರಮಾಣವನ್ನು ವ್ಯಕ್ತಪಡಿಸುತ್ತದೆ.

ಇದು ಏಕೆ ಹೀಗಾಗುತ್ತದೆಂಬುದನ್ನು ನೋಡಲು, ಒಬ್ಬ ಅನುಭೋಗಿಯ ಆದಾಯ "M" ಆಗಿದೆಯೆಂದು, ಎರಡು ಸರಕುಗಳ ಬೆಲೆ $p_1$ ಮತ್ತು $p_2$ ಆಗಿದೆ ಎಂದು ಪರಿಗಣಿಸೋಣ. ಈ ಸನ್ನಿವೇಶದಲ್ಲಿ ಅನುಭೋಗಿಯ ಆದರ್ಶ ಸಂಯೋಜನೆಯು $(x^*_1, x^*_2)$ ಆಗಿದೆ ಎಂದು ಕೊಳ್ಳೋಣ. ಈಗ ಸರಕು1ರ ಬೆಲೆಯು $\Delta p_1$ ಮೊತ್ತದಷ್ಟು ಕಡಿಮೆಯಾಗಿದೆಯೆಂದು ಪರಿಗಣಿಸೋಣ. ಆಗ ಸರಕು1 ರ ಹೊಸ ಬೆಲೆಯು $(p_1 - \Delta p_1)$ ಆಗುತ್ತದೆ. ಬೆಲೆಯ ಬದಲಾವಣೆಯು ಎರಡು ಪರಿಣಾಮಗಳನ್ನು ಹೊಂದಿರುತ್ತದೆಂಬುದನ್ನು ಗಮನಿಸಿ.

1. ಸರಕು2 ಕ್ಕೆ ಹೋಲಿಸಿದರೆ, ಮೊದಲಿಗಿಂತಲೂ ಸರಕು1 ಸಾಪೇಕ್ಷವಾಗಿ ಅಗ್ಗವಾಗುತ್ತದೆ.
2. ಅನುಭೋಗಿಯಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ. ಸಾಮಾನ್ಯವಾಗಿ ಬೆಲೆಯ ಬದಲಾವಣೆಯು, ಅನುಭೋಗಿಯು ಹೊಂದಿರುವ ಮೊದಲಿನಷ್ಟೇ ಆದಾಯದಲ್ಲಿ ಅಧಿಕ ಸರಕುಗಳನ್ನು ಕೊಳ್ಳಲು ಅನುಮತಿಸುತ್ತದೆ. ನಿರ್ದಿಷ್ಟವಾಗಿ, ಅನುಭೋಗಿ 'M' ಗಿಂತ ಕಡಿಮೆ ಖರ್ಚುಮಾಡಿ ಮೊದಲು ಕೊಳ್ಳುತ್ತಿದ್ದಷ್ಟೇ ಅನುಭೋಗದ ಸಂಯೋಜನೆಯನ್ನು ಕೊಂಡುಕೊಳ್ಳಬಹುದು.

ಬೆಲೆಯ ಬದಲಾವಣೆಯಿಂದಾಗುವ ಈ ಎರಡೂ ಪರಿಣಾಮಗಳು, ಅಂದರೆ, ಕೊಂಡುಕೊಳ್ಳುವ ಸಾಮರ್ಥ್ಯದಲ್ಲಿನ ಬದಲಾವಣೆ, ಮತ್ತು ಸಾಪೇಕ್ಷ ಬೆಲೆಯಲ್ಲಿನ ಬದಲಾವಣೆ ಅನುಭೋಗಿಯ ಆದರ್ಶ ಆಯ್ಕೆಯ ಮೇಲೆ ಪ್ರಭಾವ ಬೀರುತ್ತದೆಂದು ನೀರಿಕ್ಷಿಸಬಹುದು. ಸಾಪೇಕ್ಷ ಬೆಲೆಯಲ್ಲಿ ಆದ ಬದಲಾವಣೆಗೆ ಅನುಭೋಗಿಯು ಹೇಗೆ ಪ್ರತಿಕ್ರಿಯಿಸುತ್ತಾಳೆ ಎಂಬುದನ್ನು ತಿಳಿದುಕೊಳ್ಳಲು ಆಕೆಯ ಕೊಳ್ಳುವ ಸಾಮರ್ಥ್ಯವನ್ನು $(x_1^*, x_2^*)$ ಸಂಯೋಜನೆಯನ್ನು ಕೊಂಡುಕೊಳ್ಳಲು ಶಕ್ಯವಾಗುವಂತೆ ಹೊಂದಿಸಿಕೊಳ್ಳಲಾಗಿದೆ ಎಂದುಕೊಳ್ಳೋಣ.

$(p_1 - \Delta p_1)$ ಮತ್ತು $p_2$ ಬೆಲೆಯಲ್ಲಿ, $(x_1, x_2)$ ಸಂಯೋಜನೆಯ ವೆಚ್ಚ $(p_1 - \Delta p_1)\ x^*_1 + p_2\ x^*_2$.

$= p_1\ x^*_1 + p_2\ x^*_2 - \Delta p_1\ x^*_1$

$= M - \Delta p_1\ x^*_1$ ಆಗಿರುತ್ತದೆ.

ಆದ್ದರಿಂದ ಸರಕು1 ರ ಬೆಲೆ ಕಡಿಮೆಯಾದ ನಂತರದಲ್ಲಿ, ಅನುಭೋಗಿಯ ಆದಾಯ $\Delta p_1\ x^*_1$ ಪ್ರಮಾಣದಲ್ಲಿ ಕಡಿಮೆಯಾದರೆ, ಆಕೆಯ ಕೊಳ್ಳುವ ಸಾಮರ್ಥ್ಯವನ್ನು ಪ್ರಾರಂಭದ ಅನುಭೋಗದ ಮಟ್ಟಕ್ಕೆ

ಹೊಂದಿಸಿಕೊಳ್ಳುತ್ತಾಳೆ.[9] $(p_1-\Delta p_1)$ ಮತ್ತು $p_2$ ಬೆಲೆಯಲ್ಲಿ, $(M-\Delta p_1 x^*_1)$ ಆದಾಯದಲ್ಲಿ ಅನುಭೋಗಿಯ ಆದರ್ಶ ಸಂಯೋಜನೆಯು $(x^{**}_1, x^{**}_2)$ ಆಗಿರುತ್ತದೆ. ಇಲ್ಲಿ $x^{**}_1$, $x^*_1$ ಗೆ ಸಮನಾಗಿರಬೇಕು ಅಥವಾ ಅಧಿಕವಾಗಿರಬೇಕು. ಇದು ಏಕೆಂದು ನೋಡಲು ರೇಖಾಚಿತ್ರ 2.12 ನ್ನು ಗಮನಿಸೋಣ.




**ರೇಖಾಚಿತ್ರ 2.12 ಬದಲಿಕೆಯ ಪರಿಣಾಮ:** ಬೂದು ಬಣ್ಣದ ರೇಖೆಯು ಬೆಲೆಯ ಬದಲಾವಣೆಗೂ ಪೂರ್ವದಲ್ಲಿ ಅನುಭೋಗಿಯ ಬಜೆಟ್‌ರೇಖೆಯನ್ನು ಪ್ರತಿನಿಧಿಸುತ್ತದೆ. ರೇಖಾಚಿತ್ರ$(a)$ ನಲ್ಲಿರುವ ನೀಲಿಬಣ್ಣದ ರೇಖೆಯು ಸರಕು1ರ ಬೆಲೆಯ ಕುಸಿತದ ನಂತರದ ಅನುಭೋಗಿಯ ಬಜೆಟ್ ರೇಖೆಯನ್ನು ವ್ಯಕ್ತ ಪಡಿಸುತ್ತದೆ. ರೇಖಾಚಿತ್ರ $(b)$ ನಲ್ಲಿರುವ ನೀಲಿ ಬಣ್ಣದ ರೇಖೆಯು ಅನುಭೋಗಿಯ ಆದಾಯವು ಹೊಂದಾಣಿಕೆಯಾದಾಗ ಬಜೆಟ್‌ರೇಖೆಯನ್ನು ವ್ಯಕ್ತಪಡಿಸುತ್ತದೆ.

ಅನುಭೋಗಿಯ ಆದಾಯ 'M' ಮತ್ತು ಎರಡು ಸರಕುಗಳ ಬೆಲೆ $p_1$ ಮತ್ತು $p_2$ ಆಗಿದ್ದಾಗ ರೇಖಾಚಿತ್ರದಲ್ಲಿನ ಬೂದುಬಣ್ಣದ ರೇಖೆಯು ಅನುಭೋಗಿಯ ಆದಾಯ ರೇಖೆಯನ್ನು ಪ್ರತಿನಿಧಿಸುತ್ತದೆ. ಬಜೆಟ್‌ರೇಖೆಯ ಮೇಲೆ ಮತ್ತು ಕೆಳಭಾಗದಲ್ಲಿ ಬರುವ ಎಲ್ಲಾ ಬಿಂದುಗಳು ಅನುಭೋಗಿಗೆ ಲಭ್ಯವಾಗುತ್ತವೆ. ಅನುಭೋಗಿಯ ಒಲವು ಏಕತಾನಾತ್ಮಕವಾಗಿರುವುದರಿಂದ, ಅನುಭೋಗಿಯು ಆಯ್ಕೆ ಮಾಡಿಕೊಳ್ಳಬಹುದಾದ ಆದರ್ಶ ಸಂಯೋಜನೆಯು $(x_1^*,x_2^*)$ ಬಜೆಟ್‌ರೇಖೆಯ ಮೇಲೆಯೇ ಇರುತ್ತದೆ. ನೀಲಿ ಬಣ್ಣದ ರೇಖೆಯು ಸರಕು1ರ ಬೆಲೆ ಕಡಿಮೆಯಾದ ನಂತರದ ಬಜೆಟ್‌ರೇಖೆಯನ್ನು ವ್ಯಕ್ತಪಡಿಸುತ್ತದೆ. ಅನುಭೋಗಿಯ ಆದಾಯ $\Delta p_1 x^*_1$ ಮೊತ್ತದಷ್ಟು ಕಡಿಮೆಯಾದರೆ ನೀಲಿ ಬಣ್ಣದ ಬಜೆಟ್‌ರೇಖೆಯು ಎಡಭಾಗಕ್ಕೆ ಸಮನಾಂತರವಾಗಿ ಪಲ್ಲಟಗೊಳ್ಳುತ್ತದೆ. ಈ ರೀತಿ ಪಲ್ಲಟಗೊಂಡ ಬಜೆಟ್‌ರೇಖೆಯು $(x_1^*,x_2^*)$ ಬಿಂದುವಿನ ಮೂಲಕವೇ ಹಾದು ಹೋಗಿರುವುದನ್ನು ಗಮನಿಸಿ. ಏಕೆಂದರೆ ಅನುಭೋಗಿಯು ಈ ರೀತಿ ತನ್ನಲ್ಲಿರುವ ಆದಾಯವನ್ನು $(x_1^*,x_2^*)$ ಸಂಯೋಜನೆಯನ್ನು ಕೊಂಡುಕೊಳ್ಳಲು ಸರಿದೂಗಿಸುತ್ತಾಳೆ.

ಬೆಲೆಯ ಬದಲಾವಣೆಯ ನಂತರ ಅನುಭೋಗಿಯು ಈ ರೀತಿ ಆದಾಯವನ್ನು ಎರಡು ಸರಕುಗಳನ್ನು ಕೊಂಡುಕೊಳ್ಳುವಲ್ಲಿ ಸರಿದೂಗಿಸಿದರೆ, ಆಕೆ ಯಾವ ಸಂಯೋಜನೆಯನ್ನು ಆಯ್ಕೆ ಮಾಡುತ್ತಾಳೆ? ನಿಶ್ಚಿತವಾಗಿಯೂ ಅನುಭೋಗಿಯು ಆಯ್ಕೆ ಮಾಡಿಕೊಳ್ಳಬಹುದಾದ ಆದರ್ಶ ಸಂಯೋಜನೆಯು ಪಲ್ಲಟಗೊಂಡ ಬಜೆಟ್‌ರೇಖೆಯ ಮೇಲಿರುತ್ತದೆ. $(x_1^*,x_2^*)$ ಬಿಂದುವಿನ ಎಡಭಾಗದಲ್ಲಿ ಬರುವ ಯಾವುದಾದರೂ ಬಿಂದುವನ್ನು ಆಕೆ ಆಯ್ಕೆ ಮಾಡಲು ಸಾಧ್ಯವೇ? ಈ ಆದಾಯ ರೇಖೆಯ ಮೇಲೆ $(x_1^*,x_2^*)$ ಸಂಯೋಜನೆಯ ಎಡಭಾಗಕ್ಕೆ ಇರುವ ಎಲ್ಲಾ ಬಿಂದುಗಳು ಬೂದು ಬಣ್ಣದ ಆದಾಯ ರೇಖೆಗಿಂತ ಕೆಳಭಾಗದಲ್ಲಿ ಇರುತ್ತವೆ. ಮತ್ತು ಬೆಲೆಯ ಬದಲಾವಣೆಗೂ ಪೂರ್ವದಲ್ಲಿ ಈ ಸಂಯೋಜನೆಗಳು ಅನುಭೋಗಿಗೆ ಲಭ್ಯವಿದ್ದವು. ಈ ಬಿಂದುಗಳಲ್ಲಿ ಯಾವುದೇ ಬಿಂದುವಿಗೆ ಹೋಲಿಸಿದರೆ, ಅನುಭೋಗಿಯು ಆದ್ಯತೆ ನಿಡಬಹುದಾದ ಕನಿಷ್ಟ ಪಕ್ಷ ಒಂದು

---

[9] ಉದಾಹರಣೆಗೆ ಒಬ್ಬ ಅನುಭೋಗಿಯ ಬಳಿ ₹30 ಆದಾಯವಿದೆಯೆಂದು ಪರಿಗಣಿಸೋಣ. ಮೊದಲನೆ ಸರಕಿನ ಬೆಲೆ ₹4 ಮತ್ತು 2 ನೇ ಸರಕಿನ ಬೆಲೆ ₹5 ಆಗಿದೆಯೆಂದು ಎಂದುಕೊಳ್ಳೋಣ. ಈ ಬೆಲೆಗಳಲ್ಲಿ ಅನುಭೋಗಿಯ ಆದರ್ಶ ಸಂಯೋಜನೆಯು (5,2) ಆಗುತ್ತದೆ. ಒಂದು ವೇಳೆ ಮೊದಲನೆ ಸರಕಿನ ಬೆಲೆ ₹3 ಗಳಿಗೆ ಕಡಿಮೆಯಾಗುತ್ತದೆಯೆಂದು ಎಂದುಕೊಳ್ಳೋಣ. ಬೆಲೆಯ ಇಳಿಕೆಯ ನಂತರ ಅನುಭೋಗಿಯ ಆದಾಯವು ₹5 ಗಳಷ್ಟು ಕಡಿಮೆಯಾದರೆ, ಅನುಭೋಗಿಯು ಕೊಂಡುಕೊಳ್ಳಬಹುದಾದ ಸಂಯೋಜನೆಯು (5,2) ಮೊದಲನೆ ಸರಕಿನ ಬೆಲೆಯಲ್ಲಿ ₹1 (1 ಭಾರಿ) ಬದಲಾವಣೆಯಾದರೆ, ಬೆಲೆಯ ಬದಲಾವಣೆಗೂ (5 ಯೂನಿಟ್) ಮೊದಲು ಅನುಭೋಗಿಯು ಖರೀದಿಸುತ್ತಿದ್ದ ಒಂದನೇ ಸರಕಿನ ಬೆಲೆಯಲ್ಲಿ ಆಕೆಯ ಆದಾಯ (₹5) ಕ್ಕೆ ಸಮನಾಗಿ ಹೊಂದಿಸುವುದು ಅಗತ್ಯವಾಗಿದೆ.

ಬಿಂದು ಬೂದುಬಣ್ಣದ ಬಜೆಟ್‌ರೇಖೆಯ ಮೇಲಿರುತ್ತದೆ. ಬೆಲೆಯ ಬದಲಾವಣೆಯ ಪೂರ್ವದಲ್ಲಿ $(x_1^*,x_2^*)$ ಆದರ್ಶ ಸಂಯೋಜನೆಯಾಗಿದ್ದುದ್ದರಿಂದ ಬೂದು ಬಣ್ಣದ ಬಜೆಟ್ ರೇಖೆಯ ಮೇಲಿರುವ ಯಾವುದೇ ಸಂಯೋಜನೆ ಅಥವಾ ಸಂಯೋಜನೆಗಳಿಗಿಂತ $(x_1^*,x_2^*)$ ಸಂಯೋಜನೆ ಉತ್ತಮವೆಂದು ಅನುಭೋಗಿಯು ಪರಿಗಣಿಸಬೇಕು. ಆದ್ದರಿಂದ ಪಲ್ಲಟಗೊಂಡ ಬಜೆಟ್ ರೇಖೆಯ ಮೇಲೆ $(x_1^*,x_2^*)$ ನ ಎಡಭಾಗಕ್ಕೆ ಬರುವ ಬಿಂದುಗಳು $(x_1^*,x_2^*)$ ಗಿಂತ ಕೆಳಮಟ್ಟದ್ದಾಗಿರಬೇಕು. $(x_1^*,x_2^*)$ ಸಂಯೋಜನೆಯು ಇನ್ನು ಲಭ್ಯವಿರುವಾಗ ವಿವೇಚನಾಶೀಲ ಅನುಭೋಗಿಯು ಕೆಳಮಟ್ಟದ ಸಂಯೋಜನೆಯನ್ನು ಆಯ್ಕೆ ಮಾಡುತ್ತಾಳೆಂಬುದರಲ್ಲಿ ಅರ್ಥವಿಲ್ಲ. ಬೆಲೆಯ ಬದಲಾವಣೆಗೂ ಮೊದಲು, ಪಲ್ಲಟಗೊಂಡ ಬಜೆಟ್ ರೇಖೆಯ ಮೇಲಿರುವ ಸಂಯೋಜನೆಗಳು ಅಂದರೆ $(x_1^*,x_2^*)$ ಬಿಂದುವಿನ ಬಲಭಾಗಕ್ಕಿರುವ ಸಂಯೋಜನೆಗಳು ಲಭ್ಯವಿರಲಿಲ್ಲ. ಈ ಸಂಯೋಜನೆಗಳಲ್ಲಿ ಯಾವುದಾದರೂ ಒಂದನ್ನು ಅನುಭೋಗಿಯು $(x_1^*,x_2^*)$ಗೆ ಬದಲಾಗಿ ಆಯ್ಕೆಮಾಡಿದರೆ ಅಂತಹ ಸಂಯೋಜನೆಗಳನ್ನು ಅಥವಾ $(x_1^*,x_2^*)$ ಸಂಯೋಜನೆಯ ಆಯ್ಕೆಯನ್ನೇ ಮುಂದುವರಿಸಬಹುದು. ಪಲ್ಲಟಗೊಂಡ ಬಜೆಟ್ ರೇಖೆಯ ಮೇಲಿರುವ ಎಲ್ಲಾ ಸಂಯೋಜನೆಗಳು $(x_1^*,x_2^*)$ ಗೆ ಬಲಭಾಗಕ್ಕಿರುತ್ತವೆಂಬುದನ್ನು ಗಮನಿಸಿ. ಇದು ಸರಕು1 ರ $x_1^*$ ಘಟಕಕ್ಕಿಂತ ಹೆಚ್ಚಿನದನ್ನು ಹೊಂದಿರುತ್ತದೆ. ಹೀಗೆ ಸರಕು1ರ ಬೆಲೆ ಕಡಿಮೆಯಾದರೆ, ಅನುಭೋಗಿಯ ಆದಾಯ ಅವಳ ಹಿಂದಿನ ಕೊಂಡುಕೊಳ್ಳುವ ಸಾಮರ್ಥ್ಯಕ್ಕೆ ಸರಿದೂಗಿಸಲಾಗುತ್ತದೆ, ವಿವೇಚನಾಶೀಲ ಅನುಭೋಗಿಯು ಸರಕು1ರ ಅನುಭೋಗವನ್ನು ಕಡಿಮೆಮಾಡುವುದಿಲ್ಲ. ಒಂದು ಸರಕಿನ ಬೆಲೆಯಲ್ಲಿ ಬದಲಾವಣೆಯಾದಾಗ, ಅನುಭೋಗಿಯು ತನ್ನ ಆದಾಯವನ್ನು ಬೆಲೆಯ ಬದಲಾವಣೆಗೂ ಪೂರ್ವದಲ್ಲಿ ಕೊಂಡುಕೊಳ್ಳುತ್ತಿದ್ದ ಪ್ರಮಾಣದಷ್ಟೇ ಸರಕನ್ನು ಕೊಂಡುಕೊಳ್ಳಲು ಸರಿದೂಗಿಸಿದಾಗ ಆ ಸರಕಿನ ಆದರ್ಶ ಪ್ರಮಾಣದಲ್ಲೂ ಬದಲಾವಣೆಯಾಗುತ್ತದೆ. ಇದನ್ನು **ಬದಲಿಕೆ ಪರಿಣಾಮ** (*Substitution effect*) ಎಂದು ಕರೆಯಲಾಗುತ್ತದೆ.

ಆದಾಗ್ಯೂ ಅನುಭೋಗಿಯ ಆದಾಯದಲ್ಲಿ ಯಾವುದೇ ಬದಲಾವಣೆಯಾಗದಿದ್ದರೆ, ಸರಕು$_1$ ರ ಬೆಲೆ ಕಡಿಮಯಾದ ಕಾರಣದಿಂದ ಅನುಭೋಗಿಯ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ. ಸಾಮಾನ್ಯವಾಗಿ ಅನುಭೋಗಿಯುಕೊಳ್ಳುವ ಸಾಮರ್ಥ್ಯದಲ್ಲಿನ ಹೆಚ್ಚಳವು, ಅನುಭೋಗಿಯು ಒಂದು ಸರಕನ್ನು ಹೆಚ್ಚಾಗಿ ಅನುಭೋಗಿಸಲು ಪ್ರೇರಣೆ ನೀಡುತ್ತದೆ. ಒಂದು ಸರಕಿನ ಬೆಲೆಯಲ್ಲಿನ ಬದಲಾವಣೆಯ ಪರಿಣಾಮವಾಗಿ ಅನುಭೋಗಿಯಕೊಳ್ಳುವ ಸಾಮರ್ಥ್ಯದಲ್ಲಿ ಹೆಚ್ಚಳವಾದಾಗ ಅನುಭೋಗಿಯು ಕೊಳ್ಳಬಹುದಾದ ಒಂದು ಸರಕಿನ ಆದರ್ಶ ಪ್ರಮಾಣದಲ್ಲಿನ ಬದಲಾವಣೆಯನ್ನು **ಆದಾಯದ ಪರಿಣಾಮವೆಂದು** ಎಂದು ಕರೆಯಲಾಗುತ್ತದೆ. ಹೀಗೆ ಸರಕು1ರ ಬೆಲೆ ಇಳಿಕೆಯ ಎರಡು ಪರಿಣಾಮಗಳು ಒಟ್ಟಿಗೆ ಕಾರ್ಯವೆಸಗುತ್ತವೆ ಮತ್ತು ಅನುಭೋಗಿಯ ಸರಕು1ರ ಬೇಡಿಕೆಯಲ್ಲಿ ಹೆಚ್ಚಳ ಉಂಟಾಗುತ್ತದೆ.[10] ಹೀಗೆ ಇತರೆ ಸರಕುಗಳ ಬೆಲೆ, ಅನುಭೋಗಿಯ ಆದಾಯ, ಅಭಿರುಚಿ ಮತ್ತು ಒಲವು ಅನುಭೋಗಿಯು ಕೊಂಡುಕೊಳ್ಳಬಹುದಾದ ಸರಕಿನ ಆದರ್ಶ ಪ್ರಮಾಣ ಇವುಗಳೊಡನೆ ಒಂದು ಸರಕಿನ ಬೆಲೆ ಪರಸ್ಪರ ವಿರುದ್ಧ ಸಂಬಂಧವನ್ನು ಹೊಂದಿರುತ್ತವೆ. ಆದ್ದರಿಂದ ಆ ಸರಕಿಗೆ ಬೇಡಿಕೆ ರೇಖೆಯು ಸಾಮಾನ್ಯವಾಗಿ ರೇಖಾಚಿತ್ರ 2.11 ರಲ್ಲಿ ತೋರಿಸಿರುವಂತೆ ಎಡದಿಂದ ಬಲಕ್ಕೆ ಇಳಿಜಾರನ್ನು ಹೊಂದಿರುತ್ತದೆ. ಒಂದು ನಿರ್ದಿಷ್ಟ ಸಮಯದಲ್ಲಿ ಒಂದು ಸರಕಿನ ಬೆಲೆ ಮತ್ತು ಆ ಸರಕಿಗೆ ಇರುವ ಅನುಭೋಗಿಯ ಬೇಡಿಕೆಯ ನಡುವೆ ಪರಸ್ಪರ ವಿರುದ್ಧ ಸಂಬಂಧವಿರುವುದನ್ನೇ ಬೇಡಿಕೆಯ ನಿಯಮವೆಂದು ಕರೆಯಲಾಗುತ್ತದೆ.

**ಬೇಡಿಕೆಯ ನಿಯಮ** :

ಅನುಭೋಗಿಯ ಒಂದು ಸರಕಿನ ಬೇಡಿಕೆಯು ಆದಾಯದ ದಿಕ್ಕಿನಲ್ಲಿಯೇ ಚಲಿಸಿದರೆ, ಆ ಅನುಭೋಗಿಯ ಬೇಡಿಕೆಯು ಆ ಸರಕಿನ ಬೆಲೆಯೊಂದಿಗೆ ವಿರುದ್ಧ ಸಂಬಂಧವನ್ನು ಹೊಂದಿರುತ್ತದೆ.

[10] ಇದನ್ನು ಸಂಕ್ಷಿಪ್ತವಾಗಿ ನಾವಿಲ್ಲಿ ಚರ್ಚಿಸೋಣ. ಅನುಭೋಗಿಯ ಕೊಂಡುಕೊಳ್ಳುವ ಸಾಮರ್ಥ್ಯದಲ್ಲಿನ (ಆದಾಯ) ಹೆಚ್ಚಳವು ಕೆಲವು ಸಂದರ್ಭಗಳಲ್ಲಿ ಅನುಭೋಗಿಯ ಸರಕೊಂದರ ಅನುಭೋಗವನ್ನು ಕಡಿತಗೊಳಿಸಲು ಪ್ರೇರೆಪಿಸುತ್ತದೆ. ಬದಲಿಕೆಯ ಪರಿಣಾಮ ಮತ್ತು ಆದಾಯದ ಪರಿಣಾಮಗಳೆರಡೂ ವಿರುದ್ಧ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾದಾಗ ಈ ಸನ್ನಿವೇಶವುಂಟಾಗುತ್ತದೆ. ಇಂತಹ ಸರಕುಗಳಿಗಿರುವ ಬೇಡಿಕೆಯು ಇದರ ಬೆಲೆಯೊಂದಿಗೆ ಪರಸ್ಪರ ವಿರುದ್ಧ ಅಥವಾ ಧನಾತ್ಮಕ ಸಂಬಂದವನ್ನು ಹೊಂದಿರುತ್ತದೆ. ಇದು ಎರಡು ವಿರುದ್ಧ ಪರಿಣಾಮಗಳ ಸಾಪೇಕ್ಷ ಬಲಾಬಲಗಳನ್ನು ಅವಲಂಬಿಸಿರುತ್ತದೆ. ಆದಾಯ ಪರಿಣಾಮಕ್ಕಿಂತಲೂ ಬದಲಿಕೆಯ ಪರಿಣಾಮ ಹೆಚ್ಚಾಗಿದ್ದರೆ, ಸರಕೊಂದರ ಬೇಡಿಕೆಯು ಅದರ ಬೆಲೆಯೊಂದಿಗೆ ವಿರುದ್ಧ ಸಂಬಂದವನ್ನು ಹೊಂದಿರುತ್ತದೆ. ಒಂದು ವೇಳೆ ಬದಲಿಕೆ ಪರಿಣಾಮಕ್ಕಿಂತಲೂ ಆದಾಯದ ಪರಿಣಾಮ ಹೆಚ್ಚಾಗಿದ್ದರೆ ಸರಕೊಂದರ ಬೇಡಿಕೆಯು ಅದರ ಬೆಲೆಯೊಂದಿಗೆ ಧನಾತ್ಮಕ ಸಂಬಂಧವನ್ನು ಹೊಂದಿರುತ್ತದೆ. ಅಂತಹ ಸರಕುಗಳನ್ನು ಗಿಫಿನ್ ಸರಕುಗಳೆಂದು ಕರೆಯುತ್ತೇವೆ.

**ಸರಳಾ ರೇಖಾ ಬೇಡಿಕೆ**

ಒಂದು ಸರಳಾರೇಖಾ ಬೇಡಿಕೆಯ ರೇಖೆಯನ್ನು ಸಮೀಕರಣ ರೂಪದಲ್ಲಿ ಈ ಕೆಳಗಿನಂತೆ ಬರೆಯಬಹುದು.

$$d(p) = a - bp \ ; \ 0 \leq p \leq \frac{a}{b} = 0$$

$$= 0 \ ; \ p > \frac{a}{b} \qquad (2.13)$$

ಈ ಮೇಲಿನ ಸಮೀಕರಣದಲ್ಲಿ '$a$' ಲಂಬಾಂತರ ಛೇದಕವಾಗಿದೆ. '$-b$' ಬೇಡಿಕೆರೇಖೆಯ ಇಳಿಜಾರು ಆಗಿದೆ. ಶೂನ್ಯ ಬೆಲೆಯಲ್ಲಿ ಒಂದು ನಿರ್ದಿಷ್ಟ ಸರಕಿಗಿರುವ ಬೇಡಿಕೆಯು '$a$' ಆಗಿದೆ. ಬೆಲೆ $\frac{a}{b}$ ಗೆ ಸಮನಾದರೆ ಬೇಡಿಕೆ '$o$' ಆಗಿದೆ. ಬೇಡಿಕೆ ರೇಖೆಯ ಇಳಿಜಾರು ಒಂದು ಸರಕಿನ ಬೆಲೆಯ ಬದಲಾವಣೆಗೆ ಅನುಗುಣವಾಗಿ ಬೇಡಿಕೆಯಲ್ಲಿ ಯಾವ ದರದಲ್ಲಿ ಬದಲಾವಣೆಯಾಗುತ್ತದೆ ಎಂಬುದನ್ನು ಮಾಪನ ಮಾಡುತ್ತದೆ. ನಿರ್ದಿಷ್ಟ ಸರಕಿನ ಬೆಲೆ ಒಂದು ಘಟಕದಷ್ಟು ಹೆಚ್ಚಾದರೆ, ಅದರ ಬೇಡಿಕೆಯು '$b$' ಘಟಕದಷ್ಟು ಕಡಿಮೆಯಾಗುತ್ತದೆ. ರೇಖಾಚಿತ್ರ 2.13 ಸರಳಾರೇಖಾ ಬೇಡಿಕೆರೇಖೆಯನ್ನು ಚಿತ್ರಿಸುತ್ತದೆ.




**ರೇಖಾಚಿತ್ರ 2.13** ಸರಳಾರೇಖಾ ಬೇಡಿಕೆರೇಖೆ. ಸಮೀಕರಣ 2.13ನ್ನು ಪ್ರತಿನಿಧಿಸುವ ಸರಳಾರೇಖಾ ಬೇಡಿಕೆ ರೇಖೆಯನ್ನು ರೇಖಾಚಿತ್ರದಲ್ಲಿ ತೋರಿಸಲಾಗಿದೆ.

### 2.4.2 ಸಾಮಾನ್ಯ ಮತ್ತು ಕೆಳದರ್ಜೆಯ ಸರಕುಗಳು *Normal and Inferior Goods*

ಇತರೆ ಸ್ಥಿತಿಗತಿಗಳು ಸ್ಥಿರವಾಗಿದ್ದಾಗ (ನೀಡಿದ್ದಾಗ) ಒಂದು ಸರಕಿನ ಬೆಲೆ ಮತ್ತು ಆ ಸರಕಿಗಿರುವ ಅನುಭೋಗಿಯ ಬೇಡಿಕೆಯ ನಡುವಿನ ಸಂಬಂದವನ್ನು ವ್ಯಕ್ತಪಡಿಸುವುದೇ ಬೇಡಿಕೆ ಬಿಂಬಕ. ಒಂದು ಸರಕಿನ ಬೇಡಿಕೆ ಮತ್ತು ಅದರ ಬೆಲೆಯ ನಡುವಿನ ಸಂಬಂದವನ್ನು ಅಧ್ಯಯನ ಮಾಡುವುದರ ಬದಲಾಗಿ ಅನುಭೋಗಿಯ ಬೇಡಿಕೆ ಮತ್ತು ಅನುಭೋಗಿಯ ಆದಾಯದ ನಡುವಿನ ಸಂಬಂದವನ್ನು ಸಹ ನಾವು ಅಧ್ಯಯನ ಮಾಡಬಹುದು. ಅನುಭೋಗಿಯ ಆದಾಯ ಹೆಚ್ಚಾದಂತೆ ಒಂದು ಸರಕಿಗಿರುವ ಅನುಭೋಗಿಯ ಬೇಡಿಕೆಯ ಪ್ರಮಾಣ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಇದು ಕೊಳ್ಳುವ ಸರಕಿನ ಸ್ವರೂಪದ ಮೇಲೆ ಅವಲಂಬಿತವಾಗಿದೆ. ಬಹಳಷ್ಟು ಸರಕುಗಳಿಗೆ, ಅನುಭೋಗಿಯ ಆದಾಯ ಹೆಚ್ಚಾದಂತೆ, ಬೇಡಿಕೆಯ ಪ್ರಮಾಣವು ಹೆಚ್ಚಾಗುತ್ತದೆ. ಮತ್ತು ಅನುಭೋಗಿಯ ಆದಾಯ ಕಡಿಮೆಯಾದಂತೆ, ಬೇಡಿಕೆಯ ಪ್ರಮಾಣವು ಕಡಿಮೆಯಾಗುತ್ತದೆ. ಇಂತಹ ಸರಕುಗಳನ್ನು **ಸಾಮಾನ್ಯ ಸರಕುಗಳೆಂದು** ಕರೆಯಾಲಾಗುತ್ತದೆ. ಈ ರೀತಿ ಸಾಮಾನ್ಯ ಸರಕುಗಳಿಗಿರುವ ಬೇಡಿಕೆಯು ಅನುಭೋಗಿಯ ಆದಾಯದ ದಿಕ್ಕಿನಲ್ಲಿಯೇ ಚಲಿಸುತ್ತದೆ. ಆದಾಗ್ಯೂ ಕೆಲವು ಸರಕುಗಳ ಬೇಡಿಕೆಯು ಅನುಭೋಗಿಯ ಆದಾಯದ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತವೆ. ಇಂತಹ ಸರಕುಗಳನ್ನು **ಕೆಳದರ್ಜೆಯ ಸರಕುಗಳು** ಎಂದು ಕರೆಯಲಾಗುತ್ತದೆ. ಅನುಭೋಗಿಯ ಆದಾಯ ಹೆಚ್ಚಾದಂತೆ, ಕೆಳದರ್ಜೆ ಸರಕುಗಳಿಗಿರುವ ಬೇಡಿಕೆಯು ಕಡಿಮೆಯಾಗುತ್ತದೆ. ಮತ್ತು ಅನುಭೋಗಿಯ ಆದಾಯ ಕಡಿಮೆಯಾದಂತೆ ಕೆಳದರ್ಜೆ ಸರಕುಗಳಿಗಿರುವ ಬೇಡಿಕೆ ಹೆಚ್ಚಾಗುತ್ತದೆ ಉದಾಹರಣೆಗೆ ನವಣೆ, ಸಜ್ಜೆ, ಬಾರ್ಲಿ, ಆರ್ಕ, ರಾಗಿ ಇತ್ಯಾದಿ (ಒರಟು ಧಾನ್ಯಗಳು) ಸಿರಿಧಾನ್ಯಗಳು.

ಒಂದು ಸರಕು, ಕೆಲವು ಆದಾಯದ ಮಟ್ಟದಲ್ಲಿ ಒಬ್ಬ ಅನುಭೋಗಿಗೆ ಸಾಮಾನ್ಯ ಸರಕಾಗಿರಬಹುದು ಮತ್ತು ಅದೇ ಅನುಭೋಗಿಗೆ ಇತರ ಆದಾಯದ ಮಟ್ಟಗಳಲ್ಲಿ ಆ ಸರಕು ಕೆಳದರ್ಜೆಯ ಸರಕುಗಳಾಗಬಹುದು. ಅತಿ ಕೆಳಮಟ್ಟದ ಆದಾಯ ಮಟ್ಟದಲ್ಲಿ ಅನುಭೋಗಿಯ ಆದಾಯ ಹೆಚ್ಚಾದಂತೆ ಕಡಿಮೆಗುಣಮಟ್ಟದ ಧಾನ್ಯಗಳಿಗೆ ಬೇಡಿಕೆ ಹೆಚ್ಚಾಗಬಹುದು. ಆದರೆ ಆದಾಯದ ಒಂದು ನಿರ್ದಿಷ್ಟ ಹಂತವನ್ನು ತಲುಪಿದ ನಂತರ ಆದಾಯ ಹೆಚ್ಚಾದಂತೆ ಅನುಭೋಗಿಯು ಕೆಳದರ್ಜೆ ಆಹಾರ ಸರಕುಗಳ ಅನುಭೋಗವನ್ನು ಕಡಿಮೆ ಮಾಡುತ್ತಾಳೆ.

### 2.4.3 ಬದಲಿ ಸರಕುಗಳು ಮತ್ತು ಪೂರಕ ಸರಕುಗಳು *Substitutes and Complements*

ನಾವೀಗ ಅನುಭೋಗಿಯು ಆಯ್ಕೆ ಮಾಡಿಕೊಳ್ಳುವ ಸರಕೊಂದರ ಬೇಡಿಕೆಯ ಪ್ರಮಾಣ ಮತ್ತು ಅದರ ಸಂಬಂಧಿತ ಸರಕಿನ ಬೆಲೆಯ ನಡುವಿನ ಸಂಬಂದವನ್ನು ಪರಿಶೀಲಿಸೋಣ. ಸಂಬಂಧಿತ ಸರಕೊಂದರ ಬೆಲೆಯಲ್ಲಿ ಹೆಚ್ಚಳವಾದಂತೆ ಅನುಭೋಗಿಯು ಕೊಳ್ಳುವ ಸರಕಿನ ಪ್ರಮಾಣ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಇದು ಆ ಎರಡು ಸರಕುಗಳು ಪರಸ್ಪರ ಬದಲೀ ಸರಕುಗಳೇ ಅಥವಾ ಪೂರಕ ಸರಕುಗಳೇ ಎಂಬುವುದರ ಮೇಲೆ ಅವಲಂಬಿತವಾಗಿರುತ್ತದೆ. ಒಂದು ನಿರ್ದಿಷ್ಟ ಬಯಕೆಯನ್ನು ತೃಪ್ತಿಪಡಿಸಿಕೊಳ್ಳಲು ಒಟ್ಟಿಗೆ ಅನುಭೋಗಿಸಲಾಗುವ ಸರಕುಗಳನ್ನು ಪರಸ್ಪರ **ಪೂರಕ ಸರಕುಗಳು** ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಚಹಾ ಮತ್ತು ಸಕ್ಕರೆ, ಪೆನ್ನು ಮತ್ತು ಶಾಹಿ(ಇಂಕು), ಶೂಗಳು ಮತ್ತು ಸಾಕ್ಸ್‌ಗಳು ಇತ್ಯಾದಿ. ಚಹಾ ಮತ್ತು ಸಕ್ಕರೆಯನ್ನು ಒಟ್ಟಿಗೆ ಬಳಸುವುದರಿಂದ, ಸಕ್ಕರೆಯ ಬೆಲೆ ಹೆಚ್ಚಾದರೆ, ಚಹಾಕ್ಕೆ ಬೇಡಿಕೆ ಕಡಿಮೆಯಾಗುತ್ತದೆ. ಹಾಗೆಯೇ ಸಕ್ಕರೆಯ ಬೆಲೆ ಕಡಿಮೆಯಾದರೆ, ಚಹಾದ ಬೇಡಿಕೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಇತರೆ ಪೂರಕ ಸರಕುಗಳ ಸನ್ನಿವೇಶದಲ್ಲಿಯೂ ಹೀಗೆಯೇ ಇರುತ್ತದೆ. ಸಾಮಾನ್ಯವಾಗಿ ಒಂದು ಸರಕಿನ ಬೇಡಿಕೆಯು ಅದರ ಪೂರಕ ಸರಕಿನ ಬೆಲೆಯೊಂದಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ.

ಪೂರಕ ಸರಕುಗಳಿಗೆ ಭಿನ್ನವಾಗಿ ಚಹಾ, ಕಾಫಿ, ಇಂತಹ ಸರಕುಗಳನ್ನು ಒಟ್ಟಾಗಿ ಅನುಭೋಗಿಸುವುದಿಲ್ಲ. ವಾಸ್ತವವಾಗಿ ಅವುಗಳು ಪರಸ್ಪರ ಬದಲಿ ಸರಕುಗಳಾಗಿವೆ. ಕಾಫಿಗೆ, ಚಹಾವು ಬದಲೀ ಸರಕಾಗಿರುವುದರಿಂದ ಕಾಫಿಯ ಬೆಲೆ ಹೆಚ್ಚಾದರೆ ಅನುಭೋಗಿಗಳು ಚಹಾಕ್ಕೆ ತಮ್ಮ ಬೇಡಿಕೆಯನ್ನು ಬದಲಾಯಿಸಿಕೊಳ್ಳಬಹುದು ಹಾಗಾಗಿ ಚಹಾದ ಅನುಭೋಗ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಮತ್ತೊಂದು ರೀತಿಯಲ್ಲಿ ಕಾಫಿಯ ಬೆಲೆಯಲ್ಲಿ ಇಳಿಕೆಯಾದರೆ ಚಹಾದ ಬೇಡಿಕೆ ಕಡಿಮೆಯಾಗುತ್ತದೆ. ಸಾಮಾನ್ಯವಾಗಿ ಒಂದು ಸರಕಿನ ಬೇಡಿಕೆಯು ಅದರ ಬದಲಿ ಸರಕುಗಳ ಬೆಲೆಯ ದಿಕ್ಕಿನಲ್ಲಿ ಚಲಿಸುತ್ತದೆ.

### 2.4.4 ಬೇಡಿಕೆ ರೇಖೆಯಲ್ಲಿನ ಪಲ್ಲಟಗಳು *Shifts in the demand curve*

ಅನುಭೋಗಿಯ ಆದಾಯ ಅಭಿರುಚಿ ಮತ್ತು ಒಲವು, ಹಾಗೂ ಇತರೆ ಸರಕುಗಳ ಬೆಲೆಗಳನ್ನು ನೀಡಲಾಗಿದೆ ಎಂಬ ಕಲ್ಪನೆಯ ಆಧಾರದ ಮೇಲೆ ಬೇಡಿಕೆ ರೇಖೆಯನ್ನು ರಚಿಸಲಾಗಿದೆ. ಒಂದು ವೇಳೆ ಈ ಸಂಗತಿಗಳಲ್ಲಿ ಬದಲಾವಣೆಯಾದರೆ ಬೇಡಿಕೆ ರೇಖೆಗೆ ಏನಾಗುತ್ತದೆ ?

ಒಬ್ಬ ಅನುಭೋಗಿಯ ಆದ್ಯತೆಗಳು ಮತ್ತು ಇತರೆ ಸರಕುಗಳ ಬೆಲೆಗಳನ್ನು ನೀಡಿದ್ದಾಗ, ಆಕೆಯ ಆದಾಯದಲ್ಲಿ ಹೆಚ್ಚಳ ಉಂಟಾದರೆ, ಸರಕಿನ ಬೇಡಿಕೆಯು ಪ್ರತಿ ಬೆಲೆಗಳಲ್ಲಿ ಬದಲಾವಣೆಗೊಳ್ಳುತ್ತದೆ ಮತ್ತು ಇದರಿಂದ ಬೇಡಿಕೆ ರೇಖೆಯಲ್ಲಿ ಪಲ್ಲಟ ಉಂಟಾಗುತ್ತದೆ. ಸಾಮಾನ್ಯ ಸರಕುಗಳಿಗೆ ಬೇಡಿಕೆರೇಖೆಯು ಬಲಭಾಗಕ್ಕೆ ಪಲ್ಲಟಗೊಳ್ಳುತ್ತದೆ ಹಾಗೂ ಕೆಳದರ್ಜೆಯ ಸರಕುಗಳಿಗೆ ಬೇಡಿಕೆ ರೇಖೆಯು ಎಡಭಾಗಕ್ಕೆ ಪಲ್ಲಟಗೊಳ್ಳುತ್ತದೆ.

ಅನುಭೋಗಿಯ ಆದಾಯ ಮತ್ತು ಆದ್ಯತೆಗಳನ್ನು ನೀಡಿದ್ದಾಗ ಸಂಬಂಧಿತ ಸರಕಿನ ಬೆಲೆಯಲ್ಲಿ ಬದಲಾವಣೆ ಉಂಟಾದರೆ, ಆ ಸರಕಿನ ಬೇಡಿಕೆಯು ಪ್ರತಿ ಬೆಲೆಗಳ ಮಟ್ಟದಲ್ಲಿ ಬದಲಾವಣೆಗೊಳ್ಳುತ್ತದೆ ಮತ್ತು ಇದರಿಂದ ಬೇಡಿಕೆ ರೇಖೆಯು ಪಲ್ಲಟಗೊಳ್ಳುತ್ತದೆ. ಬದಲಿ ಸರಕಿನ ಬೆಲೆಯಲ್ಲಿ ಏರಿಕೆ ಉಂಟಾದರೆ ಬೇಡಿಕೆ ರೇಖೆಯು ಬಲಗಡೆ ಪಲ್ಲಟಗೊಳ್ಳುತ್ತದೆ ಮತ್ತೊಂದು ರೀತಿಯಲ್ಲಿ, ಪೂರಕ ಸರಕಿನ ಬೆಲೆಯಲ್ಲಿ ಏರಿಕೆ ಉಂಟಾದರೆ ಬೇಡಿಕೆ ರೇಖೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ.

ಅನುಭೋಗಿಯ ಅಭಿರುಚಿ ಮತ್ತು ಆದ್ಯತೆಗಳಲ್ಲಿ ಬದಲಾವಣೆ ಉಂಟಾದರೂ ಕೂಡ ಬೇಡಿಕೆ ರೇಖೆಯು ಪಲ್ಲಟಗೊಳ್ಳುತ್ತದೆ. ಒಂದು ಸರಕಿನ ಪರವಾಗಿ ಅನುಭೋಗಿಯ ಆದತ್ಯೆಗಳು ಬದಲಾವಣೆಯಾದರೆ, ಅಂತಹ ಸರಕಿನ ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುತ್ತದೆ. ಇದಕ್ಕೆ ಪ್ರತಿಯಾಗಿ, ಒಂದು ಸರಕಿನ ವಿರುದ್ಧವಾಗಿ ಅನುಭೋಗಿಯ ಅಭಿರುಚಿ ಮತ್ತು ಆದ್ಯತೆಗಳು ಬದಲಾವಣೆಯಾದರೆ ಬೇಡಿಕೆರೇಖೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ. ಉದಾಹರಣೆ ಬೇಸಿಗೆ ಕಾಲದಲ್ಲಿ ಅನುಭೋಗಿಯು ಐಸ್‌ಕ್ರೀಂ ಕೊಳ್ಳಲು ಹೆಚ್ಚು

ಆದ್ಯತೆ ವ್ಯಕ್ತಪಡಿಸುತ್ತಾಳೆ. ಆಗ ಬೇಡಿಕೆ ರೇಖೆಯು ಬಲಭಾಗಕ್ಕೆ ಪಲ್ಲಟಗೊಳ್ಳುತ್ತದೆ. ತಂಪುಪಾನೀಯಗಳು ಆರೋಗ್ಯಕ್ಕೆ ಹಾನಿಕಾರಕವೆಂಬ ಸಂಗತಿಯಿಂದಾಗಿ ಅನುಭೋಗಿಯು ತಂಪುಪಾನೀಯಗಳಿಗೆ ಆದ್ಯತೆ ನೀಡದಿದ್ದರೆ, ಬೇಡಿಕೆಯ ರೇಖೆಯು ಎಡಭಾಗಕ್ಕೆ ಪಲ್ಲಟಗೊಳ್ಳುತ್ತದೆ.




**ರೇಖಾಚಿತ್ರ 2.14** ಬೇಡಿಕೆಯಲ್ಲಿನ ಪಲ್ಲಟ. (*a*) ಭಾಗದಲ್ಲಿರುವ ಬೇಡಿಕೆ ರೇಖೆಯು ಎಡಭಾಗದತ್ತ ಪಲ್ಲಟಗೊಂಡಿದೆ. ಮತ್ತು (*b*) ಭಾಗದಲ್ಲಿರುವ ಬೇಡಿಕೆರೇಖೆಯು ಬಲಕ್ಕೆ ಪಲ್ಲಟಗೊಂಡಿದೆ.

ರೇಖಾಚಿತ್ರ 2.14ರಲ್ಲಿ ಈ ಮೇಲೆ ವಿವರಿಸಿದ ಬಜೆಟ್‌ರೇಖೆಯ ಪಲ್ಲಟವನ್ನು ತೋರಿಸಲಾಗಿದೆ.

### 2.4.5 ಬೇಡಿಕೆ ರೇಖೆಯೊಂದಿಗೆ ಚಲನೆಗಳು ಮತ್ತು ಬೇಡಿಕೆ ರೇಖೆಯ ಪಲ್ಲಟಗಳು.

***Movements along the Demand Curve and Shifts in the Demand Curve***

ಅನುಭೋಗಿಯು ಆಯ್ಕೆ ಮಾಡಬಹುದಾದ ಸರಕೊಂದರ ಪ್ರಮಾಣವು, ಆ ಸರಕಿನ ಬೆಲೆ ಇತರೆ ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ, ಅಭಿರುಚಿ ಮತ್ತು ಆದ್ಯತೆ ಅವಲಂಬಿಸಿರುತ್ತದೆಂಬುದನ್ನು ಈ ಹಿಂದಿನ ಚರ್ಚೆಯಿಂದ ತಿಳಿದುಕೊಂಡಿದ್ದೇವೆ. ಬೇಡಿಕೆ ಬಿಂಬಕವು ಇತರೆ ಸ್ಥಿತಿಗತಿಗಳು ಸ್ಥಿರವಾಗಿದ್ದಾಗ, ಸರಕೊಂದರ ಪ್ರಮಾಣ ಮತ್ತು ಅದರ ಬೆಲೆಯ ನಡುವಿನ ಸಂಬಂದವನ್ನು ವ್ಯಕ್ತಪಡಿಸುತ್ತದೆ. ಬೇಡಿಕೆಯ ಬಿಂಬಕದ ರೇಖಾತ್ಮಕ ನಿರೂಪಣೆಯೇ ಬೇಡಿಕೆಯ ರೇಖೆ. ಅಧಿಕ ಬೆಲೆಯಲ್ಲಿ ಬೇಡಿಕೆಯ ಪ್ರಮಾಣ ಕಡಿಮೆಯಿರುತ್ತದೆ; ಕಡಿಮೆ ಬೆಲೆಯಲ್ಲಿ ಬೇಡಿಕೆಯ ಪ್ರಮಾಣ ಹೆಚ್ಚಾಗಿರುತ್ತದೆ. ಹೀಗಾಗಿ ಬೆಲೆಯಲ್ಲಿನ ಯಾವುದೇ ಬದಲಾವಣೆಯು ಬೇಡಿಕೆ ರೇಖೆಯ ಮೇಲಿನ ಚಲನೆಗೆ ಕಾರಣವಾಗುತ್ತದೆ. ಮತ್ತೊಂದು ಕಡೆ ಇತರೆ ಸ್ಥಿತಿಗಳಲ್ಲಿನ ಬದಲಾವಣೆಯು ಬೇಡಿಕೆ ರೇಖೆಯಲ್ಲಿನ ಪಲ್ಲಟಕ್ಕೆ ಕಾರಣವಾಗುತ್ತದೆ. ರೇಖಾಚಿತ್ರ 2.15(*a*) ಬೇಡಿಕೆ ರೇಖೆಯ ಚಲನೆಯನ್ನು ವ್ಯಕ್ತಪಡಿಸಿದರೆ, ರೇಖಾಚಿತ್ರ 2.15(*b*) ಬೇಡಿಕೆ ರೇಖೆಯಲ್ಲಿನ ಪಲ್ಲಟವನ್ನು ವ್ಯಕ್ತಪಡಿಸುತ್ತದೆ.




**ರೇಖಾಚಿತ್ರ 2.15 ಬೇಡಿಕೆ ರೇಖೆಯೊಂದಿಗಿನ ಚಲನೆ ಮತ್ತು ಬೇಡಿಕೆರೇಖೆಯ ಪಲ್ಲಟ** : ಫಲಕ (*a*)ಯು ಬೇಡಿಕೆ ರೆಖೆಯೊಂದಿಗಿನ ಚಲನೆಯನ್ನು ವ್ಯಕ್ತಪಡಿಸುತ್ತದೆ. ಫಲಕ (*b*)ಯು ಬೇಡಿಕೆ ರೇಖೆಯ ಪಲ್ಲಟವನ್ನು ವ್ಯಕ್ತಪಡಿಸುತ್ತದೆ.

## 2.5 ಮಾರುಕಟ್ಟೆ ಬೇಡಿಕೆ *Market Demand*

ಈ ಹಿಂದಿನ ವಿಭಾಗದಲ್ಲಿ ನಾವು ವೈಯಕ್ತಿಕ ಅನುಭೋಗಿಯ ಆಯ್ಕೆಯ ಸಮಸ್ಯೆಯನ್ನು ಅಧ್ಯಯ ಮಾಡಿದ್ದೇವೆ ಮತ್ತು ಅನುಭೋಗಿಯ. ಬೇಡಿಕೆ ರೇಖೆಯನ್ನು ಪಡೆದಿದ್ದೇವೆ. ಆದರೆ ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಹಲವಾರು ಅನುಭೋಗಿಗಳಿರುತ್ತಾರೆ. ಆ ಸರಕಿಗೆ ಮಾರುಕಟ್ಟೆ ಬೇಡಿಕೆಯನ್ನು ಕಂಡುಹಿಡಿಯುವುದು ಬಹಳ ಪ್ರಮುಖವಾಗಿದೆ. ಒಂದು ನಿರ್ದಿಷ್ಟ ಬೆಲೆಯಲ್ಲಿ ಒಂದು ಸರಕಿಗಿರುವ ಎಲ್ಲಾ ಅನುಭೋಗಿಗಳ ವೈಯಕ್ತಿಕ ಬೇಡಿಕೆಯನ್ನು ಒಟ್ಟುಗೂಡಿಸಿದರೆ, ಅದು ಆ ಸರಕಿನ ಮಾರುಕಟ್ಟೆ ಬೇಡಿಕೆಯಾಗುತ್ತದೆ. ವೈಯಕ್ತಿ ಬೇಡಿಕೆರೇಖೆಗಳಿಂದ ಒಂದು ಸರಕಿನ ಮಾರುಕಟ್ಟೆ ಬೇಡಿಕೆ ರೇಖೆಯನ್ನು ಪಡೆಯಬಹುದು. ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಕೇವಲ ಇಬ್ಬರು ಅನುಭೋಗಿಗಳು ಇದ್ದಾರೆಂದು ಎಂದುಕೊಳ್ಳೋಣ. $p'$ ಬೆಲೆಯಲ್ಲಿ ಮೊದಲನೆ ಅನುಭೋಗಿಯ ಬೇಡಿಕೆಯು $q'_1$ ಮತ್ತು 2ನೇ ಅನುಭೋಗಿಯ ಬೇಡಿಕೆಯು $q'_2$ ಆಗಿರಲಿ. ಆಗ $p'$ ಬೆಲೆಯಲ್ಲಿ ಆ ಸರಕಿನ ಮಾರುಕಟ್ಟೆ ಬೇಡಿಕೆ $q'_1 + q'_2$ ಆಗುತ್ತದೆ. ಇದೇ ರೀತಿ $\hat{p}$ ಬೆಲೆಯಲ್ಲಿ ಮೊದಲನೆ ಅನುಭೋಗಿಯ ಬೇಡಿಕೆ $\hat{q}_1$ ಮತ್ತು 2ನೇ ಅನುಭೋಗಿಯ ಬೇಡಿಕೆ $\hat{q}_2$ ಆದರೆ $\hat{p}$ ಬೆಲೆಯಲ್ಲಿ ಸರಕೊಂದಕ್ಕೆ ಇರುವ ಮಾರುಕಟ್ಟೆ ಬೇಡಿಕೆಯು $\hat{q}_1 + \hat{q}_2$ ಆಗಿರುತ್ತದೆ. ಈ ರೀತಿ ಸರಕಿನ ಪ್ರತಿ ಬೆಲೆಯಲ್ಲಿರುವ ಅನುಭೋಗಿಗಳಿಬ್ಬರ ಬೇಡಿಕೆಗಳನ್ನು ಸಂಕಲನ ಮಾಡುವ ಮೂಲಕ ಸರಕಿಗೆ ಪ್ರತಿ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯನ್ನು ಪಡೆಯಬಹುದು. ಮಾರುಕಟ್ಟೆಯಲ್ಲಿ ಇಬ್ಬರಿಗಿಂತ ಹೆಚ್ಚು ಅನುಭೋಗಿಗಳಿದ್ದರೆ, ಮಾರುಕಟ್ಟೆ ಬೇಡಿಕೆಯನ್ನು ಇದೇ ರೀತಿಯಲ್ಲಿ ಪಡೆಯಬಹುದು.



ರೇಖಾಚಿತ್ರ 2.16 ರಲ್ಲಿ ತೋರಿಸಿರುವಂತೆ ವೈಯಕ್ತಿಕ ಬೇಡಿಕೆ ರೇಖೆಗಳನ್ನು ಸಮಾನಾಂತರವಾಗಿ ಕೂಡಿಸುವುದರ ಮೂಲಕ ಒಂದು ಸರಕಿನ ಮಾರುಕಟ್ಟೆ ಬೇಡಿಕೆಯ ರೇಖೆಯನ್ನು ರೇಖಾತ್ಮಕವಾಗಿಯೂ ಪಡೆಯಬಹುದು. ಎರಡು ವೈಯಕ್ತಿಕ ಬೇಡಿಕೆ ರೇಖೆಗಳನ್ನು ಒಗ್ಗೂಡಿಸುವ ಈ ವಿಧಾನಕ್ಕೆ **ಸಮಾನಾಂತರ (ಅಡ್ಡಸಾಲು) ಸಂಕಲನ** (*Horizontal Summation*) ಎನ್ನುತ್ತಾರೆ.




**ರೇಖಾಚಿತ್ರ 2.16 ಮಾರುಕಟ್ಟೆ ಬೇಡಿಕೆರೇಖೆ:** ವೈಯಕ್ತಿಕ ಬೇಡಿಕೆ ರೇಖೆಗಳ ಸಮಾನಾಂತರ ಸಂಕಲನ ಮೊತ್ತದಿಂದ ಮಾರುಕಟ್ಟೆ ಬೇಡಿಕೆರೇಖೆಯನ್ನು ಪಡೆಯಬಹುದು.

**ಎರಡು ಸರಳರೇಖೆ ಬೇಡಿಕೆರೇಖೆಗಳನ್ನು ಸಂಕಲಿಸುವುದು.**

ಉದಾಹರಣೆಗೆ ಮಾರುಕಟ್ಟೆಯನ್ನು ಇಬ್ಬರು ಅನುಭೋಗಿಗಳು ಇರುವ ಆ ಇಬ್ಬರು ಅನುಭೋಗಿಗಳ ಬೇಡಿಕೆಯ ರೇಖೆಯ ಸಮೀಕರಣಗಳು ಈ ಕೆಳಗಿನಂತಿವೆ.

$$d_1(p) = 10 - p \qquad (2.14)$$

ಮತ್ತು

$$d_2(p) = 15 - p \qquad (2.15)$$

ಅದೂ ಅಲ್ಲದೆ 10 ಕ್ಕಿಂತ ಅಧಿಕವಾಗಿರುವ ಯಾವುದೇ ಬೆಲೆಯಲ್ಲಿ 1ನೇ ಅನುಭೋಗಿಯ ಬೇಡಿಕೆ ಶೂನ್ಯವಾಗಿರುತ್ತದೆ. ಅದೇ ರೀತಿ 15ಕ್ಕಿಂತ ಅಧಿಕವಾಗಿರುವ ಯಾವುದೇ ಬೆಲೆಯಲ್ಲಿ 2ನೇ ಅನುಭೋಗಿಯ ಬೇಡಿಕೆಯು ಶೂನ್ಯ ಘಟಕದಷ್ಟು ಸರಕುಗಳಾಗಿರುತ್ತವೆ. ಸಮೀಕರಣ (2.14) ಮತ್ತು ಸಮೀಕರಣ (2.15)

ರನ್ನು ಕೂಡಿಸುವುದರಿಂದ ಮಾರುಕಟ್ಟೆಯ ಬೇಡಿಕೆಯನ್ನು ಪಡೆಯಬಹುದು. 10 ಕ್ಕಿಂತ ಕಡಿಮೆ ಅಥವಾ ಸಮಾನವಾಗಿರುವ ಯಾವುದೇ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯನ್ನು 25–2$p$ ಎಂದು ನೀಡಲಾಗಿದೆ. 10ಕ್ಕಿಂತ ಅಧಿಕವಾಗಿರುವ ಯಾವುದೇ ಬೆಲೆಯಲ್ಲಿ ಮತ್ತು 15ಕ್ಕಿಂತ ಕಡಿಮೆ ಅಥವಾ ಸಮಾನವಾಗಿರುವ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯು 15–$p$ ಆಗಿದೆ. 15 ಕ್ಕಿಂತ ಅಧಿಕವಾಗಿರುವ ಯಾವುದೇ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯು 'O' ಶೂನ್ಯವಾಗಿದೆ.

## 2.6. ಬೇಡಿಕೆ ಸ್ಥಿತಿಸ್ಥಾಪಕತ್ವ *Elasticity of Demand*

ಸರಕೊಂದರ ಬೇಡಿಕೆಯು ಅದರ ಬೆಲೆಯೊಂದಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ. ಆದರೆ ಬೆಲೆಯಲ್ಲಿನ ಬದಲಾವಣೆಯ ಪರಿಣಾಮ ಯಾವಾಗಲೂ ಒಂದೇ ಆಗಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಬೆಲೆಯಲ್ಲಿನ ಸಣ್ಣ ಬದಲಾವಣೆ ಒಂದು ಸರಕಿನ ಬೇಡಿಕೆಯಲ್ಲಿ ಗಮನಾರ್ಹವಾದ ಬದಲಾವಣೆಗೆ ಕಾರಣವಾಗುತ್ತದೆ. ಮತ್ತೊಂದು ಕಡೆ, ಕೆಲವು ಸರಕುಗಳ ಬೇಡಿಕೆ ಪ್ರಮಾಣ ಬೆಲೆಯ ಬದಲಾವಣೆಯಿಂದ ಹೆಚ್ಚು ಪ್ರಭಾವಕ್ಕೆ ಒಳಗಾಗುವುದಿಲ್ಲ. ಕೆಲವು ಸರಕುಗಳ ಬೇಡಿಕೆಯು ಬೆಲೆಯ ಬದಲಾವಣೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದರೆ, ಇನ್ನೂ ಕೆಲವು ಸರಕುಗಳ ಬೇಡಿಕೆಯು ಬೆಲೆಯ ಬದಲಾವಣೆಗೆ ಅಷ್ಟೊಂದು ಪ್ರತಿಕ್ರಿಯೆ ನೀಡುವುದಿಲ್ಲ. ಒಂದು ಸರಕಿನ ಬೇಡಿಕೆಯು ಅದರ ಬೆಲೆಯಲ್ಲಿನ ಬದಲಾವಣೆಗನುಗುಣವಾಗಿ ಪ್ರತಿಕ್ರಿಯಿಸುವುದನ್ನು ಮಾಪನ ಮಾಡುವ ಪರಿಕಲ್ಪನೆಯೇ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವ.

**ಸರಕೊಂದರ ಬೇಡಿಕೆಯ** ಪ್ರಮಾಣದಲ್ಲಿನ ಶೇಕಡವಾರು ಬದಲಾವಣೆಯನ್ನು ಅದೇ ಸರಕಿನ ಬೆಲೆಯ ಪ್ರಮಾಣದಲ್ಲಿನ ಶೇಕಡವಾರು ಬದಲಾವಣೆಯಿಂದ ಭಾಗಿಸುವುದನ್ನು ಬೆಲೆಯ ಬೇಡಿಕೆ ಸ್ಥಿತಿಸ್ಥಾಪಕತ್ವ ಎಂದು ವ್ಯಾಖ್ಯಾನಿಸಲಾಗಿದೆ. ಒಂದು ಸರಕಿನ ಬೆಲೆಯ ಬೇಡಿಕೆ ಸ್ಥಿತಿಸ್ಥಾಪಕತ್ವ ಈ ಕೆಳಗಿನಂತಿರುತ್ತದೆ.

$$\text{ಬೆಲೆಬೇಡಿಕೆ ಸ್ಥಿತಿಸ್ಥಾಪಕತ್ವ} = \frac{\text{ಸರಕಿನ ಬೇಡಿಕೆಯಲ್ಲಿನ ಶೇಕಡವಾರು ಬದಲಾವಣೆ}}{\text{ಸರಕಿನ ಬೆಲೆಯಲ್ಲಿನ ಶೇಕಡವರು ಬದಲಾವಣೆ}}$$

ಒಂದು ಸರಕಿನ ಬೇಡಿಕೆಯ ರೇಖೆಯನ್ನು ಪರಿಗಣಿಸೋಣ. $p^0$ ಬೆಲೆಯಲ್ಲಿ, ಒಂದು ಸರಕಿನ ಬೇಡಿಕೆ $q^0$ ಆಗಿದೆ. $p_1$ ಬೆಲೆಯಲ್ಲಿ, $q_1$ ಪ್ರಮಾಣದ ಬೇಡಿಕೆಯಿರುತ್ತದೆಂದು ಕೊಳ್ಳೋಣ. ಆ ಸರಕಿನ ಬೆಲೆ $p^0$ ಯಿಂದ $p^1$ ಗೆ ಬದಲಾದರೆ, ಆ ಸರಕಿನ ಬೆಲೆಯಲ್ಲಿನ ಬದಲಾವಣೆಯು $\Delta p = p^1 - p^0$ ಆಗುತ್ತದೆ. ಮತ್ತು ಸರಕಿನ ಬೇಡಿಕೆ ಪ್ರಮಾಣದಲ್ಲಿನ ಬದಲಾವಣೆಯು $\Delta q = q^1 - q^0$ ಆಗುತ್ತದೆ.

ಆಗ ಬೆಲೆಯಲ್ಲಿನ ಶೇಕಡವಾರು ಬದಲಾವಣೆಯು

$$\frac{\Delta p}{p^0} \times 100 = \frac{p^1 - p^0}{p^0} \times 100$$

ಮತ್ತು ಬೇಡಿಕೆಯ ಪ್ರಮಾಣದಲ್ಲಿನ ಶೇಕಡವಾರು ಬದಲಾವಣೆಯು

$$\frac{\Delta q}{q^0} \times 100 = \frac{q^1 - q^0}{q^0} \times 100$$

ಆದ್ದರಿಂದ,

$$e_D = \frac{\left(\Delta q / q^0\right) \times 100}{\left(\Delta p / P^0\right) \times 100} = \frac{\Delta q / q^0}{\Delta P / P^0} = \frac{\left(q^1 - q^0\right) / q^0}{\left(P^1 - P^0\right) / P^0} \qquad (2.16)$$

ಇಲ್ಲಿ ಗಮನಿಸಬೇಕಾದ ಪ್ರಮುಖ ಸಂಗತಿಯೆಂದರೆ ಬೇಡಿಕೆಯ ಸ್ಥಿತಿಸ್ಥಾಪಕತ್ವವು ಒಂದು ಸಂಖ್ಯೆಯಾಗಿದೆ ಮತ್ತು ಇದು ಸರಕಿನ ಬೆಲೆ ಹಾಗೂ ಮಾಪನ ಮಾಡಿದ ಸರಕಿನ ಘಟಕಗಳನ್ನು ಅವಲಂಬಿಸಿಲ್ಲ.

ಒಂದು ಸರಕಿನ ಬೇಡಿಕೆಯು ಆ ಸರಕಿನ ಬೆಲೆಯೊಂದಿಗೆ ಋಣಾತ್ಮಕ ಸಂಬಂಧವನ್ನು ಹೊಂದಿರುವುದರಿಂದ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವು ಒಂದು ಋಣಾತ್ಮಕ ಸಂಖ್ಯೆಯಾಗಿದೆ. ಎಂಬುದನ್ನು ಗಮನಿಸಿ. ಆದಾಗ್ಯೂ ಇದನ್ನು ಸರಳೀಕರಣಗೊಳಿಸಲು ನಾವು ಯಾವಾಗಲೂ ಸ್ಥಿತಿಸ್ಥಾಪಕತ್ವದ ನಿರಪೇಕ್ಷ ಮೌಲ್ಯವನ್ನು ಪರಿಗಣಿಸುತ್ತೇವೆ.

ಬೆಲೆಯ ಬದಲಾವಣೆಗೆ ಒಂದು ಸರಕಿನ ಬೇಡಿಕೆಯ ಬದಲಾವಣೆ ಪ್ರತಿಕ್ರಿಯೆ ಹೆಚ್ಚಾಗಿದ್ದರೆ, ಆ ಸರಕಿನ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವ ಹೆಚ್ಚಾಗಿರುತ್ತದೆ. ಯಾವುದೇ ಒಂದು ಬೆಲೆಯಲ್ಲಿ ಒಂದು ಸರಕಿನ ಬೇಡಿಕೆಯ ಶೇಕಡವಾರು ಬದಲಾವಣೆಯು, ಅದರ ಬೆಲೆಯಲ್ಲಾದ ಶೇಕಡವಾರು ಬದಲಾವಣೆಗಿಂತ ಕಡಿಮೆಯಿದ್ದರೆ $|e_D| < 1$ ಆಗುತ್ತದೆ, ಆಗ ಅದನ್ನು ಬೆಲೆ ಬೇಡಿಕೆಯ ಅಸ್ಥಿತಿಸ್ಥಾಪಕತ್ವವೆಂದು ಕರೆಯುತ್ತಾರೆ. ಆಗ ಯಾವುದೇ ಬೆಲೆಯಲ್ಲಿ ಬೇಡಿಕೆಯ ಪ್ರಮಾಣದಲ್ಲಾದ ಶೇಕಡವಾರು ಬದಲಾವಣೆಯು, ಅದರ ಬೆಲೆಯಲ್ಲಾದ ಶೇಕಡವಾರು ಬದಲಾವಣೆಗೆ ಸಮನಾಗಿದ್ದರೆ ಅದನ್ನು $|e_D|=1$, ಎನ್ನುತ್ತೇವೆ ಮತ್ತು ಆಗ ಅದನ್ನು ಬೆಲೆ ಬೇಡಿಕೆಯ ಸರಿಸಮಾನ **ಸ್ಥಿತಿಸ್ಥಾಪಕತ್ವವೆಂದು** ಕರೆಯುತ್ತೇವೆ. ಒಂದು ಸರಕಿನ ಬೇಡಿಕೆಯ ಪ್ರಮಾಣದಲ್ಲಿನ ಶೇಕಡವಾರು ಬದಲಾವಣೆಯು ಅದರ ಬೆಲೆಯ ಶೇಕಡವಾರು ಬದಲಾವಣೆಗಿಂತ ಹೆಚ್ಚಿನ ಪ್ರಮಾಣದಲ್ಲಾದರೆ, ಆಗ $|e_D| > 1$ ಆಗುತ್ತದೆ, ಅದನ್ನು ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವೆಂದು ಕರೆಯುತ್ತೇವೆ.

**ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವು** ಪರಿಪೂರ್ಣ ಸಂಖ್ಯೆಯಾಗಿದೆ ಮತ್ತು ಬೆಲೆ ಮತ್ತು ಬೇಡಿಕೆಯ ಪ್ರಮಾಣವನ್ನು ಮಾಪನ ಮಾಡುವ ಘಟಕಗಳನ್ನು ಅವಲಂಬಿಸಿಲ್ಲ.





ಹಣವನ್ನು ಮಾಪನ ಮಾಡುವ ಘಟಕವನ್ನು ರೂಪಾಯಿಗಳಲ್ಲಿ ಬೇಡಿಕೆ ಪ್ರಮಾಣವನ್ನು ಕಿಲೋ ಗ್ರಾಂ ಗಳಲ್ಲಿ ಮಾಪನ ಮಾಡಲಾಗುತ್ತದೆಂದುಕೊಳ್ಳೋಣ. $p^0$ ಬೆಲೆಯಲ್ಲಿ $q^0$ ನಷ್ಟು ಬೇಡಿಕೆ ಇದೆಯಂದು ತಿಳಿಯೋಣ. ಹಾಗೆಯೇ $p^1$ ಬೆಲೆಯಲ್ಲಿ $q^1$ ಪ್ರಮಾಣದ ಬೇಡಿಕೆಯಿದೆಯೆಂದುಕೊಳ್ಳೋಣ ಈಗ ಬೆಲೆಯು $p^0$ ಯಿಂದ $p^1$ಗೆ ಬದಲಾಗಿದೆಯೆಂದು ಪರಿಗಣಿಸಿದರೆ.

ಬೆಲೆಯಲ್ಲಿ ಆದ ಬದಲಾವಣೆ = ಪ್ರತಿ ಕೆ.ಜಿ.ಗೆ $p^1$ ರೂಪಾಯಿಗಳು – ಪ್ರತಿ ಕೆ.ಜಿ.ಗೆ $p^0$ ರೂಪಾಯಿಗಳು = $(p^1 - p^0)$ ಪ್ರತಿ ಕೆ.ಜಿಗೆ ರೂಪಾಯಿಗಳು.

$$\text{ಸರಕಿನ ಬೆಲೆಯಲ್ಲಿನ ಶೇಕಡವಾರು ಬದಲಾವಣೆ} = \frac{\text{ಬೆಲೆಯಲ್ಲಿನ ಬದಲಾವಣೆ}}{\text{ಸರಕಿನ ಆರಂಭಿಕ ಬೆಲೆ}} \times 100$$

$$= \frac{\text{ಪ್ರತಿ ಕೆ.ಜಿ.ಗೆ } (p^1 - p^0) \text{ ರೂಪಾಯಿಗಳು}}{\text{ಪ್ರತಿ ಕೆ.ಜಿ.ಗೆ } p^0 \text{ ರೂಪಾಯಿಗಳು}} \times 100 = \frac{(p^1 - p^0)}{p^0} \times 100$$

ಸರಕಿನ ಪ್ರಮಾಣದಲ್ಲಿನ ಬದಲಾವಣೆ = $q^1$ ಕೆ.ಜಿ.ಗಳು – $q^0$ ಕೆ.ಜಿ.ಗಳು = $(q^1 - q^0)$ ಕೆ.ಜಿ.ಗಳು

$$\text{ಸರಕಿನ ಬೆಲೆಯಲ್ಲಿನ ಶೇಕಡವಾರು ಬದಲಾವಣೆ} = \frac{(q^1 - q^0) \text{ ಕೆ.ಜಿ.}}{q^0 \text{ ಕಿಲೋ ಗ್ರಾಂ}} \times 100$$

$$= \frac{(q^1 - q^0)}{q^0} \times 100$$

$$e_D = \frac{(q^1 - q^0)}{q^0} \times 100 \Big/ \frac{(p^1 - p^0)}{p^0} \times 100 = \frac{(q^1 - q^0)}{q^0} \Big/ \frac{(p^1 - p^0)}{p^0}$$

ಬೆಲೆಯನ್ನು ಪೈಸೆಗಳಲ್ಲಿ ಬೇಡಿಕೆ ಪ್ರಮಾಣವನ್ನು ಗ್ರಾಂ ಗಳಲ್ಲಿ ಅಳೆದರೆ, ಸರಕಿನ ಪ್ರಾರಂಭಿಕ ಬೆಲೆ 100 $p^0$ ಪೈಸೆ ಪ್ರತಿ ಗ್ರಾಂಗೆ ಅದರೆ 1000 ಗ್ರಾಂಗಳಿಗೆ

$$= \frac{100p^0}{1000} \text{ ಪ್ರತಿ ಗ್ರಾಂ ಗೆ ತಗಲುವ ಪೈಸೆ}$$

$$= \frac{p^0}{10} \text{ ಪೈಸೆ ಪ್ರತಿ ಗ್ರಾಂ ಗೆ}$$

ಬೆಲೆಯ ಬದಲಾವಣೆಯ ನಂತರದಲ್ಲಿ ಪ್ರತಿ 1000 ಗ್ರಾಂಗೆ ತಗಲುವ ಬೆಲೆ $100p^1$ ಪೈಸೆಗಳಾಗುತ್ತದೆ.

ಆದ್ದರಿಂದ $= \frac{100p^1}{1000}$ ಪ್ರತಿ ಗ್ರಾಂಗೆ $\frac{p^1}{10}$ ಪೈಸೆ

ಬೆಲೆಯಲ್ಲಿನ ಬದಲಾವಣೆ $= \frac{p^1}{10}$ ಪೈಸೆ, ಪ್ರತಿ ಗ್ರಾಂಗೆ $\frac{p^0}{10}$ ಪೈಸೆ ಪ್ರತಿ ಗ್ರಾಂಗೆ

$$= \frac{p^1 - p^0}{10} \text{ ಪೈಸೆ ಪ್ರತಿ ಗ್ರಾಂಗೆ}$$

ಬೆಲೆಯಲ್ಲಿನ ಶೇಕಡಾವಾರು ಬದಲಾವಣೆ $= \frac{p^1 - p^0}{10}$ ಪೈಸೆ ಪ್ರತಿ ಗ್ರಾಂಗೆ / $\frac{p^0}{10}$ ಪೈಸೆ ಪ್ರತಿ ಗ್ರಾಂಗೆ

$$= \frac{p^1 - p^0}{p^0}$$

ಸರಕಿನ ಪ್ರಮಾಣದಲ್ಲಾದ ಬದಲಾವಣೆ = 1000 $q^1$ ಗ್ರಾಂ – 1000 $q^0$ ಗ್ರಾಂ = $1000(q^1 - q^0)$ ಗ್ರಾಂಗಳು.

ಬೇಡಿಕೆಯ ಪ್ರಮಾಣದಲ್ಲಿ ಆದ ಶೇಕಡವಾರು ಬದಲಾವಣೆ

$$= \frac{1000\left(q^1 - q^0\right)\text{ಗ್ರಾಂಗಳು}}{1000q^0\text{ಗ್ರಾಂಗಳು}} \times 100$$

$$= \frac{\left(q^1 - q^0\right)}{q^0} \times 100$$

$$e_D = \frac{q^1 - q^0}{q^0} / \frac{\left(P^1 - P^0\right)}{P^0}$$

### 2.6.1 ಸರಳಾರೇಖಾ ಬೇಡಿಕೆ ರೇಖೆಯೊಂದಿಗಿನ ಸ್ಥಿತಿಸ್ಥಾಪಕತ್ವ *Elasticity along a Linear Demand Curve*

ನಾವೀಗ ಬೇಡಿಕೆ ರೇಖೆಯ ಸರಳರೇಖಾ ಬಿಂಬಕವು $q = a - bp$ ಆಗಿದೆ ಎಂದು ಪರಿಗಣಿಸೋಣ.

ಬೇಡಿಕೆಯ ರೇಖೆಯ ಮೇಲಿನ ಯಾವುದೇ ಬಿಂದುವಿನಲ್ಲಿ ಬೆಲೆಯಲ್ಲಾದ ಬದಲಾವಣೆಯಿಂದಾಗಿ, ಬೇಡಿಕೆ ಪ್ರಮಾಣದ ಪ್ರತಿ ಘಟಕದಲ್ಲಾಗುವ ಬದಲಾವಣೆಯು $\frac{\Delta q}{\Delta P} = -b$ ಆಗುತ್ತದೆ.

$\frac{\Delta q}{\Delta P}$ ಮೌಲ್ಯವನ್ನು 2.16 ಸಮೀಕರಣದಲ್ಲಿ ಆದೇಶಿಸಿದಾಗ *(substituting)* ನಾವು ಈ ಕೆಳಗಿನ ಸಮೀಕರಣವನ್ನು ಪಡೆಯುತ್ತೇವೆ.

$$e_D = -b\frac{P}{q} = -\frac{bp}{a-bp} \qquad (2.17)$$

ರೇಖಾಚಿತ್ರ 2.17ರಿಂದ ಸ್ಪಷ್ಟವಾಗುವುದೇನೆಂದರೆ ಸರಳಾರೇಖಾ ಬೇಡಿಕೆ ರೇಖೆಯ ಮೇಲಿನ ವಿವಿಧ ಬಿಂದುಗಳು ವಿಭಿನ್ನವಾದ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ. ಬೆಲೆ $p = 0$ ಆಗಿದ್ದಾಗ ಸ್ಥಿತಿಸ್ಥಾಪಕತ್ವ ಶೂನ್ಯವಾಗಿದೆ. $q = 0$ ಆದಾಗ ಸ್ಥಿತಿಸ್ಥಾಪಕತ್ವ ∞ (ಅನಂತ) ಆಗಿದೆ.

$P = \frac{a}{2b}$ ಬೆಲೆಯಲ್ಲಿ ಸ್ಥಿತಿಸ್ಥಾಪಕತ್ವ 1 ಆಗಿದೆ. ಯಾವುದೇ ಬೆಲೆಯಲ್ಲಿ ಅಂದರೆ ಶೂನ್ಯಕ್ಕಿಂತ ಹೆಚ್ಚಾಗಿದ್ದು, $\frac{a}{2b}$ ಗಿಂತ ಕಡಿಮೆಯಿದ್ದಾಗ, ಸ್ಥಿತಿಸ್ಥಾಪಕತ್ವ '1' ಕ್ಕಿಂತ ಕಡಿಮೆಯಿರುತ್ತದೆ. ಬೆಲೆ $\frac{a}{2b}$ ಗಿಂತ ಹೆಚ್ಚಾಗಿ ಇದ್ದರೆ ಸ್ಥಿತಿಸ್ಥಾಪಕತ್ವವು '1' ಕ್ಕಿಂತ ಹೆಚ್ಚಾಗಿರುತ್ತದೆ. ಈ ರೀತಿ ಸರಳಾರೇಖಾ ಬಿಂಬಕದ ಬೇಡಿಕೆರೇಖೆಯುದ್ದಕ್ಕೂ ಬೆಲೆಯ ಬೇಡಿಕೆ ಸ್ಥಿತಿಸ್ಥಾಪಕತ್ವವನ್ನು ಸಮೀಕರಣ 2.17 ಮತ್ತು ರೇಖಾ ಚಿತ್ರ 2.17 ರಲ್ಲಿ ವಿವರಿಸಲಾಗಿದೆ.




**ರೇಖಾಚಿತ್ರ 2.17** ಸರಳಾರೇಖಾ ಬೇಡಿಕೆ ರೇಖೆಯೊಂದಿಗಿನ ಸ್ಥಿತಿಸ್ಥಾಪಕತ್ವ. ಸರಳಾರೇಖಾ ಬೇಡಿಕೆ ರೇಖೆಯ ಮೇಲಿನ ವಿವಿಧ ಬಿಂದುಗಳಲ್ಲಿ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವ ವಿಭಿನ್ನವಾಗಿರುತ್ತದೆ.



### ಸ್ಥಿರ ಸ್ಥಿತಿಸ್ಥಾಪಕತ್ವದ ಬೇಡಿಕೆ ರೇಖೆಗಳು

ಸರಳಾರೇಖಾ ಬೇಡಿಕೆಯ ರೇಖೆಯ ಮೇಲಿನ ವಿವಿದ ಬಿಂದುಗಳು '0'(ಶೂನ್ಯ) ದಿಂದ (ಅನಂತ)∞ ವರೆಗಿನ ವಿವಿಧ ಸ್ಥಿತಿಸ್ಥಾಪಕತ್ವವನ್ನು ವ್ಯಕ್ತಪಡಿಸುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಬೇಡಿಕೆ ರೇಖೆಯ ಉದ್ದಕ್ಕೂ ಬೇಡಿಕೆಯ ಸ್ಥಿತಿಸ್ಥಾಪಕತ್ವ ಸ್ಥಿರವಾಗಿರಬಹುದು.

**ಉದಾಹರಣೆಗೆ,** ರೇಖಾಚಿತ್ರ 2.18(*a*) ರಲ್ಲಿ ನೀಡಿರುವ ಉದಾಹರಣೆಯನ್ನು ಪರಿಗಣಿಸೋಣ ಇಲ್ಲಿ ಬೇಡಿಕೆರೇಖೆಯು ಲಂಬಾಂತರವಾಗಿದೆ. ಬೆಲೆಯಲ್ಲಿ ಏನೇ ಬದಲಾವಣೆಯಾದರು ಬೇಡಿಕೆ ಪ್ರಮಾಣ ಮಾತ್ರ $\bar{q}$ ಮಟ್ಟಕ್ಕೆ ಸ್ಥಿರವಾಗಿದೆ. ಬೆಲೆಯಲ್ಲಿನ ಯಾವುದೇ ಬದಲಾವಣೆಗೆ ಕಾರಣವಾಗುವುದಿಲ್ಲ. ಮತ್ತು $|e_D|$ ಯಾವಾಗಲೂ ಶೂನ್ಯಕ್ಕೆಸಮನಾಗಿರುತ್ತದೆ. ಆದ್ದರಿಂದ ಲಂಬಾಂತರ ಬೇಡಿಕೆ ರೇಖೆಯು ಪರಿಪೂರ್ಣ ಅಸ್ಥಿತಿಸ್ಥಾಪಕತ್ವ ರೇಖೆಯಾಗಿದೆ.

#### ಒಂದು ಸರಳರೇಖಾ ಬೇಡಿಕೆ ರೇಖೆಯುದ್ದಕ್ಕೂ ಸ್ಥಿತಿಸ್ಥಾಪಕತ್ವದ ರೇಖಾಗಣಿತೀಯ ಮಾಪನ

ಸರಳಾರೇಖಾ ಬೇಡಿಕೆರೇಖೆಯ ಮೇಲೆ ಸ್ಥಿತಿಸ್ಥಾಪಕತ್ವವನ್ನು ರೇಖಾಗಣಿತಾತ್ಮಕವಾಗಿ ಸುಲಭವಾಗಿ ಮಾಪನ ಮಾಡಬಹುದು. ಬೇಡಿಕೆಯ ಸರಳರೇಖೆಯ ಮೇಲಿನ ಯಾವುದೇ ಬಿಂದುವಿನಲ್ಲಿ ಆ ಬಿಂದುವಿನ ಮೇಲ್ಭಾಗ ಮತ್ತು ಕೆಳಭಾಗದ ಅನುಪಾತದಿಂದ ಸ್ಥಿತಿಸ್ಥಾಪಕತೆಯನ್ನು ಪಡೆಯಬಹುದು. ಇದು ಹೀಗೇಕೆ ಎಂದು ತಿಳಿಯಲು ಈ ಕೆಳಗೆ ನೀಡಿರುವ $q = a - bp$. ಎಂಬ ಬೇಡಿಕೆ ರೇಖೆಯನ್ನು ಪರಿಶೀಲಿಸೋಣ.



$p^0$, ಬೆಲೆಯಲ್ಲಿ ಸರಕಿನ ಬೇಡಿಕೆ $q^0$ ಆಗಿದೆ ಎಂದುಕೊಳ್ಳೋಣ. ನಾವೀಗ ಬೆಲೆಯಲ್ಲಿ ಒಂದು ಸಣ್ಣ ಬದಲಾವಣೆಯನ್ನು ಪರಿಗಣಿಸೋಣ. ಹೊಸ ಬೆಲೆ $p^1$ ಮತ್ತು ಈ ಬೆಲೆಯಲ್ಲಿ ಸರಕಿನ ಹೊಸ ಬೇಡಿಕೆ $q^1$ ಆಗಿದೆ.

$\Delta q = q^1q^0 = \text{CD}$ ಮತ್ತು $\Delta p = p^1p^0 = \text{CE}$

ಆದ್ದರಿಂದ $= e_D = \dfrac{\Delta q / q^0}{\Delta p / p^0} = \dfrac{\Delta q}{\Delta P} \times \dfrac{P^0}{q^0} = \dfrac{q^1q^0}{p^1p^0} \times \dfrac{\text{OP}^0}{\text{Oq}^0} = \dfrac{\text{CD}}{\text{CE}} \times \dfrac{op^0}{oq^0}$

ಆದ್ದರಿಂದ EC ಮತ್ತು $\text{BP}^0\text{D}$ ಗಳು ಒಂದೇ ರೀತಿಯ ತ್ರಿಭುಜಗಳಾಗಿವೆ.

$\dfrac{\text{CD}}{\text{CE}} = \dfrac{P^0\text{D}}{P^0\text{B}}$ ಆದರೆ $\dfrac{p^0\text{D}}{p^0\text{B}} = \dfrac{\text{O}q^0}{p^0\text{B}}$ $ed = \dfrac{\text{OP}^0}{\text{P}^0\text{B}} = \dfrac{q^0\text{D}}{p^0\text{B}}$

ಆದ್ದರಿಂದ $BP^0D$ ಮತ್ತು *BOA* ಗಳು ಒಂದೇ ರೀತಿಯ ತ್ರಿಭುಜಗಳಾಗಿರುವುದರಿಂದ

$\dfrac{q^0\text{D}}{p^0\text{B}} = \dfrac{\text{DA}}{\text{DB}}$ ಈ ರೀತಿ $e_\text{D} = \dfrac{\text{DA}}{\text{DB}}$

ಈ ವಿಧಾನದ ಮೂಲಕ ಸರಳಾರೇಖಾ ಬೇಡಿಕೆ ರೇಖೆಯ ಮೇಲಿನ ವಿವಿದ ಬಿಂದುಗಳಲ್ಲಿ ಸ್ಥಿತಿಸ್ಥಾಪಕತ್ವವನ್ನು ಪಡೆಯಬಹುದು. ಬೇಡಿಕೆರೇಖೆಯು ಸಮಾನಾಂತರ ಅಕ್ಷವನ್ನು ಸಂಧಿಸುವಲ್ಲಿ ಸ್ಥಿತಿಸ್ಥಾಪಕತ್ವ ಶೂನ್ಯವಾಗಿರುತ್ತದೆ. ಇದು ಲಂಬಾಂತರ ಅಕ್ಷವನ್ನು ಸಂಧಿಸುವಲ್ಲಿ ಬೇಡಿಕೆ ಸ್ಥಿತಿಸ್ಥಾಪಕತ್ವ ($\infty$) ಅನಂತರವಾಗಿರುತ್ತದೆ. ಬೇಡಿಕೆರೇಖೆಯ ಮಧ್ಯಭಾಗದಲ್ಲಿ ಸ್ಥಿತಿಸ್ಥಾಪಕತ್ವ ಒಂದಕ್ಕೆ ಸಮನಾಗಿರುತ್ತದೆ. ಈ ಮಧ್ಯಬಿಂದುವಿನ ಎಡಭಾಗದಲ್ಲಿ ಬರುವ ಯಾವುದೇ ಬಿಂದುವಿನಲ್ಲಿ ಸ್ಥಿತಿಸ್ಥಾಪಕತ್ವ 1 ಕ್ಕಿಂತ ಹೆಚ್ಚಾಗಿರುತ್ತದೆ. ಹಾಗೆಯೇ ಬಲಭಾಗಕ್ಕೆ ಬರುವ ಯವುದೇ ಬಿಂದುವಿನಲ್ಲಿ ಸ್ಥಿತಿಸ್ಥಾಪಕತ್ವವು 1 ಕ್ಕಿಂತ ಕಡಿಮೆಯಾಗಿರುತ್ತದೆ. ಸಮಾನಾಂತರ ಅಕ್ಷದಲ್ಲಿ $p = 0$ ಆಗಿದ್ದರೆ, ಲಂಬಾತರ ಅಕ್ಷದಲ್ಲಿ $q = 0$ ಆಗಿರುತ್ತದೆ. ಮತ್ತು ಬೇಡಿಕೆ ರೇಖೆಯ ಮಧ್ಯಬಿಂದುವು $P = \dfrac{a}{2b}$ ಆಗಿರುತ್ತದೆ.

ರೇಖಾಚಿತ್ರ 2.18(*b*) ನಲ್ಲಿ ಆಯತಕಾರದ ಪರಾವಲಯದ (*Rectangular hyperbola*) ಆಕಾರದಲ್ಲಿರುವ ಬೇಡಿಕೆ ರೇಖೆಯನ್ನು ತೋರಿಸಲಾಗಿದೆ. ಈ ಬೇಡಿಕೆ ರೇಖೆಯು ಒಂದು ಪ್ರಮುಖ ಲಕ್ಷಣದಿಂದ ಕೂಡಿದೆ. ಅದೆಂದರೆ ಬೆಲೆಯಲ್ಲಾಗುವ ಶೇಕಡವಾರು ಬದಲಾವಣೆಯು ಬೇಡಿಕೆ ರೇಖೆಯುದ್ದಕ್ಕೂ ಅಷ್ಟೇ ಪ್ರಮಾಣದ ಬದಲಾವಣೆಗೆ ಕಾರಣವಾಗುತ್ತದೆ. ಆದ್ದರಿಂದ ಈ ರೇಖೆಯ ಪ್ರತಿಯೊಂದು ಬಿಂದುವಿನ ಸ್ಥಿತಿಸ್ಥಾಪಕತ್ವ $|e_D|=1$ ಆಗಿರುತ್ತದೆ. ಇಂತಹ ಬೇಡಿಕೆ ರೇಖೆಯನ್ನು ಸರಿಸಮ ಸ್ಥಿತಿಸ್ಥಾಪಕತ್ವದ ಬೇಡಿಕೆ ರೇಖೆ ಎಂದು ಕರೆಯುತ್ತೇವೆ.




**ರೇಖಾಚಿತ್ರ 2.18:** ಸ್ಥಿರ ಸ್ಥಿತಿಸ್ಥಾಪಕತ್ವದ ಬೇಡಿಕೆಯ ರೇಖೆಗಳು: ರೇಖಾಚಿತ್ರದ ಪಲಕ (*a*) ನಲ್ಲಿ ತೋರಿಸಿರುವಂತೆ ಲಂಬಾಂತರ ಬೇಡಿಕೆರೇಖೆಯುದ್ದಕ್ಕೂ ಇರುವ ಎಲ್ಲಾ ಬಿಂದುಗಳ ಬೇಡಿಕೆ ಸ್ಥಿತಿಸ್ಥಾಪಕತ್ವವು ಶೂನ್ಯವಾಗಿರುತ್ತದೆ. ಪಲಕ (*b*) ಭಾಗದಲ್ಲಿರುವ ಬೇಡಿಕೆ ರೇಖೆಯ ಮೇಲಿರುವ ಎಲ್ಲಾ ಬಿಂದುಗಳ ಸ್ಥಿತಿಸ್ಥಾಪಕತ್ವವು ಒಂದಕ್ಕೆ ಸಮನಾಗಿರುತ್ತದೆ.

### 2.6.2. ಒಂದು ಸರಕಿನ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ನಿರ್ಧರಿಸುವ ಅಂಶಗಳು *Factors Determining Price Elasticity of Demand for a Good*

ಒಂದು ಸರಕಿನ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಆ ಸರಕಿನ ಸ್ವರೂಪ ಮತ್ತು ನಿಕಟ ಬದಲಿ ಸರಕುಗಳ ಲಭ್ಯತೆಯನ್ನು ಅವಲಂಬಿಸಿರುತ್ತದೆ. ಜೀವನಾವಶ್ಯ ಆಹಾರ ಸರಕುಗಳನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಇವು ಜೀವನಾವಶ್ಯ ಸರಕುಗಳಾಗಿರುವುದರಿಂದ, ಇಂತಹ ಸರಕುಗಳ ಬೇಡಿಕೆಯು ಬೆಲೆಯ ಬದಲಾವಣೆಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಕ್ರಿಯಿಸುವುದಿಲ್ಲ ಅಂದರೆ, ಈ ಸರಕುಗಳ ಬೆಲೆ ಹೆಚ್ಚಳವು ಬೇಡಿಕೆಯ ಮೇಲೆ ಪ್ರಭಾವ ಬೀರುವುದಿಲ್ಲ. ಆದರೆ ಮತ್ತೊಂದು ಕಡೆ, ವಿಲಾಸಿ ಸರಕುಗಳ ಬೇಡಿಕೆಯು ಬೆಲೆ ಬದಲಾವಣೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತದೆ. ಸಾಮಾನ್ಯವಾಗಿ ಅವಶ್ಯಕ ಸರಕುಗಳಿಗೆ ಬೆಲೆ ಬೇಡಿಕೆಯ ಅಸ್ಥಿತಿಸ್ಥಾಪಕತ್ವ ಇದ್ದರೆ, ವಿಲಾಸಿ ಸರಕುಗಳಿಗೆ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ ವಿರುತ್ತದೆ.

ಆಹಾರ ಪದಾರ್ಥಗಳ ಬೇಡಿಕೆಯು ಅಸ್ಥಿತಿಸ್ಥಾಪಕತ್ವ ಹೊಂದಿದ್ದಾಗ್ಯೂ ಸಹ ಕೆಲವು ಆಹಾರ ಸರಕುಗಳ ಬೇಡಿಕೆ ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಹೊಂದಿರಬಹುದು ಉದಾಹರಣೆಗೆ ನಿರ್ಧಿಷ್ಟ ದ್ವಿದಳ ಧಾನ್ಯವನ್ನು ತೆಗೆದುಕೊಳ್ಳೋಣ ಬೇಡಿಕೆ ಈ ದ್ವಿದಳ ಧಾನ್ಯಗಳ ಬೆಲೆ ಹೆಚ್ಚಾದರೆ ಗ್ರಾಹಕರು ಆ ದ್ವಿದಳ ಧಾನ್ಯಗಳ ಬದಲಿಗೆ ಲಭ್ಯವಿರುವ ಸಮೀಪದ ಬದಲಿ ದ್ವಿದಳಧಾನ್ಯಕ್ಕೆ ತಮ್ಮ ಬೇಡಿಕೆಯನ್ನು ವರ್ಗಾಯಿಸುತ್ತಾರೆ. ಈ ರೀತಿ ಸಮೀಪದ ಬದಲಿ ಸರಕುಗಳು ಲಭ್ಯವಿದ್ದರೆ ಆಗ ಬೇಡಿಕೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ. ಒಂದುವೇಳೆ ಸಮೀಪದ ಬದಲಿ ವಸ್ತುಗಳು ಲಭ್ಯವಿಲ್ಲದಿದ್ದರೆ ಅಂತಹ ಸರಕುಗಳ ಬೇಡಿಕೆಯು ಅಸ್ಥಿತಿಸ್ಥಾಪಕತ್ವದಿಂದ ಕೂಡಿರುತ್ತದೆ.





### 2.6.3. ಸ್ಥಿತಿಸ್ಥಾಪಕತ್ವ ಮತ್ತು ವೆಚ್ಚ *Elasticity and Expenditure*

ಸರಕೊಂದರ ಮೇಲೆ ಮಾಡುವ ವೆಚ್ಚ ಆ ಸರಕಿನ ಬೇಡಿಕೆ ಪ್ರಮಾಣ ಮತ್ತು ಅದರ ಬೆಲೆಗೆ ಸಮನಾಗಿರುತ್ತದೆ. ಒಂದು ಸರಕಿನ ಬೆಲೆಯ ಬದಲಾವಣೆಯಿಂದಾಗಿ ಆ ಸರಕಿನ ಮೇಲೆ ಮಾಡುವ ವೆಚ್ಚವು ಹೇಗೆ ಬದಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವುದು, ಮುಖ್ಯವಾಗುತ್ತದೆ. ಒಂದು ಸರಕಿನ ಬೆಲೆ ಮತ್ತು ಬೇಡಿಕೆಯು ಪರಸ್ಪರ ವಿರುದ್ಧ ಸಂಬಂಧ ಹೊಂದಿವೆ. ಅನೇಕ ಬಾರಿ ಒಂದು ಸರಕಿನ ಬೆಲೆಯ ಹೆಚ್ಚಳದಿಂದಾಗಿ ಅ ಸರಕಿನ ಮೇಲೆ ಮಾಡಬಹುದಾದ ವೆಚ್ಚವು ಹೆಚ್ಚಾಗುತ್ತದೆಯೋ ಅಥವಾ ಕಡಿಮೆಯಾಗುತ್ತದೆಯೋ ಎಂಬ ಸಂಗತಿಯು ಬೆಲೆಯ ಬದಲಾವಣೆಗೆ ಬೇಡಿಕೆಯು ಯಾವ ದರದಲ್ಲಿ ಪ್ರತಿಕ್ರಿಯಿಸುತ್ತದೆ ಎಂಬ ಅಂಶವನ್ನು ಅವಲಂಬಿಸಿರುತ್ತದೆ.

ಒಂದು ಸರಕಿನ ಬೆಲೆ ಹೆಚ್ಚಾಗಿದೆಯೆಂದು ಪರಿಗಣಿಸೋಣ. ಆ ಸರಕಿನ ಶೇಕಡವಾರು ಬೆಲೆಯ ಹೆಚ್ಚಳಕ್ಕಿಂತ ಶೇಕಡವಾರು ಬೇಡಿಕೆಯ ಇಳಿಕೆಯೇ ಹೆಚ್ಚಾಗಿದ್ದರೆ, ಆ ಸರಕಿನ ಮೇಲೆ ಮಾಡಬಹುದಾದ ವೆಚ್ಚವು ಕಡಿಮೆಯಾಗುತ್ತದೆ. ಮತ್ತೊಂದು ರೀತಿಯಲ್ಲಿ ಒಂದು ಸರಕಿನ ಶೇಕಡವಾರು ಬೆಲೆಯ ಹೆಚ್ಚಳಕ್ಕಿಂತ ಶೇಕಡವಾರು ಬೇಡಿಕೆಯ ಇಳಿಕೆ ಕಡಿಮೆಯಿದ್ದರೆ, ಆ ಸರಕಿನ ವೆಚ್ಚವು ಹೆಚ್ಚಾಗುತ್ತದೆ. ಒಂದು ವೇಳೆ ಒಂದು ಸರಕಿನ ಶೇಕಡವಾರು ಬೆಲೆಯ ಹೆಚ್ಚಳವು ಆ ಸರಕಿನ ಶೇಕಡವಾರು ಬೇಡಿಕೆಯ ಇಳಿಕೆಗಳ ಪ್ರಮಾಣಕ್ಕೆ ಸಮನಾದರೆ ಆ ಸರಕಿನ ಮೇಲೆ ಮಾಡಬಹುದಾದ ವೆಚ್ಚದಲ್ಲಿ ಯಾವುದೇ ಬದಲಾವಣೆಯಗುವುದಿಲ್ಲ.

**ಸ್ಥಿತಿಸ್ಥಾಪಕತ್ವ ಮತ್ತು ಒಂದು ಸರಕಿನ ಮೇಲಿನ ವೆಚ್ಚದ ಬದಲಾವಣೆಗಳ ನಡುವಿನ ಸಂಬಂದ**

$p$ ಬೆಲೆಯಲ್ಲಿ ಒಂದು ಸರಕಿನ ಬೇಡಿಕೆಯು $q$ ಆಗಿದೆಯೆಂದು ತಿಳಿಯೋಣ. $p+\Delta p$ ಬೆಲೆಯಲ್ಲಿ ಒಂದು ಸರಕಿಗಿರುವ ಬೇಡಿಕೆಯು $q+\Delta q$ ಆಗಿದೆ. $p$ ಬೆಲೆಯಲ್ಲಿ ಸರಕಿನ ಮೇಲೆ ಮಾಡುವ ಒಟ್ಟು ವೆಚ್ಚ $pq$ ಮತ್ತು $p+\Delta p$ ಬೆಲೆಯಲ್ಲಿ ಸರಕಿನ ಒಟ್ಟು ವೆಚ್ಚವು $(p+\Delta p)(q+\Delta q)$. ಆಗಿರುತ್ತದೆ.

ಬೆಲೆ $p$ ಯಿಂದ $p+\Delta p$ ಗೆ ಬದಲಾದರೆ, ಸರಕಿನ ವೆಚ್ಚದಲ್ಲಿನ ಬದಲಾವಣೆಯು $(p+\Delta p)(q+\Delta q)-pq = q\,\Delta p + p\,\Delta q + \Delta p\Delta q$

$\Delta p\Delta q$ ಪದದ ಮೌಲ್ಯವನ್ನು $\Delta p$ ಮತ್ತು $\Delta q$ ನ ಸಣ್ಣ ಮೌಲ್ಯಕ್ಕಾಗಿ ನಿರ್ಲಕ್ಷಿಸಲಾಗಿದೆ. ಈ ಪ್ರಕರಣದಲ್ಲಿ ಸರಕಿನ ಮೇಲಿನ ಬದಲಾದ ವೆಚ್ಚವು $q\,\Delta p + p\,\Delta q$ ಆಗುತ್ತದೆ.

ಸರಿಸುಮಾರು ವೆಚ್ಚದಲ್ಲಿನ ಅಂದಾಜು ಬದಲಾವಣೆಯು = $\Delta E = q\Delta p + p\Delta q$

$$= \Delta P\left(q + P\frac{\Delta q}{\Delta P}\right) = \Delta P\left[q\left(1 + \frac{\Delta qP}{\Delta pQ}\right)\right] = \Delta P\left[q\left(1 + e_D\right)\right]$$

ಗಮನಿಸಬೇಕಾದ ಸಂಗತಿಗಳು

$e_D < -1$ ಆದರೆ, $q(1 + e_D) < 0$ ಆಗಿರುತ್ತದೆ. ಆದ್ದರಿಂದ $\Delta E$ ಚಿಹ್ನೆ $\Delta p$ ಗೆ ವಿರುದ್ಧವಾಗಿದೆ.

$e_D > -1$ ಆದರೆ, $q(1 + e_D) > 0$ ಆಗಿರುತ್ತದೆ. ಆದ್ದರಿಂದ $\Delta E$ ಚಿಹ್ನೆ $\Delta p$ ಚಿಹ್ನೆ ಒಂದೇ ಆಗಿರುತ್ತವೆ.

$e_D = -1$ ಆದರೆ, $q(1 + e_D) = 0$ ಆಗಿರುತ್ತದೆ. ಆದ್ದರಿಂದ $\Delta E = 0$ ಆಗಿರುತ್ತದೆ.

ನಾವೀಗ ಒಂದು ಸರಕಿನ ಬೆಲೆ ಕಡಿಮೆಯಾಗುತ್ತಿರುವುದನ್ನು ಪರಿಗಣಿಸೋಣ. ಬೆಲೆಯ ಶೇಕಡವಾರು ಇಳಿಕೆಗಿಂತಲೂ ಬೇಡಿಕೆಯ ಶೇಕಡವಾರು ಹೆಚ್ಚಳವು ಅಧಿಕವಾಗಿದ್ದರೆ, ಆ ಸರಕಿನ ಮೇಲಿನ ವೆಚ್ಚವು ಅಧಿಕವಾಗುತ್ತಾ ಹೋಗುತ್ತದೆ. ಮತ್ತೊಂದು ಕಡೆ ಬೆಲೆಯ ಶೇಕಡವಾರು ಇಳಿಕೆಗಿಂತಲೂ, ಬೇಡಿಕೆಯ ಶೇಕಡವಾರು ಹೆಚ್ಚಳವು ಕಡಿಮೆಯಾದರೆ, ಆ ಸರಕಿನ ಮೇಲಿನ ವೆಚ್ಚವು ಕಡಿಮೆಯಾಗುತ್ತಾ ಹೋಗುತ್ತದೆ. ಒಂದು ವೇಳೆ ಬೇಡಿಕೆಯ ಶೇಕಡವಾರು ಹೆಚ್ಚಳವು ಬೆಲೆಯ ಶೇಕಡವಾರು ಇಳಿಕೆಗೆ ಸಮನಾಗಿದ್ದರೆ, ಆ ಸರಕಿನ ಮೇಲಿನ ವೆಚ್ಚವು ಸ್ಥಿರವಾಗಿರುತ್ತದೆ.

ಬೇಡಿಕೆಯ ಶೇಕಡವಾರು ಬದಲಾವಣೆಯು, ಬೆಲೆಯ ಶೇಕಡವಾರು ಬದಲಾವಣೆಗಿಂತ ಅಧಿಕವಾಗಿದ್ದರೆ, ಅಂದರೆ ಸರಕಿಗೆ ಬೆಲೆಯ ಸ್ಥಿತಿಸ್ಥಾಪಕತ್ವವಿದ್ದರೆ, ಸರಕಿನ ಮೇಲಿನ ವೆಚ್ಚವು ಅದರ ಬೆಲೆಯ ಬದಲಾವಣೆಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ. ಬೇಡಿಕೆಯ ಶೇಕಡವಾರು ಬದಲಾವಣೆಯು, ಅದರ ಬೆಲೆಯ ಶೇಕಡವಾರು ಬದಲಾವಣೆಗಿಂತ ಕಡಿಮೆಯಿದ್ದರೆ, ಅಂದರೆ ಸರಕಿಗೆ ಬೆಲೆಯ ಅಸ್ಥಿತಿಸ್ಥಾಪಕತ್ವವಿದ್ದರೆ, ಸರಕಿನ ಮೇಲಿನ ವೆಚ್ಚವು ಅದರ ಬೆಲೆಯ ಬದಲಾವಣೆಗೆ ನೇರ ದಿಕ್ಕಿನಲ್ಲಿ ಚಲಿಸುತ್ತದೆ. ಬೇಡಿಕೆಯ ಶೇಕಡವಾರು ಬದಲಾವಣೆಯು ಬೆಲೆಯ ಶೇಕಡವಾರು ಬದಲಾವಣೆಗೆ ಸಮನಾಗಿದ್ದರೆ ಅಂದರೆ ಸರಕಿಗೆ ಸರಿಸಮಾನ ಸ್ಥಿತಿಸ್ಥಾಪಕತ್ವವಿದ್ದರೆ, ಸರಕಿನ ವೆಚ್ಚ ಸ್ಥಿರವಾಗಿರುತ್ತದೆ.

**ಆಯತಕಾರದ ಪರವಲಯ**

ಇದರ ಸಮೀಕರಣದ ರೂಪ $xy = c$ ಆಗಿದೆ.

$x$ ಮತ್ತು $y$ ಎರಡು ಚಲಕಗಳಾಗಿವೆ. $c$ ಸ್ಥಿರಾಂಕವಾಗಿದೆ. ಈ ಸಮೀಕರಣದಿಂದ ಪಡೆದ ರೇಖೆ ಆಯತಕಾರದ ಪರವಲಯವಾಗಿದೆ. ರೇಖಾಚಿತ್ರದಲ್ಲಿ ತೋರಿಸುರುವಂತೆ ಇದು $x$-$y$ ಸಮತಲದಲ್ಲಿ ಇಳಿಮುಖ ಇಳಿಜಾರನ್ನು ಹೊಂದಿದೆ. ಈ ರೇಖೆಯ ಮೇಲಿರುವ $p$ ಮತ್ತು $q$ ಬಿಂದುಗಳಲ್ಲಿ $OY_1$ $PX_1$ ಮತ್ತು $OY_2$ $qx_2$ ಎರಡು ಆಯತಕಾರದ ವಿಸ್ತೀರ್ಣ 'C' ಗೆ ಸಮನಾಗಿದೆ.




ಬೇಡಿಕೆ ರೇಖೆಯ ಸಮೀಕರಣವು $pq = e$ ರೂಪದಲ್ಲಿದ್ದರೆ, '$e$' ಸ್ಥಿರಾಂಕವಾಗಿರುತ್ತದೆ. ಇದು ಆಯತಾಕಾರದ ಪರವಲಯವಾಗಿರುತ್ತದೆ. '$p$' ಬೆಲೆಯಾದರೆ '$q$' ಬೇಡಿಕೆ ಸ್ಥಿರವಾಗುತ್ತದೆ. ಇಂತಹ ಬೇಡಿಕೆಯ ರೇಖೆಯಲ್ಲಿ ಅನುಭೋಗಿಯ ವೆಚ್ಚವು ಯಾವಾಗಲೂ ಒಂದೇಯಾಗಿದ್ದು '$e$' ಸಮನಾಗಿರುತ್ತದೆ.

- ನಿರ್ದಿಷ್ಟ ಮಾರುಕಟ್ಟೆ ಬೆಲೆಯಲ್ಲಿ, ನಿರ್ದಿಷ್ಟ ಆದಾಯದಲ್ಲಿ, ಅನುಭೋಗಿಸಿಕೊಳ್ಳಬಹುದಾದ ಸರಕುಗಳ ಎಲ್ಲಾ ಸಂಯೋಜನೆಗಳ ಸಮೂಹವೇ ಬಜೆಟ್‌ಗಣ.
- ಬಜೆಟ್‌ರೇಖೆಯು, ಅನುಭೋಗಿ, ತನ್ನ ಆದಾಯವನ್ನು ಸಂಪೂರ್ಣವಾಗಿ ಖರ್ಚುಮಾಡಿ ಕೊಳ್ಳಬಹುದಾದ ಸರಕುಗಳ ಎಲ್ಲಾ ಸಂಯೋಜನೆಗಳನ್ನು ಪ್ರತಿನಿಧಿಸುತ್ತದೆ. ಇದು ಇಳಿಮುಖ ಇಳಿಜಾರನ್ನು ಹೊಂದಿರುತ್ತದೆ.
- ಎರಡೂ ಸರಕುಗಳ ಬೆಲೆಯಲ್ಲಿ ಬದಲಾವಣೆಯಾದರೆ, ಅಥವಾ ಆದಾಯದಲ್ಲಿ ಬದಲಾವಣೆಯಾದರೆ ಬಜೆಟ್‌ಸೆಟ್‌ನಲ್ಲಿ ಬದಲಾವಣೆಯಾಗುತ್ತದೆ.
- ಅನುಭೋಗಿಗೆ ಸಾಧ್ಯವಿರುವ ಅನುಭೋಗದ ವಿವಿದ ಸಂಯೋಜನೆಗಳ ಸಮೂಹದಲ್ಲಿ ಅನುಭೋಗಿಯು ಸುಸ್ಪಷ್ಟ ಆದ್ಯತೆಗಳನ್ನು ಹೊಂದಿರುತ್ತಾಳೆ ಮತ್ತು ಆದ್ಯತೆಗನುಗುಣವಾಗಿ ಲಭ್ಯವಿರುವ ಸಂಯೋಜನೆಗಳಿಗೆ ಶ್ರೇಣಿಯನ್ನು ನೀಡುತ್ತಾಳೆ.
- ಅನುಭೋಗಿಯು ಏಕತಾನಾತ್ಮಕ ಒಲವನ್ನು ಹೊಂದಿರುತ್ತಾಳೆಂದು ಕಲ್ಪಿಸಿಕೊಳ್ಳಲಾಗಿದೆ.
- ವಿವಿದ ಸಂಯೋಜನೆಗಳನ್ನು ವ್ಯಕ್ತಪಡಿಸುವ ಎಲ್ಲಾ ಬಿಂದುಗಳನ್ನು ಒಳಗೊಂಡ ರೇಖೆಯೇ ಔದಾಸೀನ್ಯ ವಕ್ರರೇಖೆ. ಈ ಎಲ್ಲಾ ಬಿಂದುಗಳ ನಡುವೆ ಅನುಭೋಗಿಯು ಔದಾಸೀನ್ಯದಿಂದಿರುತ್ತಾಳೆ.
- ಆದ್ಯತೆಗಳ ಏಕತಾನಾತ್ಮಕ ಒಲವಿನ ಕಾರಣದಿಂದ ಔದಾಸೀನ್ಯ ವಕ್ರರೇಖೆಯು ಇಳಿಮುಖ ಇಳಿಜಾರನ್ನು ಹೊಂದಿರುತ್ತದೆ.
- ಸಾಮಾನ್ಯವಾಗಿ ಒಬ್ಬ ಅನುಭೋಗಿಯ ಆದ್ಯತೆಗಳನ್ನು, ಔದಾಸೀನ್ಯ ನಕ್ಷೆಯಿಂದ ಪ್ರತಿನಿಧಿಸಬಹುದು.
- ಸಾಮಾನ್ಯವಾಗಿ ಒಬ್ಬ ಅನುಭೋಗಿಯ ಆದ್ಯತೆಗಳನ್ನು ತುಷ್ಟಿಗುಣದ ಬಿಂಬಕದಿಂದಲೂ ಸಹ ವ್ಯಕ್ತಪಡಿಸಬಹುದು.
- ಒಬ್ಬ ವಿವೇಚನಾಶೀಲ ಅನುಭೋಗಿಯು ಯಾವಾಗಲೂ ಬಜೆಟ್ ಗಣದಿಂದ ತಾನು ಅತಿ ಹೆಚ್ಚು ಆದ್ಯತೆ ನೀಡುವ ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ.
- ಅನುಭೋಗಿಯ ಆದರ್ಶ ಸಂಯೋಜನೆಯನ್ನು ಬಜೆಟ್‌ರೇಖೆ ಮತ್ತು ಔದಾಸೀನ್ಯ ವಕ್ರರೇಖೆ ಸ್ಪರ್ಶಿಸುವ ಬಿಂದುವಿನಲ್ಲಿ ಗುರುತಿಸಲಾಗುತ್ತದೆ.
- ಇತರೆ ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ ಮತ್ತು ಅಭಿರುಚಿ ಮತ್ತು ಆದ್ಯತೆಗಳು ಸ್ಥಿರವಾಗಿದ್ದಾಗ, ವಿವಿದ ಬೆಲೆಗಳಲ್ಲಿ ಆತನು ಆಯ್ಕೆ ಮಾಡಿಕೊಳ್ಳುವ ಸರಕಿನ ಪ್ರಮಾಣವನ್ನು ಬೇಡಿಕೆ ರೇಖೆಯು ನೀಡುತ್ತದೆ.
- ಸಾಮಾನ್ಯವಾಗಿ ಬೇಡಿಕೆ ರೇಖೆಯು ಇಳಿಮುಖ ಇಳಿಜಾರನ್ನು ಹೊಂದಿರುತ್ತದೆ.
- ಸಾಮಾನ್ಯ ಸರಕಿನ ಬೇಡಿಕೆಯು ಅನುಭೋಗಿಯ ಆದಾಯದಲ್ಲಿನ ಹೆಚ್ಚಳ (ಇಳಿಕೆ)ದೊಂದಿಗೆ ಹೆಚ್ಚಾಗುತ್ತದೆ(ಇಳಿಕೆ).
- ಅನುಭೋಗಿಯ ಆದಾಯ ಹೆಚ್ಚಾದಂತೆ(ಕಡಿಮೆಯಾದರೆ) ಕೆಳದರ್ಜೆ ಸರಕಿನ ಬೇಡಿಕೆಯು ಕ ಡಿಮೆಯಾಗುತ್ತದೆ(ಹೆಚ್ಚಾಗುತ್ತದೆ).
- ಮಾರುಕಟ್ಟೆ ಬೇಡಿಕೆ ರೇಖೆಯು, ಮಾರುಕಟ್ಟೆಯಲ್ಲಿ ಎಲ್ಲಾ ಅನುಭೋಗಿಗಳು ನಿರ್ದಿಷ್ಟ ಸರಕನ್ನು ವಿವಿದ ಬೆಲೆಯ ಮಟ್ಟಗಳಲ್ಲಿ ಕೊಳ್ಳುವ ಬೇಡಿಕೆಯನ್ನು ಪ್ರತಿನಿಧಿಸುತ್ತದೆ.
- ನಿರ್ದಿಷ್ಟ ಸರಕಿನ ಬೇಡಿಕೆಯಲ್ಲಾದ ಶೇಕಡವಾರು ಬದಲಾಣೆಯನ್ನು, ಅದರ ಬೆಲೆಯಲ್ಲಾದ ಶೇಕಡವಾರು ಬದಲಾವಣೆಯಿಂದ ಭಾಗಿಸುವುದೇ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವವೆಂದು ವ್ಯಾಖ್ಯಾನಿಸಲಾಗಿದೆ.
- ಬೇಡಿಕೆಯ ಸ್ಥಿತಿಸ್ಥಾಪಕತ್ವವು ಶುದ್ಧ ಸಂಖ್ಯೆಯಾಗಿದೆ.
- ಒಂದು ಸರಕಿನ ಬೇಡಿಕೆಯ ಸ್ಥಿತಿಸ್ಥಾಪಕತ್ವ ಮತ್ತು ಆ ಸರಕಿನ ಮೇಲಿನ ಒಟ್ಟು ವೆಚ್ಚವು ನಿಕಟ ಸಂಬಂಧವನ್ನು ಹೊಂದಿವೆ.

## ಪ್ರಮುಖ ಪರಿಭಾಷೆಗಳು *Key Concepts*

ಬಜೆಟ್ ಗಣ
ಆದ್ಯತೆಗಳು
ಔದಾಸೀನ್ಯ ರೇಖೆ
ಏಕತಾನಾತ್ಮಕ ಒಲವು
ಔದಾಸೀನ್ಯ ನಕ್ಷೆ
ತುಷ್ಟಿಗುಣ ಬಿಂಬಕ
ಬೇಡಿಕೆ
ಬೇಡಿಕೆ ರೇಖೆ
ಆದಾಯದ ಪರಿಣಾಮ
ಕೆಳದರ್ಜೆಯ ಸರಕುಗಳು
ಪೂರಕ ಸರಕುಗಳು

ಬಜೆಟ್ ರೇಖೆ
ಔದಾಸೀನ್ಯ
ಬದಲಿಕೆಯ ದರ
ಬದಲಿಕೆಯ ಇಳಿಮುಖ ದರ,
ಅನುಭೋಗಿಯ ಆದರ್ಶ,
ಬದಲಿಕೆ ಪರಿಣಾಮ,
ಬೇಡಿಕೆ ನಿಯಮ
ಸಾಮಾನ್ಯ ಸರಕು
ಬದಲಿಸು
ಆದಾಯದ ಪರಿಣಾಮ
ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ

## ಅಭ್ಯಾಸಗಳು *Exercises*

1. ಒಬ್ಬ ಅನುಭೋಗಿಯ ಬಜೆಟ್ ಗಣ ಎಂದರೇನು ?
2. ಬಜೆಟ್ ರೇಖೆ ಎಂದರೇನು ?
3. ಬಜೆಟ್ ರೇಖೆಯು ಇಳಿಮುಖ ಇಳಿಜಾರನ್ನು ಹೊಂದಿದೆ. ಏಕೆ ? ವಿವರಿಸಿ
4. ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. ಎರಡೂ ಸರಕುಗಳ ಬೆಲೆಯು ಅನುಕ್ರಮವಾಗಿ ₹4 ಮತ್ತು ₹5 ಅನುಭೋಗಿಯ ಆದಾಯ ₹20
   *i.* ಬಜೆಟ್ ರೇಖೆಯ ಸಮೀಕರಣವನ್ನು ಬರೆಯಿರಿ.
   *ii.* ಅನುಭೋಗಿಯು ಸರಕು1ರ ಮೇಲೆ ಸಂಪೂರ್ಣ ಆದಾಯವನ್ನು ಖರ್ಚುಮಾಡಿದರೆ, ಆ ಸರಕನ್ನು ಎಷ್ಟು ಪ್ರಮಾಣದಲ್ಲಿ ಅನುಭೋಗಿಸಬಹುದು?
   *iii.* ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಸರಕು2ರ ಮೇಲೆ ಖರ್ಚು ಮಾಡಿದರೆ ಅದನ್ನು ಎಷ್ಟು ಪ್ರಮಾಣದಲ್ಲಿ ಅನುಭೋಗಿಸಬಹುದು?
   *iv.* ಬಜೆಟ್ ರೇಖೆಯ ಇಳಿಜಾರು ಎಂದರೇನು?

   ಪ್ರಶ್ನೆ 5, 6 ಮತ್ತು 7ನೇ ಪ್ರಶ್ನೆಗಳು ಪಶ್ನೆ 4ಕ್ಕೆ ಸಂಬಂಧಿಸಿದ್ದಾಗಿದೆ.
5. ಬೆಲೆ ಸ್ಥಿರವಾಗಿದ್ದು, ಅನುಭೋಗಿಯ ಆದಾಯ ₹40 ಗಳಿಗೆ ಹೆಚ್ಚಾದರೆ ಬಜೆಟ್ ರೇಖೆಯು ಹೇಗೆ ಬದಲಾಗುತ್ತದೆ ?
6. ಸರಕು1 ರ ಬೆಲೆ ಮತ್ತು ಅನುಭೋಗಿಯ ಆದಾಯ ಸ್ಥಿರವಾಗಿದ್ದು ಸರಕು2ರ ಬೆಲೆಯು 1ರೂ ನಷ್ಟ ಕಡಿಮೆಯಾದರೆ ಬಜೆಟ್ ರೇಖೆಯು ಹೇಗೆ ಬದಲಾಗುತ್ತದೆ ?
7. ಬೆಲೆ ಹಾಗೂ ಆದಾಯ ಎರಡು ದ್ವಿಗುಣಗೊಂಡರೆ ಬಜೆಟ್ ಗಣಕ್ಕೆ ಏನಾಗುತ್ತದೆ ?
8. ಒಬ್ಬ ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚುಮಾಡಿದರೆ ಸರಕು1 ನ್ನು 6 ಘಟಕಗಳಷ್ಟು ಮತ್ತು ಸರಕು2 ನ್ನು 8 ಘಟಕಗಳಷ್ಟು ಪಡೆಯಬಹುದೆಂದು ಭಾವಿಸೋಣ. ಆ ಎರಡೂ ಸರಕುಗಳ ಬೆಲೆ ಕ್ರಮವಾಗಿ ₹6 ಮತ್ತು ₹8 ಹಾಗಾದರೆ ಅನುಭೋಗಿಯ ಆದಾಯವೆಷ್ಟು ?

9. ಅನುಭೋಗಿಯು ಪೂರ್ಣ ಘಟಕಗಳಲ್ಲಿ ಮಾತ್ರ ಲಭ್ಯವಿರುವ ಎರಡು ಸರಕುಗಳನ್ನು ಅನುಭೋಗಿಸುತ್ತಾಳೆಂದು ಭಾವಿಸೋಣ. ಎರಡು ಸರಕುಗಳ ಬೆಲೆ ಸಮಾನವಾಗಿ ₹10 ಮತ್ತು ಅನುಭೋಗಿಯ ಆದಾಯ ₹40

*a.* ಅನುಭೋಗಿಗೆ ಲಭ್ಯವಾಗುವ ಎಲ್ಲಾ ಸಂಯೋಜನೆಗಳನ್ನು ಬರೆಯಿರಿ.

*b.* ಅನುಭೋಗಿಗೆ ಲಭ್ಯವಿರುವ ಎಲ್ಲಾ ಸಂಯೋಜನೆಗಳಲ್ಲಿ ಯಾವ ಸಂಯೋಜನೆಯು ಪರಿಪೂರ್ಣವಾಗಿ ₹40 ವೆಚ್ಚಕ್ಕೆ ಸಮನಾಗಿದೆ ಎಂಬುದನ್ನು ಗುರುತಿಸಿ.

10. ಏಕತಾನಾತ್ಮಕ ಒಲವು(ಆದ್ಯತೆ) ಎಂದರೇನು ?

11. ಅನುಭೋಗಿಯು ಏಕತಾನಾತ್ಮಕ ಒಲವನ್ನು ಹೊಂದಿದ್ದರೆ, (10,8) ಮತ್ತು (8,6) ಸಂಯೋಜನೆಗಳ ನಡುವೆ ಔದಾಸೀನ್ಯದಿಂದಿರಬಹುದೇ ?

12. ಒಂದುವೇಳೆ ಒಬ್ಬ ಅನುಭೋಗಿಯ ಆದ್ಯತೆಗಳು ಏಕತಾನಾತ್ಮಕ ಒಲವನ್ನು ಹೊಂದಿವೆಯೆಂದುಕೊಳ್ಳೋಣ. (10,10), (10,9) ಮತ್ತು (9,9) ಸಂಯೋಜನೆಗಳಲ್ಲಿ ಅನುಭೋಗಿಯು ಆದ್ಯತೆಗಳನ್ನು ಶ್ರೇಣಿಕರಿಸುವದರ ಬಗ್ಗೆ ಏನನ್ನು ಹೇಳುತ್ತೀರಾ ?

13. ಒಂದು ವೇಳೆ ನಿಮ್ಮ ಸ್ನೇಹಿತ (5,6) ಮತ್ತು (6,6) ಸಂಯೋಜನೆಗಳಿಗೆ ಔದಾಸೀನ್ಯನಾಗಿರುತ್ತಾಳೆ ಎಂದುಕೊಳ್ಳೋಣ. ನಿಮ್ಮ ಸ್ನೇಹಿತನ ಆದ್ಯತೆಗಳು ಏಕತಾನಾತ್ಮಕವಾಗಿವೆಯೇ ?



14. ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಇಬ್ಬರು ಅನುಭೋಗಿಗಳಿದ್ದಾರೆ ಎಂದು ಕೊಳ್ಳೋಣ ಅವರ ಬೇಡಿಕೆಯ ಬಿಂಬಕ ಈ ಕೆಳಗಿನಂತಿವೆ. $d_1(p) = 20-p$ ಸಮೀಕರಣದಲ್ಲಿ ಬೆಲೆಯು 20ಕ್ಕೆ ಸಮನಾಗಿರಬಹುದು ಅಥವಾ ಅದಕ್ಕಿಂತ ಕಡಿಮೆಯಿರಬಹುದು ಮತ್ತು $d_1(p)=0$ ಇದರಲ್ಲಿ ಯಾವುದೇ ಬೆಲೆಯು 20ಕ್ಕಿಂತ ಹೆಚ್ಚಾಗಿರುತ್ತದೆ.

$d_2(p)=30-2p$ ಯಾವುದೇ ಬೆಲೆಯು 15ಕ್ಕೆ ಸಮವಾಗಿರುತ್ತದೆ ಅಥವಾ ಅದಕ್ಕಿಂತ ಕಡಿಮೆಯಿರುತ್ತದೆ ಮತ್ತು $d_1(p) = 0$ ಇದರಲ್ಲಿ ಯಾವುದೇ ಬೆಲೆಯು 15 ಕ್ಕಿಂತ ಹೆಚ್ಚಾಗಿರುತ್ತದೆ. ಮಾರುಕಟ್ಟೆ ಬೇಡಿಕೆ ಬಿಂಬಕವನ್ನು ಗುರುತಿಸಿ.

15. ಒಂದು ಸರಕಿಗೆ 20 ಅನುಭೋಗಿಗಳಿದ್ದಾರೆಂದು ಭಾವಿಸೋಣ ಮತ್ತು ಅವರೆಲ್ಲಾ ಸಮನಾದ ಬೇಡಿಕೆ ಬಿಂಬಕವನ್ನು ಹೊಂದಿದ್ದಾರೆ.

$d(p)=10-3p$ ಇದು ಯಾವುದೇ ಬೆಲೆಯಲ್ಲಿ 10/3 ಕ್ಕಿಂತ ಕಡಿಮೆಯಾಗಿರುತ್ತದೆ ಅಥವಾ ಸಮನಾಗಿರುತ್ತದೆ ಮತ್ತು $d_1(p)=0$ ಇದರಲ್ಲಿ ಯಾವುದೇ ಬೆಲೆಯಲ್ಲಿ 10/3 ಕ್ಕಿಂತ ಹೆಚ್ಚಾಗಿರುತ್ತದೆ. ಮಾರುಕಟ್ಟೆ ಬೇಡಿಕೆ ಬಿಂಬಕವೇನು ?

16. ಇಬ್ಬರು ಅನುಭೋಗಿಗಳಿರುವ ಒಂದು ಮಾರುಕಟ್ಟೆಯನ್ನು ಪರಿಗಣಿಸೋಣ ಮತ್ತು ನಿರ್ದಿಷ್ಟ ಸರಕಿಗಿರುವ ಅವರ ಬೇಡಿಕೆಯು ಈ ಕೆಳಗಿನಂತಿದೆ.

| $P$ | $d_1$ | $d_2$ |
|---|---|---|
| 1 | 9 | 24 |
| 2 | 8 | 20 |
| 3 | 7 | 18 |
| 4 | 6 | 16 |
| 5 | 5 | 14 |
| 6 | 4 | 12 |

ಆ ಸರಕಿಗೆ ಮಾರುಕಟ್ಟೆ ಬೇಡಿಕೆಯನ್ನು ಲೆಕ್ಕಚಾರ ಮಾಡಿ

17. ಸಾಮಾನ್ಯ ಸರಕುಗಳೆಂದರೇನು ?

18. ಕೆಳದರ್ಜೆ ಸರಕುಗಳೆಂದರೇನು ? ಉದಾಹರಣೆ ಕೊಡಿ.

19. ಬದಲಿ ಸರಕುಗಳೆಂದರೇನು ? ಪರಸ್ಪರ ಬದಲಿ ಸರಕುಗಳಾಗಿರುವ ಯಾವುದಾದರು ಎರಡು ಸರಕುಗಳ ಉದಾಹರಣೆ ಕೊಡಿ.

20. ಪೂರಕ ಸರಕುಗಳೆಂದರೇನು ? ಪರಸ್ಪರ ಪೂರಕ ಸರಕುಗಳಾಗಿರುವ ಯಾವುದಾದರೂ ಎರಡು ಸರಕುಗಳ ಉದಾಹರಣೆ ಕೊಡಿ.

21. ಬೆಲೆ ಬೇಡಿಕೆ ಸ್ಥಿತಿ ಸ್ಥಾಪಕತ್ವವನ್ನು ವಿವರಿಸಿ.

22. ಒಂದು ಸರಕಿನ ಬೇಡಿಕೆಯನ್ನು ಪರಿಗಣಿಸಿ ರೂ.4 ಬೆಲೆಯಲ್ಲಿ ಆ ಸರಕಿಗೆ 25 ಘಟಕಗಳಷ್ಟು ಬೇಡಿಕೆಯಿದೆ. ಒಂದು ವೇಳೆ ಆ ಸರಕಿನ ಬೆಲೆ ₹5 ಗಳಿಗೆ ಹೆಚ್ಚಾಗಿದೆ, ಎಂದು ಕೊಳ್ಳೋಣ ಮತ್ತು ಅದರ ಪರಿಣಾಮವಾಗಿ ಆ ಸರಕಿನ ಬೇಡಿಕೆಯು 20 ಘಟಕಗಳಷ್ಟು ಕಡಿಮೆಯಾಗುತ್ತದೆ. ಬೆಲೆ ಸ್ಥಿತಿ ಸ್ಥಾಪಕತ್ವವನ್ನು ಲೆಕ್ಕಾಚಾರ ಮಾಡಿ.

23. ಬೇಡಿಕೆ ರೇಖೆ $d(p)$=10–3P ನ್ನು ಪರಿಗಣಿಸಿ. 5/3 ರ ಬೆಲೆಯಲ್ಲಿ ಬೆಲೆಯ ಸ್ಥಿತಿ ಸ್ಥಾಪಕತ್ವವೇನು.?

24. ಒಂದು ಸರಕಿನ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವು –0.2 ಅಂದುಕೊಳ್ಳೋಣ. ಆ ಸರಕಿನ ಬೆಲೆಯಲ್ಲಿ ಶೇಕಡ 5 ರಷ್ಟು ಹೆಚ್ಚಾದರೆ, ಆ ಸರಕಿನ ಬೇಡಿಕೆಯು ಶೇಕಡವಾರು ಎಷ್ಟು ಪ್ರಮಾಣದಲ್ಲಿ ಕಡಿಮೆಯಾಗುತ್ತದೆ.

25. ಒಂದು ಸರಕಿನ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವ –0.2 ಅಂದುಕೊಳ್ಳೋಣ. ಆ ಸರಕಿನ ಬೆಲೆಯು ಶೇಕಡ 10 ರಷ್ಟು ಹೆಚ್ಚಾದರೆ ಆ ಸರಕಿನ ಮೇಲಿನ ವೆಚ್ಚವು ಹೇಗೆ ಪ್ರಭಾವಿಸಲ್ಪಡುತ್ತದೆ.

26. ಒಂದು ಸರಕಿನ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ ಶೇಕಡ 4 ರಷ್ಟು ಕಡಿಮೆಯಾದರೆ, ಅದರ ಪರಿಣಾಮವಾಗಿ ಆ ಸರಕಿನ ಮೇಲಿನ ವೆಚ್ಚವು ಶೇಕಡ 2 ರಷ್ಟು ಕಡಿಮೆಯಾಗುತ್ತದೆ. ಬೇಡಿಕೆಯ ಸ್ಥಿತಿಸ್ಥಾಪಕತ್ವದ ಬಗ್ಗೆ ನೀವು ಏನನ್ನು ಹೇಳುವಿರಿ ?

❖ ❖ ❖ ❖

# ಅಧ್ಯಾಯ ೩



# ಉತ್ಪಾದನೆ ಮತ್ತು ವೆಚ್ಚಗಳು

## *Production and Costs*

ನಾವು ಹಿಂದಿನ ಅಧ್ಯಾಯದಲ್ಲಿ ಅನುಭೋಗಿಗಳ ವರ್ತನೆಯನ್ನು ಚರ್ಚಿಸಿದ್ದೇವೆ. ಈ ಅಧ್ಯಾಯ ಹಾಗೂ ಮುಂದಿನ ಅಧ್ಯಾಯಗಳಲ್ಲಿ ಉತ್ಪಾದಕರ ವರ್ತನೆಯನ್ನು ಪರಿಶೀಲಿಸುತ್ತೇವೆ. ಒಬ್ಬ ಉತ್ಪಾದಕ ಅಥವಾ ಒಂದು ಉದ್ಯಮ ಘಟಕವು ವಿವಿಧ ಆದಾನಗಳಾದ ಶ್ರಮ, ಯಂತ್ರಗಳು, ಭೂಮಿ, ಕಚ್ಚಾ ಸರಕುಗಳನ್ನು ಸಂಗ್ರಹಿಸಿಕೊಳ್ಳ ಬೇಕಾಗುತ್ತದೆ. ಈ ಆದಾನಗಳನ್ನು ಸಂಯೋಜಿಸಿ ಉದ್ಯಮ ಘಟಕವು ಉತ್ಪನ್ನವನ್ನು ಉತ್ಪಾದಿಸುತ್ತದೆ. ಇದನ್ನು **ಉತ್ಪಾದನಾ ಪ್ರಕ್ರಿಯೆ** ಎಂದು ಕರೆಯುತ್ತಾರೆ.

ಆದಾನಗಳನ್ನು ಪಡೆಯಲು ಉದ್ಯಮ ಘಟಕವು ಅವುಗಳಿಗೆ ಪಾವತಿಸಬೇಕಾಗುತ್ತದೆ. ಇದುವೇ ಉತ್ಪಾದನಾ ವೆಚ್ಚವಾಗಿದೆ. ಒಮ್ಮೆ ಉತ್ಪನ್ನವನ್ನು ತಯಾರಿಸಿದ ನಂತರ ಉದ್ಯಮ ಘಟಕವು ಅದನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಆದಾಯಗಳಿಸುತ್ತದೆ. ನಿವ್ವಳ ವೆಚ್ಚಕ್ಕಿಂತ ಗಳಿಸಿದ ಹೆಚ್ಚಿನ ಆದಾಯವು ಉದ್ಯಮ ಘಟಕದ ಲಾಭವಾಗುತ್ತದೆ. ನಾವು ಒಂದು ಉದ್ಯಮ ಘಟಕವು ಲಾಭವನ್ನು ಗಳಿಸುವ ಉದ್ದೇಶ ಹೊಂದಿದೆ ಎಂದು ಕಲ್ಪಿಸಿಕೊಳ್ಳೋಣ. ಆಗ ಅದು ವೆಚ್ಚದ ಸ್ವರೂಪ ಮತ್ತು ಉತ್ಪನ್ನಗಳ ಮಾರುಕಟ್ಟೆ ಬೆಲೆಯನ್ನು ಆಧರಿಸಿ ಗರಿಷ್ಠ ಲಾಭ ಗಳಿಸಲು ಮಾಡಬೇಕಾಗುವ ಉತ್ಪಾದನಾ ಪ್ರಮಾಣವನ್ನು ನಿರ್ಧರಿಸುತ್ತದೆ.

ಈ ಅಧ್ಯಾಯದಲ್ಲಿ ನಾವು ಉದ್ಯಮ ಘಟಕದ ಉತ್ಪಾದನಾ ಕ್ರಿಯೆಯ ವಿಭಿನ್ನ ಅಂಶಗಳನ್ನು ಅಧ್ಯಯನ ಮಾಡುತ್ತೇವೆ. ಆದಾನ ಮತ್ತು ಉತ್ಪನ್ನಗಳ ನಡುವಿನ ಸಂಬಂಧವನ್ನು, ಉತ್ಪಾದನಾ ಪ್ರಕ್ರಿಯೆಯಲ್ಲಿ ಬದಲಾಗುವ ಆದಾನದ ಕೊಡುಗೆಗಳನ್ನು ಮತ್ತು ಉತ್ಪಾದನಾ ಬಿಂಬಕದ ಗುಣಲಕ್ಷಣಗಳನ್ನು ಚರ್ಚಿಸುತ್ತೇವೆ. ತದನಂತರ ಉತ್ಪಾದನಾ ಘಟಕದ ವೆಚ್ಚದ ರಚನೆಯನ್ನು ಅಧ್ಯಯನ ಮಾಡುತ್ತೇವೆ. ವೆಚ್ಚದ ಬಿಂಬಕ ಮತ್ತು ಅದರ ವಿವಿಧ ವಿಷಯಗಳನ್ನು ಚರ್ಚಿಸುತ್ತೇವೆ. ಅಲ್ಪಾವಧಿ ಮತ್ತು ದೀರ್ಘಾವಧಿ ವೆಚ್ಚದ ರೇಖೆಗಳ ಗುಣಲಕ್ಷಣಗಳನ್ನು ಕಲಿಯುತ್ತೇವೆ.

### 3.1. ಉತ್ಪಾದನಾ ಬಿಂಬಕ *Production Function*




ಒಂದು ಉದ್ಯಮ ಘಟಕದ ಪ್ರಯತ್ನ

ಒಂದು ಉದ್ಯಮ ಘಟಕದ ಉತ್ಪಾದನಾ ಬಿಂಬಕವು ಉದ್ಯಮ ಘಟಕ ಬಳಸಿದ ಆದಾನಗಳು ಮತ್ತು ಉತ್ಪಾದಿಸಿದ ಉತ್ಪನ್ನಗಳ ನಡುವಿನ ಸಂಬಂಧವಾಗಿದೆ. ಬಳಸಲಾಗುವ ಆದಾನಗಳ ವಿವಿಧ ಪ್ರಮಾಣಗಳಿಗೆ, ಉತ್ಪಾದಿಸಬಹುದಾದ ಗರಿಷ್ಠ ಪ್ರಮಾಣದ ಉತ್ಪನ್ನವನ್ನು ಇದು ನೀಡುತ್ತದೆ.

ಒಬ್ಬ ಶೂಗಳನ್ನು ಉತ್ಪಾದಿಸುವ ತಯಾರಕಳನ್ನು ಪರಿಗಣಿಸೋಣ. ಆಕೆಯು ಇಬ್ಬರು ಕಾರ್ಮಿಕರನ್ನು ನೇಮಿಸಿಕೊಂಡಿರುತ್ತಾಳೆ. ಕಾರ್ಮಿಕ 1 ಮತ್ತು ಕಾರ್ಮಿಕ 2. ಎರಡು ಯಂತ್ರಗಳು – ಯಂತ್ರ 1 ಮತ್ತು ಯಂತ್ರ 2 ಮತ್ತು 10 ಕಿಲೋ ಗ್ರಾಂ ನಷ್ಟು

ಕಚ್ಚಾವಸ್ತುಗಳು, ಕಾರ್ಮಿಕ 1, ಕಾರ್ಯಾಚರಣೆ ಯಂತ್ರ 1ರಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾಳೆ. ಕಾರ್ಮಿಕ 2 ಕಾರ್ಯಾಚರಣೆ ಯಂತ್ರ 2ರಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾಳೆ 10 ಕಿಲೋ ಕಚ್ಚಾ ಸಾಮಾಗ್ರಿಗಳೊಂದಿಗೆ ಕಾರ್ಮಿಕ 1, ಯಂತ್ರ 1ನ್ನು ಬಳಸಿಕೊಂಡು, ಕಾರ್ಮಿಕ 2 ಯಂತ್ರ 2ನ್ನು ಬಳಸಿಕೊಂಡು 10 ಜೊತೆ ಶೂಗಳನ್ನು ಉತ್ಪಾದಿಸಬಹುದು. ಆದಾಗ್ಯೂ, ಕಾರ್ಮಿಕ 1 ಯಂತ್ರ 2ನ್ನು ಮತ್ತು ಕಾರ್ಮಿಕ 2 ಯಂತ್ರ 1ನ್ನು ಬಳಸಿದರೆ, ಅದೇ 10 ಕಿಲೋ ಕಚ್ಚಾ ಸಾಮಾಗ್ರಿ ಬಳಸಿ ಕೇವಲ 8 ಜೊತೆ ಶೂಗಳ ಉತ್ಪಾದನೆಯಲ್ಲಿ ಕೊನೆಗೊಳ್ಳುತ್ತಾರೆ. ಆದ್ದರಿಂದ ಆದಾನಗಳ ದಕ್ಷ ಬಳಕೆಯಿಂದ 10 ಜೊತೆ ಶೂಗಳನ್ನು ಉತ್ಪಾದಿಸಬಹುದು, ಅದೇ ಆದಾನಗಳನ್ನು ದಕ್ಷತೆಯಿಂದ ಬಳಸಿಕೊಳ್ಳದಿದ್ದಾಗ 8 ಜೊತೆ ಶೂಗಳನ್ನು ಉತ್ಪಾದಿಸಲಾಯಿತು. ಉತ್ಪಾದನಾ ಬಿಂಬಕವು ಆದಾನಗಳ ದಕ್ಷ ಬಳಕೆಯನ್ನು ಮಾತ್ರ ಪರಿಗಣಿಸುತ್ತದೆ. ಅದು ನೌಕರ 1, ನೌಕರ 2, ಯಂತ್ರ 1, ಯಂತ್ರ 2 ಮತ್ತು 10 ಕಿಲೋ ಕಚ್ಚಾ ವಸ್ತುಗಳು ಸೇರಿ 10 ಜೊತೆ ಶೂಗಳನ್ನು ಉತ್ಪಾದಿಸಬಹುದಾಗಿದೆ. ಇದು ಅದಾನಗಳ ಸಂಯೋಜನೆಯು ನೀಡಬಹುದಾದ ಸಂಭವನೀಯ ಗರಿಷ್ಠ ಉತ್ಪನ್ನವಾಗಿದೆ.

ಉತ್ಪಾದನಾ ಬಿಂಬಕವನ್ನು ಒಂದು ನೀಡಲಾದ (Given) ತಂತ್ರಜ್ಞಾನದಡಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಆದಾನಗಳ ವಿವಿಧ ಸಂಯೋಜನೆಗಳನ್ನು ಬಳಸಿಕೊಂಡು ಉತ್ಪಾದಿಸಬಹುದಾದ ಗರಿಷ್ಠ ಮಟ್ಟದ ಉತ್ಪಾದನೆಯನ್ನು ತಂತ್ರಜ್ಞಾನವು ನಿರ್ಧರಿಸುತ್ತದೆ. ತಂತ್ರಜ್ಞಾನ ಸುಧಾರಿಸಿದರೆ, ವಿವಿಧ ಆದಾನಗಳ ಸಂಯೋಜನೆಗಳಿಂದ ಪಡೆಯಬಹುದಾದ ಉತ್ಪನ್ನದ ಗರಿಷ್ಠ ಮಟ್ಟವು ಹೆಚ್ಚುತ್ತದೆ. ಆಗ ನಾವು ಒಂದು ಹೊಸ ಉತ್ಪಾದನಾ ಬಿಂಬಕವನ್ನು ಪಡೆಯುತ್ತೇವೆ.

ಒಂದು ಉದ್ಯಮ ಘಟಕವು ಉತ್ಪಾದನಾ ಪ್ರಕ್ರಿಯೆಯಲ್ಲಿ ಬಳಸುವ ಆದಾನಗಳನ್ನು ಉತ್ಪಾದನಾಂಗಗಳೆಂದು ಕರೆಯಲಾಗುತ್ತದೆ. ಉತ್ಪನ್ನವನ್ನು ಉತ್ಪಾದಿಸುವ ಸಲುವಾಗಿ ಉದ್ಯಮ ಘಟಕಕ್ಕೆ ಅನೇಕ ಸಂಖ್ಯೆಯ ವಿವಿಧ ಆದಾನಗಳು ಬೇಕಾಗಬಹುದು. ಆದಾಗ್ಯೂ ನಾವಿಲ್ಲಿ ಸಮಯಕ್ಕನುಗುಣವಾಗಿ ಕೇವಲ ಎರಡು ಉತ್ಪಾದನಾಂಗಗಳನ್ನು ಉಪಯೋಗಿಸಿ ಉತ್ಪಾದಿಸುವ ಉದ್ಯಮ ಘಟಕವನ್ನು ಪರಿಗಣಿಸೋಣ– ಉತ್ಪಾದನಾಂಗ 1 ಮತ್ತು ಉತ್ಪಾದನಾಂಗ 2. ನಮ್ಮ ಉತ್ಪಾದನಾ ಬಿಂಬಕವು ಈ ಎರಡು ಉತ್ಪಾದನಾಂಗಗಳ ವಿಭಿನ್ನ ಸಂಯೋಜನೆಗಳನ್ನು ಬಳಸಿ ಗರಿಷ್ಠ ಪ್ರಮಾಣದ ಉತ್ಪನ್ನವನ್ನು ಉತ್ಪಾದಿಸಬಹುದೆಂದು ತಿಳಿಸುತ್ತದೆ.

ನಾವು ಉತ್ಪಾದನಾ ಬಿಂಬಕವನ್ನು ಹೀಗೆ ಬರೆಯಬಹುದು,

$$q = f(x_1, x_2) \tag{3.1}$$

ಇದು ಉತ್ಪಾದನಾಂಗ 1ರ, $x1$ ಪ್ರಮಾಣವನ್ನು ಬಳಸಿ ಮತ್ತು ಉತ್ಪಾದನಾಂಗ 2ರ, $x2$ ಪ್ರಮಾಣವನ್ನು ಬಳಸಿ ಬಹುತೇಕ q ಪ್ರಮಾಣದ ಉತ್ಪನ್ನವನ್ನು ನಾವು ಉತ್ಪಾದಿಸಬಹುದು ಎಂದು ತಿಳಿಸುತ್ತದೆ.

**ಕೋಷ್ಟಕ 3.1: ಉತ್ಪಾದನಾ ಬಿಂಬಕ**

| ಉತ್ಪಾದನಾಂಗ | | $x_2$ | | | | | | |
|---|---|---|---|---|---|---|---|---|
| | | 0 | 1 | 2 | 3 | 4 | 5 | 6 |
| $x_1$ | 0 | 0 | 0 | 0 | 0 | 0 | 0 | 0 |
| | 1 | 0 | 1 | 3 | 7 | 10 | 12 | 13 |
| | 2 | 0 | 3 | 10 | 18 | 24 | 29 | 33 |
| | 3 | 0 | 7 | 18 | 30 | 40 | 46 | 50 |
| | 4 | 0 | 10 | 24 | 40 | 50 | 56 | 57 |
| | 5 | 0 | 12 | 29 | 46 | 56 | 58 | 59 |
| | 6 | 0 | 13 | 33 | 50 | 57 | 59 | 60 |

ಉತ್ಪಾದನಾ ಬಿಂಬಕದ ಒಂದು ಸಂಖ್ಯಾತ್ಮಕ ಉದಾಹರಣೆಯನ್ನು ಕೋಷ್ಟಕ 3.1 ರಲ್ಲಿ ನೀಡಲಾಗಿದೆ. ಎಡ ಅಂಕಣವು ಉತ್ಪಾದನಾಂಗ 1 ರ ಪ್ರಮಾಣವನ್ನು ತೋರಿಸುತ್ತದೆ ಮತ್ತು ಮೇಲಿನ ಸಾಲಿನಲ್ಲಿ ಉತ್ಪಾದನಾಂಗ 2ನ್ನು ತೋರಿಸುತ್ತದೆ. ನಾವು ಯಾವುದೇ ಸಾಲಿನುದ್ದಕ್ಕೂ ಬಲಭಾಗಕ್ಕೆ ಮುಂದುವರೆದಂತೆ ಉತ್ಪಾದನಾಂಗ 2 ಹೆಚ್ಚಾಗುತ್ತದೆ ಮತ್ತು ನಾವು ಯಾವುದೇ ಅಂಕಣದಲ್ಲಿ ಕೆಳಗಿಳಿದಂತೆ ಉತ್ಪಾದನಾಂಗ 1 ಹೆಚ್ಚಾಗುತ್ತದೆ. ಎರಡೂ ಉತ್ಪಾದನಾಂಗಗಳ ವಿಭಿನ್ನ ಮೌಲ್ಯಗಳಿಗೆ, ಕೋಷ್ಟಕವು ಅನುಗುಣವಾದ ಉತ್ಪನ್ನದ ಮಟ್ಟವನ್ನು ತೋರಿಸುತ್ತದೆ. ಉದಾಹರಣೆಗೆ, ಉತ್ಪಾದನಾಂಗ 1 ರ 1 ಯೂನಿಟ್ ಮತ್ತು ಉತ್ಪಾದನಾಂಗ 2ರ 1 ಯೂನಿಟ್‌ನೊಂದಿಗೆ, ಉದ್ಯಮ ಘಟಕವು ಹೆಚ್ಚೆಂದರೆ 1 ಯೂನಿಟ್ ಉತ್ಪನ್ನವನ್ನು ಉತ್ಪಾದಿಸುತ್ತದೆ, ಉತ್ಪಾದನಾಂಗ 1 ರ 2 ಯೂನಿಟ್ ಮತ್ತು ಉತ್ಪಾದನಾಂಗ 2ರ 2 ಯೂನಿಟ್‌ಗಳೊಂದಿಗೆ, ಇದು 10 ಯೂನಿಟ್ ಉತ್ಪನ್ನವನ್ನು ಉತ್ಪಾದಿಸುತ್ತದೆ; ಉತ್ಪಾದನಾಂಗ 1 ರ 3 ಯೂನಿಟ್‌ಗಳು ಮತ್ತು ಉತ್ಪಾದನಾಂಗ 2ರ 2 ಯೂನಿಟ್ ಸೇರಿ ಹೆಚ್ಚೆಂದರೆ 18 ಯೂನಿಟ್‌ಗಳ ಉತ್ಪನ್ನವನ್ನು ಉತ್ಪಾದಿಸುತ್ತದೆ, ಹೀಗೆಯೇ ಮುಂದುವರೆಯುತ್ತಾ ಸಾಗುತ್ತದೆ.

**ಸಮ ಉತ್ಪನ್ನ ರೇಖೆ *Isoquant***

ಎರಡನೇ ಅಧ್ಯಾಯದಲ್ಲಿ, ನಾವು ಔದಾಸೀನ್ಯ ವಕ್ರ ರೇಖೆಗಳ ಬಗ್ಗೆ ಕಲಿತಿದ್ದೇವೆ. ಇಲ್ಲಿ ಅದೇ ರೀತಿಯ ಸಮ ಉತ್ಪನ್ನ ರೇಖೆ ಎಂದು ಕರೆಯಲಾಗುವ ಪರಿಕಲ್ಪನೆಯನ್ನು ಪರಿಚಯಿಸುತ್ತಿದ್ದೇವೆ. ಇದು ಉತ್ಪಾದನಾ ಬಿಂಬಕವನ್ನು ಪ್ರತಿನಿಧಿಸುವ ಪರ್ಯಾಯ ಮಾರ್ಗವಾಗಿದೆ. ಎರಡು ಆದಾನ ಅಂಶಗಳನ್ನು ಹೊಂದಿದ ಆದಾನ ಅಂಶ 1 ಮತ್ತು ಆದಾನ ಅಂಶ 2ರ ಉತ್ಪಾದನಾ ಬಿಂಬಕವನ್ನು ಪರಿಗಣಿಸೋಣ. ಒಂದೇ ಗರಿಷ್ಠ ಮಟ್ಟದ ಉತ್ಪಾದನೆಯನ್ನು ನೀಡುವ ಎರಡು ಅದಾನಗಳ ಎಲ್ಲಾ ಸಂಭವನೀಯ ಸಂಯೋಜನೆಗಳ ಸಮೂಹವನ್ನು ಸಮ ಉತ್ಪನ್ನ ರೇಖೆಯೆನ್ನುತ್ತೇವೆ. ಪ್ರತಿಯೊಂದು ಸಮ ಉತ್ಪನ್ನ–ರೇಖೆಯು ಒಂದು ನಿರ್ದಿಷ್ಟ ಮಟ್ಟದ ಉತ್ಪನ್ನವನ್ನು ಪ್ರತಿನಿಧಿಸುತ್ತದೆ ಮತ್ತು ಆ ಪ್ರಮಾಣದ ಉತ್ಪನ್ನದೊಂದಿಗೆ ಗುರುತಿಸಲಾಗಿದೆ

ರೇಖಾಚಿತ್ರದಲ್ಲಿ ತೋರಿಸಿರುವಂತೆ ಮೂರು ಉತ್ಪನ್ನ ಮಟ್ಟಗಳಿಗೆ ಮೂರು ಸಮ ಉತ್ಪನ್ನ–ರೇಖೆಗಳನ್ನು ಹೊಂದಿದ್ದೇವೆ. ಅವೆಂದರೆ ಉತ್ಪನ್ನಗಳ ಸಮತಲದಲ್ಲಿ $q = q_1$, $q = q_2$, $q = q_3$ ಇವೆ. ಉತ್ಪನ್ನಗಳ ಎರಡು ಸಂಯೋಜನೆಗಳಾದ $(x'_1\ x''_2)$ ಮತ್ತು $(x''_1\ x'_2)$ ಗಳು ಒಂದೇ ಮಟ್ಟದ ಉತ್ಪನ್ನವಾದ $q_1$ ಅನ್ನು ನೀಡುತ್ತವೆ. ನಾವು ಉತ್ಪಾದನಾಂಗ 2 ನ್ನು $x'_2$ ಗೆ ನಿರ್ದಿಷ್ಟ ಗೊಳಿಸಿ, ಉತ್ಪಾದನಾಂಗ 1 ನ್ನು $x'''_1$ ಗೆ ಹೆಚ್ಚಿಸಿದಾಗ, ಉತ್ಪನ್ನವು ಹೆಚ್ಚುತ್ತದೆ ಮತ್ತು ನಾವು ಉನ್ನತ ಸಮ ಉತ್ಪನ್ನ ರೇಖೆಯನ್ನು $q = q_2$ವನ್ನು ತಲುಪುತ್ತೇವೆ ಸೀಮಾಂತ ಉತ್ಪನ್ನಗಳು ಧನಾತ್ಮಕವಾಗಿರುವಾಗ, ಅಧಿಕ ಪ್ರಮಾಣದ ಒಂದು ಆದಾನದೊಂದಿಗೆ ಕಡಿಮೆ ಮಟ್ಟದ ಉಳಿದ ಉತ್ಪಾದನಾಂಗವನ್ನು ಕಡಿಮೆ ಉಪಯೋಗಿಸಿ ಅದೇ ಮಟ್ಟದ ಉತ್ಪನ್ನವನ್ನು ಉತ್ಪಾದಿಸಬಹುದು. ಆದ್ದರಿಂದ ಸಮ ಉತ್ಪನ್ನ ರೇಖೆಯು ಋಣಾತ್ಮಕ ಇಳಿಜಾರು ರೇಖೆಯಾಗಿರುತ್ತದೆ.




ನಮ್ಮ ಉದಾಹರಣೆಯಲ್ಲಿ ಉತ್ಪಾದನೆಗೆ ಎರಡೂ ಆದಾನಗಳು ಅವಶ್ಯಕವಾಗಿವೆ. ಯಾವುದೇ ಒಂದು ಆದಾನವು ಶೂನ್ಯವಾದರೆ, ಯಾವುದೇ ಉತ್ಪಾದನೆ ಉಂಟಾಗುವುದಿಲ್ಲ. ಎರಡೂ ಧನಾತ್ಮಕ ಆದಾನಗಳು ಧನಾತ್ಮಕ ಉತ್ಪನ್ನವನ್ನು ನೀಡುತ್ತವೆ. ನಾವು ಯಾವುದೇ ಆದಾನದ ಮಟ್ಟ ಹೆಚ್ಚಿಸಿದಂತೆ ಉತ್ಪನ್ನವೂ ಹೆಚ್ಚಾಗುತ್ತದೆ.

## 3.2 ಅಲ್ಪಾವಧಿ ಮತ್ತು ದೀರ್ಘಾವಧಿ *The Short Run and the Long Run*

ನಾವು ಮುಂದಿನ ಯಾವುದೇ ವಿಶ್ಲೇಷಣೆಯನ್ನು ಆರಂಭಿಸುವುದಕ್ಕಿಂತ ಮೊದಲು ಅಲ್ಪಾವಧಿ ಮತ್ತು ದೀರ್ಘಾವಧಿ ಎಂಬ ಎರಡು ಪರಿಕಲ್ಪನೆಗಳನ್ನು ಚರ್ಚಿಸುವುದು ಮುಖ್ಯವಾಗಿದೆ.

ಅಲ್ಪಾವಧಿಯಲ್ಲಿ, ಉದ್ಯಮ ಘಟಕವು ಎಲ್ಲಾ ಆದಾನಗಳನ್ನು ಬದಲಾಯಿಸುವುದಿಲ್ಲ, ಎರಡು ಉತ್ಪಾದನಾಂಗಗಳಲ್ಲಿ ಒಂದನ್ನು – ಉತ್ಪಾದನಾಂಗ 1 ಅಥವಾ ಉತ್ಪಾದನಾಂಗ 2 ನ್ನು ಬದಲಾಯಿಸಲು ಸಾಧ್ಯವಿಲ್ಲ, ಆದ್ದರಿಂದ ಅದು ಅಲ್ಪಾವಧಿಯಲ್ಲಿ ಸ್ಥಿರವಾಗಿರುತ್ತವೆ. ಉತ್ಪನ್ನದ ಮಟ್ಟವನ್ನು ಬದಲಿಸುವ ಸಲುವಾಗಿ, ಉದ್ಯಮ ಘಟಕವು ಇನ್ನೊಂದು ಉತ್ಪಾದನಾಂಗವನ್ನು ಮಾತ್ರ ಬದಲಾಯಿಸಬಹುದು. ಸ್ಥಿರವಾಗಿರುವ ಉತ್ಪಾದನಾಂಗವನ್ನು ಸ್ಥಿರ ಆದಾನ ಎನ್ನುವರು. ಹಾಗೆಯೇ ಉದ್ಯಮ ಘಟಕವು ಬದಲಾಯಿಸಲು ಸಾಧ್ಯವಿರುವ ಇತರ ಉತ್ಪಾದನಾಂಗಗಳನ್ನು ಬದಲಾಗುವ ಆದಾನ ಎಂದು ಕರೆಯಲಾಗುತ್ತದೆ.

ಕೋಷ್ಟಕ 3.1 ರ ಮೂಲಕ ಪ್ರತಿನಿಧಿಸಿರುವ ಉದಾಹರಣೆಯನ್ನು ಪರಿಗಣಿಸೋಣ. ಅಲ್ಪಾವಧಿಯಲ್ಲಿ ಉತ್ಪಾದನಾಂಗ 2ನ್ನು 5 ಯೂನಿಟ್‌ನಲ್ಲಿ ಸ್ಥಿರಗೊಳಿಸಿದರೆ, ಆಗ ಅದಕ್ಕೆ ಅನುಗುಣವಾದ ಕಂಬಸಾಲು ಉದ್ಯಮ ಘಟಕವು ಅಲ್ಪಾವಧಿಯಲ್ಲಿ ಉತ್ಪದಾನಾಂಗ 1ನ್ನು ವಿವಿಧ ಪ್ರಮಾಣದಲ್ಲಿ ಬಳಸಿ ಉತ್ಪಾದಿಸಬಹುದಾದ ಉತ್ಪನ್ನದ ಮಟ್ಟಗಳನ್ನು ತೋರಿಸುತ್ತದೆ.

ದೀರ್ಘಾವಧಿಯಲ್ಲಿ, ಉತ್ಪಾದನೆಯ ಎಲ್ಲಾ ಉತ್ಪಾದನಾಂಗಗಳನ್ನು ಬದಲಾಯಿಸಬಹುದು. ದೀರ್ಘಾವಧಿಯಲ್ಲಿ ಒಂದು ಉದ್ಯಮ ಘಟಕವು ವಿಭಿನ್ನ ಮಟ್ಟದ ಉತ್ಪನ್ನಗಳನ್ನು ಉತ್ಪಾದಿಸಲು ಎರಡೂ ಆದಾನಗಳನ್ನು ಏಕಕಾಲದಲ್ಲಿ ಬದಲಾಯಿಸಬಹುದು. ಆದ್ದರಿಂದ ದೀರ್ಘಾವಧಿಯಲ್ಲಿ ಸ್ಥಿರ ಆದಾನಗಳಿರುವುದಿಲ್ಲ.

ಯಾವುದೇ ನಿರ್ದಿಷ್ಟ ಉತ್ಪಾದನಾ ಪ್ರಕ್ರಿಯೆಯಲ್ಲಿ, ಸಾಮಾನ್ಯವಾಗಿ, ದೀರ್ಘಾವಧಿಯು ಅಲ್ಪಾವಧಿಗಿಂತ ದೀರ್ಘ ಕಾಲಾವಧಿಯನ್ನು ಸೂಚಿಸುತ್ತದೆ. ವಿವಿಧ ಉತ್ಪಾದನಾ ಪ್ರಕ್ರಿಯೆಗಳಿಗೆ ದೀರ್ಘಾವಧಿಯ ಕಾಲವು ವಿಭಿನ್ನವಾಗಿರಬಹುದು. ಅಲ್ಪಾವಧಿ ಮತ್ತು ದೀರ್ಘಾವದಿಗಳನ್ನು ದಿನಗಳು, ತಿಂಗಳುಗಳು ಮತ್ತು ವರ್ಷಗಳಲ್ಲಿ ವ್ಯಾಖ್ಯಾನಿಸುವುದು ಸೂಕ್ತವಲ್ಲ. ಎಲ್ಲಾ ಆದಾನಗಳನ್ನು ಬದಲಾಯಿಸಲು ಸಾಧ್ಯವಿದೆಯೇ ಇಲ್ಲವೇ ಎಂಬುದನ್ನು ಮಾತ್ರ ಗಮನಿಸುವುದರ ಮೂಲಕ ಅಲ್ಪಾವಧಿ ಮತ್ತು ದೀರ್ಘಾವಧಿಯನ್ನು ನಾವು ವ್ಯಾಖ್ಯಾನಿಸುತ್ತೇವೆ.

## 3.3. ಒಟ್ಟು ಉತ್ಪನ್ನ, ಸರಾಸರಿ ಉತ್ಪನ್ನ ಮತ್ತು ಸೀಮಾಂತ ಉತ್ಪನ್ನ *Total Product, Average Product and Marginal Product*

### ೩.೩.೧. ಒಟ್ಟು ಉತ್ಪನ್ನ *Total Product*

ನಾವು ಇತರ ಎಲ್ಲಾ ಆದಾನಗಳನ್ನು ಸ್ಥಿರವಾಗಿರಿಸಿ ಕೇವಲ ಒಂದು ಆದಾನವನ್ನು ಬದಲಾಯಿಸಿದ್ದೇವೆ ಎಂದು ಕೊಳ್ಳೋಣ ಆಗ ನಾವು ಆ ಆದಾನವನ್ನು ವಿವಿಧ ಮಟ್ಟಗಳಲ್ಲಿ ತೊಡಗಿಸಿದಾಗ ಉತ್ಪಾದನಾ ಬಿಂಬಿಕದಿಂದ ವಿವಿಧ ಮಟ್ಟದ ಉತ್ಪನ್ನವನ್ನು ಪಡೆಯುತ್ತೇವೆ. ಇತರ ಎಲ್ಲಾ ಆದಾನಗಳನ್ನು ಸ್ಥಿರವಾಗಿರಿಸಿ ಬದಲಾಗುವ ಆದಾನ ಮತ್ತು ಉತ್ಪನ್ನಗಳ ನಡುವಿನ ಸಂಬಂಧವನ್ನು ಸಾಮಾನ್ಯವಾಗಿ ಬದಲಾಗುವ ಆದಾನದ ಒಟ್ಟು ಉತ್ಪನ್ನ ಎನ್ನಲಾಗುತ್ತದೆ.

ನಮ್ಮ ಉತ್ಪಾದನಾ ಬಿಂಬಕದಲ್ಲಿ ನಾವು ಉತ್ಪಾದನಾಂಗ 2ನ್ನು $x_2$ ವಿನ ಮೌಲ್ಯದಲ್ಲಿ ಸ್ಥಿರಗೊಳಿಸಿ, ಉತ್ಪಾದನಾಂಗ 1 ನ್ನು ಬದಲಾಯಿಸಿದರೆ, ಆಗ ನಿರ್ದಿಷ್ಟ $x_2$ಗೆ ಪ್ರತಿ $x_1$ ರ ಮೌಲ್ಯವನ್ನಾಗಿ $q$ ಅನ್ನು ಪಡೆಯುತ್ತೇವೆ. ಅದನ್ನು ನಾವು ಹೀಗೆ ಬರೆಯಬಹುದು

$$q = f\left(x_1, \bar{x}_2\right) \qquad (3.2)$$

ಇದು ಉತ್ಪಾದನಾಂಗ 1 ರ ಒಟ್ಟು ಉತ್ಪಾದನಾ ಬಿಂಬಕವಾಗಿದೆ.

ನಾವು ಮತ್ತೆ ಕೋಷ್ಟಕ 3.1. ನ್ನು ನೋಡೋಣ. ಉತ್ಪಾದನಾಂಗ 2 ನ್ನು 4 ಯೂನಿಟ್‌ಗೆ ಸ್ಥಿರಗೊಳಿಸಲಾಗಿದೆ ಎಂದು ಕೊಳ್ಳೋಣ. ಈಗ ಕೋಷ್ಟಕ 3.1 ರಲ್ಲಿನ ಕಂಬಸಾಲನ್ನು ನೋಡಿದಾಗ ಉತ್ಪದಾನಾಂಗ 2 ಮೌಲ್ಯ 4 ನ್ನು ಪಡೆದಿರುವುದನ್ನು ಗಮನಿಸುತ್ತೇವೆ ನಾವು ಕಂಬಸಾಲಿನಲ್ಲಿ ಕೆಳಭಾಗಕ್ಕೆ ಸರಿದಂತೆ, ಉತ್ಪಾದನಾಂಗ 1 ರ ವಿವಿಧ ಮೌಲ್ಯಗಳಿಗೆ ಉತ್ಪನ್ನದ ಮೌಲ್ಯಗಳನ್ನು ಪಡೆಯುತ್ತೇವೆ. ಇದು $x_2$ = 4 ಕ್ಕೆ ಸ್ಥಿರಗೊಳಿಸಿದ ಉತ್ಪಾದನಾಂಗ 1 ರ ಒಟ್ಟು ಉತ್ಪನ್ನವಾಗಿದೆ (TP). $x_1$ = 0 ಆಗಿರುವಾಗ TP ಯು 0 ಆಗಿರುತ್ತದೆ, $x_1$ = 1 ಆಗಿರುವಾಗ TP ಯು 10 ಯೂನಿಟ್‌ಗಳಷ್ಟು ಆಗಿರುತ್ತದೆ, $x_1$ = 2 ಆಗಿರುವಾಗ TP ಯು ಉತ್ಪನ್ನದ 24 ಯೂನಿಟ್‌ಗಳಾಗಿರುತ್ತವೆ ಹಾಗೂ ಹೀಗೆಯೇ ಮುಂದುವರೆಯುತ್ತಾ ಸಾಗುತ್ತದೆ. ಇದನ್ನೂ ಸಹ ಕೆಲವೊಮ್ಮೆ ಬದಲಾಗುವ **ಆದಾನದ ಒಟ್ಟು ಪ್ರತಿಫಲ** ಅಥವಾ **ಒಟ್ಟು ಭೌತಿಕ ಉತ್ಪನ್ನ** ಎಂದೂ ಕರೆಯುವರು.

ನಾವು ಒಮ್ಮೆ ಒಟ್ಟು ಉತ್ಪನ್ನವನ್ನು ವ್ಯಾಖ್ಯಾನಿಸಿದರೆ, ಇದರಿಂದ ಸರಾಸರಿ ಉತ್ಪನ್ನ (AP) ಹಾಗೂ ಸೀಮಾಂತ ಉತ್ಪನ್ನಗಳ (MP) ಪರಿಕಲ್ಪನೆಗಳನ್ನು ವ್ಯಾಖ್ಯಾನಿಸಲು ಇದು ಉಪಯುಕ್ತವಾಗುತ್ತದೆ. ಇವು ಉತ್ಪನ್ನ ಪ್ರಕ್ರಿಯೆಯಲ್ಲಿ ಬದಲಾಗುವ ಆದಾನದ ಕೊಡುಗೆಯನ್ನು ವಿವರಿಸುವಲ್ಲಿ ಪ್ರಯೋಜನವಾಗುತ್ತದೆ.

### ೩.೩.೨. ಸರಾಸರಿ ಉತ್ಪನ್ನ *Average Product*

ಬದಲಾಗುವ ಆದಾನದ ಪ್ರತಿ ಯೂನಿಟ್‌ನಉತ್ಪನ್ನವನ್ನು ಸರಾಸರಿ ಉತ್ಪನ್ನ ಎಂದು ವ್ಯಾಖ್ಯಾನಿಸಲಾಗಿದೆ. ಅದನ್ನು ನಾವು ಹೀಗೆ ಲೆಕ್ಕಾಚಾರ ಮಾಡುತ್ತೇವೆ,

$$AP_1 = \frac{TP}{x_1} = \frac{f\left(x_1 : x_2\right)}{x_1} \qquad (3.3)$$

**3.2.** ಕೋಷ್ಟಕವು ನಮಗೆ ಉತ್ಪಾದನಾಂಗ 1ರ ಸರಾಸರಿ ಉತ್ಪನ್ನದ ಸಾಂಖ್ಯಿಕ ಉದಾಹರಣೆಯನ್ನು ನೀಡುತ್ತದೆ. ಕೋಷ್ಟಕ 3.1. ರಲ್ಲಿ ಉತ್ಪಾದನಾಂಗ 1ರ ಒಟ್ಟು ಉತ್ಪನ್ನವನ್ನು $x_2$ = 4 ಎಂದು ಈಗಾಗಲೇ ನಾವು ನೋಡಿದ್ದೇವೆ. ಕೋಷ್ಟಕ 3.2. ರಲ್ಲಿ ಒಟ್ಟು ಉತ್ಪನ್ನದ ಅನುಸೂಚಿಯನ್ನು ಪುನರಾವರ್ತಿಸಲಾಗಿದೆ, ಮತ್ತು ಸಂಬಂಧಿಸಿದ ಸರಾಸರಿ ಉತ್ಪನ್ನ ಹಾಗೂ ಸೀಮಾಂತ ಉತ್ಪನ್ನವನ್ನು ಸೂಚಿಸುವ ಮೌಲ್ಯಗಳನ್ನು ತೋರಿಸಲು ಕೋಷ್ಟಕವನ್ನು ವಿಸ್ತರಿಸಲಾಗಿದೆ. ಮೊದಲನೇ ಕಂಬಸಾಲು ಉತ್ಪಾದನಾಂಗ 1 ರ ಪ್ರಮಾಣವನ್ನು ಸೂಚಿಸುತ್ತದೆ ಮತ್ತು ನಾಲ್ಕನೆಯ ಕಂಬಸಾಲಿನಲ್ಲಿ ನಾವು ಅದಕ್ಕೆ ಸಂಬಂಧಿಸಿದ ಸರಾಸರಿ ಉತ್ಪನ್ನದ ಮೌಲ್ಯವನ್ನು ಪಡೆಯುತ್ತೇವೆ. ಇದು ಉತ್ಪಾದನಾಂಗ 1 ರ ಯುನಿಟ್ 1 ರಲ್ಲಿ $AP_1$ 10 ಯೂನಿಟ್‌ಗಳಷ್ಟಾಗಿದೆ, ಉತ್ಪಾದನಾಂಗ 1 ರ ಘಟಕ 2 ರಲ್ಲಿ $AP_1$ 12 ಯುನಿಟ್‌ಗಳಷ್ಟಾಗಿದೆ ಮತ್ತು ಇದು ಹೀಗೆಯೇ ಮುಂದುವರೆಯುತ್ತದೆ.

### ೩.೩.೩. ಸೀಮಾಂತ ಉತ್ಪನ್ನ *Marginal Product*

ಇತರ ಎಲ್ಲಾ ಆದಾನಗಳು ಸ್ಥಿರವಾಗಿದ್ದು, ಒಂದು ಆದಾನದ ಪ್ರತಿ ಯುನಿಟ್‌ನ ಬದಲಾವಣೆಗೆ ಉತ್ಪನ್ನದಲ್ಲಾಗುವ ಬದಲಾವಣೆಯನ್ನು ಸೀಮಾಂತ ಉತ್ಪನ್ನ ಎಂದು ವ್ಯಾಖ್ಯಾನಿಸಲಾಗಿದೆ. ಉತ್ಪಾದನಾಂಗ 2 ನ್ನು ಸ್ಥಿರಗೊಳಿಸಿದಾಗ, ಉತ್ಪಾದನಾಂಗ 1 ರ ಸೀಮಾಂತ ಉತ್ಪನ್ನವು,

$$MP_1 = \frac{\text{ಉತ್ಪನ್ನದಲ್ಲಿನ ಬದಲಾವಣೆ}}{\text{ಆದಾನದಲ್ಲಿನ ಬದಲಾವಣೆ}} = \frac{\Delta q}{\Delta x_1} \qquad (3.4)$$

$\Delta$ ಇದು ಚಲಕದಲ್ಲಿನ ಬದಲಾವಣೆಯನ್ನು ತೋರಿಸುತ್ತದೆ.

ಒಂದುವೇಳೆ ಆದಾನಗಳು ಅಸತತ ಯುನಿಟ್‌ಗಳಾಗಿ ಬದಲಾಗುತ್ತಾ ಹೋದರೆ, ಸೀಮಾಂತ ಉತ್ಪನ್ನವನ್ನು ಹೀಗೆ ವ್ಯಾಖ್ಯಾನಿಸಬಹುದು. ಉತ್ಪಾದನಾಂಗ 2 $\bar{x}_2$ ರಲ್ಲಿ ಸ್ಥಿರವಾಗಿದೆ ಎಂದುಕೊಳ್ಳೋಣ. $\bar{x}_2$ ಪ್ರಮಾಣದಷ್ಟು ಉತ್ಪಾದನಾಂಗ 2 ರೊಂದಿಗೆ ಒಟ್ಟು ಉತ್ಪನ್ನ ರೇಖೆಯ ಅನುಸಾರ, ಉತ್ಪಾದನಾಂಗ 1ರ $x_1$ರಷ್ಟು ಯುನಿಟ್‌ಗಳು 20 ಯುನಿಟ್‌ಗಳ ಉತ್ಪನ್ನವನ್ನು ಉತ್ಪಾದಿಸುತ್ತದೆ ಮತ್ತು ಉತ್ಪಾದನಾಂಗ 1ರ, $x_1 - 1$ರಷ್ಟು ಯುನಿಟ್‌ಗಳು 15 ಯುನಿಟ್‌ಗಳಷ್ಟು ಉತ್ಪನ್ನವನ್ನು ಉತ್ಪಾದಿಸುತ್ತದೆ. ಉತ್ಪಾದನಾಂಗ 1ರ $x_1$ರ ಘಟಕದ ಸೀಮಾಂತ ಉತ್ಪನ್ನವನ್ನು ನಾವು ಹೀಗೆ ಹೇಳಬಹುದು,

$$MP_1 = f(x_1; \bar{x}_2) - f(x_1 - 1; \bar{x}_2) \quad (3.5)$$

= ($x_1$ರಲ್ಲಿನ TP) – ($x_1 - 1$ ರಲ್ಲಿನ TP)

= (20 – 15) ಯುನಿಟ್‌ಗಳಷ್ಟು ಉತ್ಪನ್ನ

$MP_1$ = 5 ಯುನಿಟ್‌ಗಳಷ್ಟು ಉತ್ಪನ್ನ

ಆದಾನಗಳು ಋಣಾತ್ಮಕ ಮೌಲ್ಯ ಹೊಂದಲು ಸಾಧ್ಯವಿಲ್ಲವಾದ್ದರಿಂದ, ಶೂನ್ಯ ಮಟ್ಟದ ಆದಾನ ಬಳಕೆಯಲ್ಲಿ ಸೀಮಾಂತ ಉತ್ಪನ್ನವನ್ನು ವ್ಯಾಖ್ಯಾನಿಸಲಾಗುವುದಿಲ್ಲ. ಸೀಮಾಂತ ಉತ್ಪನ್ನಗಳು ಒಟ್ಟು ಉತ್ಪನ್ನಕ್ಕೆ ಸೇರ್ಪಡೆ ಆಗಿವೆ. ಯಾವುದೇ ಮಟ್ಟದ ಆದಾನದ ಬಳಕೆಗೆ, ಆ ಮಟ್ಟದವರೆಗಿನ ಆದಾನದ ಪ್ರತಿಯೊಂದು ಯುನಿಟ್‌ಗಳ ಸೀಮಾಂತ ಉತ್ಪನ್ನಗಳ ಮೊತ್ತವು ಆ ಮಟ್ಟದಲ್ಲಿನ ಆದಾನದ ಒಟ್ಟು ಉತ್ಪನ್ನವನ್ನು ನೀಡುತ್ತದೆ. ಆದ್ದರಿಂದ **ಒಟ್ಟು ಉತ್ಪನ್ನವು ಸೀಮಾಂತ ಉತ್ಪನ್ನಗಳ ಮೊತ್ತವಾಗಿದೆ.**

ಆದಾನದ ಯಾವುದೇ ಮಟ್ಟದ ಬಳಕೆಯ ಸರಾಸರಿ ಉತ್ಪನ್ನವು ಆ ಆದಾನದ ಆ ಮಟ್ಟದವರೆಗಿನ ಎಲ್ಲಾ ಸೀಮಾಂತ ಉತ್ಪನ್ನಗಳ ಸರಾಸರಿಯಾಗಿದೆ. ಬದಲಾಗುವ ಆದಾನದ ಸರಾಸರಿ ಮತ್ತು ಸೀಮಾಂತ ಉತ್ಪನ್ನವನ್ನು ಕ್ರಮವಾಗಿ ಅದರ ಸರಾಸರಿ ಮತ್ತು ಸೀಮಾಂತ ಪ್ರತಿಫಲ ಎಂದು ಉಲ್ಲೇಖಿಸಲಾಗುತ್ತದೆ.

ಕೋಷ್ಟಕ 3.1 ರಲ್ಲಿ ನೀಡಿರುವ ಉದಾಹರಣೆಯಂತೆ, ನಾವು ಉತ್ಪಾದನಾಂಗ 2 ನ್ನು 4 ಕ್ಕೆ ಸ್ಥಿರಗೊಳಿಸಿದರೆ, ನಾವು ಒಟ್ಟು ಉತ್ಪನ್ನಗಳ ಒಂದು ವಿವರಪಟ್ಟಿ ಪಡೆಯುತ್ತೇವೆ. ತದನಂತರ ಒಟ್ಟು ಉತ್ಪನ್ನದಿಂದ ಉತ್ಪಾದನಾಂಗ 1ರ ಸೀಮಾಂತ ಉತ್ಪನ್ನ ಹಾಗೂ ಸರಾಸರಿ ಉತ್ಪನ್ನವನ್ನು ಪಡೆಯುತ್ತೇವೆ. ಕೋಷ್ಟಕ 3.2.ರ ಮೂರನೇ ಕಂಬಸಾಲಿನಲ್ಲಿ ಉತ್ಪಾದನಾಂಗ 1ರ ಶೂನ್ಯ ಯುನಿಟ್‌ನಲ್ಲಿ ಮುಂದೆ $MP_1$ ಯನ್ನು ವ್ಯಾಖ್ಯಾನಿಸಿರುವುದಿಲ್ಲ. $x_1 = 1$, ಇದ್ದಾಗ $MP_1$ ಉತ್ಪನ್ನವು 10 ಯುನಿಟ್‌ಗಳಾಗಿರುತ್ತವೆ, $x_1 = 2$ ಇದ್ದಾಗ $MP_1$ ಉತ್ಪನ್ನವು 14 ಯುನಿಟ್‌ಗಳಷ್ಟಾಗಿರುತ್ತದೆ ಮತ್ತು ಹೀಗೆಯೇ ಇದು ಮುಂದುವರೆಯುತ್ತದೆ.

**ಕೋಷ್ಟಕ 3.2: ಒಟ್ಟು ಉತ್ಪನ್ನ, ಸೀಮಾಂತ ಉತ್ಪನ್ನ ಮತ್ತು ಸರಾಸರಿ ಉತ್ಪನ್ನ**

| ಉತ್ಪಾದನಾಂಗ 1 | TP | $MP_1$ | $AP_1$ |
|---|---|---|---|
| 0 | 0 | – | – |
| 1 | 10 | 10 | 10 |
| 2 | 24 | 14 | 12 |
| 3 | 40 | 16 | 13.33 |
| 4 | 50 | 10 | 12.5 |
| 5 | 56 | 6 | 11.2 |
| 6 | 57 | 1 | 9.5 |

## 3.4. ಇಳಿಮುಖ ಸೀಮಾಂತ ಉತ್ಪನ್ನ ನಿಯಮ ಮತ್ತು ಬದಲಾಗುವ ಪರಿಮಾಣಗಳ ನಿಯಮ *The Law of Diminishing Marginal Product and the Law of variable Proportions*

ಇಳಿಮುಖ ಸೀಮಾಂತ ಉತ್ಪನ್ನದ ನಿಯಮದ ಪ್ರಕಾರ, ಇತರ ಆದಾನಗಳನ್ನು ಸ್ಥಿರವಾಗಿಟ್ಟುಕೊಂಡು, ಒಂದು ಆದಾನದ ಬಳಕೆಯನ್ನು ಹೆಚ್ಚಿಸುತ್ತಾ ಹೋದಂತೆ, ಕೊನೆಗೆ ಒಂದು ಬಿಂದು (ಹಂತ)ವನ್ನು ತಲುಪುತ್ತೇವೆ, ಆದರಿಂದಾಚೆಗೆ, ಆ ಆದಾನದಿಂದ ಉತ್ಪನ್ನಕ್ಕೆ ಆಗುವ ಸೇರ್ಪಡೆಯು ಇಳಿಯಲಾರಂಭಿಸುತ್ತದೆ.

ಇಳಿಮುಖ ಸೀಮಾಂತ ಉತ್ಪನ್ನದ ನಿಯಮದೊಂದಿಗೆ ತಕ್ಕಮಟ್ಟಿಗೆ ಸಂಬಂಧವಿರುವ ಪರಿಕಲ್ಪನೆಯೆಂದರೆ, ಬದಲಾಗುವ ಪರಿಮಾಣಗಳ ನಿಯಮ. ಇದರ ಪ್ರಕಾರ ಆರಂಭದಲ್ಲಿ ಉತ್ಪಾದನಾಂಗದ ಬಳಕೆಯ ಹೆಚ್ಚಳದೊಂದಿಗೆ, ಒಂದು ಉತ್ಪಾದನಾ ಘಟಕದ ಸೀಮಾಂತ ಉತ್ಪನ್ನವು ಹೆಚ್ಚುತ್ತಾ ಹೋಗುತ್ತದೆ. ಆದರೆ ಬಳಕೆಯ ಒಂದು ಹಂತವನ್ನು ತಲುಪಿದ ನಂತರ ಅದು ಇಳಿಯಲಾರಂಭಿಸುತ್ತದೆ.

ಇಳಿಮುಖ ಸೀಮಾಂತ ಉತ್ಪನ್ನದ ನಿಯಮ ಅಥವಾ ಬದಲಾಗುವ ಪರಿಮಾಣಗಳ ನಿಯಮದ ಹಿಂದಿರುವ ಕಾರಣ ಹೀಗಿದೆ. ನಾವು ಆದಾನದ ಒಂದು ಉತ್ಪಾದನಾಂಗವನ್ನು ಸ್ಥಿರವಾಗಿಟ್ಟುಕೊಂಡು ಮತ್ತೊಂದನ್ನು ಹೆಚ್ಚಿಸುತ್ತಾ ಹೋಗುವುದರಿಂದ, ಉತ್ಪಾದನಾಂಗಗಳ ಅನುಪಾತಗಳು ಬದಲಾಗುತ್ತವೆ. ಪ್ರಾರಂಭದಲ್ಲಿ ನಾವು ಬದಲಾಗುವ ಆದಾನದ ಪ್ರಮಾಣವನ್ನು ಹೆಚ್ಚಿಸಿದಂತೆ, ಉತ್ಪಾದನಾ ಅನುಪಾತಗಳು ಉತ್ಪಾದನೆಗೆ ಹೆಚ್ಚು ಸೂಕ್ತವಾಗುತ್ತವೆ, ಮತ್ತು ಸೀಮಾಂತ ಉತ್ಪನ್ನ ಹೆಚ್ಚುತ್ತದೆ. ಆದರೆ ಒಂದು ನಿರ್ದಿಷ್ಟ ಮಟ್ಟದ ಬಳಕೆಯ ನಂತರ ಉತ್ಪಾದನಾ ಪ್ರಕ್ರಿಯೆಯು ಬದಲಾಗುವ ಆದಾನದೊಂದಿಗೆ ತುಂಬಾ ಕ್ಕಿಕ್ಕಿರಿದು (*crowded*) ಉತ್ಪಾದನಾಂಗಗಳ ಅನುಪಾತಗಳು ಉತ್ಪಾದನೆಗೆ ಕಡಿಮೆ ಸೂಕ್ತವಾಗುತ್ತವೆ. ಈ ಹಂತದಲ್ಲಿ ಬದಲಾಗುವ ಆದಾನದ ಸೀಮಾಂತ ಉತ್ಪನ್ನವು ಇಳಿಮುಖವಾಗಲು ಪ್ರಾರಂಭಿಸುತ್ತದೆ.

ಕೋಷ್ಟಕ 3.2. ನ್ನು ಮತ್ತೊಮ್ಮೆ ಗಮನಿಸೋಣ. ಉತ್ಪಾದನಾಂಗ 2ನ್ನು ಯುನಿಟ್ 4ರಲ್ಲಿ ಸ್ಥಿರಗೊಳಿಸಿದಾಗ ಕೋಷ್ಟಕವು ಉತ್ಪಾದನಾಂಗ 1ರ ಬೇರೆ ಬೇರೆ ಪ್ರಮಾಣಗಳಿಗೆ, TP, $MP_1$, $AP_1$ ಗಳನ್ನು ಸಂಧಿಸುತ್ತದೆ. ಉತ್ಪಾದನಾಂಗ 1ರ 3 ಯುನಿಟ್‌ನ ಬಳಕೆಯವರೆಗೂ ಅದರ ಸೀಮಾಂತ ಉತ್ಪನ್ನವು ಹೆಚ್ಚಾಗುತ್ತದೆ ನಂತರ ಅದು ಕಡಿಮೆಯಾಗಲು ಆರಂಭಿಸುತ್ತದೆ.

## 3.5. ಒಟ್ಟು ಉತ್ಪನ್ನ, ಸೀಮಾಂತ ಉತ್ಪನ್ನ ಮತ್ತು ಸರಾಸರಿ ಉತ್ಪನ್ನ ರೇಖೆಗಳ ಆಕಾರಗಳು. *Shapes of Total Product, Marginal Product and Average Product Curves*

ಸಾಮಾನ್ಯವಾಗಿ ಯಾವುದಾದರೊಂದು ಆದಾನದ ಪ್ರಮಾಣವನ್ನು ಹೆಚ್ಚಿಸಿ, ಉಳಿದ ಎಲ್ಲಾ ಆದಾನಗಳನ್ನು ಸ್ಥಿರವಾಗಿಟ್ಟುಕೊಂಡಾಗ ಉತ್ಪನ್ನದಲ್ಲಿ ಹೆಚ್ಚಳ ಉಂಟಾಗುತ್ತದೆ. ಉತ್ಪಾದನಾಂಗ 1 ಹೆಚ್ಚಾದಂತೆ ಒಟ್ಟು ಉತ್ಪನ್ನದಲ್ಲಿ ಹೇಗೆ ಬದಲಾವಣೆ ಉಂಟಾಗುತ್ತದೆ ಎಂಬುದನ್ನು ಕೋಷ್ಟಕ 3.2. ತೋರಿಸುತ್ತದೆ. ಆದಾನ – ಉತ್ಪನ್ನ ಸಮತಲದಲ್ಲಿ ಒಟ್ಟು ಉತ್ಪನ್ನ ರೇಖೆಯು ಧನಾತ್ಮಕ ಇಳಿಜಾರನ್ನು ಹೊಂದಿರುತ್ತದೆ. ಚಿತ್ರ 3.1. ಒಂದು ಆದರ್ಶ ಉತ್ಪಾದನಾ ಉದ್ಯಮದ ಒಟ್ಟು ಉತ್ಪನ್ನ ರೇಖೆಯ ಆಕಾರವನ್ನು ತೋರಿಸುತ್ತದೆ.

ಉತ್ಪಾದನಾಂಗ, 1 ರ ಯುನಿಟ್‌ಗಳನ್ನು ನಾವು ತಲಾಕ್ಷದಲ್ಲಿ ಹಾಗೂ ಉತ್ಪನ್ನವನ್ನು ಲಂಬಾಕ್ಷದಲ್ಲಿ ಅಳೆಯುತ್ತೇವೆ. $x_1$ ರಷ್ಟು ಉತ್ಪಾದನಾಂಗ, 1 ರಿಂದ ಒಂದು ಉದ್ಯಮ ಘಟಕವು ಹೆಚ್ಚೆಂದರೆ $q_1$ ರಷ್ಟು ಉತ್ಪನ್ನವನ್ನು ಉತ್ಪಾದಿಸುವ ಸಾಧ್ಯತೆ ಇದೆ.

ಬದಲಾಗುವ ಪರಿಮಾಣಗಳ ನಿಯಮದ ಪ್ರಕಾರ, ಒಂದು ಆದಾನದ ಸೀಮಾಂತ ಉತ್ಪನ್ನವು ಆರಂಭದಲ್ಲಿ ಹೆಚ್ಚಾಗುತ್ತದೆ ಮತ್ತು ನಂತರ ಒಂದು ನಿರ್ದಿಷ್ಟ ಮಟ್ಟದ ಬಳಕೆಯ ನಂತರ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಆದ್ದರಿಂದ ಉತ್ಪನ್ನದ ಸಮತಲದಲ್ಲಿ MP ರೇಖೆಯು ತಲೆಕೆಳಗಾದ U ಆಕಾರದ ರೇಖೆಯಂತೆ ಕಾಣುತ್ತದೆ.

ಈಗ ನಾವು AP ರೇಖೆ ಹೇಗೆ ಕಾಣುತ್ತದೆ ಎಂಬುದನ್ನು ನೋಡೋಣ. ಬದಲಾಗುವ ಆದಾನದ ಒಂದನೇ ಯುನಿಟ್‌ನಷ್ಟು ಉತ್ಪನ್ನಕ್ಕೆ ಪ್ರತಿಯಾಗಿ MP ಮತ್ತು APಗಳು ಸಮಾನವಾಗಿರುವುದನ್ನು ಸುಲಭವಾಗಿ ಪರಿಶೀಲಿಸಬಹುದು. ಈಗ ನಾವು ಆದಾನದ ಪ್ರಮಾಣವನ್ನು ಹೆಚ್ಚಿಸುತ್ತಾ ಹೋದಂತೆ MP ಯು ಹೆಚ್ಚುತ್ತದೆ.

APಯು ಸೀಮಾಂತ ಉತ್ಪನ್ನದ ಸರಾಸರಿಯಂತಿರುವುದರಿಂದ ಅದೂ ಸಹ ಹೆಚ್ಚುತ್ತದೆ. ಆದರೆ MP ಗಿಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚುತ್ತದೆ. ಒಂದು ಹಂತದ ನಂತರ MPಯು ಕಡಿಮೆಯಾಗಲು ಆರಂಭಿಸುತ್ತದೆ.




**ರೇಖಾಚಿತ್ರ 3.1 ಒಟ್ಟು ಉತ್ಪಾದನೆ:** ಇದು ಉತ್ಪಾದನಾಂಗ–1ರ ಒಂದು ಒಟ್ಟು ಉತ್ಪನ್ನ ರೇಖೆಯಾಗಿದೆ. ಇತರೆ ಎಲ್ಲಾ ಆದಾನಗಳು ಸ್ಥಿರವಾಗಿದ್ದಾಗ, ಉತ್ಪಾದನಾಂಗ 1ರ ವಿಭಿನ್ನ ಮೊತ್ತಗಳಿಂದ ದೊರಕಬಹುದಾದ ವಿಭಿನ್ನ ಉತ್ಪನ್ನದ ಮಟ್ಟಗಳನ್ನು ಇದು ತೋರಿಸುತ್ತದೆ

ಆದಾಗ್ಯೂ APಯ ಸರಾಸರಿ ಮೌಲ್ಯಕ್ಕಿಂತ MPಯ ಮೌಲ್ಯವು ಹೆಚ್ಚಾಗಿರುವವರೆಗೂ, APಯು ಹೆಚ್ಚಾಗುತ್ತಾ ಹೋಗುತ್ತದೆ. ಒಮ್ಮೆ MPಯು ಸಾಕಷ್ಟು ಕಡಿಮೆಯಾದ ನಂತರ, ಅದರ ಮೌಲ್ಯವು AP ಗಿಂತಲೂ ಕಡಿಮೆ ಆಗುತ್ತದೆ ಮತ್ತು AP ಯು ಕಡಿಮೆಯಾಗುವುದಕ್ಕೆ ಪ್ರಾರಂಭಿಸುತ್ತದೆ. ಆದ್ದರಿಂದ AP ರೇಖೆಯೂ ಸಹ ತಲೆಕೆಳಗಾದ U ಆಕಾರವಾಗಿರುತ್ತದೆ.

ಎಲ್ಲಿಯವರೆಗೆ AP ಹೆಚ್ಚಾಗುತ್ತಾ ಇರುತ್ತದೋ ಅಲ್ಲಿಯವರೆಗೆ MP ಯು APಗಿಂತ ಹೆಚ್ಚಾಗಿರಲೇಬೇಕು. ಇಲ್ಲದಿದ್ದರೆ AP ಯು ಹೆಚ್ಚಾಗಲು ಸಾಧ್ಯವಿಲ್ಲ. ಹಾಗೆಯೇ AP ಯು ಕಡಿಮೆಯಾದಾಗ MP ಯು APಗಿಂತ ಕಡಿಮೆ ಇರಬೇಕು. ಆದ್ದರಿಂದ MP ವಕ್ರ ರೇಖೆಯು AP ವಕ್ರ ರೇಖೆಯನ್ನು ಅದರ ಗರಿಷ್ಠ ಮಟ್ಟದಲ್ಲಿ ಮೇಲಿನಿಂದ ಛೇದಿಸುತ್ತದೆ.

ಚಿತ್ರ 3.2. ಒಂದು ವಿಶಿಷ್ಟ ಉದ್ಯಮ ಘಟಕದ AP ಮತ್ತು MP ರೇಖೆಗಳ ಆಕಾರವನ್ನು ತೋರಿಸುತ್ತದೆ.




**ರೇಖಾಚಿತ್ರ 3.2 ಸರಾಸರಿ ಮತ್ತು ಸೀಮಾಂತ ಉತ್ಪನ್ನ.** ಇವುಗಳು ಉತ್ಪಾದನಾಂಗ–1ರ ಸರಾಸರಿ ಮತ್ತು ಸೀಮಾಂತ ಉತ್ಪನ್ನ ರೇಖೆಗಳಾಗಿವೆ

ಉತ್ಪಾದನಾಂಗ 1 ರ APಯು $x_1$ರಲ್ಲಿ ಗರಿಷ್ಠವಾಗಿದೆ. $x_1$ರ ಎಡಭಾಗದಲ್ಲಿ APಯು ಹೆಚ್ಚಾಗುತ್ತಿದೆ ಹಾಗೂ MPಯು APಗಿಂತ ಹೆಚ್ಚಾಗಿದೆ. $x_1$ರ ಬಲಭಾಗದಲ್ಲಿ APಯು ಇಳಿಮುಖಗುತ್ತಿದೆ ಹಾಗೂ MPಯು APಗಿಂತ ಕಡಿಮೆಯಿದೆ.

## 3.6. ಪ್ರತಿಫಲಗಳ ಪ್ರಮಾಣ *Returns to Scale*

ಇಲ್ಲಿಯವರೆಗೆ ನಾವು ಒಂದು ಆದಾನ ಬದಲಾಗುತ್ತಿರುವಾಗ ಮತ್ತು ಇತರ ಎಲ್ಲಾ ಅಂಶಗಳು ಸ್ಥಿರವಾಗಿದ್ದಾಗ ಉತ್ಪಾದನಾ ಬಿಂಬಕದ ವಿವಿಧ ಆಯಾಮಗಳನ್ನು ನೋಡಿದ್ದೇವೆ. ಎಲ್ಲಾ ಆದಾನಗಳು ಏಕಕಾಲದಲ್ಲಿ ಬದಲಾಗುತ್ತಿರುವಾಗ ಏನಾಗುತ್ತವೆ ಎಂದು ಈಗ ನಾವು ನೋಡೋಣ.

**ಸ್ಥಿರ ಪ್ರತಿಫಲಗಳ ಪ್ರಮಾಣ** (***constant returns scale*** **-** CRS)ಇದು ಉತ್ಪಾದನಾ ಬಿಂಬಕದ ಒಂದು ಲಕ್ಷಣವಾಗಿದ್ದು ಎಲ್ಲಾ ಆದಾನಗಳ ಸಮ ಪ್ರಮಾಣದ ಹೆಚ್ಚಳವು ಅದೇ ಪ್ರಮಾಣದ ಉತ್ಪನ್ನದ ಹೆಚ್ಚಳಕ್ಕೆ ಕಾರಣವಾಗುತ್ತದೆ.

**ಏರಿಕೆಯ ಪ್ರತಿಫಲಗಳ ಪ್ರಮಾಣ** (***Increasing returns scale*** **-** IRS)ಇದು ಎಲ್ಲಾ ಆದಾನಗಳನ್ನು ಸಮ ಪ್ರಮಾಣದಲ್ಲಿ ಹೆಚ್ಚಿಸಿದಾಗ ಉತ್ಪನ್ನವು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಾಗುತ್ತದೆ.

**ಇಳಿಕೆಯ ಪ್ರತಿಫಲಗಳ ಪ್ರಮಾಣ** (***Decreasing returns scale*** **-** DRS) ವೆಂದರೆ ಉತ್ಪನ್ನದಲ್ಲಾದ ಹೆಚ್ಚಳವು ಉತ್ಪಾದನಾಂಗಗಳ ಪ್ರಮಾಣದಲ್ಲಾದ ಹೆಚ್ಚಳಕ್ಕಿಂತ ಕಡಿಮೆ ಇರುವ ಗುಣಲಕ್ಷಣ ಹೊಂದಿರುವುದಾಗಿದೆ.

ಉದಾಹರಣೆಗೆ ಒಂದು ವೇಳೆ ಒಂದು ಉತ್ಪಾದನಾ ಪ್ರಕ್ರಿಯೆಯಲ್ಲಿ ಎಲ್ಲಾ ಆದಾನಗಳನ್ನು ಎರಡು ಪಟ್ಟು ಹೆಚ್ಚಿಸಲಾಗಿದೆ ಎಂದುಕೊಳ್ಳೋಣ. ಇದರ ಪರಿಣಾಮವಾಗಿ ಉತ್ಪನ್ನವೂ ಎರಡು ಪಟ್ಟು ಹೆಚ್ಚಾದರೆ, ಈ ಉತ್ಪಾದನಾ ಬಿಂಬಕವು CRS ಅನ್ನು ತೋರಿಸುತ್ತದೆ. ಉತ್ಪನ್ನವು ಎರಡು ಪಟ್ಟಿಗಿಂತ ಕಡಿಮೆಯಾದರೆ DRS ಅನ್ವಯಿಸುತ್ತದೆ, ಹಾಗೂ ಉತ್ಪನ್ನವು ಎರಡು ಪಟ್ಟಿಗಿಂತ ಹೆಚ್ಚಾದರೆ IRS ಅನ್ನು ಅನ್ವಯಿಸುತ್ತದೆ.

**ಪ್ರತಿಫಲಗಳ ಪ್ರಮಾಣ** ***Returns to Scale***

ಒಂದು ಉತ್ಪಾದನಾ ಬಿಂಬಕವನ್ನು ಪರಿಗಣಿಸೋಣ.

$$q = f(x_1, x_2)$$

ಇಲ್ಲಿ ಒಂದು ಉದ್ಯಮ ಘಟಕವು ಉತ್ಪಾದನಾಂಗ 1 ರ $x_1$ ಪ್ರಮಾಣವನ್ನು ಬಳಸಿ ಮತ್ತು ಉತ್ಪಾದನಾಂಗ 2 ರ $x_2$ ಪ್ರಮಾಣವನ್ನು ಬಳಸಿ $q$ ಪ್ರಮಾಣದ ಉತ್ಪನ್ನವನ್ನು ಉತ್ಪಾದಿಸುತ್ತದೆ. ಈಗ ಒಂದು ವೇಳೆ ಉದ್ಯಮ ಘಟಕವು ಎರಡೂ ಉತ್ಪಾದನಾಂಗಗಳ ಬಳಕೆಯ ಪ್ರಮಾಣವನ್ನು $t$ $(t > 1)$ ಪಟ್ಟಿನಷ್ಟು ಹೆಚ್ಚಿಸಲು ತೀರ್ಮಾನಿಸುತ್ತದೆ. ಗಣಿತೀಯ ಪದ್ಧತಿಯಲ್ಲಿ ನಾವು ಹೇಳುವುದಾದರೆ, ಉತ್ಪಾದನಾ ಬಿಂಬಕವು ಈ ಕೆಳಗಿನಂತೆ ಸ್ಥಿರ ಪ್ರತಿಫಲ ಪ್ರಮಾಣವನ್ನು ಪ್ರದರ್ಶಿಸುತ್ತದೆ.

$$f(tx_1, tx_2) = t.f(x_1, x_2)$$

ಅಂದರೆ ಹೊಸ ಉತ್ಪನ್ನ ಹಂತವಾದ $f(tx_1, tx_2)$ ಹಿಂದಿನ ಉತ್ಪಾದನಾ ಮಟ್ಟವಾದ $f(x_1, x_2)$ ಗಿಂತ $t$ ಪಟ್ಟು ಹೆಚ್ಚಾಗಿದೆ.

ಅದೇ ರೀತಿ ಉತ್ಪಾದನಾ ಬಿಂಬಕವು ಏರಿಕೆಯ ಪ್ರತಿಫಲಗಳ ಪ್ರಮಾಣವನ್ನು ಈ ಕೆಳಗಿನಂತೆ ಇದ್ದಾಗ ಪ್ರದರ್ಶಿಸುತ್ತದೆ.

$$f(tx_1, tx_2) > t.f(x_1, x_2)$$

ಇದು ಇಳಿಕೆಯ ಪ್ರತಿಫಲಗಳ ಪ್ರಮಾಣವನ್ನು ಈ ಕೆಳಗಿನಂತೆ ಇದ್ದಾಗ ಪ್ರದರ್ಶಿಸುತ್ತದೆ.

$$f(tx_1, tx_2) < t.f(x_1, x_2)$$



## 3.7. ವೆಚ್ಚಗಳು *Costs*

ಒಂದು ಉದ್ಯಮ ಘಟಕವು ಉತ್ಪನ್ನವನ್ನು ಉತ್ಪಾದಿಸಲು ಉತ್ಪಾದನಾಂಗಗಳನ್ನು ನೇಮಿಸಿಕೊಳ್ಳುವ ಅವಶ್ಯಕತೆ ಇದೆ. ಆದರೆ ನೀಡಲಾದ ಉತ್ಪನ್ನದ ಮಟ್ಟವನ್ನು ಸಾಮಾನ್ಯವಾಗಿ ವಿವಿಧ ರೀತಿಯಲ್ಲಿ ಉತ್ಪಾದಿಸಬಹುದು. ಒಂದು ಇಚ್ಛಿಸಿದ ಮಟ್ಟದ ಉತ್ಪನ್ನವನ್ನು ಪಡೆಯಲು ಉದ್ಯಮ ಘಟಕವು ಉತ್ಪಾದನಾಂಗಗಳನ್ನು ಒಂದಕ್ಕಿಂತ ಹೆಚ್ಚು ಸಂಯೋಜನೆಗಳಲ್ಲಿ ಬಳಸುವ ಸಾಧ್ಯತೆ ಇದೆ. ಕೋಷ್ಟಕ 3.1. ರಲ್ಲಿ 50 ಯೂನಿಟ್‌ಗಳಷ್ಟು ಉತ್ಪನ್ನವನ್ನು 3 ವಿಭಿನ್ನ ರೀತಿಯ ಆದಾನ ಸಂಯೋಜನೆಗಳಿಂದ ಉತ್ಪಾದಿಸುವುದನ್ನು ನಾವು ಕಾಣಬಹುದು. – $(x_1=6, x_2=3)$ $(x_1=4, x_2=4)$ $(x_1=3, x_2=6)$ ಉದ್ಯಮ ಘಟಕವು ಯಾವ ಉತ್ಪಾದನಾಂಗಗಳ ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳುತ್ತದೆ ಎಂಬುದೇ ಈಗಿನ ಪ್ರಶ್ನೆಯಾಗಿದೆ. ನೀಡಲಾದ ಉತ್ಪಾದನಾಂಗಗಳ ಬೆಲೆಯ ಆಧಾರದ ಮೇಲೆ, ಅತ್ಯಂತ ಕಡಿಮೆ ವೆಚ್ಚದ ಆದಾನ ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳುತ್ತದೆ.

ಹೀಗಾಗಿ ಪ್ರತಿ ಉತ್ಪನ್ನದ ಮಟ್ಟಕೆ ಕನಿಷ್ಠ ವೆಚ್ಚದ ಆದಾನ ಸಂಯೋಜನೆಯನ್ನು ಉದ್ಯಮ ಘಟಕವು ಆಯ್ಕೆ ಮಾಡಿಕೊಳ್ಳುತ್ತದೆ. ಈ ಉತ್ಪನ್ನ–ವೆಚ್ಚ ಸಂಬಂಧವೇ ಉದ್ಯಮ ಘಟಕದ ವೆಚ್ಚ ಬಿಂಬಕವಾಗಿದೆ.

**ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕ**

ಒಂದು ಉತ್ಪಾದನಾ ಬಿಂಬಕವನ್ನು ಪರಿಗಣಿಸೋಣ

$$q = (x_1^{\alpha},\ x_2^{\beta})$$

ಇಲ್ಲಿ $\alpha$ ಮತ್ತು $\beta$ ಗಳು ಸ್ಥಿರವಾಗಿದ್ದಾಗ. ಉದ್ಯಮ ಘಟಕವು ಉತ್ಪಾದನಾಂಗ 1 ರ $x_1$ ಪ್ರಮಾಣವನ್ನು ಬಳಸಿ ಮತ್ತು ಉತ್ಪಾದನಾಂಗ 2 ರ $x_2$ ಪ್ರಮಾಣವನ್ನು ಬಳಸಿ $q$ ಪ್ರಮಾಣದ ಉತ್ಪನ್ನವನ್ನು ಉತ್ಪಾದಿಸುತ್ತದೆ. ಇದನ್ನು **ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕ** ಎನ್ನಲಾಗುತ್ತದೆ. ಒಂದು ವೇಳೆ $x_1 = \bar{x}_1$, ಮತ್ತು $x_2 = \bar{x}_2$ ಇದ್ದರೆ $q_0$ ಘಟಕಗಳಷ್ಟು ಉತ್ಪನ್ನವನ್ನು ಪಡೆಯುತ್ತೇವೆ. ಅಂದರೆ,

$$q_0 = (\bar{x}_1^{\alpha},\ \bar{x}_2^{\beta})$$

ನಾವು ಎರಡೂ ಉತ್ಪಾದನಾಂಗಗಳನ್ನು $t(t > 1)$ ಪಟ್ಟು ಹೆಚ್ಚಿಸಿದರೆ, ನಾವು ಒಂದು ಹೊಸ ಉತ್ಪನ್ನವನ್ನು ಪಡೆಯುತ್ತೇವೆ.

$$q_0 = (t\bar{x}_1)^{\alpha}\ (t\bar{x}_2^{\beta}\ )$$
$$= t\alpha + \ \beta\ \bar{x}_1^{\alpha}\ \ \bar{x}_2^{\beta}$$

$\alpha + \beta = 1$, ಆದಾಗ ನಾವು $q_1 = tq_0$ ಪಡೆಯುತ್ತೇವೆ. ಅಂದರೆ ಉತ್ಪನ್ನವು t ಪಟ್ಟು ಹೆಚ್ಚಾಗುತ್ತದೆ. ಆದ್ದರಿಂದ ಉತ್ಪಾದನಾ ಬಿಂಬಕವು CRS ಅನ್ನು ಪ್ರದರ್ಶಿಸುತ್ತದೆ. ಅದೇರೀತಿ $\alpha + \beta > 1$ ಆದಾಗ ಉತ್ಪಾದನಾ ಬಿಂಬಕವು IRS ಅನ್ನು ಪ್ರದರ್ಶಿಸುತ್ತದೆ. ಯಾವಾಗ $\alpha + \beta < 1$ ಇರುತ್ತದೋ ಆಗ DRS ಅನ್ನು ಪ್ರದರ್ಶಿಸುತ್ತದೆ.

### 3.7.1. ಅಲ್ಪಾವಧಿ ವೆಚ್ಚಗಳು *Short Run Costs*

ನಾವು ಹಿಂದೆ ಅಲ್ಪಾವಧಿ ಮತ್ತು ದೀರ್ಘಾವಧಿಗಳನ್ನು ಚರ್ಚಿಸಿದ್ದೇವೆ. ಅಲ್ಪಾವಧಿಯಲ್ಲಿ ಕೆಲವೊಂದು ಉತ್ಪಾದನಾಂಗಗಳನ್ನು ಬದಲಾಯಿಸಲು ಸಾಧ್ಯವಿಲ್ಲ, ಆದ್ದರಿಂದ ಅವು ಸ್ಥಿರವಾಗಿರುತ್ತವೆ. ಈ ಸ್ಥಿರ ಆದಾನಗಳನ್ನು ಬಳಸಿಕೊಳ್ಳಲು ಉದ್ಯಮ ಘಟಕವು ಮಾಡುವ ವೆಚ್ಚವನ್ನು **ಒಟ್ಟು ಸ್ಥಿರ ವೆಚ್ಚ** (TFC) ಎಂದು ಕರೆಯಲಾಗುತ್ತದೆ. ಉದ್ಯಮ ಘಟಕವು ಯಾವುದೇ ಪ್ರಮಾಣದ ಉತ್ಪನ್ನವನ್ನು ಉತ್ಪಾದಿಸಿದರೂ ಈ ವೆಚ್ಚವು ಉದ್ಯಮ ಘಟಕಕ್ಕೆ ಸ್ಥಿರ ವೆಚ್ಚವಾಗಿ ಉಳಿಯುತ್ತದೆ. ಯಾವುದೇ ಅಗತ್ಯ ಮಟ್ಟದ ಉತ್ಪಾದನೆಯನ್ನು ಉತ್ಪಾದಿಸಲು, ಅಲ್ಪಾವಧಿಯಲ್ಲಿ ಉದ್ಯಮ ಘಟಕವು ಕೇವಲ ಬದಲಾಗುವ ಆದಾನಗಳನ್ನು ಮಾತ್ರ ಸರಿ ಹೊಂದಿಸಬಹುದು. ಈ ರೀತಿ ಬದಲಾಗುವ ಆದಾನಗಳನ್ನು ಅಳವಡಿಸಿಕೊಳ್ಳಲು ಉದ್ಯಮ ಘಟಕವು ಮಾಡುವ ವೆಚ್ಚವನ್ನು **ಒಟ್ಟು ಬದಲಾಗುವ ವೆಚ್ಚ**ವೆಂದು ಕರೆಯಲಾಗುತ್ತದೆ (TVC). ಸ್ಥಿರ ಮತ್ತು ಬದಲಾಗುವ ವೆಚ್ಚಗಳನ್ನು ಸೇರಿಸುವುದರಿಂದ, ನಾವು ಉದ್ಯಮ ಘಟಕದ ಒಟ್ಟು ವೆಚ್ಚವನ್ನು (TC) ಪಡೆಯುತ್ತೇವೆ.

$$\text{TC} = \text{TVC} + \text{TFC} \qquad (3.6)$$

ಉತ್ಪನ್ನದ ಉತ್ಪಾದನೆಯನ್ನು ಹೆಚ್ಚಿಸಲು, ಉದ್ಯಮ ಘಟಕವು ಅಧಿಕ ಆದಾನಗಳನ್ನು ಬಳಸುವ ಅಗತ್ಯವಿದೆ. ಆದ್ದರಿಂದ ಉತ್ಪನ್ನವು ಹೆಚ್ಚಾದಂತೆ ಒಟ್ಟು ಬದಲಾಗುವ ವೆಚ್ಚ ಮತ್ತು ಒಟ್ಟು ವೆಚ್ಚ ಹೆಚ್ಚಾಗುತ್ತವೆ.

ಕೋಷ್ಟಕ 3.3. ರಲ್ಲಿ ಒಂದು ವಿಶಿಷ್ಠ ಉದ್ಯಮ ಘಟಕದ ವೆಚ್ಚ ಬಿಂಬಕದ ಉದಾಹರಣೆಯನ್ನು ನೋಡುತ್ತೇವೆ. ಮೊದಲನೆಯ ಕಂಬ ಸಾಲು ಉತ್ಪಾದನೆಯ ವಿವಿಧ ಹಂತಗಳನ್ನು ತೋರಿಸುತ್ತದೆ. ಉತ್ಪನ್ನದ ಎಲ್ಲಾ ಮಟ್ಟಗಳಲ್ಲಿ, ₹ 20 ಒಟ್ಟು ಸ್ಥಿರ ವೆಚ್ಚವಾಗಿರುತ್ತದೆ. ಉತ್ಪನ್ನ ಹೆಚ್ಚಾದಂತೆ ಒಟ್ಟು ಬದಲಾಗುವ ವೆಚ್ಚವು ಹೆಚ್ಚುತ್ತಾ ಹೋಗುತ್ತದೆ. ಉತ್ಪನ್ನ ಶೂನ್ಯವಾದಾಗ ಒಟ್ಟು ಬದಲಾಗುವ ವೆಚ್ಚ (TVC) ಶೂನ್ಯವಾಗಿರುತ್ತದೆ. 1

ಯೂನಿಟ್‌ನಷ್ಟು ಉತ್ಪನ್ನಕ್ಕೆ ಒಟ್ಟು ಬದಲಾಗುವ ವೆಚ್ಚವು ₹ 10 ಆಗಿರುತ್ತದೆ. 2 ಯೂನಿಟ್‌ಗಳಷ್ಟು ಉತ್ಪನ್ನಕ್ಕೆ ಒಟ್ಟು ಬದಲಾಗುವ ವೆಚ್ಚವು ₹ 18 ಆಗಿದ್ದು ಮತ್ತು ಅದು ಹೀಗೆಯೇ ಮುಂದುವರೆಯುತ್ತದೆ. ಎರಡನೇ ಕಂಬಸಾಲಿನ TFC ಮತ್ತು ಮೂರನೇ ಕಂಬಸಾಲಿನ TVC ಅನುಗುಣವಾದ ಮೌಲ್ಯಗಳ ಮೊತ್ತವಾಗಿ ನಾಲ್ಕನೆಯ ಕಂಬಸಾಲಿನಲ್ಲಿ TC ಯನ್ನು ಪಡೆಯುತ್ತವೆ. ಶೂನ್ಯ ಮಟ್ಟದ ಉತ್ಪಾದನೆಯಲ್ಲಿ TC ಯು ಕೇವಲ ಸ್ಥಿರ ವೆಚ್ಚವಾಗಿರುತ್ತದೆ. ಮತ್ತು ಹೀಗಾಗಿ 20 ರೂಪಾಯಿಗಳಿಗೆ ಸಮವಾಗಿರುತ್ತದೆ. 1 ಯೂನಿಟ್‌ನಷ್ಟು ಉತ್ಪನ್ನಕ್ಕೆ ₹ 30 ಒಟ್ಟು ವೆಚ್ಚವಾಗಿರುತ್ತದೆ. 2 ಯೂನಿಟ್‌ನಷ್ಟು ಉತ್ಪನ್ನಕ್ಕೆ ₹ 38 ಒಟ್ಟು ವೆಚ್ಚವಾಗಿರುತ್ತದೆ. ಮತ್ತು ಹೀಗೆಯೇ ಮುಂದುವರೆಯುತ್ತದೆ.

ಉದ್ಯಮ ಘಟಕವು ಭರಿಸುವ ಪ್ರತಿ ಯೂನಿಟ್‌ನ ಉತ್ಪನ್ನದ ಒಟ್ಟು ವೆಚ್ಚವನ್ನು ಉದ್ಯಮ ಘಟಕದ ಅಲ್ಪಾವಧಿ ಸರಾಸರಿ ವೆಚ್ಚ (SAC) ಎಂದು ವ್ಯಾಖ್ಯಾನಿಸಲಾಗಿದೆ. ಇದನ್ನು ನಾವು ಹೀಗೆ ಲೆಕ್ಕಾಚಾರ ಮಾಡುತ್ತೇವೆ.

$$SAC = \frac{TC}{q} \qquad (3.7)$$

ಕೋಷ್ಟಕ 3.3 ರಲ್ಲಿ, ಮೊದಲ ಕಂಬಸಾಲಿಗೆ ಅನುಗುಣವಾದ ಮೌಲ್ಯಗಳಿಂದ ನಾಲ್ಕನೇ ಕಂಬಸಾಲಿನ ಮೌಲ್ಯಗಳನ್ನು ಭಾಗಿಸಿದಾಗ SAC ಕಂಬಸಾಲನ್ನು ಪಡೆಯುತ್ತೇವೆ. ಶೂನ್ಯ ಉತ್ಪನ್ನದಲ್ಲಿ SAC ಯನ್ನು ವ್ಯಾಖ್ಯಾನಿಸುವುದಿಲ್ಲ. ಮೊದಲ ಯೂನಿಟ್‌ನ ಉತ್ಪನ್ನಕ್ಕೆ SAC ₹ 30 ಆಗಿದೆ. 2 ಯೂನಿಟ್‌ಗಳ ಉತ್ಪನ್ನಕ್ಕೆ SAC ₹ 19 ಇದ್ದು ಮತ್ತು ಇದು ಹೀಗೆಯೇ ಮುಂದುವರೆಯುತ್ತದೆ.





ಇದೇ ಪ್ರತಿ ಉತ್ಪನ್ನ ಯೂನಿಟ್‌ನ ಒಟ್ಟು ಬದಲಾಗುವ ವೆಚ್ಚವನ್ನು ಸರಾಸರಿ ಬದಲಾಗುವ ವೆಚ್ಚವೆಂದು ವ್ಯಾಖ್ಯಾನಿಸಲಾಗಿದೆ.

ಇದನ್ನು ಹೀಗೆ ಲೆಕ್ಕ ಮಾಡಲಾಗುತ್ತದೆ.

$$AVC = \frac{TVC}{q} \qquad (3.8)$$

ಹಾಗೆಯೇ ಸರಾಸರಿ ಸ್ಥಿರ ವೆಚ್ಚವು (AFC)

$$AFC = \frac{TFC}{q} \qquad (3.9)$$

ಸ್ಪಷ್ಟವಾಗಿ,

$$SAC = AVC + AFC \qquad (3.10)$$

ಕೋಷ್ಟಕ 3.3.ರಲ್ಲಿ ಮೊದಲನೇ ಕಂಬಸಾಲಿಗೆ ಅನುಗುಣವಾದ ಮೌಲ್ಯಗಳಿಂದ ಎರಡನೇ ಕಂಬಸಾಲಿನ ಮೌಲ್ಯಗಳನ್ನು ಭಾಗಿಸಿ ನಾವು AFC ಕಂಬಸಾಲನ್ನು ಪಡೆಯುತ್ತೇವೆ. ಅಂತೆಯೇ ಮೊದಲ ಕಂಬಸಾಲಿಗೆ ಅನುಗುಣವಾದ ಮೌಲ್ಯಗಳಿಂದ ಮೂಲಕ ಮೂರನೇ ಕಂಬಸಾಲಿನ ಮೌಲ್ಯಗಳನ್ನು ಭಾಗಿಸಿ AVC ಕಂಬಸಾಲನ್ನು ಪಡೆಯುತ್ತೇವೆ. ಶೂನ್ಯ ಮಟ್ಟದ ಉತ್ಪನ್ನದಲ್ಲಿ AFC ಮತ್ತು AVC ಎರಡನ್ನೂ ವ್ಯಾಖ್ಯಾನಿಸಲಾಗುವುದಿಲ್ಲ. ಮೊದಲನೇ ಘಟಕದ ಉತ್ಪನ್ನಕ್ಕೆ AFC ₹ 20 ಆಗಿರುತ್ತದೆ. ಮತ್ತು AVC ಯು ₹ 10 ಆಗಿರುತ್ತದೆ. ಅವುಗಳನ್ನು ಕೂಡುವುದರಿಂದ ಅಲ್ಪಾವಧಿ ವೆಚ್ಚವು (AVC) ₹ 30 ಕ್ಕೆ ಸಮಾನವಾಗಿರುತ್ತದೆ.

ಉತ್ಪನ್ನದ ಪ್ರತಿ ಯೂನಿಟ್‌ನ ಬದಲಾವಣೆಯಿಂದ ಒಟ್ಟು ವೆಚ್ಚದಲ್ಲಿ ಆಗುವ ಬದಲಾವಣೆಯನ್ನು ಅಲ್ಪಾವಧಿಯ ಸೀಮಾಂತ ವೆಚ್ಚವೆಂದು ವ್ಯಾಖ್ಯಾನಿಸಲಾಗಿದೆ.

$$\text{ಅಲ್ಪಾವಧಿಯ ಸೀಮಾಂತ ವೆಚ್ಚ} = \frac{\text{ಒಟ್ಟು ವೆಚ್ಚದಲ್ಲಿನ ಬದಲಾವಣೆ}}{\text{ಒಟ್ಟು ಉತ್ಪನ್ನದಲ್ಲಿ ಬದಲಾವಣೆ}} = \frac{\Delta TC}{\Delta q} \qquad (3.11)$$

ಇಲ್ಲಿ Δ ಚಲಕದ ಬದಲಾವಣೆಯನ್ನು ಪ್ರತಿನಿಧಿಸುತ್ತದೆ.

ವಿಭಿನ್ನ ಘಟಕಗಳಲ್ಲಿ ಉತ್ಪನ್ನವು ಬದಲಾದರೆ, ನಾವು ಸೀಮಾಂತ ವೆಚ್ಚವನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಬಹುದು. $q_1$ ಯೂನಿಟ್‌ಗಳ ಮತ್ತು $q_1 - 1$ ಯೂನಿಟ್‌ಗಳ ಉತ್ಪಾದನಾ ವೆಚ್ಚವು ಕ್ರಮವಾಗಿ ₹20 ಮತ್ತು ಮತ್ತು ₹ 15 ಆಗಿರಲಿ. ನಂತರ $q_1$ ಯೂನಿಟ್‌ನನ್ನು ಉತ್ಪಾದಿಸಲು ಉದ್ಯಮ ಘಟಕವು ಭರಿಸಬೇಕಾದ ಸೀಮಾಂತ ವೆಚ್ಚವು

$$MC = (q_1 \text{ ನಲ್ಲಿ } TC) - (q_1 - 1 \text{ ನಲ್ಲಿ } TC) \quad (3.12)$$

$$= ₹20 - ₹15 = ₹5$$

ಸೀಮಾಂತ ಉತ್ಪನ್ನದಂತೆಯೇ, ಶೂನ್ಯ ಮಟ್ಟದ ಉತ್ಪನ್ನದಲ್ಲಿ ಸೀಮಾಂತ ವೆಚ್ಚವನ್ನು ವ್ಯಾಖ್ಯಾನಿಸಲಾಗುವುದಿಲ್ಲ. ಅಲ್ಪಾವಧಿಯಲ್ಲಿ ಸ್ಥಿರ ವೆಚ್ಚವನ್ನು ಬದಲಾಯಿಸಲಾಗುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸುವುದು ಮುಖ್ಯ. ನಾವು ಉತ್ಪನ್ನದ ಮಟ್ಟವನ್ನು ಬದಲಾಯಿಸಿದಾಗ, ಒಟ್ಟು ವೆಚ್ಚದಲ್ಲಿನ ಯಾವುದೇ ಬದಲಾವಣೆಯು ಸಂಭವಿಸುತ್ತದೆಯಾದ್ದರಿಂದ ಒಟ್ಟು ಬದಲಾಗುವ ವೆಚ್ಚದಲ್ಲಿ ಬದಲಾವಣೆಯು ಸಂಪೂರ್ಣವಾಗಿ ಇರುತ್ತದೆ.

**ಕೋಷ್ಟಕ 3.3. ; ವೆಚ್ಚದ ವಿವಿಧ ಪರಿಕಲ್ಪನೆಗಳು**

| ಉತ್ಪನ್ನ (ಘಟಕಗಳಲ್ಲಿ) | TFC (₹) | TVC (₹) | TC (₹) | AFC (₹) | AVC (₹) | SAC (₹) | SMC (₹) |
|---|---|---|---|---|---|---|---|
| 0 | 20 | 0 | 20 | – | – | – | – |
| 1 | 20 | 10 | 30 | 20 | 10 | 30 | 10 |
| 2 | 20 | 18 | 38 | 10 | 9 | 19 | 8 |
| 3 | 20 | 24 | 44 | 6.67 | 8 | 14.67 | 6 |
| 4 | 20 | 29 | 49 | 5 | 7.25 | 12.25 | 5 |
| 5 | 20 | 33 | 53 | 4 | 6.6 | 10.6 | 4 |
| 6 | 20 | 39 | 59 | 3.33 | 6.5 | 9.83 | 6 |
| 7 | 20 | 47 | 67 | 2.86 | 6.7 | 9.57 | 8 |
| 8 | 20 | 60 | 80 | 2.5 | 7.5 | 10 | 13 |
| 9 | 20 | 75 | 95 | 2.22 | 8.33 | 10.55 | 15 |
| 10 | 20 | 95 | 115 | 2 | 9.5 | 11.5 | 20 |

ಆದ್ದರಿಂದ ಅಲ್ಪಾವಧಿಯಲ್ಲಿ, ಒಂದು ಹೆಚ್ಚುವರಿ ಯೂನಿಟ್‌ನ ಉತ್ಪನ್ನವನ್ನು ಪಡೆಯಲು ಉತ್ಪಾದನೆಯಲ್ಲಿನ ಹೆಚ್ಚಳದೊಂದಿಗೆ TVC ಯಲ್ಲಿ ಆಗುವ ಹೆಚ್ಚಳವನ್ನು ಸೀಮಾಂತ ವೆಚ್ಚ ಎನ್ನುತ್ತೇವೆ. ಯಾವುದೇ ಮಟ್ಟದ ಉತ್ಪನ್ನಕ್ಕೆ, ಆ ಮಟ್ಟದ ಸೀಮಾಂತ ವೆಚ್ಚದ ಮೊತ್ತವು ನಮಗೆ ಅದೇ ಮಟ್ಟದಲ್ಲಿ ಒಟ್ಟು ಬದಲಾಗುವ ವೆಚ್ಚವನ್ನು ನೀಡುತ್ತದೆ. ಕೋಷ್ಠಕ 3.3 ರ ಮೂಲಕ ನಿರೂಪಿಸಲಾದ ಉದಾಹರಣೆಯಿಂದ ಇದನ್ನು ಯಾರೊಬ್ಬರೂ ಪರಿಶೀಲಿಸಲು ಬಯಸಬಹುದು. ಆದ್ದರಿಂದ ಕೆಲವು ಮಟ್ಟದ ಉತ್ಪನ್ನದಲ್ಲಿ ಸರಾಸರಿ ಬದಲಾಗುವ ವೆಚ್ಚವು ಆ ಹಂತದವರೆಗಿನ ಎಲ್ಲಾ ಸೀಮಾಂತ ವೆಚ್ಚಗಳಿಗೆ ಸರಾಸರಿಯಾಗಿರುತ್ತದೆ,. ನಾವು ಕೋಷ್ಠಕ 3.3 ರಲ್ಲಿ ಉತ್ಪನ್ನವು ಶೂನ್ಯವಾಗಿದ್ದಾಗ, SMCಯನ್ನು ವ್ಯಾಖ್ಯಾನಿಸಲಾಗುವುದಿಲ್ಲ ಎಂಬುದನ್ನು ಕಾಣುತ್ತೇವೆ. ಒಂದನೇ ಯೂನಿಟ್‌ನ ಉತ್ಪನ್ನಕ್ಕೆ, SMC ₹ 10 ಇದೆ ಮತ್ತು ಎರಡನೇ ಯೂನಿಟ್‌ನ ಉತ್ಪನ್ನಕ್ಕೆ, SMC ₹ 8 ಇದೆ ಇದು ಹೀಗೆಯೇ ಮುಂದುವರೆಯುತ್ತದೆ.

### ಅಲ್ಪಾವಧಿ ವೆಚ್ಚರೇಖೆಗಳ ಆಕಾರಗಳು

ಈಗ ಈ ಅಲ್ಪಾವಧಿ ವೆಚ್ಚದ ರೇಖೆಗಳು ಉತ್ಪನ್ನ ವೆಚ್ಚದ ಸಮತಲದಲ್ಲಿ ಹೇಗೆ ಕಾಣುತ್ತವೆ ಎಂದು ನೋಡೋಣ.

ಉದ್ಯಮ ಘಟಕವು ಉತ್ಪನ್ನದ ಉತ್ಪಾದನೆ ಅನ್ನು ಹೆಚ್ಚಿಸಲು ಬದಲಾಗುವ ಆದಾನಗಳನ್ನು ಹೆಚ್ಚು ಬಳಸಿಕೊಳ್ಳಬೇಕಾಗುತ್ತದೆ ಎಂದು ನಾವು ಹಿಂದೆ ಚರ್ಚಿಸಿದ್ದೇವೆ. ಇದು ಒಟ್ಟು ಬದಲಾಗುವ ವೆಚ್ಚದ ಹೆಚ್ಚಳಕ್ಕೆ ಕಾರಣವಾಗುತ್ತದೆ ಮತ್ತು ಹೀಗಾಗಿ ಒಟ್ಟು ವೆಚ್ಚದಲ್ಲಿ ಹೆಚ್ಚಳವಾಗುತ್ತದೆ. ಆದ್ದರಿಂದ ಉತ್ಪಾದನೆ ಹೆಚ್ಚಾಗುತ್ತಿದ್ದಂತೆ ಒಟ್ಟು ಬದಲಾಗುವ ವೆಚ್ಚ ಮತ್ತು ಒಟ್ಟು ವೆಚ್ಚ ಹೆಚ್ಚಾಗುತ್ತದೆ. ಆದಾಗ್ಯೂ ಒಟ್ಟು ಸ್ಥಿರ ವೆಚ್ಚವು ಉತ್ಪಾದಿಸಲಾದ ಒಟ್ಟು ಉತ್ಪನ್ನದ ಪ್ರಮಾಣದಿಂದ ಸ್ವತಂತ್ರವಾಗಿದ್ದು ಮತ್ತು ಉತ್ಪಾದನೆಯ ಎಲ್ಲಾ ಹಂತಗಳಲ್ಲಿ ಸ್ಥಿರವಾಗಿ ಉಳಿಯುತ್ತದೆ.




**ರೇಖಾಚಿತ್ರ 3.3 ವೆಚ್ಚಗಳು.** ಇವುಗಳು ಒಂದು ಉದ್ಯಮ ಘಟಕದ ಒಟ್ಟು ಸ್ಥಿರ ವೆಚ್ಚ (TFC), ಒಟ್ಟು ಬದಲಾಗುವ ವೆಚ್ಚ (TVC) ಮತ್ತು ಒಟ್ಟು ವೆಚ್ಚ (TC)ದ ರೇಖೆಗಳಾಗಿವೆ. ಒಟ್ಟು ವೆಚ್ಚು, ಒಟ್ಟು ಸ್ಥಿರ ವೆಚ್ಚ ಮತ್ತು ಒಟ್ಟು ಬದಲಾಗುವ ವೆಚ್ಚದ ಲಂಬ ಸಾರಾಂಶವಾಗಿದೆ

ರೇಖಾಚಿತ್ರ 3.3 ಒಂದು ವಿಶಿಷ್ಟ ಉದ್ಯಮದ ಒಟ್ಟು ಸ್ಥಿರ ವೆಚ್ಚ (TFC) ಒಟ್ಟು ಬದಲಾಗುವ ವೆಚ್ಚ (TVC), ಮತ್ತು ಒಟ್ಟು ವೆಚ್ಚದ (TC) ರೇಖೆಗಳ ಆಕಾರಗಳನ್ನು ವಿವರಿಸುತ್ತದೆ. TFC ಸ್ಥಿರವಾಗಿದ್ದು $c_1$ ಮೌಲ್ಯವನ್ನು ಪಡೆಯುತ್ತದೆ ಮತ್ತು ಉತ್ಪಾದನೆಯಲ್ಲಿನ ಬದಲಾವಣೆಯೊಂದಿಗೆ ಇದು ಬದಲಾಗುವುದಿಲ್ಲ. ಹೀಗಾಗಿ, ಒಂದು ಸಮತಲ ರೇಖೆಯು ವೆಚ್ಚದ ಅಕ್ಷವನ್ನು $c_1$ ಬಿಂದುವಿನಲ್ಲಿ ಛೇದಿಸುತ್ತದೆ. $q_1$ ನಲ್ಲಿ TVC ಯು $c_2$ ಮತ್ತು TC ಯು $c_3$ ಆಗಿರುತ್ತದೆ.




**ರೇಖಾಚಿತ್ರ 3.4** ಸರಾಸರಿ ಸ್ಥಿರ ವೆಚ್ಚದ ರೇಖೆಯು ಒಂದು ಆಯತಾಕಾರದ ಅತಿಪರವಲಯದವಾಗಿದೆ. ಆಯತಾಕಾರದ $OFCq_1$ ಪ್ರದೇಶವು ನಮಗೆ ಒಟ್ಟು ಸ್ಥಿರವೆಚ್ಚವನ್ನು ನೀಡುತ್ತದೆ.

$q$ಗೆ AFC ಯು TFC ಯ ಅನುಪಾತವಾಗಿದೆ. ಆದ್ದರಿಂದ $q$ ಹೆಚ್ಚಾದಂತೆ AFC ಇಳಿಕೆಯಾಗುತ್ತದೆ.

ಉತ್ಪನ್ನ ಶೂನ್ಯಕ್ಕೆ ಹತ್ತಿರದಲ್ಲಿದ್ದಾಗ AFC ಅನಿಯಂತ್ರಿತವಾಗಿ ದೊಡ್ಡದಾಗಿರುತ್ತದೆ ಮತ್ತು ಉತ್ಪನ್ನ ಅನಂತದೆಡೆಗೆ ಚಲಿಸಿದಂತೆ AFC ಶೂನ್ಯಕ್ಕೆ ಚಲಿಸುತ್ತದೆ. ವಾಸ್ತವವಾಗಿ, AFC ರೇಖೆ ಒಂದು ಆಯತಾಕಾರದ ಅತಿಪರಿವಲಯ: AFC ಯೊಂದಿಗೆ ಅದರ ಉತ್ಪನ್ನಕ್ಕೆ ಯಾವುದೇ $q$ ಮೌಲ್ಯವನ್ನು ನಾವು ಗುಣಿಸಿದಾಗ, ಯಾವಾಗಲೂ ಒಂದು ಸ್ಥಿರಾಂಕವನ್ನು, ಅಂದರೆ, TFC ಯನ್ನು ಪಡೆಯುತ್ತೇವೆ.

ರೇಖಾಚಿತ್ರ 3.4, ಒಂದು ವಿಶಿಷ್ಟ ಉದ್ಯಮ ಘಟಕದ ಸರಾಸರಿ ಸ್ಥಿರವೆಚ್ಚ ರೇಖೆಯ ಆಕಾರವನ್ನು ತೋರಿಸುತ್ತದೆ. ಉತ್ಪನ್ನವನ್ನು ಸಮತಲ ಅಕ್ಷದ ಮೂಲಕ ಮತ್ತು AFC ಯನ್ನು ಲಂಬಾಕ್ಷದ ಮೂಲಕ ನಾವು ಅಳೆಯುತ್ತೇವೆ. $q_1$ ಹಂತದ ಉತ್ಪನ್ನದಲ್ಲಿ, ನಾವು ಅದಕ್ಕೆ ಅನುಗುಣವಾದ ಸರಾಸರಿ ವೆಚ್ಚವನ್ನು Fನಲ್ಲಿ ಪಡೆಯುತ್ತೇವೆ. TFC ಯನ್ನು ಹೀಗೆ ಲೆಕ್ಕ ಹಾಕಬಹುದು.

TFC = AFC × ಪ್ರಮಾಣ

= OF × $Oq_1$ = ಚತುರ್ಭುಜದ ಆಯಾತ $OFCq_1$

ನಾವು TFC ರೇಖೆಯಿಂದಲೂ ಸಹ AFCಯನ್ನು ಲೆಕ್ಕ ಹಾಕಬಹುದು. ರೇಖಾಚಿತ್ರ 3.5.ರಲ್ಲಿ AFC ನಲ್ಲಿ ಲಂಬವಾಗಿರುವ ಅಕ್ಷವನ್ನು ಕತ್ತರಿಸುವ ಸಮತಲವಾದ ನೇರ ರೇಖೆಯು TFC ರೇಖೆಯಾಗಿದೆ. $q_0$ ಉತ್ಪನ್ನದ ಮಟ್ಟದಲ್ಲಿ ಒಟ್ಟು ಸ್ಥಿರ ವೆಚ್ಚವು OF ಗೆ ಸಮನಾಗಿದೆ. $q_0$ ನಲ್ಲಿ TFC ರೇಖೆಯ ಮೇಲೆ ಅನುಗುಣವಾದ ಬಿಂದು A ಆಗಿದೆ. ಕೋನ $\angle AOq_0$ ವು θ ಆಗಿರಲಿ. $q_0$ನಲ್ಲಿ AFC ಯು

$$AFC = \frac{\text{ಒಟ್ಟು ಸ್ಥಿರ ವೆಚ್ಚ}}{\text{ಪ್ರಮಾಣ}} = \frac{Aq_0}{Oq_0} = \tan\theta$$




**ರೇಖಾಚಿತ್ರ 3.5 ಒಟ್ಟು ಸ್ಥಿರವೆಚ್ಚದ ರೇಖೆ.** ಕೋನದ ಇಳಿಜಾರು $\angle AOq_0$ ಎಂಬುದು $q_0$ ನಲ್ಲಿ ಸರಾಸರಿ ಸ್ಥಿರವೆಚ್ಚವನ್ನು ನೀಡುತ್ತದೆ

ನಾವು ಈಗ SMC ರೇಖೆಯನ್ನು ನೋಡೋಣ. **ಸೀಮಾಂತ ವೆಚ್ಚ**ವು ಹೆಚ್ಚುವರಿ ವೆಚ್ಚವಾಗಿದ್ದು, ಒಂದು ಹೆಚ್ಚುವರಿ ಯೂನಿಟ್‌ನ ಉತ್ಪನ್ನವನ್ನು ಉತ್ಪಾದಿಸಲು ಒಂದು ಉದ್ಯಮ ಘಟಕವು ಭರಿಸುವ ವೆಚ್ಚವಾಗಿದೆ. ಬದಲಾಗುವ ನಿಯಮಗಳ ಪ್ರಕಾರ ಆರಂಭದಲ್ಲಿ ಉದ್ಯೋಗ ಹೆಚ್ಚಳವಾದಂತೆ ಒಂದು ಆದಾನದ ಸೀಮಾಂತ ಉತ್ಪನ್ನವು ಹೆಚ್ಚಾಗುತ್ತದೆ. ಒಂದು ನಿರ್ದಿಷ್ಟ ಮಟ್ಟದ ನಂತರ ಇದು ಕಡಿಮೆಯಾಗುತ್ತದೆ. ಇದರರ್ಥ ಪ್ರತಿ ಮುಂದಿನ ಯೂನಿಟ್‌ಗಳ ಉತ್ಪನ್ನವನ್ನು ಉತ್ಪಾದಿಸಲು ಆರಂಭದಲ್ಲಿ ಉತ್ಪಾದನಾಂಗದ ಅವಶ್ಯಕತೆ ಕಡಿಮೆಯಾಗುತ್ತಾ ಹೋಗುತ್ತದೆ ಮತ್ತು ಒಂದು ನಿರ್ದಿಷ್ಟ ಹಂತದ ನಂತರ ಅದು ಹೆಚ್ಚಾಗುತ್ತಾ ಹೋಗುತ್ತದೆ. ಪರಿಣಾಮವಾಗಿ ನೀಡಲಾದ ಆದಾನದ ಬೆಲೆಯಲ್ಲಿ ಆರಂಭದಲ್ಲಿ SMCಯು ಇಳಿಮುಖವಾಗಿರುತ್ತದೆ. ಮತ್ತು ನಂತರ ಒಂದು ನಿರ್ದಿಷ್ಟ ಹಂತದ ನಂತರ ಅದು ಏರುತ್ತದೆ. ಆದ್ದರಿಂದ SMC ರೇಖೆಯು 'U' ಆಕಾರವನ್ನು ಹೊಂದಿದೆ.

ಶೂನ್ಯ ಮಟ್ಟದ ಉತ್ಪನ್ನದಲ್ಲಿ SMC ಯನ್ನು ವ್ಯಾಖ್ಯಾನಿಸಲಾಗುವುದಿಲ್ಲ. ಉತ್ಪನ್ನ ವಿಭಿನ್ನವಾದಾಗ ನಿರ್ದಿಷ್ಟ ಮಟ್ಟದ ಉತ್ಪನ್ನದಲ್ಲಿ TVC ಯು ಆ ಮಟ್ಟಕ್ಕೆ ಸೀಮಾಂತ ವೆಚ್ಚದ ಮೊತ್ತವಾಗಿದೆ. ಉತ್ಪನ್ನವನ್ನು ಪರಿಪೂರ್ಣವಾಗಿ ವಿಭಜಿಸಲು ಸಾಧ್ಯವಾದಾಗ, ನಿರ್ದಿಷ್ಟ ಮಟ್ಟದ ಉತ್ಪನ್ನದಲ್ಲಿ TVC ಯನ್ನು ಆ ಹಂತದವರೆಗೆ SMC ರೇಖೆಯ ಕೆಳಗಿನ ಭಾಗದಲ್ಲಿ ನೀಡಲಾಗಿದೆ.

ಈಗ AVC ರೇಖೆಯು ಹೇಗೆ ಕಾಣುತ್ತದೆ ? ಉತ್ಪನ್ನದ ಮೊದಲನೇ ಯೂನಿಟ್‌ಗೆ SMC ಮತ್ತು AVC ಒಂದೇ ಆಗಿವೆ ಎಂದು ಪರಿಶೀಲಿಸುವುದು ಸುಲಭ. ಆದ್ದರಿಂದ SMC ಮತ್ತು AVC ರೇಖೆಗಳು ಒಂದೇ ಬಿಂದುವಿನಿಂದ ಪ್ರಾರಂಭವಾಗುತ್ತವೆ. ನಂತರ ಉತ್ಪಾದನೆಯು ಹೆಚ್ಚಾದಂತೆ, SMC ರೇಖೆ ಇಳಿಮುಖವಾಗುತ್ತದೆ. AVC ಯು ಸೀಮಾಂತ ವೆಚ್ಚಗಳ ಸರಾಸರಿಯಾಗಿದ್ದು, ಅದೂ ಸಹ ಇಳಿಮುಖವಾಗುತ್ತದೆ. ಆದರೆ SMC ಗಿಂತಲೂ ಕಡಿಮೆ ದರದಲ್ಲಿ ಇಳಿಮುಖವಾಗಿರುತ್ತದೆ. ಆದಾಗ್ಯೂ SMC ಯ ಮೌಲ್ಯವು ಪ್ರಸ್ತುತ AVC ಯ ಮೌಲ್ಯಕ್ಕಿಂತ ಕಡಿಮೆ ಇರುವವರೆಗೂ AVC ಯ ಮೌಲ್ಯವು ನಿರಂತರವಾಗಿ ಕಡಿಮೆಯಾಗುತ್ತದೆ. ಒಮ್ಮೆ SMC ಯಲ್ಲಿ ಸಾಕಷ್ಟು ಏರಿಕೆಯಾದಾಗ, ಅದರ ಮೌಲ್ಯವು AVC ಯ ಮೌಲ್ಯಕ್ಕಿಂತ ಹೆಚ್ಚಾಗಿರುತ್ತದೆ. ನಂತರ AVC ಯ ಮೌಲ್ಯವು ಹೆಚ್ಚಾಗಲು ಪ್ರಾರಂಭವಾಗುತ್ತದೆ. ಆದ್ದರಿಂದ AVC ರೇಖೆಯು 'U' ಆಕಾರದಲ್ಲಿದೆ.

AVC ಇಳಿಕೆಯಾಗುವವರೆಗೂ SMC ಯು AVC ಗಿಂತಲೂ ಕಡಿಮೆ ಇರಬೇಕು. ಮತ್ತು AVC ಯು ಹೆಚ್ಚಾಗುತ್ತಿದ್ದಂತೆ SMC ಯು AVC ಗಿಂತಲೂ ಹೆಚ್ಚಾಗಿರಲೇಬೇಕು. ಆದ್ದರಿಂದ SMC ರೇಖೆಯು AVC ರೇಖೆಯನ್ನು ಅದರ ಕನಿಷ್ಠ ಬಿಂದುವಿನಲ್ಲಿ ಛೇದಿಸುತ್ತದೆ.

ರೇಖಾಚಿತ್ರ 3.6 ರಲ್ಲಿ ಉತ್ಪನ್ನವನ್ನು ಸಮತಲ ಅಕ್ಷದ ಮೂಲಕ ಮತ್ತು AVC ಯನ್ನು ಲಂಬಾಕ್ಷದ ಮೂಲಕ ನಾವು ಅಳೆಯುತ್ತೇವೆ. $q_0$ ಮಟ್ಟದ ಉತ್ಪನ್ನದಲ್ಲಿ AVC ಯು OV ಗೆ ಸಮವಾಗಿದೆ. ಒಟ್ಟು ಬದಲಾಗುವ $q_0$ ವೆಚ್ಚವು

TVC = AVC × ಪ್ರಮಾಣ

$= OV \times Oq_0$

$OVBq_0$ ಆಯತ ಪ್ರದೇಶವಾಗಿರುತ್ತದೆ.




**ರೇಖಾಚಿತ್ರ 3.6 ಸರಾಸರಿ ಬದಲಾಗುವ ವೆಚ್ಚದ ರೇಖೆ.** ಆಯತಾಕಾರದ ಪ್ರದೇಶವಾದ $OVBq_0$ಯು $q_0$ ನಲ್ಲಿ ಒಟ್ಟು ಬದಲಾಗುವ ವೆಚ್ಚವನ್ನು ನೀಡುತ್ತದೆ.

ಚಿತ್ರ 3.7 ರಲ್ಲಿ ಉತ್ಪನ್ನವನ್ನು ಸಮತಲ ಅಕ್ಷದ ಮೂಲಕ TVCಯನ್ನು ಲಂಬಾಕ್ಷದ ಮೂಲಕವಾಗಿ ಅಳೆಯಲಾಗಿದೆ. $q_0$ ಮಟ್ಟದ ಉತ್ಪನ್ನದಲ್ಲಿ OV ಯು ಒಟ್ಟು ಬದಲಾಗುವ ವೆಚ್ಚವಾಗಿದೆ. ಕೋನ $\angle EOq_0$ θ ಗೆ ಸಮಾನವಾಗಿರಲಿ, ಆಗ $q_0$ ಹಂತದಲ್ಲಿ AVC ಯನ್ನು ಈ ಕೆಳಗಿನಂತೆ ಲೆಕ್ಕ ಹಾಕಬಹುದು.

$$AVC = \frac{TVC}{\text{ಉತ್ಪನ್ನ}}$$

$$AVC = \frac{EOq_0}{Oq_0} = \tan\theta$$




**ರೇಖಾಚಿತ್ರ 3.7 ಒಟ್ಟು ಬದಲಾಗುವ ವೆಚ್ಚದ ರೇಖೆ.** ಕೋನದ ಇಳಿಜಾರು $\angle KOq_0$ ಯು $q_0$ ನಲ್ಲಿ ಸರಾಸರಿ ಬದಲಾಗುವ ವೆಚ್ಚವನ್ನು ನೀಡುತ್ತದೆ.

ನಾವು ಈಗ SAC ಕಡೆ ನೋಡೋಣ. SAC ಯು AVC ಮತ್ತು AFC ಯ ಮೊತ್ತವಾಗಿದೆ. ಆರಂಭದಲ್ಲಿ ಉತ್ಪನ್ನ ಹೆಚ್ಚಾಗುತ್ತಿದ್ದಂತೆ AVC ಮತ್ತು AFC ಎರಡೂ ಕಡಿಮೆಯಾಗುತ್ತವೆ. ಆದ್ದರಿಂದ, ಆರಂಭದಲ್ಲಿ AVC ಯು ಇಳಿಕೆಯಾಗುತ್ತದೆ. ಒಂದು ನಿರ್ದಿಷ್ಟ ಹಂತದ ಉತ್ಪನ್ನದ ಉತ್ಪಾದನೆಯ ನಂತರ, AVC ಯು ಹೆಚ್ಚಾಗಲು ಪ್ರಾರಂಭಿಸುತ್ತದೆ. ಈಗ AVC ಮತ್ತು AFC ಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತವೆ. ಆರಂಭದಲ್ಲಿ AFC ಯ ಇಳಿಕೆಯು AVC ಯ ಹೆಚ್ಚಳಕ್ಕಿಂತ ಅಧಿಕವಾಗಿರುತ್ತದೆ ಮತ್ತು SAC ಯು ಇನ್ನೂ ಇಳಿಕೆಯಾಗುತ್ತಿರುತ್ತದೆ. ಆದರೆ ಒಂದು ನಿರ್ದಿಷ್ಟ ಹಂತದ ಉತ್ಪಾದನೆಯ ನಂತರ AVC ಯ ಏರಿಕೆಯು AFC ಯ ಇಳಿಕೆಯನ್ನು ಅತಿಕ್ರಮಿಸುತ್ತದೆ. ಈ ಬಿಂದುವಿನ ನಂತರ SAC ಯು ಹೆಚ್ಚಾಗುತ್ತದೆ. ಆದ್ದರಿಂದ **SAC ರೇಖೆಯು 'U' ಆಕಾರವನ್ನು ಹೊಂದಿದೆ.**

SAC ಯು AFC ಯ ಮೌಲ್ಯಕ್ಕೆ ಸಮಾನವಾದ ಲಂಬ ವ್ಯತ್ಯಾಸದೊಂದಿಗೆ AVC ರೇಖೆಗಿಂತಲೂ ಮೇಲೆ ಇರುತ್ತದೆ. SAC ರೇಖೆಯ ಕನಿಷ್ಠ ಬಿಂದುವು AVC ರೇಖೆಯ ಕನಿಷ್ಠ ಬಿಂದುವಿನಿಂದ ಬಲಕ್ಕೆ ಇರುತ್ತದೆ.

AVC ಮತ್ತು SMC ಗಳಂತಯೇ, ಇಲ್ಲಿ SAC ಕಡಿಮೆಯಾಗುವವರೆವಿಗೂ SMC ಯು SAC ಗಿಂತ ಕಡಿಮೆ ಇರುತ್ತದೆ. ಮತ್ತು SAC ಏರಿಕೆಯಾಗುವಾಗ SAC ಗಿಂತ SMC ಹೆಚ್ಚಾಗಿರುತ್ತದೆ. SMC ರೇಖೆಯು SAC ರೇಖೆಯನ್ನು ಅದರ ಕೆಳಭಾಗದ ಕನಿಷ್ಠ ಬಿಂದುವಿನಲ್ಲಿ ಛೇದಿಸುತ್ತದೆ.

ರೇಖಾಚಿತ್ರ 3.8. ಒಂದು ವಿಶಿಷ್ಟ ಉದ್ಯಮ ಘಟಕದ ಸೀಮಾಂತ ವೆಚ್ಚ, ಸರಾಸರಿ ಬದಲಾಗುವ ವೆಚ್ಚ, ಅಲ್ಪಾವಧಿ ಸರಾಸರಿ ವೆಚ್ಚಗಳನ್ನು ತೋರಿಸುತ್ತದೆ. AVC ಯು $q_1$ ಯೂನಿಟ್‌ಗಳಷ್ಟು ಉತ್ಪನ್ನದಲ್ಲಿ ತನ್ನ ಕನಿಷ್ಟ ಬಿಂದುವನ್ನು ತಲುಪುತ್ತದೆ. $q_1$ ರ ಎಡಭಾಗದಲ್ಲಿ AVCಯು ಇಳಿಕೆಯಾಗುತ್ತದೆ ಮತ್ತು SMCಯು AVCಗಿಂತ ಕಡಿಮೆಯಿರುತ್ತದೆ. $q_1$ ರ ಬಲಭಾಗದಲ್ಲಿ AVCಯು ಏರಿಕೆಯಾಗುತ್ತದೆ ಮತ್ತು SMCಯು AVCಗಿಂತ ಹೆಚ್ಚಿರುತ್ತದೆ. SMC ರೇಖೆಯು AVC ರೇಖೆಯ ಕನಿಷ್ಠ ಬಿಂದುವಾದ 'P' ಬಿಂದುವಿನಲ್ಲಿ ಛೇದಿಸುತ್ತದೆ. SAC ರೇಖೆಯ ಕನಿಷ್ಠ ಬಿಂದು 'S' ಆಗಿದ್ದು ಅದು ಸಂಬಂಧಿಸಿದ $q_2$ ಉತ್ಪನ್ನವಾಗಿದೆ. ಅದು SMC ಮತ್ತು SAC ರೇಖೆಗಳ ನಡುವಿನ ಛೇದಕ ಬಿಂದುವಾಗಿದೆ. $q_2$ ವಿನ ಎಡಭಾಗಕ್ಕೆ SACಯು ಇಳಿಕೆಯಾಗುತ್ತದೆ ಮತ್ತು SMCಯು SACಗಿಂತ ಕಡಿಮೆಯಿರುತ್ತದೆ. $q_2$ ವಿನ ಬಲಭಾಗಕ್ಕೆ SACಯು ಏರಿಕೆಯಾಗುತ್ತದೆ ಮತ್ತು SMCಯು SACಗಿಂತ ಹೆಚ್ಚಿರುತ್ತದೆ.




**ರೇಖಾಚಿತ್ರ 3.8 ಅಲ್ಪಾವಧಿ ರೇಖೆಗಳು.** ಅಲ್ಪಾವಧಿ ಸೀಮಾಂತ ವೆಚ್ಚ, ಸರಾಸರಿ ಬದಲಾಗುವ ವೆಚ್ಚ ಮತ್ತು ಸರಾಸರಿ ವೆಚ್ಚದ ರೇಖೆಗಳು

### 3.7.2. ದೀರ್ಘಾವಧಿ ವೆಚ್ಚಗಳು *Long Run Costs*

ದೀರ್ಘಾವಧಿಯಲ್ಲಿ ಎಲ್ಲಾ ಆದಾನಗಳು ಬದಲಾಗುತ್ತವೆ. ಆದ್ದರಿಂದ ಒಟ್ಟು ವೆಚ್ಚ ಮತ್ತು ಒಟ್ಟು ಬದಲಾಗುವ ವೆಚ್ಚಗಳು ಜೊತೆಯಾಗಿರುತ್ತವೆ. ದೀರ್ಘಾವಧಿಯ ಸರಾಸರಿ ವೆಚ್ಚವನ್ನು (LRAC) ಉತ್ಪನ್ನದ ಪ್ರತಿ ಘಟಕದ ವೆಚ್ಚವೆಂದು ವ್ಯಾಖ್ಯಾನಿಸಲಾಗಿದೆ. ಅಂದರೆ,

$$\text{LRAC} = \frac{\text{TC}}{q} \qquad (3.13)$$

ದೀರ್ಘಾವಧಿ ಸೀಮಾಂತ ವೆಚ್ಚವು (LRAC) ಉತ್ಪನ್ನದಲ್ಲಿನ ಪ್ರತಿ ಯೂನಿಟ್‌ನ ಬದಲಾವಣೆಗೆ ಆಗುವ ಒಟ್ಟು ವೆಚ್ಚದಲ್ಲಿನ ಬದಲಾವಣೆಯಾಗಿದೆ. ಉತ್ಪನ್ನವು ಅಸತತ ಯೂನಿಟ್‌ಗಳಲ್ಲಿ ಬದಲಾದಾಗ ನಾವು ಉತ್ಪಾದನೆಯನ್ನು ಉತ್ಪನ್ನದ $q_1 - 1$ ರಿಂದ $q_1$ ಯೂನಿಟ್‌ಗಳಿಗೆ ಹೆಚ್ಚಿಸಿದರೆ $q_1$ ಯೂನಿಟ್‌ನ ಸೀಮಾಂತ ವೆಚ್ಚವನ್ನು ಹೀಗೆ ಅಳೆಯಬಹುದು

$$\text{LRAC} = (\text{TCಯು } q_1 \text{ ಯೂನಿಟ್‌ಗಳಲ್ಲಿ}) - (\text{TCಯು } q_1 - 1 \text{ ಯೂನಿಟ್‌ಗಳಲ್ಲಿ}) \qquad (3.14)$$

ಅಲ್ಪಾವಧಿಯಲ್ಲಿರುವಂತೆಯೇ ದೀರ್ಘಾವಧಿಯಲ್ಲಿಯೂ ಉತ್ಪನ್ನದ ಒಂದು ಹಂತದವರೆಗಿನ ಎಲ್ಲಾ ಸೀಮಾಂತ ವೆಚ್ಚಗಳ ಒಟ್ಟು ಮೊತ್ತವು ಆ ಹಂತದ ಒಟ್ಟು ವೆಚ್ಚವನ್ನು ನಮಗೆ ನೀಡುತ್ತದೆ.

#### ದೀರ್ಘಾವಧಿ ವೆಚ್ಚದ ರೇಖೆಗಳ ಆಕಾರಗಳು *Shapes of the Long Run Cost Curves*

ಈ ಹಿಂದೆ ನಾವು ಪ್ರತಿಫಲಗಳ ಪ್ರಮಾಣಗಳನ್ನು ಚರ್ಚಿಸಿದ್ದೇವೆ. ಈಗ ನಾವು LRAC ಆಕಾರಗಳಿಗೆ ಅವುಗಳ ಪರಿಣಾಮಗಳನ್ನು ನೋಡೋಣ.

ನಾವು ನಿರ್ದಿಷ್ಟ ಪ್ರಮಾಣದಲ್ಲಿ ಎಲ್ಲಾ ಆದಾನಗಳನ್ನು ಹೆಚ್ಚಿಸಿದರೆ ಉತ್ಪನ್ನವು ಆ ಪ್ರಮಾಣಕ್ಕಿಂತ ಹೆಚ್ಚಾಗುತ್ತದೆ ಎಂದು IRS ಸೂಚಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಿರ್ದಿಷ್ಟ ಪ್ರಮಾಣದಲ್ಲಿ ಉತ್ಪನ್ನವನ್ನು ಹೆಚ್ಚಿಸಲು ಆ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ಆದಾನಗಳನ್ನು ಹೆಚ್ಚಿಸುವ ಅಗತ್ಯವಿದೆ.

ನೀಡಲಾದ ಆದಾನದ ಬೆಲೆಗಳಲ್ಲಿ ವೆಚ್ಚವೂ ಸಹ ಕಡಿಮೆ ಪ್ರಮಾಣದಲ್ಲಿ ಹೆಚ್ಚಾಗುತ್ತದೆ. ಉದಾಹರಣೆಗೆ, ನಾವು ಉತ್ಪನ್ನವನ್ನು ದ್ವಿಗುಣಗೊಳಿಸಲು ಬಯಸಿದ್ದೇವೆ ಎಂದು ಕೊಳ್ಳೋಣ. ಹಾಗೆ ಮಾಡಲು ದುಪ್ಪಟ್ಟಿಗಿಂತ ಆದಾನಗಳನ್ನು ಕಡಿಮೆ ಪ್ರಮಾಣದಲ್ಲಿ ಹೆಚ್ಚಿಸಬೇಕಾದ ಅಗತ್ಯವಿದೆ. ಆ ಆದಾನಗಳನ್ನು ಬಾಡಿಗೆಗೆ ತೆಗೆದುಕೊಳ್ಳಲು ಉದ್ಯಮ ಘಟಕವು ಭರಿಸಬೇಕಾದ ವೆಚ್ಚವನ್ನು ಸಹ ದುಪ್ಪಟ್ಟಿಗಿಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚಿಸಬೇಕಾದ ಅಗತ್ಯವಿದೆ. ಇಲ್ಲಿ ಸರಾಸರಿ ವೆಚ್ಚವು ಏನಾಗುತ್ತದೆ ? IRS ಕಾರ್ಯನಿರ್ವಹಿಸುವವರೆಗೂ ಉದ್ಯಮ ಘಟಕವು ಉತ್ಪನ್ನವನ್ನು ಹೆಚ್ಚಿಸಿದಂತೆ ಸರಾಸರಿ ವೆಚ್ಚವು ಕಡಿಮೆಯಾಗುತ್ತಿರುತ್ತದೆ.

ನಾವು ಉತ್ಪನ್ನವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಹೆಚ್ಚಿಸಲು ಬಯಸಿದರೆ, ಆ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆದಾನಗಳನ್ನು ಹೆಚ್ಚಿಸಬೇಕೆಂದು DRS ಸೂಚಿಸುತ್ತದೆ. ಇದರ ಪರಿಣಾಮವಾಗಿ ವೆಚ್ಚವೂ ಸಹ ಆ ಪ್ರಮಾಣಕ್ಕಿಂತಲೂ ಹೆಚ್ಚಾಗುತ್ತದೆ. ಹೀಗಾಗಿ DRS ಕಾರ್ಯ ನಿರ್ವಹಿಸುವವರೆವಿಗೂ ಉದ್ಯಮ ಘಟಕವು ಉತ್ಪಾದನೆಯನ್ನು ಹೆಚ್ಚಿಸಿದಂತೆಲ್ಲಾ ಸರಾಸರಿ ವೆಚ್ಚವು ಹೆಚ್ಚುತ್ತಿರಬೇಕಾಗುತ್ತದೆ.

ಆದಾನಗಳಲ್ಲಿನ ಪ್ರಮಾಣಗಳಿಗೆ ಅನುಗುಣವಾದ ಹೆಚ್ಚಳದ ಪರಿಣಾಮವಾಗಿ ಉತ್ಪನ್ನದಲ್ಲಿ ಹೆಚ್ಚಳವಾಗುತ್ತದೆಂದು CRS ಸೂಚಿಸುತ್ತದೆ. ಆದ್ದರಿಂದ CRS ಕಾರ್ಯ ನಿರ್ವಹಿಸುವವರೆಗೂ ಸರಾಸರಿ ವೆಚ್ಚವು ಸ್ಥಿರವಾಗಿರುತ್ತದೆ.

ಒಂದು ವಿಶಿಷ್ಟ ಉದ್ಯಮ ಘಟಕದ ಉತ್ಪಾದನೆಯ ಆರಂಭಿಕ ಹಂತದಲ್ಲಿ IRS ಕಂಡು ಬರುತ್ತದೆಂದು ವಾದಿಸಲಾಗಿದೆ. ಇದು ನಂತರ CRS ನಿಂದ ತದನಂತರ DRS ನಿಂದ ಅನುಸರಿಸಲ್ಪಡುತ್ತದೆ. ಆ ಪ್ರಕಾರವಾಗಿ LRAC ರೇಖೆಯು 'U' ಆಕಾರದ ವಕ್ರ ರೇಖೆಯಾಗಿದೆ. ಅದರ ಕೆಳಮುಖ ಇಳಿಜಾರು ಭಾಗವು IRS ಗೆ ಅನುಗುಣವಾಗಿರುತ್ತದೆ ಮತ್ತು ಮೇಲ್ಮುಖವಾಗಿ ಏರುತ್ತಿರುವ ಭಾಗವು DRS ಗೆ ಅನುಗುಣವಾಗಿರುತ್ತದೆ. LRAC ರೇಖೆಯ ಕನಿಷ್ಠ ಬಿಂದುವಿನಲ್ಲಿ CRS ಅನ್ನು ಗಮನಿಸಲಾಗಿದೆ.





ನಾವೀಗ LRMC ರೇಖೆ ಹೇಗೆ ಕಾಣುತ್ತದೆ ಎಂದು ಪರಿಶೀಲಿಸೋಣ. ಉತ್ಪನ್ನದ ಮೊದಲ ಘಟಕಕ್ಕೆ LRMC ಮತ್ತು LRAC ಗಳೆರಡೂ ಒಂದೇ ಆಗಿವೆ. ನಂತರ ಉತ್ಪನ್ನ ಹೆಚ್ಚಾದಂತೆ, LRMC ಆರಂಭದಲ್ಲಿ ಇಳಿಮುಖವಾಗುತ್ತದೆ, ಮತ್ತು ನಂತರ ಒಂದು ನಿರ್ದಿಷ್ಟ ಬಿಂದುವಿನ ನಂತರ ಇದು ಹೆಚ್ಚಾಗುತ್ತದೆ. ಎಲ್ಲಿಯವರೆಗೆ ಸರಾಸರಿ ವೆಚ್ಚವು ಇಳಿಕೆಯಾಗುವವರೆಗೂ ಸಿಮಾಂತ ವೆಚ್ಚವು ಸರಾಸರಿ ವೆಚ್ಚಕ್ಕಿಂತ ಕಡಿಮೆ ಇರಲೇ ಬೇಕು. ಸರಾಸರಿ ವೆಚ್ಚವು ಹೆಚ್ಚಾಗುವವರೆವಿಗೂ ಸೀಮಾಂತ ವೆಚ್ಚವು ಸರಾಸರಿ ವೆಚ್ಚಕ್ಕಿಂತ ಹೆಚ್ಚಾಗಿರಲೇಬೇಕು. ಆದ್ದರಿಂದ LRMC ರೇಖೆಯು 'U' ಆಕಾರವನ್ನು ಹೊಂದಿದೆ. ಇದು LRAC ಯನ್ನು ಅದರ ಕೆಳಗಿನಿಂದ ಕನಿಷ್ಠ ಬಿಂದುವಿನಲ್ಲಿ ಛೇದಿಸುತ್ತದೆ. ರೇಖಾಚಿತ್ರ 3.9. ಒಂದು ವಿಶಿಷ್ಟ ಉದ್ಯಮ ಘಟಕದ ದೀರ್ಘಾವಧಿ ಸೀಮಾಂತ ವೆಚ್ಚ ಮತ್ತು ದೀರ್ಘಾವಧಿ ವೆಚ್ಚದ ರೇಖೆಗಳ ಆಕಾರಗಳನ್ನು ತೋರಿಸುತ್ತದೆ. LRAC ಯು ಅದರ ಕನಿಷ್ಠ ಬಿಂದುವನ್ನು $q_1$ ರಲ್ಲಿ ತಲುಪುತ್ತದೆ. $q_1$ ರ ಎಡಭಾಗದಲ್ಲಿ LRAC ಯು ಇಳಿಮುಖವಾಗಿದೆ. ಮತ್ತು LRMC ಯು LRAC ರೇಖೆಯಿಂದ ಕಡಿಮೆಯಿದೆ. $q_1$ ರ ಬಲ ಭಾಗದಲ್ಲಿ LRAC ಯು ಹೆಚ್ಚಾಗುತ್ತಿದೆ ಮತ್ತು LRMC ಯು LRAC ಗಿಂತ ಹೆಚ್ಚಾಗಿರುತ್ತದೆ.




**ರೇಖಾಚಿತ್ರ 3.9 ದೀರ್ಘಾವದಿ ವೆಚ್ಚಗಳು.** ದೀರ್ಘಾವದಿ ಸೀಮಾಂತ ವೆಚ್ಚ ಮತ್ತು ಸರಾಸರಿ ವೆಚ್ಚದ ರೇಖೆಗಳು

## ಸಾರಾಂಶ *Summary*

- ಉತ್ಪಾದನಾ ಬಿಂಬಕವು ವಿವಿಧ ಆದಾನಗಳ ಸಂಯೋಜನೆಗಳಿಂದ ಉತ್ಪಾದಿಸಬಹುದಾದ ಗರಿಷ್ಠ ಪ್ರಮಾಣದ ಉತ್ಪನ್ನವನ್ನು ತೋರಿಸುತ್ತದೆ.
- ಅಲ್ಪಾವಧಿಯಲ್ಲಿ ಕೆಲವು ಆದಾನಗಳನ್ನು ಬದಲಾಯಿಸಲಾಗುವುದಿಲ್ಲ. ದೀರ್ಘಾವಧಿಯಲ್ಲಿ ಎಲ್ಲಾ ಆದಾನಗಳು ಬದಲಾಗಬಹುದು.
- ಇತರ ಎಲ್ಲಾ ಆದಾನಗಳನ್ನು ಸ್ಥಿರವಾಗಿಟ್ಟುಕೊಂಡಾಗ ಬದಲಾಗುವ ಆದಾನ ಮತ್ತು ಉತ್ಪನ್ನದ ನಡುವಿನ ಸಂಬಂಧವು ಒಟ್ಟು ಉತ್ಪನ್ನವಾಗಿದೆ.
- ಒಂದು ಆದಾನದ ಯಾವುದೇ ಮಟ್ಟದ ಉದ್ಯೋಗಕ್ಕಾಗಿ ಪ್ರತಿ ಹಂತದ ಆ ಆದಾನಗಳ ಉತ್ಪನ್ನಗಳ ಮೊತ್ತವು ಆ ಹಂತದವರೆಗಿನ ಪ್ರತಿ ಉದ್ಯೋಗ ಮಟ್ಟದಲ್ಲಿ ಪ್ರತಿ ಆದಾನಗಳಿಗೆ ಒಟ್ಟು ಉತ್ಪನ್ನವನ್ನು ನೀಡುತ್ತದೆ.
- ಸೀಮಾಂತ ಉತ್ಪನ್ನ ಮತ್ತು ಸರಾಸರಿ ಉತ್ಪನ್ನ ರೇಖೆಗಳೆರಡೂ 'U' ಆಕಾರದಲ್ಲಿವೆ. ಸರಾಸರಿ ಉತ್ಪನ್ನ ರೇಖೆಯ ಗರಿಷ್ಠ ಬಿಂದುವಿನ ಮೇಲಿನಿಂದ ಸೀಮಾಂತ ಉತ್ಪನ್ನ ರೇಖೆಯು ಸರಾಸರಿ ಉತ್ಪನ್ನ ರೇಖೆಯು ಛೇದಿಸುತ್ತದೆ.
- ಉತ್ಪನ್ನವನ್ನು ಉತ್ಪಾದಿಸಲು, ಉದ್ಯಮ ಘಟಕವು ಕನಿಷ್ಠ ವೆಚ್ಚದ ಆದಾನ ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳುತ್ತದೆ.
- ಸರಾಸರಿ ಬದಲಾಗುವ ವೆಚ್ಚ ಮತ್ತು ಸರಾಸರಿ ಸ್ಥಿರ ವೆಚ್ಚಗಳ ಮೊತ್ತವೇ ಸರಾಸರಿ ವೆಚ್ಚವಾಗಿದೆ.
- ಸರಾಸರಿ ಸ್ಥಿರ ವೆಚ್ಚದ ರೇಖೆಯು ಇಳಿಮುಖವಾಗಿರುತ್ತದೆ.
- ಒಟ್ಟು ಬದಲಾಗುವ ವೆಚ್ಚ ಮತ್ತು ಒಟ್ಟು ಸ್ಥಿರ ವೆಚ್ಚಗಳ ಮೊತ್ತವು ಒಟ್ಟು ವೆಚ್ಚವಾಗಿದೆ.
- ಅಲ್ಪಾವಧಿ ಸೀಮಾಂತ ವೆಚ್ಚ, ಸರಾಸರಿ ಬದಲಾಗುವ ವೆಚ್ಚ ಮತ್ತು ಅಲ್ಪಾವಧಿ ಸರಾಸರಿ ವೆಚ್ಚದ ರೇಖೆಗಳು 'U' ಆಕಾರದಲ್ಲಿವೆ.
- AVC ಯ ಕನಿಷ್ಠ ಬಿಂದುವಿನಲ್ಲಿ SMC ರೇಖೆಯು AVC ರೇಖೆಯನ್ನು ಕೆಳಗಿನಿಂದ ಛೇದಿಸುತ್ತದೆ.
- SAC ಯ ಕನಿಷ್ಠ ಬಿಂದುವಿನಲ್ಲಿ SMC ರೇಖೆಯು SAC ರೇಖೆಯನ್ನು ಕೆಳಗಿನಿಂದ ಛೇದಿಸುತ್ತದೆ.
- ಅಲ್ಪಾವಧಿಯಲ್ಲಿ, ಯಾವುದೇ ಉತ್ಪನ್ನದ ಹಂತದಲ್ಲಿ ಆ ಹಂತದವರೆಗಿನ ಸೀಮಾಂತ ವೆಚ್ಚಗಳ ಒಟ್ಟು ಮೊತ್ತವು ಬದಲಾಗುವ ವೆಚ್ಚವನ್ನು ನೀಡುತ್ತದೆ. SMC ರೇಖೆಯ ಕೆಳಗಿರುವ ಪ್ರದೇಶವು ನಮಗೆ ಯಾವುದೇ ಮಟ್ಟದ ಉತ್ಪನ್ನದವರೆಗಿನ ಆ ಮಟ್ಟಕ್ಕೆ ಒಟ್ಟು ಬದಲಾಗುವ ವೆಚ್ಚವನ್ನು ನೀಡುತ್ತದೆ.
- LRAC ಮತ್ತು LRMC ರೇಖೆಗಳೆರಡೂ 'U' ಆಕಾರವನ್ನು ಹೊಂದಿವೆ.
- LRMC ರೇಖೆಯು LRAC ರೇಖೆಯನ್ನು ಕೆಳಗಿನಿಂದ LRAC ರೇಖೆಯ ಕನಿಷ್ಠ ಬಿಂದುವಿನಲ್ಲಿ ಛೇದಿಸುತ್ತದೆ.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ಉತ್ಪಾದನಾ ಬಿಂಬಕ | ಅಲ್ಪಾವಧಿ |
| ದೀರ್ಘಾವಧಿ | ಒಟ್ಟು ಉತ್ಪನ್ನ |
| ಸೀಮಾಂತ ಉತ್ಪನ್ನ | ಸರಾಸರಿ ಉತ್ಪನ್ನ |
| ಇಳೀಮುಖ ಸೀಮಾಂತ ಉತ್ಪನ್ನ ನಿಯಮ | ಬದಲಾಗುವ ಪರಿಮಾಣಗಳ ನಿಯಮ |
| ವೆಚ್ಚ ಬಿಂಬಕ | ಪ್ರತಿಫಲನಗಳ ಪ್ರಮಾಣ ಸೀಮಾಂತ ವೆಚ್ಚ, ಸರಾಸರಿ ವೆಚ್ಚ |

## ಅಭ್ಯಾಸಗಳು *Exercises*

1. ಉತ್ಪಾದನಾ ಬಿಂಬಕದ ಪರಿಕಲ್ಪನೆಯನ್ನು ವಿವರಿಸಿ.
2. ಒಂದು ಆದಾನದ ಒಟ್ಟು ಉತ್ಪನ್ನ ಎಂದರೇನು ?
3. ಒಂದು ಆದಾನದ ಸರಾಸರಿ ಉತ್ಪನ್ನ ಎಂದರೇನು ?
4. ಒಂದು ಆದಾನದ ಸೀಮಾಂತ ಉತ್ಪನ್ನ ಎಂದರೇನು ?
5. ಒಂದು ಆದಾನದ ಸೀಮಾಂತ ಉತ್ಪನ್ನ ಹಾಗೂ ಒಟ್ಟು ಉತ್ಪನ್ನದ ನಡುವಿನ ಸಂಬಂಧವನ್ನು ವಿವರಿಸಿ.
6. ಅಲ್ಪಾವಧಿ ಮತ್ತು ದೀರ್ಘಾವಧಿ ಪರಿಕಲ್ಪನೆಗಳನ್ನು ವಿವರಿಸಿ.
7. ಇಳಿಮುಖ ಸೀಮಾಂತ ಉತ್ಪನ್ನ ಎಂದರೇನು ?
8. ಬದಲಾಗುವ ಪರಿಮಾಣಗಳ ನಿಯಮ ಎಂದರೇನು ?
9. ಒಂದು ಉತ್ಪಾದನಾ ಬಿಂಬಕವು ಯಾವಾಗ ಸ್ಥಿರ ಪ್ರತಿಫಲನಗಳ ಪ್ರಮಾಣವನ್ನು ತೃಪ್ತಿಗೊಳಿಸುತ್ತದೆ?
10. ಒಂದು ಉತ್ಪಾದನಾ ಬಿಂಬಕವು ಯಾವಾಗ ಏರಿಕೆಯ ಪ್ರತಿಫಲನಗಳ ಪ್ರಮಾಣವನ್ನು ತೃಪ್ತಿಗೊಳಿಸುತ್ತದೆ?
11. ಉತ್ಪಾದನಾ ಬಿಂಬಕವು ಯಾವಾಗ ಇಳಿಕೆಯ ಪ್ರತಿಫಲನಗಳ ಪ್ರಮಾಣವನ್ನು ತೃಪ್ತಿಗೊಳಿಸುತ್ತದೆ?
12. ವೆಚ್ಚ ಬಿಂಬಕದ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.
13. ಒಂದು ಉದ್ಯಮ ಘಟಕದ ಒಟ್ಟು ಸ್ಥಿರ ವೆಚ್ಚ ಒಟ್ಟು ಬದಲಾಗುವ ವೆಚ್ಚ ಮತ್ತು ಒಟ್ಟು ವೆಚ್ಚಗಳಾವುವು ? ಅವು ಹೇಗೆ ಸಂಬಂಧಪಟ್ಟಿವೆ ?
14. ಒಂದು ಉದ್ಯಮ ಘಟಕದ ಸರಾಸರಿ ಸ್ಥಿರ ವೆಚ್ಚ, ಸರಾಸರಿ ಬದಲಾಗುವ ವೆಚ್ಚ ಮತ್ತು ಸರಾಸರಿ ವೆಚ್ಚಗಳಾವುವು ? ಅವು ಹೇಗೆ ಸಂಬಂಧಪಟ್ಟಿವೆ ?
15. ಕೆಲವು ಸ್ಥಿರ ವೆಚ್ಚಗಳು ದೀರ್ಘಾವಧಿಯಲ್ಲಿ ಇರಬಹುದೇ ? ಇಲ್ಲದಿದ್ದರೆ ಏಕೆ ?
16. ಸರಾಸರಿ ಸ್ಥಿರ ವೆಚ್ಚದ ರೇಖೆಯು ಯಾವ ರೀತಿ ಕಾಣುತ್ತದೆ ?ಅದು ಏಕೆ ಹಾಗೆ ಕಾಣುತ್ತದೆ ?
17. ಅಲ್ಪಾವಧಿ ಸೀಮಾಂತ ವೆಚ್ಚ, ಸರಾಸರಿ ಬದಲಾಗುವ ವೆಚ್ಚ ಹಾಗೂ ಅಲ್ಪಾವಧಿ ಬದಲಾಗುವ ವೆಚ್ಚದ ರೇಖೆಗಳು ಹೇಗೆ ಕಾಣುತ್ತವೆ ?
18. AVC ರೇಖೆಯ ಕನಿಷ್ಠ ಬಿಂದುವಿನಲ್ಲಿ SMC ರೇಖೆಯು AVC ರೇಖೆಯನ್ನು ಏಕೆ ಛೇದಿಸುತ್ತದೆ?
19. ಯಾವ ಬಿಂದುವಿನಲ್ಲಿ SMC ರೇಖೆಯು AVC ರೇಖೆಯನ್ನು ಛೇದಿಸುತ್ತದೆ? ನಿಮ್ಮ ಉತ್ತರವನ್ನು ಸಮರ್ಥಿಸಲು ಕಾರಣಗಳನ್ನು ನೀಡಿ.
20. ಅಲ್ಪಾವಧಿ ಸೀಮಾಂತ ವೆಚ್ಚದ ರೇಖೆಯು ಏಕೆ 'U' ಆಕಾರದಲ್ಲಿದೆ ?
21. ದೀರ್ಘಾವಧಿ ಸೀಮಾಂತ ವೆಚ್ಚ ಹಾಗೂ ಸರಾಸರಿ ವೆಚ್ಚದ ರೇಖೆಗಳು ಹೇಗೆ ಕಾಣುತ್ತವೆ ?
22. ಈ ಕೆಳಗಿನ ಕೋಷ್ಟಕವು ಕಾರ್ಮಿಕರ ಒಟ್ಟು ಉತ್ಪನ್ನ ಪಟ್ಟಿಯನ್ನು ನೀಡುತ್ತದೆ. ಕಾರ್ಮಿಕರಿಗನುಗುಣವಾದ ಸರಾಸರಿ ಉತ್ಪನ್ನ ಹಾಗೂ ಸೀಮಾಂತ ಉತ್ಪನ್ನಗಳನ್ನು ಕಂಡುಹಿಡಿಯಿರಿ.

| L | $TP_1$ |
|---|---|
| 0 | 0 |
| 1 | 15 |
| 2 | 35 |
| 3 | 50 |
| 4 | 40 |
| 5 | 48 |

23. ಈ ಕೆಳಗಿನ ಕೋಷ್ಟಕವು ಕಾರ್ಮಿಕರ ಸರಾಸರಿ ಉತ್ಪನ್ನ ಪಟ್ಟಿಯನ್ನು ನೀಡುತ್ತದೆ. ಒಟ್ಟು ಉತ್ಪನ್ನ ಶೂನ್ಯ ಮಟ್ಟದ ಉದ್ಯೋಗದಲ್ಲಿ ಶೂನ್ಯವಾಗಿರುತ್ತದೆ ಎಂದು ನೀಡಲಾಗಿದ್ದು, ಒಟ್ಟು ಉತ್ಪನ್ನ ಹಾಗೂ ಸೀಮಾಂತ ಉತ್ಪನ್ನಗಳ ಪಟ್ಟಿಯನ್ನು ಕಂಡುಹಿಡಿಯಿರಿ.

| L | $AP_1$ |
|---|---|
| 1 | 2 |
| 2 | 3 |
| 3 | 4 |
| 4 | 4.25 |
| 5 | 4 |
| 6 | 3.5 |

24. ಈ ಕೆಳಗಿನ ಕೋಷ್ಟಕದಲ್ಲಿ ಶ್ರಮದ ಸೀಮಾಂತ ಉತ್ಪನ್ನ ಪಟ್ಟಿಯನ್ನು ನೀಡಲಾಗಿದೆ. ಶ್ರಮದ ಒಟ್ಟು ಉತ್ಪನ್ನವು ಶೂನ್ಯ ಮಟ್ಟದ ಉದ್ಯೋಗದಲ್ಲಿ ಶೂನ್ಯವಾಗಿದೆ ಎಂಬುದನ್ನು ನೀಡಲಾಗಿದೆ. ಒಟ್ಟು ಉತ್ಪನ್ನ ಮತ್ತು ಸರಾಸರಿ ಉತ್ಪನ್ನದ ವಿವರ ಪಟ್ಟಿಯನ್ನು ಲೆಕ್ಕಹಾಕಿ.

| **L** | **$MP_1$** |
|---|---|
| 1 | 3 |
| 2 | 5 |
| 3 | 7 |
| 4 | 5 |
| 5 | 3 |
| 6 | 1 |

25. ಈ ಕೆಳಗಿನ ಕೋಷ್ಟಕವು ಒಂದು ಉದ್ಯಮ ಘಟಕದ ಒಟ್ಟು ವೆಚ್ಚದ ಪಟ್ಟಿಯನ್ನು ತೋರಿಸುತ್ತದೆ. ಈ ಉದ್ಯಮ ಘಟಕದ ಒಟ್ಟು ಸ್ಥಿರ ವೆಚ್ಚದ ವಿವರ ಪಟ್ಟಿ ಏನು? ಉದ್ಯಮ ಘಟಕದ TFC, AFC, AVC, SAC ಮತ್ತು SMC ಗಳ ಪಟ್ಟಿಯನ್ನು ಲೆಕ್ಕಾಚಾರ ಮಾಡಿರಿ.

| Q | TC |
|---|---|
| 0 | 10 |
| 1 | 30 |
| 2 | 45 |
| 3 | 55 |
| 4 | 70 |
| 5 | 90 |
| 6 | 120 |

26. ಈ ಕೆಳಗಿನ ಕೋಷ್ಟಕದಲ್ಲಿ ಒಂದು ಉದ್ಯಮ ಘಟಕದ ಒಟ್ಟು ವೆಚ್ಚದ ವಿವರ ಪಟ್ಟಿಯನ್ನು ನೀಡಲಾಗಿದೆ. 4 ಯೂನಿಟ್‌ಗಳ ಉತ್ಪಾದನೆಗೆ ಸರಾಸರಿ ವೆಚ್ಚವು ₹ 5 ಆಗಿದೆ ಎಂದು ನೀಡಲಾಗಿದೆ. ಉತ್ಪನ್ನಕ್ಕೆ ಸಂಬಂಧಿಸಿದ TVC TFC AVC AFC SAC ಮತ್ತು SMC ಗಳ ಪಟ್ಟಿಗಳನ್ನು ಕಂಡುಹಿಡಿಯಿರಿ.

| **Q** | **TC** |
|---|---|
| 1 | 50 |
| 2 | 65 |
| 3 | 75 |
| 4 | 95 |
| 5 | 130 |
| 6 | 185 |

27. ಒಂದು ಉದ್ಯಮ ಘಟಕದ SMC ವಿವರ ಪಟ್ಟಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಒಂದು ಉದ್ಯಮ ಘಟಕದ ಸ್ಥಿರ ವೆಚ್ಚ ₹ 100 ಇದ್ದಾಗ ಉದ್ಯಮ ಘಟಕದ TVC, TC, AVC ಮತ್ತು SAC ಗಳ ವಿವರ ಪಟ್ಟಿಯನ್ನು ಕಂಡುಹಿಡಿಯಿರಿ

| Q | TC |
|---|---|
| 0 | – |
| 1 | 500 |
| 2 | 300 |
| 3 | 200 |
| 4 | 300 |
| 5 | 500 |
| 6 | 800 |

28. $Q = 5\ L^{½}\ K^{½}$ ಒಂದು ಉದ್ಯಮ ಘಟಕದ ಬಿಂಬಕವಾಗಿರಲಿ. ಉದ್ಯಮ ಘಟಕವು 100 ಯೂನಿಟ್‌ಗಳಷ್ಟು L ನೊಂದಿಗೆ ಮತ್ತು 100 ಯೂನಿಟ್‌ಗಳಷ್ಟು K ಯೊಂದಿಗೆ ಉತ್ಪಾದಿಸಬಹುದಾದ ಸಂಭವನೀಯ ಉತ್ಪಾದನೆಯನ್ನು ಕಂಡುಹಿಡಿಯಿರಿ.

29. $Q = 2\ L^2\ K^2$ ಒಂದು ಉದ್ಯಮ ಘಟಕದ ಬಿಂಬಕವಾಗಿರಲಿ. ಉದ್ಯಮ ಘಟಕವು 5 ಯೂನಿಟ್‌ಗಳಷ್ಟು L ಮತ್ತು 2 ಯೂನಿಟ್‌ಗಳಷ್ಟು K ನೊಂದಿಗೆ ಉತ್ಪಾದಿಸುವ ಗರಿಷ್ಠ ಸಂಭವನೀಯ ಉತ್ಪಾದನೆಯನ್ನು ಕಂಡುಹಿಡಿಯಿರಿ. ಉದ್ಯಮ ಘಟಕವು ಶೂನ್ಯ ಯೂನಿಟ್‌ಗಳಷ್ಟು L ಮತ್ತು 10 ಯೂನಿಟ್‌ಗಳಷ್ಟು K ನೊಂದಿಗೆ ಉತ್ಪಾದಿಸುವ ಗರಿಷ್ಠ ಸಂಭವನೀಯ ಉತ್ಪಾದನೆಯನ್ನು ಕಂಡುಹಿಡಿಯಿರಿ.

30. ಉತ್ಪಾದನಾ ಬಿಂಬಕವು $Q = 5\ L + 2K$ ಇದ್ದಾಗ ಶೂನ್ಯ ಯೂನಿಟ್‌ಗಳಷ್ಟು L ಮತ್ತು 10 ಯೂನಿಟ್‌ಗಳಷ್ಟು K ಇದ್ದಾಗ ಗರಿಷ್ಠ ಸಂಭವನೀಯ ಉತ್ಪಾದನೆಯನ್ನು ಕಂಡುಹಿಡಿಯಿರಿ.

❖ ❖ ❖ ❖

ಅಧ್ಯಾಯ 4

# ಪರಿಪೂರ್ಣ ಪೈಪೋಟಿಯಲ್ಲಿ ಉದ್ಯಮ ಘಟಕದ ಸಿದ್ಧಾಂತ

# *The Theory of the Firm under perfect Competition*



ಹಿಂದಿನ ಅಧ್ಯಾಯದಲ್ಲಿ ನಾವು ಉದ್ಯಮಘಟಕದ ಉತ್ಪಾದನ ಬಿಂಬಕ ಮತ್ತು ವೆಚ್ಚದ ರೇಖೆಯ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಅಭ್ಯಸಿಸಿದ್ದೇವೆ. ಪ್ರಸ್ತುತ ಈ ಅಧ್ಯಾಯದ ಅಧ್ಯಯನದ ಕೇಂದ್ರ ಬಿಂದು ಭಿನ್ನವಾಗಿದೆ. ಇಲ್ಲಿ ಒಂದು ಉದ್ಯಮಘಟಕವು ಎಷ್ಟು ಉತ್ಪಾದಿಸಬೇಕು ಎಂಬ ನಿರ್ಣಯವನ್ನು ಹೇಗೆ ತೆಗೆದುಕೊಳ್ಳುತ್ತದೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಪ್ರಶ್ನೆಗೆ ನಮ್ಮ ಉತ್ತರ ಸರಳ ಹಾಗೂ ನಿರ್ವಿವಾದವಾಗಿರುವುದಿಲ್ಲ.

ನಮ್ಮ ಉತ್ತರ ಉದ್ಯಮಘಟಕದ ವರ್ತನೆಯ ಬಗ್ಗೆ ಇರುವ ಒಂದು ಮಹತ್ವದ ಕಲ್ಪನೆಯನ್ನು ಆಧರಿಸಿದೆ. ಅದೆಂದರೆ ಉತ್ಪಾದಕರು (ಉದ್ಯಮಘಟಕಗಳು) ಗರಿಷ್ಠ ಲಾಭಗಳಿಸಿಕೊಳ್ಳುವವರಾಗಿರುತ್ತಾರೆ ಎಂಬುದಾಗಿದೆ. ಆದ್ದರಿಂದ ಒಂದು ಉದ್ಯಮಘಟಕವು ಉತ್ಪಾದಿಸುವ ಮತ್ತು ಮಾರುಕಟ್ಟೆಯಲ್ಲಿ ಮಾರಾಟಮಾಡುವ ಪ್ರಮಾಣವು ಅದರ ಲಾಭವನ್ನು ಗರಿಷ್ಠಗೊಳಿಸುತ್ತದೆ.

ಈ ಅಧ್ಯಾಯದ ರಚನೆಯು ಮುಂದಿನಂತೆ ಇದೆ. ನಾವು ಮೊದಲು ಉದ್ಯಮ ಘಟಕದ ಗರಿಷ್ಠ ಲಾಭ ಪಡೆಯುವ ಸಮಸ್ಯೆಯನ್ನ ಕುರಿತು ವಿವರವಾಗಿ ಪರಿಶೀಲಿಸೋಣ. ಇದಾದನಂತರ ಒಂದು ಉದ್ಯಮ ಘಟಕದ **ಪೂರೈಕೆ ರೇಖೆಯನ್ನು** ಪಡೆಯೋಣ, ಪೂರೈಕೆ ರೇಖೆಯು ಒಂದು ಉತ್ಪಾದನಾ ಘಟಕವು ಮಾರುಕಟ್ಟೆಯ ವಿವಿದ ಬೆಲೆಗಳಲ್ಲಿ ಉತ್ಪಾದಿಸಲು ಬಯಸುವ ಉತ್ಪನ್ನದ ಮಟ್ಟಗಳನ್ನ ತೋರಿಸುತ್ತದೆ. ಕೊನೆಯದಾಗಿ, ವೈಯಕ್ತಿಕ ಉದ್ಯಮ ಘಟಕಗಳ ಪೂರೈಕೆಗಳನ್ನು ಒಂದುಗೂಡಿಸುವುದು ಮತ್ತು **ಮಾರುಕಟ್ಟೆ ಪೂರೈಕೆ ರೇಖೆಯನ್ನು** ಪಡೆಯುವುದು ಹೇಗೆಂದು ನಾವು ಅಧ್ಯಯನ ಮಾಡುತ್ತೇವೆ.

## 4.1 ಪರಿಪೂರ್ಣ ಪೈಪೋಟಿ ಮಾರುಕಟ್ಟೆಯನ್ನು ನಿರೂಪಿಸುವ ಲಕ್ಷಣಗಳು *Perfect Competition: Defining Features*

ಉದ್ಯಮ ಘಟಕವೊಂದರ ಗರಿಷ್ಠ ಲಾಭದ ಸಮಸ್ಯೆಯನ್ನು ವಿಶ್ಲೇಷಿಸುವಾಗ ನಾವು ಮೊದಲು ಉದ್ಯಮ ಘಟಕ ಕಾರ್ಯ ನಿರ್ವಹಿಸುತ್ತಿರುವ ಮಾರುಕಟ್ಟೆಯ ಸನ್ನಿವೇಶವನ್ನು ವಿವರಿಸಬೇಕು. ಈ ಅಧ್ಯಾಯದಲ್ಲಿ ನಾವು **ಪರಿಪೂರ್ಣ ಪೈಪೋಟಿ** ಸನ್ನಿವೇಶದ ಮಾರುಕಟ್ಟೆಯನ್ನು ಅಧ್ಯಯನ ಮಾಡುತ್ತೇವೆ. ಒಂದು ಪರಿಪೂರ್ಣ ಪೈಪೋಟಿ ಮಾರುಕಟ್ಟೆಯು ಎರಡು ಪ್ರಮುಖ ಲಕ್ಷಣವನ್ನು ಹೊಂದಿರುತ್ತದೆ.

1. ಈ ಮಾರುಕಟ್ಟೆಯು ಕೊಳ್ಳುವವರನ್ನು ಮತ್ತು ಮಾರುವವರನ್ನು (ಉದ್ಯಮಘಟಕಗಳನ್ನು) ಒಳಗೊಂಡಿರುತ್ತದೆ. ಮಾರುಕಟ್ಟೆಯಲ್ಲಿನ ಎಲ್ಲಾ ಉದ್ಯಮಘಟಕಗಳು ಒಂದು ನಿರ್ದಿಷ್ಠ ಏಕರೂಪದ ಸರಕನ್ನು ಉತ್ಪಾದಿಸುತ್ತವೆ.
2. ಮಾರುಕಟ್ಟೆಯಲ್ಲಿ ಪ್ರತಿಯೊಬ್ಬ ಕೊಳ್ಳುವವರು ಮತ್ತು ಮಾರುವವರು ಬೆಲೆ ಪಡೆಯುವವರಾಗಿರುತ್ತಾರೆ.

ನಾವು ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಮೊದಲ ಲಕ್ಷಣವನ್ನು ಸುಲಭವಾಗಿ ಅಭೈಸಿಕೊಳ್ಳಬಹುದಾದ್ದರಿಂದ, ಎರಡನೇ ಲಕ್ಷಣದ ಮೇಲೆ ಹೆಚ್ಚಿನ ಗಮನವನ್ನು ನೀಡೋಣ. ಒಂದು ಉದ್ಯಮಘಟಕದ ದೃಷ್ಟಿಕೋನದಲ್ಲಿ ಬೆಲೆ ಪಡೆಯುವುದು ಎಂಬುದರ ಅಭಿಪ್ರಾಯವೇನು? ಬೆಲೆ ಪಡೆಯುವ ಉದ್ಯಮಘಟಕವೊಂದು ಮಾರುಕಟ್ಟೆ ಬೆಲೆಗಿಂತ

ಹೆಚ್ಚಿನ ಬೆಲೆ ನಿಗದಿಪಡಿಸಿದರೆ, ತನ್ನ ಉತ್ಪನ್ನದ ಯಾವುದೇ ಪ್ರಮಾಣವನ್ನು ಮಾರಾಟ ಮಾಡಲು ಸಾಧ್ಯವಾಗುವುದಿಲ್ಲವೆಂದು ಹಾಗೆಯೇ ಮಾರುಕಟ್ಟೆ ಬೆಲೆಗಿಂತ ಕಡಿಮೆ ಅಥವಾ ಅದಕ್ಕೆ ಸಮನಾದ ಬೆಲೆಯನ್ನು ನಿಗದಿಪಡಿಸಿದರೆ ಬಯಸಿದಷ್ಟು ಪ್ರಮಾಣದ ಸರಕುಗಳನ್ನು ಮಾರಾಟ ಮಾಡಬಹುದೆಂಬ ನಂಬಿಕೆ ಹೊಂದಿರುತ್ತದೆ. ಗ್ರಾಹಕರ ದೃಷ್ಟಿಯಲ್ಲಿ ಬೆಲೆ ಪಡೆಯುವುದು ಎಂಬುದರ ಅಭಿಪ್ರಾಯವೇನು? ಒಬ್ಬ ಗ್ರಾಹಕ ಖಂಡಿತವಾಗಿಯೂ ಸಾಧ್ಯವಾದಷ್ಟು ಕನಿಷ್ಠ ಬೆಲೆಯಲ್ಲಿ ಸರಕುಗಳನ್ನು ಕೊಳ್ಳಲು ಇಚ್ಚಿಸುತ್ತಾರೆ. ಆದಾಗ್ಯೂ ಬೆಲೆ ಪಡೆಯುವ ಗ್ರಾಹಕರು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯನ್ನು ಕೇಳಿದರೆ ಯಾವುದೇ ಉದ್ಯಮಘಟಕವು ಅವರಿಗೆ/ಆಕೆಗೆ ಸರಕನ್ನು ಮಾರಲು ಇಷ್ಟಪಡವುದಿಲ್ಲ, ಹಾಗೆಯೇ ಮಾರುಕಟ್ಟೆ ಬೆಲೆಗಿಂತ ಹೆಚ್ಚು ಅಥವಾ ಸಮಾನವಾದ ಬೆಲೆಯನ್ನು ಕೇಳಿದರೆ, ತಾನು ಕೊಳ್ಳಲು ಇಚ್ಛಿಸಿದಷ್ಟು ಸರಕುಗಳನ್ನು ಪಡೆಯಬಹುದೆಂದು ಗ್ರಾಹಕರ ನಂಬಿಕೆಯಾಗಿರುತ್ತದೆ.

ಈ ಅಧ್ಯಾಯವು ವಿಶೇಷವಾಗಿ ಕೇವಲ ಉದ್ಯಮ ಘಟಕಗಳ ಬಗ್ಗೆ ಅಧ್ಯಯನ ಮಾಡುವುದರಿಂದ ನಾವು ಗ್ರಾಹಕರ ವರ್ತನೆಯ ಬಗ್ಗೆ ಚರ್ಚಿಸುವುದಿಲ್ಲ. ಬದಲಾಗಿ ನಾವು ಉದ್ಯಮ ಘಟಕಗಳಿಗೆ ಯಾವ ಪರಿಸ್ಥಿತಿಯಲ್ಲಿ ಬೆಲೆ ಪಡೆಯುವುದು ಒಂದು ಔಚಿತ್ಯಪೂರ್ಣ ಕಲ್ಪನೆಯಾಗಿರುತ್ತದೆ ಎಂಬುದನ್ನು ಗುರುತಿಸುತ್ತೇವೆ. ಮಾರುಕಟ್ಟೆಯು ಅನೇಕ ಉದ್ಯಮ ಘಟಕಗಳನ್ನು ಮತ್ತು ಗ್ರಾಹಕರನ್ನು ಹೊಂದಿದ್ದು ಅವರಿಗೆ ಮಾರುಕಟ್ಟೆಯ ಪ್ರಚಲಿತ ಬೆಲೆಯ ಬಗ್ಗೆ ಪರಿಪೂರ್ಣ ಮಾಹಿತಿ ಇದ್ದಾಗ ಬೆಲೆ ಪಡೆಯುವುದು ಒಂದು ಔಚಿತ್ಯಪೂರ್ಣ ಕಲ್ಪನೆಯೆಂದು ಆಗಾಗ್ಗೆ ಭಾವಿಸುವುದುಂಟು. ಏಕೆ? ಮಾರುಕಟ್ಟೆಯ ಪ್ರತಿಯೊಂದು ಉದ್ಯಮಘಟಕವು ಒಂದೇ ಬೆಲೆಯನ್ನು ನಿಗದಿಪಡಿಸಿ ಸ್ವಲ್ಪ ಪ್ರಮಾಣದ ಸರಕನ್ನು ಮಾರಾಟ ಮಾಡುತ್ತದೆಂಬ ಮಾರುಕಟ್ಟೆ ಸನ್ನಿವೇಶದೊಂದಿಗೆ ಪ್ರಾರಂಭಿಸೋಣ. ಈಗ ಒಂದು ಉದ್ಯಮಘಟಕವು ತನ್ನ ಬೆಲೆಯನ್ನು ಮಾರುಕಟ್ಟೆ ಬೆಲೆಗಿಂತ ಅಧಿಕ ಬೆಲೆಗೆ ಹೆಚ್ಚಿಸುತ್ತದೆಂದುಕೊಳ್ಳೋಣ. ಎಲ್ಲಾ ಉದ್ಯಮಘಟಕಗಳು ಒಂದೇ ತೆರನಾದ ಸರಕಗಳನ್ನು ಉತ್ಪಾದಿಸುವುದರಿಂದ ಮತ್ತು ಎಲ್ಲಾ ಗ್ರಾಹಕರಿಗೂ ಮಾರುಕಟ್ಟೆಯ ಬೆಲೆಯ ಬಗ್ಗೆ ಅರಿವಿರುವುದರಿಂದ ಚರ್ಚೆಯಲ್ಲಿರುವ ಉದ್ಯಮಘಟಕವು (ಬೆಲೆ ಹೆಚ್ಚಿಸಿದ ಉದ್ಯಮಘಟಕವು) ತನ್ನ ಎಲ್ಲಾ ಗ್ರಾಹಕರನ್ನು ಕಳೆದು ಕೊಳ್ಳುತ್ತದೆ ಎಂಬುದನ್ನು ಗಮನಿಸಿ. ಇದೂ ಅಲ್ಲದೆ, ಈ ಗ್ರಾಹಕರು ತಮ್ಮ ಖರೀದಿಯನ್ನು ಇತರೆ ಉಧ್ಯಮ ಘಟಕಗಳಿಗೆ ಬದಲಾಯಿಸಿಕೊಂಡಾಗ, ಯಾವುದೇ "ಹೊಂದಾಣಿಕೆ" ಸಮಸ್ಯೆ ಉದ್ಭವಿಸುವುದಿಲ್ಲ; ಮಾರುಕಟ್ಟೆಯಲ್ಲಿ ಅತ್ಯಧಿಕ ಉದ್ಯಮಘಟಕಗಳು ಇರುವುದರಿಂದ, ಇವರ ಹೆಚ್ಚಿನ ಬೇಡಿಕೆಯನ್ನು ತ್ವರಿತವಾಗಿ ಹೊಂದಿಸಿಕೊಳ್ಳಲಾಗುತ್ತದೆ. ವೈಯಕ್ತಿಕ ಉದ್ಯಮಘಟಕವು ತನ್ನ ಸರಕನ್ನು ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆಗೆ ಯಾವುದೇ ಪ್ರಮಾಣದಲ್ಲೂ ಮಾರಾಟ ಮಾಡುಲು ಅಸಮರ್ಥವಾಗಿರುವುದೇ "ಬೆಲೆ ಪಡೆಯುವವ" ಎಂಬ ಕಲ್ಪನೆಯ ಷರತ್ತಾಗಿದೆಯೆಂದು ಇಲ್ಲಿ ನೆನಪು ಮಾಡಿಕೊಳ್ಳಬೇಕಾದ ಅಂಶವಾಗಿದೆ.

## 4.2 ಆದಾಯ *Revenue*

ನಾವು ಈಗಾಗಲೆ ತಿಳಿಸಿರುವಂತೆ ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಒಂದು ಉದ್ಯಮಘಟಕವು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಅಥವಾ ಅದಕ್ಕೆ ಸಮನಾದ ಬೆಲೆಯಲ್ಲಿ ತನಗಿಷ್ಟ ಬಂದಷ್ಟು ಘಟಕಗಳಷ್ಟು ಸರಕುಗಳನ್ನು ಮಾರಾಟ ಮಾಡಬಹುದೆಂಬ ನಂಬಿಕೆ ಹೊಂದಿರುತ್ತದೆ. ಆದರೆ ಈ ರೀತಿ ಇದ್ದಾಗ, ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯನ್ನು ನಿಗದಿಪಡಿಸಲು ಯಾವುದೇ ಕಾರಣ ಕಂಡುಬರುವುದಿಲ್ಲ. ಅಂದರೆ, ಉದ್ಯಮಘಟಕವು ಸ್ವಲ್ಪ ಪ್ರಮಾಣದ ಸರಕುಗಳನ್ನ ಮಾರಾಟ ಮಾಡಲು ಇಚ್ಛಿಸಿದಲ್ಲಿ ಅದು ನಿಗದಿ ಪಡಿಸುವ ಬೆಲೆಯು ಮಾರುಕಟ್ಟೆ ಬೆಲೆಗೆ ಸರಿಸಮವಾಗಿರುತ್ತದೆ.

ಒಂದು ಉದ್ಯಮಘಟಕವು ಮಾರುಕಟ್ಟೆಯಲ್ಲಿ ತಾನು ಉತ್ಪಾದಿಸಿದ ಸರಕುಗಳನ್ನು ಮಾರಾಟ ಮಾಡಿ ಆದಾಯವನ್ನು ಗಳಿಸುತ್ತದೆ. ಸರಕಿನ ಒಂದು ಘಟಕದ ಮಾರುಕಟ್ಟೆ ಬೆಲೆ $p$ ಆಗಿರಲಿ. ಆ ಉದ್ಯಮ ಘಟಕ ಉತ್ಪಾದಿಸಿ $p$ ಬೆಲೆಯಲ್ಲಿ ಮಾರಾಟ ಮಾಡಿದ ಸರಕಿನ ಪ್ರಮಾಣ $q$ ಆಗಿರಲಿ, ಆಗ ಸರಕಿನ ಮಾರುಕಟ್ಟೆ ಬೆಲೆ ($p$)ಯನ್ನು ಉದ್ಯಮ ಘಟಕದ ಉತ್ಪನ್ನದ ಪ್ರಮಾಣ($q$)ದಿಂದ ಗುಣಿಸಿದಾಗ ಬರುವುದೇ ಆ ಉದ್ಯಮ ಘಟಕದ **ಒಟ್ಟು ಆದಾಯ(TR)**ವೆಂದು ವ್ಯಾಖ್ಯಾನಿಸಬಹುದು. ಆದುದರಿಂದ

$$TR = p \times q$$

ವಿಷಯವನ್ನು ಖಚಿತಗೊಳಿಸಲು ಈ ಮುಂದಿನ ಸಂಖ್ಯಾತ್ಮಕ ಉದಾಹರಣೆಯನ್ನು ಪರಿಗಣಿಸಿ. ಮೇಣದಬತ್ತಿ (ಮೊಂಬತ್ತಿ) ಮಾರುಕಟ್ಟೆಯು ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಾಗಿರಲಿ ಒಂದು ಮೇಣದ ಬತ್ತಿ (ಮೊಂಬತ್ತಿ) ಪೊಟ್ಟಣದ ಬೆಲೆ ರೂ. 10 ಆಗಿರಲಿ. ಒಬ್ಬ ಮೇಣದ ಬತ್ತಿ (ಮೊಂಬತ್ತಿ) ತಯಾರಿಕನಿಗೆ ಒಟ್ಟು ಆದಾಯ ಒಟ್ಟು ಉತ್ಪನ್ನಕ್ಕೆ ಹೇಗೆ ಸಂಬಂದ ಪಟ್ಟಿದೆ ಎಂಬುದನ್ನು ಕೋಷ್ಟಕ 4.1 ತೋರಿಸುತ್ತದೆ. ಮೇಣದ ಬತ್ತಿ (ಮೊಂಬತ್ತಿ) ಪೊಟ್ಟಣವನ್ನು ಉತ್ಪಾದಿಸದೇ ಇದ್ದಾಗ ಒಟ್ಟು ಆದಾಯ ಸೊನ್ನೆಯಾಗಿರುತ್ತದೆ (TR = 0). ಎಂಬುದನ್ನು ಗಮನಿಸಿ, ಒಂದು ಪೊಟ್ಟಣ ಮೇಣದ ಬತ್ತಿ (ಮೊಂಬತ್ತಿ) ಉತ್ಪಾದಿಸಿದರೆ, TR = 1 × ರೂ 10=10 ರೂಪಾಯಿಗಳಿಗೆ ಸಮವಾಗಿರುತ್ತದೆ; ಎರಡು ಪೊಟ್ಟಣಗಳನ್ನು ಉತ್ಪಾದಿಸಿದರೆ TR = 2 × ರೂ 10= ರೂ 20 ಆಗುತ್ತದೆ; ಹೀಗೆ ಮುಂದುವರೆಯುತ್ತ ಹೋಗುತ್ತದೆ.

**ಕೋಷ್ಟಕ 4.1: ಒಟ್ಟು ಆದಾಯ**

| ಮಾರಾಟ ಮಾಡಿದ ಪೆಟ್ಟಿಗೆ / ಪೊಟ್ಟಣ | ಒಟ್ಟು ಆದಾಯ ರೂಪಾಯಿಗಳಲ್ಲಿ (TR) |
|---|---|
| 0 | 0 |
| 1 | 10 |
| 2 | 20 |
| 3 | 30 |
| 4 | 40 |
| 5 | 50 |

ಉದಾಹರಣೆ ನಂತರ ವಾಸ್ತವಿಕ ಪರಸ್ಥಿತಿಗೆ ಮರಳೋಣ. ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಒಂದು ಉದ್ಯಮ ಘಟಕವು ಮಾರುಕಟ್ಟೆ ಬೆಲೆ $p$ ಯನ್ನು "ನೀಡಲಾಗಿದೆ" ಎಂದು ಪರಿಗಣಿಸುತ್ತದೆ. ಮಾರುಕಟ್ಟೆ ಬೆಲೆಯನ್ನು $p$ ಗೆ ನಿಗದಿಪಡಿಸಲಾಗಿದ್ದು, ಉದ್ಯಮಘಟಕದ **ಒಟ್ಟು ಆದಾಯ ರೇಖೆಯು** ಒಟ್ಟು ಆದಾಯ ($y$ ಅಕ್ಷ ) ಮತ್ತು ಉತ್ಪನ್ನ ಪ್ರಮಾಣ ($x$ ಅಕ್ಷ)ಗಳ ಸಂಬಂದವನ್ನು ತೋರಿಸುತ್ತದೆ.




**ರೇಖಾಚಿತ್ರ 4.1 ಒಟ್ಟು ಆದಾಯ ರೇಖೆ**

ಉಧ್ಯಮಘಟಕದ ಒಟ್ಟು ಆದಾಯ ರೇಖೆ ಉಧ್ಯಮಘಟಕ ಗಳಿಸುವ ಒಟ್ಟು ಆದಾಯ ಮತ್ತು ಉತ್ಪನ್ನ ಮಟ್ಟಗಳ ನಡುವಿನ ಸಂಬಂದವನ್ನು ತೋರಿಸುತ್ತದೆ. ರೇಖೆ ಇಳಿಜಾರು,

$Aq_1/ Oq_1 = p$. $p$ ಯು ಮಾರುಕಟ್ಟೆ ಬೆಲೆಯಾಗಿದೆ.

ರೇಖಾಚಿತ್ರ 4.1 ಉದ್ಯಮಘಟಕದ ಒಟ್ಟು ಆದಾಯ ರೇಖೆಯನ್ನು ತೋರಿಸುತ್ತದೆ. ಇಲ್ಲಿ ಮೂರು ಹೇಳಿಕೆಗಳು ಸಂದರ್ಭೋಚಿತವಾಗಿವೆ. ಮೊದಲನೆಯದಾಗಿ ಉತ್ಪನ್ನವು ಶೂನ್ಯವಾಗಿದ್ದಾಗ ಉದ್ಯಮಘಟಕದ ಒಟ್ಟು ಆದಾಯವು ಶೂನ್ಯವಾಗಿ ಇರುತ್ತದೆ. ಆದುದರಿಂದ ಒಟ್ಟು ಆದಾಯ ರೇಖೆಯು O (ಮೂಲ) ದಿಂದ ಹಾದು ಹೋಗುತ್ತದೆ. ಎರಡನೆಯದಾಗಿ ಉತ್ಪಾದನೆಯ (ಉತ್ಪನ್ನದ) ಪ್ರಮಾಣ ಹೆಚ್ಚಾದಂತೆ ಒಟ್ಟು ಆದಾಯವು ಹೆಚ್ಚಾಗುತ್ತದೆ. ಅಷ್ಟೇ ಅಲ್ಲದೆ, ಸಮೀಕರಣ TR = $p$ × $q$ ಸರಳ ರೇಖೆಯಾಗಿರುತ್ತದೆ. ಇದರ ಅರ್ಥ TR ರೇಖೆಯು (ಒಟ್ಟು ಆದಾಯ ರೇಖೆಯು) ಏರು ಮುಖ ಸರಳ ರೇಖೆಯಾಗಿದೆ. ಮೂರನೆಯದಾಗಿ ಈ ಸರಳ ರೇಖೆಯ ಇಳಿಜಾರನ್ನು ಪರಿಗಣಿಸಿ. ಉತ್ಪನ್ನದ ಪ್ರಮಾಣ ಒಂದು ಘಟಕವಾದಾಗ (ಸಮನಾಂತರ ಅಂತರ $Oq_1$ ರೇಖಾ ಚಿತ್ರ 4.1 ರಂತೆ), ಒಟ್ಟು ಆದಾಯವು (ಲಂಬಾಂತರ ಎತ್ತರ $Aq_1$ ರೇಖಾ ಚಿತ್ರ 4.1 ರಂತೆ) $p$ $x$ 1=$p$. ಆಗುತ್ತದೆ. ಆದುದರಿಂದ ಸರಳ ರೇಖೆಯ ಇಳಿಜಾರು $Aq_1/Oq_1=p$. ಆಗಿರುತ್ತದೆ.

ಈಗ ರೇಖಾ ಚಿತ್ರ 4.2 ಪರಿಗಣಿಸಿ. ಇಲ್ಲಿ ನಾವು ಉದ್ಯಮ ಘಟಕದ ಉತ್ಪನ್ನದ ವಿವಿಧ ಮೌಲ್ಯಗಳಿಗೆ ($x$ ಅಕ್ಷ), ಮಾರುಕಟ್ಟೆ ಬೆಲೆ($y$ ಅಕ್ಷ) ವನ್ನು ಗುರುತು ಹಾಕುತ್ತೇವೆ. ಮಾರುಕಟ್ಟೆ ಬೆಲೆಯು $p$ ಮಟ್ಟದಲ್ಲಿ ನಿಗದಿಯಾಗಿರುವುದರಿಂದ, $y$ ಅಕ್ಷವನ್ನು ಭೇದಿಸುವ $p$ ಎತ್ತರಕ್ಕೆ ಒಂದು ಸಮನಾದ ಸಮನಾಂತರ ಸರಳ ರೇಖೆಯನ್ನು ಪಡೆಯುತ್ತೇವೆ. ಈ ಸಮನಾಂತರ ಸರಳ ರೇಖೆಯನ್ನು **'ಬೆಲೆ ರೇಖೆ'** ಎಂದು ಕರೆಯುತ್ತಾರೆ. ಬೆಲೆ ರೇಖೆಯು ಉದ್ಯಮಘಟಕ ಎದುರಿಸುವ ಬೇಡಿಕೆ ರೇಖೆಯನ್ನು ಸಹ ಚಿತ್ರಿಸುತ್ತದೆ. ಮಾರುಕಟ್ಟೆಯ ಬೆಲೆ $p$ ಯು ಉದ್ಯಮ ಘಟಕದ ಉತ್ಪನ್ನದಿಂದ ಸ್ವತಂತ್ರವಾಗಿದೆ ಎಂಬುದನ್ನು ರೇಖಾ ಚಿತ್ರ 4.2 ತೋರಿಸುವುದನ್ನು ಗಮನಿಸಿ ಇದರರ್ಥ ಉದ್ಯಮಘಟಕವು '$p$' ನ ಬೆಲೆಯಲ್ಲಿ ತನಗಿಷ್ಟ ಬಂದಷ್ಟು ಘಟಕಗಳನ್ನು ಮಾರಾಟ ಮಾಡಬಹುದೆಂದಾಗಿದೆ.




**ರೇಖಾಚಿತ್ರ 4.2 ಬೆಲೆ ರೇಖೆ**

ಬೆಲೆ ರೇಖೆಯು ಮಾರುಕಟ್ಟೆ ಬೆಲೆ ಮತ್ತು ಉತ್ಪಾದನ ಘಟಕದ ಉತ್ಪನ್ನ ಮಟ್ಟಗಳ ನಡುವಿನ ಸಂಬಂದವನ್ನು ತೋರಿಸುತ್ತದೆ. ಬೆಲೆ ರೇಖೆಯ ಲಂಭವಾದ ಎತ್ತರ ಮಾರುಕಟ್ಟೆ ಬೆಲೆ $p$ ಗೆ ಸಮನಾಗಿರುತ್ತದೆ.





ಉದ್ಯಮಘಟಕವು ತನ್ನ ಉತ್ಪನ್ನದ ಪ್ರತಿಯೊಂದು ಘಟಕದ ಉತ್ಪಾದನೆಯಿಂದ ಪಡೆಯುವ ಒಟ್ಟು ಆದಾಯವೇ **ಸರಾಸರಿ ಆದಾಯ** (**AR**) ಎಂದು ವ್ಯಾಖ್ಯಾನಿಸಬಹುದು. ಒಂದು ಉದ್ಯಮ ಘಟಕದ ಉತ್ಪನ್ನ ಪ್ರಮಾಣ $q$ ಆದರೆ ಮತ್ತು ಮಾರುಕಟ್ಟೆ ಬೆಲೆಯು $p$ ಆದರೆ, ಒಟ್ಟು ಆದಾಯ (TR)=$p \times q$ ಗೆ ಸಮನಾಗಿರುತ್ತದೆ ಆದ್ದರಿಂದ

$$\mathrm{AR} = \frac{\mathrm{TR}}{q} = \frac{p \times q}{q} = p$$

(ಸರಾಸರಿ ಆದಾಯ = ಒಟ್ಟು ಆದಾಯ/ಉತ್ಪನ್ನದ ಪ್ರಮಾಣ = ಬೆಲೆ × ಸರಕಿನ ಪ್ರಮಾಣ/ಸರಕಿನ ಪ್ರಮಾಣ=ಬೆಲೆ)

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಒಂದು ಬೆಲೆ ಪಡೆಯುವ ಉದ್ಯಮ ಘಟಕಕ್ಕೆ ಸರಾಸರಿ ಆದಾಯವು ಮಾರುಕಟ್ಟೆ ಬೆಲೆಗೆ ಸಮನಾಗಿರುತ್ತದೆ.

**ಸೀಮಾಂತ ಆದಾಯ** (***Marginal Revenue***): ಉದ್ಯಮ ಘಟಕದ ಉತ್ಪನ್ನದಲ್ಲಿ ಒಂದು ಘಟಕದ ಹೆಚ್ಚುವರಿ ಉತ್ಪಾದನೆಯಿಂದ ಒಟ್ಟು ಆದಾಯದಲ್ಲಾಗುವ ಹೆಚ್ಚಳವನ್ನು ಸೀಮಾಂತ ಆದಾಯ ಎಂದು ವ್ಯಾಖ್ಯಾನಿಸಬಹುದು. ಉದ್ಯಮ ಘಟಕದ ಉತ್ಪನ್ನವು $q^0$ ಯಿಂದ $(q^0+1)$ಗೆ ಹೆಚ್ಚಾದ ಸನ್ನಿವೇಶವನ್ನು ಪರಿಗಣಿಸಿ ಮಾರುಕಟ್ಟೆ ಬೆಲೆ $p$ ಎಂದು ನೀಡಿದ್ದಾಗ MR= [ಉತ್ಪನ್ನದಿಂದ ಒಟ್ಟು ಆದಾಯ TR$(q^0+1)$]– [ಉತ್ಪನ್ನದಿಂದ ಒಟ್ಟು ಆದಾಯ $q^0$] = $[p \times (q^0+1)] - [pq^0] = p$ ಎಂದು ಪರಿಗಣಿಸುವುದು.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಒಂದು ಬೆಲೆ ಪಡೆಯುವ ಉದ್ಯಮ ಘಟಕಕ್ಕೆ ಸೀಮಾಂತ ಆದಾಯವು ಮಾರುಕಟ್ಟೆಯ ಬೆಲೆಗೆ ಸಮನಾಗಿರುತ್ತದೆ. ಬೀಜ ಗಣಿತದ ವಾತಾವರಣವನ್ನು ಪಕ್ಕಕ್ಕಿಟ್ಟು ಸಹಜ ಜ್ಞಾನದಿಂದ ನೋಡಿದಾಗ ಇದರ ಪರಿಣಾಮ ಅತ್ಯಂತ ಸರಳ. ಒಂದು ಉದ್ಯಮಘಟಕವು ಒಂದು ಉತ್ಪನ್ನವನ್ನು ಒಂದು ಘಟಕದಷ್ಟು ಹೆಚ್ಚಿಸಿದರೆ, ಈ ಹೆಚ್ಚುವರಿ ಘಟಕವನ್ನು ಮಾರುಕಟ್ಟೆ ಬೆಲೆಗೆ ಮಾರಾಟ ಮಾಡಲಾಗುತ್ತದೆ. ಹೀಗಾಗಿ ಈ ಒಂದು ಘಟಕದ ವಿಸ್ತರಣೆಯಿಂದ ಉದ್ಯಮಘಟಕದ ಒಟ್ಟು ಆದಾಯದಲ್ಲಾಗುವ ಹೆಚ್ಚಳವು– ಅಂದರೆ ಸೀಮಾಂತ ಆದಾಯವು ಸರಿಯಾಗಿ ಮಾರುಕಟ್ಟೆ ಬೆಲೆ ಆಗಿರುತ್ತದೆ.

## 4.3 ಲಾಭ ಗರಿಷ್ಠಗೊಳಿಸುವಿಕೆ *Profit Maximisation*

ಒಂದು ಉದ್ಯಮಘಟಕವು ನಿರ್ದಿಷ್ಟ ಪ್ರಮಾಣದ ಸರಕನ್ನು ಉತ್ಪಾದಿಸುತ್ತದೆ ಮತ್ತು ಮಾರಾಟ ಮಾಡುತ್ತದೆ. ಒಂದು ಉದ್ಯಮ ಘಟಕದ ಲಾಭವನ್ನು $\pi$ (ಪೈ) ನಿಂದ ಸೂಚಿಸಬಹುದು ಮತ್ತು ಅದನ್ನು ಒಟ್ಟು ಆದಾಯ(TR) ಮತ್ತು ಒಟ್ಟು ಉತ್ಪಾದನಾ ವೆಚ್ಚ (TC) ದ ನಡುವಿನ ವ್ಯತ್ಯಾಸವೆಂದು ವ್ಯಾಖ್ಯಾನಿಸಬಹುದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ

$$\pi = TR - TC$$

ಸ್ಪಷ್ಟವಾಗಿ TR ಮತ್ತು TC ನಡುವಿನ ಅಂತರವು ಉದ್ಯಮ ಘಟಕದ ವೆಚ್ಚವನ್ನು ಮೀರಿದ ಗಳಿಕೆಯಾಗಿದೆ. ಒಂದು ಉದ್ಯಮಘಟಕವು ಅದರ ಲಾಭವನ್ನು ಗರಿಷ್ಠಗೊಳಿಸಲು ಬಯಸುತ್ತದೆ. ಪ್ರಮುಖ ಪ್ರಶ್ನೆಯೆಂದರೆ ಯಾವ ಉತ್ಪನ್ನದ ಮಟ್ಟದಲ್ಲಿ ಉದ್ಯಮಘಟಕವು ಲಾಭವನ್ನು ಗರಿಷ್ಠಗೊಳಿಸುತ್ತದೆ? ಉದ್ಯಮ ಘಟಕದ ಉತ್ಪನ್ನವನ್ನು ಪೂರ್ಣವಾಗಿ ವಿಭಜಿಸಬಹುದೆಂದು ಊಹಿಸಿಕೊಂಡು, ನಾವು ಧನಾತ್ಮಕ ಮಟ್ಟದ ಉತ್ಪನ್ನ ಇದ್ದರೆ, ಅದು $q^0$ ಆದರೆ, ಆ ಬಿಂದುವಿನಲ್ಲಿ ಲಾಭವು ಗರಿಷ್ಠಗೊಳ್ಳುತ್ತದೆ ಆಗ ಮೂರು ಷರತ್ತುಗಳೂ ಅನ್ವಯವಾಗಬೇಕಾಗುತ್ತದೆ ಎಂಬುದನ್ನು ತೋರಿಸುತ್ತೇವೆ.

1. ಮಾರುಕಟ್ಟೆ ಬೆಲೆ $p$, ಸೀಮಾಂತ ವೆಚ್ಚ $q_0$ ಗೆ ಸಮನಾಗಿರುತ್ತದೆ ($p = q_0$)
2. ಸೀಮಾಂತ ವೆಚ್ಚವು $q_0$ ದಲ್ಲಿ ಸ್ಥಿರವಾಗಿರುತ್ತದೆ (ಇಳಿಕೆಯಾಗುವುದಿಲ್ಲ)
3. ಅಲ್ಪಾವಧಿಯಲ್ಲಿ, ಮಾರುಕಟ್ಟೆ ಬೆಲೆ $p$ ಯು, ಸರಾಸರಿ ಬದಲಾಗುವ ವೆಚ್ಚ $q_0$ ಗಿಂತ ಹೆಚ್ಚು ಅಥವಾ ಸಮನಾಗಿರಲೇಬೇಕಾಗುತ್ತದೆ. ದೀರ್ಘಾವಧಿಯಲ್ಲಿ ಮಾರುಕಟ್ಟೆ ಬೆಲೆ $p$ ಯು ಸರಾಸರಿ ವೆಚ್ಚಕ್ಕಿಂತ $q_0$ ಬಿಂದುವಿಗೆ ಹೆಚ್ಚು ಅಥವಾ ಸಮನಾಗಿರಲೇಬೇಕಾಗುತ್ತದೆ.

### 4.3.1. ಷರತ್ತು 01 *Condition 1*

ಲಾಭಗರಿಷ್ಠಗೊಳಿಸುವ ಉದ್ಯಮಘಟಕವು ಮಾರುಕಟ್ಟೆ ಬೆಲೆಯು ಸೀಮಾಂತವೆಚ್ಚಕ್ಕಿಂತ ಹೆಚ್ಚಾಗಿರುವ ಅಥವಾ ಸೀಮಾಂತವೆಚ್ಚವು ಮಾರುಕಟ್ಟೆಯ ಬೆಲೆಗಿಂತ ಹೆಚ್ಚಾಗಿರುವ ಉತ್ಪನ್ನ ಮಟ್ಟದಲ್ಲಿ ಉತ್ಪಾದಿಸುವುದಿಲ್ಲ ಎಂದು ವಾದಿಸುತ್ತಾ, ಷರತ್ತು ಒಂದನ್ನು ಸತ್ಯವೆಂದು ಸಾಬೀತು ಪಡಿಸುತ್ತೇವೆ.

**ಸನ್ನಿವೇಶ ಒಂದು: ಸೀಮಾಂತ ವೆಚ್ಚಕ್ಕಿಂತ ಹೆಚ್ಚಾದ ಬೆಲೆಯನ್ನು ತಳ್ಳಿಹಾಕಲಾಗಿದೆ.**

ರೇಖಾಚಿತ್ರ 4.3 ನ್ನು ಪರಿಗಣಿಸಿ ಮತ್ತು $q_2$ ಉತ್ಪನ್ನದ ಮಟ್ಟದಲ್ಲಿ ಮಾರುಕಟ್ಟೆ ಬೆಲೆ $p$ ಸೀಮಾಂತ ವೆಚ್ಚಕ್ಕಿಂತ ಹೆಚ್ಚಾಗಿರುವುದನ್ನು ಗಮನಿಸಿ. $q_2$ ಗರಿಷ್ಠಲಾಭಗೊಳಿಸುವ ಉತ್ಪನ್ನದ ಮಟ್ಟವಾಗಲು ಸಾಧ್ಯವಿಲ್ಲವೆಂದು ನಾವು ಪ್ರತಿಪಾದಿಸುತ್ತೇವೆ. ಏಕೆ?

$q_2$ ನ ಸ್ವಲ್ಪ ಬಲಭಾಗದಲ್ಲಿರುವ ಎಲ್ಲಾ ಉತ್ಪನ್ನದ ಮಟ್ಟಗಳಿಗೂ ಮಾರುಕಟ್ಟೆ ಬೆಲೆಯು ಸೀಮಾಂತ ವೆಚ್ಚಕ್ಕಿಂತ ಹೆಚ್ಚಾಗಿರುವುದನ್ನು ಗಮನಿಸಿದ್ದೇವೆ. ಆದುದರಿಂದ $q_2$ ಗಿಂತ ಸ್ವಲ್ಪ ಬಲಭಾಗದಲ್ಲಿ ಇರುವ $q_3$ ಉತ್ಪನ್ನ ಮಟ್ಟವನ್ನು ಆರಿಸೋಣ. ಅದರಲ್ಲಿ $q_2$ ಮತ್ತು $q_3$ ನಡುವಿನ ಎಲ್ಲಾ ಉತ್ಪನ್ನದ ಮಟ್ಟಗಳಲ್ಲಿಯೂ ಮಾರುಕಟ್ಟೆ ಬೆಲೆಯು ಸೀಮಾಂತವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ.

ಈಗ ಒಂದು ಉದ್ಯಮಘಟಕವು ತನ್ನ ಉತ್ಪನ್ನದ ಮಟ್ಟವನ್ನು $q_2$ ನಿಂದ $q_3$ ಗೆ ಹೆಚ್ಚಿಸುತ್ತದೆ ಎಂದುಕೊಳ್ಳೋಣ. ಈ ಉತ್ಪನ್ನದ ವಿಸ್ತರಣೆಯಿಂದ ಉದ್ಯಮ ಘಟಕದ ಒಟ್ಟು ಆದಾಯದಲ್ಲಾದ ಹೆಚ್ಚಳವು ಬದಲಾದ ಪ್ರಮಾಣ ಮತ್ತು ಮಾರುಕಟ್ಟೆ ಬೆಲೆಯ ಗುಣಲಬ್ದವಾಗಿದೆ. ಇದು $q_2$ $q_3$ CB ಯ ಆಯತದ ಕ್ಷೇತ್ರವಾಗಿದೆ. ಮತ್ತೊಂದು ರೀತಿಯಲ್ಲಿ ಈ ಉತ್ಪನ್ನದ ವಿಸ್ತರಣೆಗೆ ಸಂಬಂಧಿಸಿದ ಒಟ್ಟು ವೆಚ್ಚದಲ್ಲಿನ ಹೆಚ್ಚಳವು ಉತ್ಪಾದನಾ ಮಟ್ಟಗಳಾದ $q_2$ ಮತ್ತು $q_3$ ನಡುವಿನ ಸೀಮಾಂತ ವೆಚ್ಚದ ರೇಖೆಯ ಕೆಳಗಿರುವ ಕ್ಷೇತ್ರವಾಗಿದೆ; ಅಂದರೆ $q_2$ $q_3$ XW ಪ್ರದೇಶದ ಕ್ಷೇತ್ರವಾಗಿದೆ. ಆದರೆ, ಎರಡೂ ಕ್ಷೇತ್ರಗಳ ಹೋಲಿಕೆಯು ಉದ್ಯಮ

ಘಟಕದ ಲಾಭವು ಉತ್ಪನ್ನ ಮಟ್ಟವು $q_2$ ಗಿಂತ $q_3$ ಯಲ್ಲಿ ಹೆಚ್ಚಾಗಿದೆ ಎಂದು ತೋರಿಸುತ್ತದೆ. ಈ ರೀತಿಯ ಸನ್ನಿವೇಶದಲ್ಲಿ $q_2$ವು ಲಾಭ ಗರಿಷ್ಠಗೊಳಿಸಲುವ ಉತ್ಪನ್ನಮಟ್ಟವಾಗಲು ಸಾಧ್ಯವಿಲ್ಲ.

**ಸನ್ನಿವೇಶ 2: ಸೀಮಾಂತವೆಚ್ಚಕ್ಕಿಂತ ಕಡಿಮೆಯಾದ ಬೆಲೆಯನ್ನು ತಳ್ಳಿಹಾಕಲಾಗಿದೆ.**

ರೇಖಾ ಚಿತ್ರ 4.3 ನ್ನು ಪರಿಗಣಿಸಿ ಮತ್ತು ಉತ್ಪನ್ನಮಟ್ಟ $q_5$ ಮಾರುಕಟ್ಟೆ ಬೆಲೆ P ಯು ಸೀಮಾಂತ ವೆಚ್ಚಕ್ಕಿಂತ ಕಡಿಮೆ ಇದೆ ಎಂಬುದನ್ನು ಗಮನಿಸಿ. $q_5$ ಲಾಭಗರಿಷ್ಠಗೊಳಿಸುವ ಉತ್ಪನ್ನ ಮಟ್ಟವಲ್ಲವೆಂದು ಹೇಳುತ್ತೇವೆ ಏಕೆ?

$q_5$ ನ ಸ್ವಲ್ಪ ಎಡಭಾಗಕ್ಕೆ ಇರುವ ಎಲ್ಲಾ ಉತ್ಪನ್ನಮಟ್ಟಗಳಲ್ಲಿ ಮಾರುಕಟ್ಟೆ ಬೆಲೆಯು ಸೀಮಾಂತ ವೆಚ್ಚಕ್ಕಿಂತ ಕಡಿಮೆಯಿದೆ ಎಂದು ಗಮನಿಸಿ. ಆದ್ದರಿಂದ $q_5$ನ ಎಡಭಾಗಕ್ಕಿರುವ $q_4$ ಉತ್ಪನ್ನದ ಮಟ್ಟವನ್ನು ಆಯ್ಕೆ ಮಾಡಿದಾಗ $q_4$ & $q_5$ ನಡುವಿನ ಎಲ್ಲಾ ಉತ್ಪನ್ನಮಟ್ಟಗಳಲ್ಲಿ ಮಾರುಕಟ್ಟೆ ಬೆಲೆಯು ಸೀಮಾಂತ ವೆಚ್ಚಕ್ಕಿಂತ ಕಡಿಮೆ ಇರುತ್ತದೆ. ಈಗ ಉದ್ಯಮಘಟಕವು ಉತ್ಪನ್ನ ಮಟ್ಟವನ್ನು $q_5$ ನಿಂದ $q_4$ ಗೆ ಕಡಿಮೆಮಾಡಿಕೊಳ್ಳುತ್ತದೆ ಎಂದುಕೊಳ್ಳೋಣ. ಈ ಉತ್ಪನ್ನದ ಕಡಿತದಿಂದ ಉದ್ಯಮಘಟಕದ ಒಟ್ಟು ಆದಾಯದಲ್ಲಾಗುವ ಇಳಿಕೆಯು, ಮಾರುಕಟ್ಟೆ ಬೆಲೆ ಮತ್ತು ಬದಲಾದ ಪ್ರಮಾಣಗಳನ್ನು ಗುಣಿಸುವುದರಿಂದ ದೊರಕುತ್ತದೆ. ಅಂದರೆ, $q_4q_5$EF ಆಯತದ ಕ್ಷೇತ್ರವಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಉತ್ಪನ್ನದ ಕಡಿತದಿಂದ ಒಟ್ಟು ವೆಚ್ಚದಲ್ಲಿ ಉಂಟಾಗುವ ಇಳಿಕೆಯು ಸೀಮಾಂತವೆಚ್ಚ ರೇಖೆ ಕೆಳಗೆ ಬರುವ $q_4$ ಮತ್ತು $q_5$ ನಡುವಿನ ಕ್ಷೇತ್ರವಾಗಿದೆ. ಅಂದರೆ ಅದು $q_4$ $q_5$ ZY ನ ಕ್ಷೇತ್ರದ ಪ್ರದೇಶವಾಗಿದೆ. ಆದರೆ, ಎರಡು ಪ್ರದೇಶಗಳ ಹೋಲಿಕೆಯು ಅದರ ಉತ್ಪನ್ನಮಟ್ಟ $q_5$ ಗಿಂತ $q_4$ ಆಗಿದ್ದರೆ ಉದ್ಯಮ ಘಟಕದ ಲಾಭವು ಹೆಚ್ಚಾಗಿರುತ್ತದೆಂದು ತೋರಿಸುತ್ತದೆ. ಆದರೆ, ಈ ಸಂದರ್ಭದಲ್ಲಿ $q_5$ ಲಾಭ ಗರಿಷ್ಠಗೊಳಿಸುವ ಒಂದು ಉತ್ಪನ್ನದ ಮಟ್ಟ ಆಗಲು ಸಾಧ್ಯವಿಲ್ಲ.



### 4.3.2: ಎರಡನೇ ಷರತ್ತು *Condition 2*

ಲಾಭಾಂಶವನ್ನು ಗರಿಷ್ಠಗೊಳಿಸುವ ಉತ್ಪನ್ನ ಮಟ್ಟವು ಧನಾತ್ಮಕವಾಗಿದ್ದಾಗ ಎರಡನೇ ಷರತ್ತನ್ನು ಪರಿಗಣಿಸಿ. ಈ ಸನ್ನಿವೇಶದಲ್ಲಿ ಲಾಭ ಗರಿಷ್ಠಗೊಳಿಸುವ ಉತ್ಪನ್ನದ ಮಟ್ಟದಲ್ಲಿ ಸೀಮಾಂತ ವೆಚ್ಚದ ರೇಖೆಯು ಇಳಿಮುಖವಾಗುವುದಿಲ್ಲ ಏಕೆ? ಈ ಪ್ರಶ್ನೆಗೆ ಉತ್ತರಿಸಲು ಮತ್ತೊಮ್ಮೆ ರೇಖಾ ಚಿತ್ರ 4.3ನ್ನು ನೋಡಿ. ಉತ್ಪನ್ನಮಟ್ಟ $q_1$ ನಲ್ಲಿ ಮಾರುಕಟ್ಟೆಯ ಬೆಲೆ ಸೀಮಾಂತ ವೆಚ್ಚಕ್ಕೆ ಸಮನವಾಗಿರುತ್ತದೆ ಆದಾಗ್ಯೂ ಸೀಮಾಂತ ವೆಚ್ಚದ ರೇಖೆಯು ಕೆಳಮುಖವಾಗಿ ಇಳಿಯುತ್ತದೆ ಎಂಬುದನ್ನು ಗಮನಿಸಿ. ನಾವು $q_1$ ಒಂದು ಲಾಭ ಗರಿಷ್ಠಗೊಳಿಸುವ ಉತ್ಪನ್ನಮಟ್ಟವಾಗಲು ಸಾಧ್ಯವಿಲ್ಲವೆಂದು ಹೇಳುತ್ತೇವೆ. ಏಕೆ? ಎಲ್ಲಾ ಉತ್ಪನ್ನಮಟ್ಟಗಳು $q_1$ ನ ಎಡಭಾಗಕ್ಕೆ ಇರುವುದರಿಂದ ಮಾರುಕಟ್ಟೆ ಬೆಲೆಯು ಸೀಮಾಂತ ವೆಚ್ಚಕ್ಕಿಂತ ಕಡಿಮೆ ಇದೆ ಎಂಬುದನ್ನು ಗಮನಿಸಿ. ಆದರೆ, ವಿಭಾಗ 3.1ರ ಸನ್ನಿವೇಶ 2ರಲ್ಲಿ ವಿವರಿಸಿರುವ ವಾದವು ಸೂಚಿಸುವುದೇನೆಂದರೆ $q_1$ ಉತ್ಪನ್ನಾ ಮಟ್ಟಕ್ಕಿಂತ ಸ್ವಲ್ಪ ಕಡಿಮೆ ಇರುವ ಉತ್ಪನ್ನ ಮಟ್ಟದಲ್ಲಿ ಉದ್ಯಮ ಘಟಕದ ಲಾಭವು $q_1$ ಉತ್ಪನ್ನ ಮಟ್ಟಕ್ಕಿಂತ ಹೆಚ್ಚಾಗಿರುತ್ತದೆ. ಈ ಸನ್ನಿವೇಶದಲ್ಲಿ $q_1$ ಲಾಭಗರಿಷ್ಠಗೊಳಿಸುವ ಉತ್ಪನ್ನ ಮಟ್ಟವಾಗಲು ಸಾಧ್ಯವಿಲ್ಲ.




**ರೇಖಾಚಿತ್ರ 4.3: ಷರತ್ತು 1 ಮತ್ತು 2 ಲಾಭ ಗರಿಷ್ಠಗೊಳಿಸಲು**

ಮಾರುಕಟ್ಟೆಯ ಬೆಲೆ $p$ ಆಗಿರುವಾಗ, ಲಾಭಗರಿಷ್ಠಗೊಳಿಸುವ ಉದ್ಯಮ ಘಟಕದ ಉತ್ಪನ್ನಮಟ್ಟವು $q_1$ (ಸೀಮಾಂತವೆಚ್ಚದ ರೇಖೆ, MC ಕೆಳಮುಖವಾಗಿ ಇಳಿಮುಖವಾಗುವುದು) ಆಗಿರಬಾರದು ಎಂಬುದನ್ನು ತೋರಿಸುವುದ್ದಾಕ್ಕಾಗಿ ರೇಖಾ ಚಿತ್ರ 4.3 ನ್ನು ಬಳಸಲಾಗುತ್ತದೆ. $q_2$ (ಮಾರುಕಟ್ಟೆ ಬೆಲೆಯು ಸೀಮಾಂತವೆಚ್ಚಕ್ಕಿಂತ ಹೆಚ್ಚಾಗಿದೆ.) ಅಥವ $q_5$ (ಸೀಮಾಂತ ವೆಚ್ಚವು ಮಾರುಕಟ್ಟೆ ಬೆಲೆಗಿಂತ ಹೆಚ್ಚಾಗಿದೆ.)

### 4.3.3 ಮೂರನೇ ಷರತ್ತು *Condition 3*

ಲಾಭಾಂಶವನ್ನು ಗರಿಷ್ಠಗೊಳಿಸುವ ಉತ್ಪನ್ನ ಮಟ್ಟವು ಧನಾತ್ಮಕವಾಗಿದ್ದಾಗ 3ನೇಯ ಷರತ್ತನ್ನು ಪರಿಗಣಿಸಿ. 3ನೇ ಷರತ್ತು ಎರಡು ಭಾಗಗಳನ್ನು ಹೊಂದಿದೆ ಎಂಬುದನ್ನು ಗಮನಿಸಿ; ಒಂದು ಭಾಗ ಅಲ್ಪಾವಧಿಗೆ ಅನ್ವಯಿಸುತ್ತದೆ ಮತ್ತೊಂದು ದೀರ್ಘಾವಧಿಗೆ ಅನ್ವಯಿಸುತ್ತದೆ.

**ಸನ್ನಿವೇಶ1: ಅಲ್ಪಾವಧಿಯಲ್ಲಿ ಬೆಲೆಯು ಸರಾಸರಿ ಬದಲಾಗುವ ವೆಚ್ಚಕ್ಕಿಂತ ಹೆಚ್ಚು ಅಥವಾ ಸಮನಾಗಿರಲೇಬೇಕು.**

ಒಂದು ಲಾಭ ಗರಿಷ್ಠಗೊಳಿಸುವ ಉದ್ಯಮಘಟಕವು ಅಲ್ಪಾವಧಿಯಲ್ಲಿ ಮಾರುಕಟ್ಟೆ ಬೆಲೆಯು AVC ಗಿಂತ ಕಡಿಮೆ ಇರುವ ಉತ್ಪನ್ನಮಟ್ಟದಲ್ಲಿ ಉತ್ಪಾದಿಸುವುದಿಲ್ಲವೆಂದು ವಾದಿಸುತ್ತಾ, ಸನ್ನಿವೇಶ 1ರ ಹೇಳಿಕೆ ನಿಜವೆಂದು ಸಾಬೀತುಪಡಿಸಬಹುದು.




**ರೇಖಾಚಿತ್ರ 4.4: ಲಾಭ ಗರಿಷ್ಠೀಕರಣಗೊಳಿಸುವುದದರೊಂದಿಗೆ ಬೆಲೆ ಮತ್ತು AVC ಯ ಸಂಬಂಧ(ಅಲ್ಪಾವಧಿ)**

ಮಾರುಕಟ್ಟೆ ಬೆಲೆ p ಅದರ ಕನಿಷ್ಠ ಸರಾಸರಿ ಬದಾಗುವ ವೆಚ್ಚ (AVC) ಕ್ಕಿಂತ ಕಡಿಮೆ ಇದ್ದಾಗ ಅಲ್ಪಾವಧಿಯಲ್ಲಿ ಲಾಭವನ್ನು ಗರಿಷ್ಠಗೊಳಿಸು ಉದ್ಯಮಘಟಕವು ಉತ್ಪನ್ನ ಮಟ್ಟವು ಶೂನ್ಯವಾಗಿರುತ್ತದೆ. ಎಂದು ನಿರೂಪಿಸಲು ರೇಖಾ ಚಿತ್ರ 4.4 ಬಳಸಲಾಗುತ್ತದೆ. ಉದ್ಯಮ ಘಟಕದ ಉತ್ಪನ್ನ ಮಟ್ಟವು $q_1$ ಆಗಿದ್ದರೆ, ಉದ್ಯಮ ಘಟಕದ ಒಟ್ಟು ಬದಲಾಗುವ ವೆಚ್ಚವು ಆದರ ಆದಾಯವನ್ನು ಮೀರಿ ಆಯತ PEBA ಪ್ರದೇಶಕ್ಕೆ ಸಮನಾಗಿರುತ್ತದೆ.

ನಾವು ರೇಖಾಚಿತ್ರ 4.4.ಕ್ಕೆ ಹಿಂದಿರುಗಿದರೆ ಉತ್ಪನ್ನಮಟ್ಟ $q_1$ ನಲ್ಲಿ ಮಾರುಕಟ್ಟೆ ಬೆಲೆ $p$ ಯು AVC ಗಿಂತಲೂ ಕಡಿಮೆಯಾಗಿದೆ ಎಂಬುದನ್ನು ಗಮನಿಸಿ. $q_1$ ಒಂದು ಲಾಭ ಗರಿಷ್ಠಗೊಳಿಸುವ ಉತ್ಪನ್ನ ಮಟ್ಟವಾಗಲಾರದು ಎಂದು ಹೇಳುತ್ತೇವೆ ಏಕೆ?

$q_1$ ನಲ್ಲಿ ಉದ್ಯಮ ಘಟಕದ ಒಟ್ಟು ಆದಾಯವು ಈ ಕೆಳಗಿನಂತೆ ಇರುತ್ತದೆ ಎಂಬುದನ್ನು ಗಮನಿಸಿ

TR ಒಟ್ಟು ಆದಾಯ = ಬೆಲೆ (*price*) × ಪ್ರಮಾಣ (*Quantity*)

= ಲಂಬಾಂತರ ಎತ್ತರ OP × ಅಗಲ $Oq_1$

= ಆಯತದ ಪ್ರದೇಶ $OPAq_1$

ಅದೇ ರೀತಿಯಲ್ಲಿ $q_1$ ನಲ್ಲಿ ಉದ್ಯಮ ಘಟಕದ ಒಟ್ಟು ಬದಲಾಗುವ ವೆಚ್ಚವು ಈ ಕೆಳಗಿನಂತಿದೆ.

TVC (ಒಟ್ಟು ಬದಲಾಗುವ ವೆಚ್ಚ) = ಸರಾಸರಿ ಬದಲಾಗುವ ವೆಚ್ಚ (AVC) × ಪ್ರಮಾಣ

= ಲಂಬಾಂತರ ಎತ್ತರ OE × ಅಗಲ $Oq_1$

= ಆಯತದ ಪ್ರದೇಶ $OEBq_1$

$q_1$ ನಲ್ಲಿ ಉದ್ಯಮಘಟದ ಲಾಭವು TR – (TVC + TFC) ಆಗಿದೆ, ಅಂದರೆ (ಆಯತ $OPAq$ನ ಪ್ರದೇಶ)–(ಆಯತ $OEBq_1$ ಪ್ರದೇಶ)–TFC ಎಂಬುದನ್ನು ಈಗ ನೆನಪಿಸಿಕೊಳ್ಳೋಣ. ಉದ್ಯಮಘಟಕವು ಶೂನ್ಯ ಉತ್ಪಾದನೆಯನ್ನು ಉತ್ಪಾದಿಸಿದರೆ ಏನಾಗುತ್ತದೆ? ಉತ್ಪಾದನೆಯು ಶೂನ್ಯ ಆಗಿರುವುದರಿಂದ, TR ಮತ್ತು TVC ಸಹ ಶೂನ್ಯವಾಗಿರುತ್ತದೆ. ಆದ್ದರಿಂದ, ಶೂನ್ಯ ಉತ್ಪಾದನೆಯಲ್ಲಿ ಉದ್ಯಮ ಘಟಕದ ಲಾಭವು–TFCಗೆ ಸಮನಾಗಿರುತ್ತದೆ. ಆದರೆ ಆಯತದ $OPAq_1$ ಪ್ರದೇಶವು $OEBq_1$ ಆಯತದ ಪ್ರದೇಶಕ್ಕಿಂತ ಕಡಿಮೆ ಇದೆ. ಆದ್ದರಿಂದ $q_1$ ನಲ್ಲಿ ಉದ್ಯಮ ಘಟಕದ ಲಾಭವು ಏನನ್ನೂ ಉತ್ಪಾದನೆ ಮಾಡದಿದ್ದರೂ ಅದು ಪಡೆದುಕೊಳ್ಳುವ ಲಾಭಕ್ಕಿಂತ ಕಡಿಮೆಯಾಗಿದೆ. ಇದರರ್ಥ ಖಂಡಿತವಾಗಿ $q_1$ ಲಾಭ ಗರಿಷ್ಠಗೊಳಿಸುವ ಮಟ್ಟವಾಗಿರಲಾರದು.

**ಸನ್ನಿವೇಶ 2: ದೀರ್ಘಾವಧಿಯಲ್ಲಿ ಬೆಲೆಯು ಸರಾಸರಿ ವೆಚ್ಚಕ್ಕಿಂತ ಹೆಚ್ಚು ಅಥವಾ ಸಮನಾಗಿರಲೇಬೇಕು.**

ದೀರ್ಘಾವಧಿಯಲ್ಲಿ ಲಾಭ ಗರಿಷ್ಠಗೊಳಿಸುವ ಉದ್ಯಮ ಘಟಕವು, ಮಾರುಕಟ್ಟೆ ಬೆಲೆಯು ACಗಿಂತ ಕಡಿಮೆ ಇರುವ ಉತ್ಪನ್ನ ಮಟ್ಟದಲ್ಲಿ ಉತ್ಪಾದಿಸುವುದಿಲ್ಲವೆಂದು ವಾದಿಸುವ ಮೂಲಕ ಷರತ್ತು 2ರ ಹೇಳಿಕೆಯನ್ನು ಸತ್ಯವೆಂದು ತೋರಿಸುತ್ತೇವೆ.

ನಾವು ರೇಖಾ ಚಿತ್ರ 4.5ಕ್ಕೆ ತಿರುಗಿದರೆ ಉತ್ಪನ್ನ ಮಟ್ಟ $q_1$, ಮಾರುಕಟ್ಟೆ ಬೆಲೆ P ಯು AC ಗಿಂತಲೂ (ದೀರ್ಘಾವಧಿಯಲ್ಲಿ) ಕಡಿಮೆಯಾಗಿದೆ ಎಂಬುದನ್ನು ಗಮನಿಸಿ. $q_1$ ಒಂದು ಲಾಭ ಗರಿಷ್ಠಗೊಳಿಸುವ ಉತ್ಪನ್ನ ಮಟ್ಟವಾಗಲು ಸಾಧ್ಯವಿಲ್ಲವೆಂದು ಹೇಳುತ್ತೇವೆ. ಏಕೆ? $q_1$ ನಲ್ಲಿ ಉದ್ಯಮ ಘಟಕದ ಒಟ್ಟು ಆದಾಯ TR, OPA$q_1$ ಆಯತ ಪ್ರದೇಶ ಆಗಿದೆ (ಸರಕಿನ ಬೆಲೆ × ಪ್ರಮಾಣವಾಗಿದೆ).




**ರೇಖಾಚಿತ್ರ 4.5: ಲಾಭವನ್ನು ಗರಿಷ್ಠಗೊಳಿಸುವುದರೊಂದಿಗೆ ಬೆಲೆ ಮತ್ತು AC ಯ ಸಂಬಂಧ(ದೀರ್ಘಾವಧಿ):**

ಮಾರುಕಟ್ಟೆ ಬೆಲೆ P ಅದರ ದೀರ್ಘಾವಧಿ ಸರಾಸರಿ (LRAC) ವೆಚ್ಚಕ್ಕಿಂತ ಕಡಿಮೆ ಇದು ಲಾಭವನ್ನು ಗರಿಷ್ಠಗೊಳಿಸುವ ಉದ್ಯಮಘಟಕವು ದೀರ್ಘಾವಧಿಯಲ್ಲಿ ಶೂನ್ಯ ಉತ್ಪನ್ನವನ್ನು ಮಾಡುತ್ತದೆ ಎಂದು ತೋರಿಸಲು ರೇಖಾ ಚಿತ್ರ 4.5 ನ್ನು ಬಳಸಲಾಗುತ್ತದೆ. ಉದ್ಯಮ ಘಟಕದ ಉತ್ಪನ್ನ ಮಟ್ಟವು $q_1$ ಆಗಿದ್ದರೆ, ಅದರ ಒಟ್ಟು ವೆಚ್ಚವು ಆದರ ಆದಾಯವಾದ ಆಯತ PEBA ಪ್ರದೇಶದಷ್ಟು ಪ್ರಮಾಣದಲ್ಲಿ ಹೆಚ್ಚಾಗುತ್ತದೆ.

ಆದರೆ ಉದ್ಯಮ ಘಟಕದ ಒಟ್ಟು ವೆಚ್ಚ TC ಆಯತ OEB$q_1$ ಪ್ರದೇಶವಾಗಿದೆ (ಉತ್ಪನ್ನದ ಸರಾಸರಿ ವೆಚ್ಚ × ಉತ್ಪನ್ನ ಪ್ರಮಾಣವಾಗಿದೆ). ಇಲ್ಲಿಂದ $q_1$ ಉತ್ಪನ್ನಮಟ್ಟದಲ್ಲಿ OPA$q_1$ ಗಿಂತ OEB$q_1$ ಆಯತ ಪ್ರದೇಶವು ದೊಡ್ಡದಾಗಿರುವುದರಿಂದ ಉದ್ಯಮಘಟಕವು ನಷ್ಟವನ್ನು ಅನುಭವಿಸುತ್ತದೆ. ದೀರ್ಘಾವಧಿಯಲ್ಲಿ ಉತ್ಪಾದನೆಯನ್ನು ಸ್ಥಗಿತಗೊಳಿಸುವ ಉದ್ಯಮಘಟಕವು ಶೂನ್ಯ ಲಾಭ ಹೊಂದುತ್ತದೆ. ಇದರರ್ಥ $q_1$ ಲಾಭ ಗರಿಷ್ಠಗೊಳಿಸುವ ಉತ್ಪನ್ನದ ಮಟ್ಟವಲ್ಲ.

### 4.3.4: ಲಾಭ ಗರಿಷ್ಠಗೊಳಿಸುವ ಸಮಸ್ಯೆ: ರೇಖಾತ್ಮಕ ನಿರೂಪಣೆ:

### *The profit Maximisation Problem: Graphical Representation*

ವಿಭಾಗ 3.1, 3.2 ಮತ್ತು 3.3 ರ ಅಂಶಗಳನ್ನು ಬಳಸುವುದರ ಮೂಲಕ, ನಾವು ಉದ್ಯಮ ಘಟಕದ ಗರಿಷ್ಠ ಲಾಭದ ಸಮಸ್ಯೆಯನ್ನು ಅಲ್ಪಾವಧಿಯಲ್ಲಿ ರೇಖಾತ್ಮಕವಾಗಿ ನಿರೂಪಿಸೋಣ. ರೇಖಾ ಚಿತ್ರ 4.6ನ್ನು ಪರಿಗಣಿಸಿ.

ಮಾರುಕಟ್ಟೆ ಬೆಲೆ $p$ ಎಂದು ಗಮನಿಸಿ. ಮಾರುಕಟ್ಟೆ ಬೆಲೆಯನ್ನು (ಅಲ್ಪಾವಧಿಯಲ್ಲಿ) ಕನಿಷ್ಠ ವೆಚ್ಚದೊಂದಿಗೆ ಸಮೀಕರಿಸಿದಾಗ, ನಾವು $qo$ ಉತ್ಪನ್ನ ಮಟ್ಟವನ್ನು ಪಡೆದುಕೊಳ್ಳುತ್ತೇವೆ. $qo$ ನಲ್ಲಿ SMC ಯು ಮೇಲ್ಮುಖ ಇಳಿಜಾರು ಹೊಂದಿರುತ್ತದೆ, ಮತ್ತು $p$ಯು AVC ಯನ್ನು ಮೀರಿದೆ ಎಂದು ಗಮನಿಸಿ. ಇದರಿಂದ ವಿಭಾಗ 3.1 ರಿಂದ 3.3ರಲ್ಲಿ ಚರ್ಚಿಸಲಾದ ಮೂರು ಷರತ್ತುಗಳು $qo$ ನಲ್ಲಿ ನೆರವೇರುವುದರಿಂದ, ನಾವು '$qo$' ಉತ್ಪನ್ನ ಮಟ್ಟವು ಉದ್ಯಮ ಘಟಕದ ಲಾಭ ಗರಿಷ್ಠಗೊಳಿಸುವ ಉತ್ಪನ್ನ ಮಟ್ಟ ಎಂದು ತೀರ್ಮಾನಿಸುತ್ತೇವೆ.




**ರೇಖಾಚಿತ್ರ 4.6: ಲಾಭ ಗರಿಷ್ಠಗೊಳಿಸುವ ರೇಖಾಗಣಿತ ನಿರೂಪಣೆ (ಅಲ್ಪಾವದಿ):**

ರೇಖಾ ಚಿತ್ರ 4.6 ನೀಡಲಾದ ಮಾರುಕಟ್ಟೆ ಬೆಲೆ P ಆಗಿದ್ದು, ಲಾಭ ಗರಿಷ್ಠಗೊಳಿಸುವ ಉದ್ಯಮ ಘಟಕದ ಉತ್ಪನ್ನವು $q_0$ ಆಗಿದೆ. $q_0$ ದಲ್ಲಿ ಉದ್ಯಮ ಘಟಕದ ಲಾಭವು E$p$AB ಆಯತಕ್ಕೆ ಸಮನಾಗಿದೆ.

*qo* ನಲ್ಲಿ ಏನಾಗುತ್ತಿದೆ? *qo* ನಲ್ಲಿ ಉದ್ಯಮ ಘಟಕದ ಒಟ್ಟು ಆದಾಯವು OPA*qo* ಆಯತ (ಉತ್ಪನ್ನದ ಬೆಲೆ × ಪ್ರಮಾಣ) ಪ್ರದೇಶವಾಗಿದೆ, ಆದರೆ *qo* ನಲ್ಲಿನ ಒಟ್ಟು ವೆಚ್ಚವು OEB$q_0$ ಆಯತ (ಅಲ್ಪಾವಧಿಯಲ್ಲಿ ಉತ್ಪನ್ನವು ಸರಾಸರಿ ವೆಚ್ಚ × ಉತ್ಪನ್ನ ಪ್ರಮಾಣ) ಪ್ರದೇಶವಾಗಿದೆ. ಆದ್ದರಿಂದ $q^0$ ನಲ್ಲಿ ಉದ್ಯಮಘಟಕವು ಗಳಿಸುವ ಲಾಭವು E*p*AB ಆಯತ ಪ್ರದೇಶಕ್ಕೆ ಸಮನಾಗಿದೆ.

## 4.4 ಒಂದು ಉದ್ಯಮ ಘಟಕದ ಪೂರೈಕೆ ರೇಖೆ: *Supply Curve of a Firm*

ವಿವಿಧ ಮಾರುಕಟ್ಟೆ ಬೆಲೆಗಳಲ್ಲಿ (*y* – ಅಕ್ಷದಲ್ಲಿ ತೋರಿಸಿರುವಂತೆ) ಉದ್ಯಮಘಟಕವು ಉತ್ಪಾದಿಸಲು ಬಯಸುವ ಉತ್ಪನ್ನ ಮಟ್ಟಗಳನ್ನು (*x* – ಅಕ್ಷದಲ್ಲಿ ತೋರಿಸಿರುವಂತೆ) **ಪೂರೈಕೆ ರೇಖೆಯು** ತೋರಿಸುತ್ತದೆ. ಏನೇ ಆದರೂ ಒಂದು ನೀಡಲಾದ ಮಾರುಕಟ್ಟೆ ಬೆಲೆಗೆ ಲಾಭ ಗರಿಷ್ಠ ಗೊಳಿಸುವ ಉದ್ಯಮ ಘಟಕದ ಉತ್ಪನ್ನ ಮಟ್ಟವು ನಾವು ಅಲ್ಪಾವಧಿಯೋ ಅಥವಾ ದೀರ್ಘಾವಧಿಯೋ ಎಂಬ ಪರಿಗಣನೆಯನ್ನು ಅವಲಂಬಿಸಿದೆ. ಆ ಪ್ರಕಾರ, ನಾವು **ಅಲ್ಪಾವಧಿ ಪೂರೈಕೆ ರೇಖೆ** ಮತ್ತು **ದೀರ್ಘಾವಧಿ ಪೂರೈಕೆ ರೇಖೆ**ಗಳ ನಡುವಿನ ವ್ಯತ್ಯಾಸವನ್ನು ತೋರಿಸುತ್ತೇವೆ.

### 4.4.1 ಒಂದು ಉದ್ಯಮ ಘಟಕದ ಅಲ್ಪಾವಧಿ ಪೂರೈಕೆ ರೇಖೆ *Short Run Supply Curve of a Firm*

ಈಗ ರೇಖಾ ಚಿತ್ರ 4.7ನ್ನು ಗಮನಿಸಿ ಒಂದು ಉದ್ಯಮ ಘಟಕದ ಪೂರೈಕೆ ರೇಖೆಯನ್ನು ಪಡೆದುಕೊಳ್ಳೋಣ ಮತ್ತು ಈ ಪ್ರಕ್ರಿಯೆಯನ್ನು ಎರಡು ಭಾಗಗಳಾಗಿ ವಿಭಜಿಸೋಣ. ನಾವು ಮೊದಲು ಮಾರುಕಟ್ಟೆ ಬೆಲೆಯು ಕನಿಷ್ಠ AVC ಗಿಂತಲೂ ಹೆಚ್ಚು ಅಥವಾ ಸಮನಾಗಿರುವಾಗ ಉದ್ಯಮಘಟಕದ ಲಾಭ ಗರಿಷ್ಟಗೊಳಿಸುವ ಉತ್ಪನ್ನ ಮಟ್ಟವನ್ನು ನಿರ್ಧರಿಸುತ್ತೇವೆ. ಇದಾದ ನಂತರ ಮಾರುಕಟ್ಟೆ ಬೆಲೆಯು ಕನಿಷ್ಠ AVC ಗಿಂತ ಕಡಿಮೆ ಇದ್ದಾಗ ಉದ್ಯಮ ಘಟಕದ ಲಾಭ ಗರಿಷ್ಠಗೊಳಿಸುವ ಉತ್ಪನ್ನ ಮಟ್ಟವನ್ನು ನಿರ್ಧರಿಸುತ್ತೇವೆ.




**ರೇಖಾಚಿತ್ರ 4.7: ಮಾರುಕಟ್ಟೆ ಬೆಲೆಯ ಮೌಲ್ಯಗಳು**

ಮಾರುಕಟ್ಟೆ ಬೆಲೆ ಎರಡು ಮೌಲ್ಯಗಳಿಗೆ ಅಲ್ಪಾವದಿಯಲ್ಲಿ ಉದ್ಯಮ ಘಟಕದ ಲಾಭ ಗರಿಷ್ಠಗೊಳಿಸುವ ಉತ್ಪನ್ನ ಮಟ್ಟವನ್ನು ತೋರಿಸುತ್ತದೆ: $p_1$ ಮತ್ತು $p_2$. ಮಾರುಕಟ್ಟೆ ಬೆಲೆ $p_1$ ಆಗಿದ್ದರೆ ಉದ್ಯಮ ಘಟಕದ ಉತ್ಪನ್ನ ಮಟ್ಟವು $q_1$; ಮಾರುಕಟ್ಟೆ ಬೆಲೆ $p_2$ ಆಗಿದ್ದರೆ, ಉದ್ಯಮಘಟಕವು ಶೂನ್ಯ ಉತ್ಪನ್ನವನ್ನು ಉತ್ಪಾದಿಸುತ್ತದೆ.

**ಸನ್ನಿವೇಶ 1: ಬೆಲೆಯು ಕನಿಷ್ಠ AVC ಗಿಂತ ಹೆಚ್ಚಾಗಿರುತ್ತದೆ ಅಥವಾ ಸಮನಾಗಿರುತ್ತದೆ.**

ಮಾರುಕಟ್ಟೆ ಬೆಲೆ $p_1$, ಕನಿಷ್ಠ AVC ಯನ್ನು ಮೀರಿಸುತ್ತದೆ ಎಂದು ಭಾವಿಸೋಣ. SMC ರೇಖೆಯ ಏರಿಕೆ ಭಾಗದಲ್ಲಿ SMC ಯನ್ನು $p_1$ ಜೋತೆಗೆ ಸಮೀಕರಿಸುವ ಮೂಲಕ ನಾವು ಪ್ರಾರಂಭಿಸುತ್ತೇವೆ; ಇದು ಉತ್ಪನ್ನ ಮಟ್ಟ $q_1$ಗೆ ಕಾರಣವಾಗುತ್ತದೆ. $q_1$ನಲ್ಲಿ AVC ಕೂಡ ಮಾರುಕಟ್ಟೆ ಬೆಲೆಯಾದ $p_1$ ನ್ನು ಮೀರುವುದಿಲ್ಲ ಎಂಬುದನ್ನು ಗಮನಿಸಿ. ಹೀಗಾಗಿ ವಿಭಾಗ ಮೂರರಲ್ಲಿ ಹೇಳಲಾದ ಎಲ್ಲಾ ಮೂರು ಷರತ್ತುಗಳು $q_1$ನಲ್ಲಿ ನೆರವೇರಿವೆ. ಹೀಗಾಗಿ ಮಾರುಕಟ್ಟೆ ಬೆಲೆಯಾದ $p_1$ನಲ್ಲಿ ಅಲ್ಪಾವಧಿ ಉದ್ಯಮಘಟಕದ ಉತ್ಪನ್ನ ಮಟ್ಟವು $q_1$ಗೆ ಸಮನಾಗಿರುತ್ತದೆ.

**ಸನ್ನಿವೇಶ 2: ಬೆಲೆಯು ಕನಿಷ್ಠ AVC ಗಿಂತ ಕಡಿಮೆಯಿರುತ್ತದೆ.**

ಮಾರುಕಟ್ಟೆ ಬೆಲೆ $p_2$ಎಂದು ಭಾವಿಸೋಣ. ಇದು ಕನಿಷ್ಠ AVC ಗಿಂತ ಕಡಿಮೆ ಇರುತ್ತದೆ. ಲಾಭ ಗರಿಷ್ಠಗೊಳಿಸುವ ಉದ್ಯಮಘಟಕವು ಅಲ್ಪಾವಧಿಯಲ್ಲಿ ಧನಾತ್ಮಕ ಉತ್ಪನ್ನವನ್ನು ಉತ್ಪಾದಿಸಿದರೆ, ಮಾರುಕಟ್ಟೆಯ ಬೆಲೆ, $p_2$, ಆ ಉತ್ಪನ್ನ ಮಟ್ಟದಲ್ಲಿ AVC ಗಿಂತ ಹೆಚ್ಚಾಗಿ ಅಥವಾ ಸಮನಾಗಿರಬೇಕು ಎಂದು ನಾವು (ವಿಭಾಗ 3ರಲ್ಲಿ 3ನೇ ಷರತನ್ನು ನೋಡಿ) ಹೇಳಿದ್ದೇವೆ. ಆದರೆ ರೇಖಾಚಿತ್ರ 4.7ನ್ನು ಗಮನಿಸಿದರೆ ಎಲ್ಲಾ ಧನಾತ್ಮಕ ಉತ್ಪನ್ನ

ಮಟ್ಟಗಳಿಗೆ, AVC, $p_2$, ಗಿಂತ ಹೆಚ್ಚಾಗಿರುತ್ತದೆ. ಇನ್ನೊಂದು ರೀತಿ ಹೇಳುವುದಾದರೆ ಇದು ಉದ್ಯಮಘಟಕವು ಧನಾತ್ಮಕ ಉತ್ಪನ್ನವನ್ನು ಪೂರೈಸುವ ಸನ್ನಿವೇಶವಾಗಲು ಸಾಧ್ಯವಿಲ್ಲ. ಆದುದರಿಂದ ಮಾರುಕಟ್ಟೆಬೆಲೆ $p_2$ ಆಗಿದ್ದರೆ, ಉದ್ಯಮಘಟಕವು ಶೂನ್ಯ ಉತ್ಪನ್ನವನ್ನು ಉತ್ಪಾದಿಸುತ್ತದೆ. 1 ಮತ್ತು 2ರ ಸನ್ನಿವೇಶಗಳನ್ನು ಒಟ್ಟುಗೂಡಿಸಿ, ನಾವು ಒಂದು ಪ್ರಮುಖ ತೀರ್ಮಾನವನ್ನು ಪಡೆಯುತ್ತೇವೆ. ಒಂದು ಉದ್ಯಮ ಘಟಕದ **ಅಲ್ಪಾವಧಿ ಪೂರೈಕೆ ರೇಖೆಯು** ಕನಿಷ್ಟ AVCಯಿಂದ ಮೇಲೆರುವ SMC ರೇಖೆಯ ಭಾಗವಾಗಿದೆ ಮತ್ತು ಇದು ಕನಿಷ್ಟ AVCಗಿಂತ ಕಡಿಮೆ ಇರುವ ಎಲ್ಲಾ ಬೆಲೆಗಳಲ್ಲಿ ಉತ್ಪನವು ಶೂನ್ಯವಾಗಿ ಇರುತ್ತದೆ. ರೇಖಾ ಚಿತ್ರ 4.8 ರಲ್ಲಿ ಗಾಢವಾದ ರೇಖೆಯು ಉದ್ಯಮಘಟಕದ ಅಲ್ಪಾವಧಿ ಪೂರೈಕೆ ರೇಖೆಯನ್ನು ಪ್ರತಿನಿಧಿಸುತ್ತದೆ.]




**ರೇಖಾಚಿತ್ರ 4.8: ಉದ್ಯಮ ಘಟಕದ ಅಲ್ಪಾವಧಿ ಪೂರೈಕೆ ರೇಖೆ**

ಅಲ್ಪಾವಧಿ ಸೀಮಾಂತ ವೆಚ್ಚದ ರೇಖೆ (SMC) ಮತ್ತು ಸರಾಸರಿ ಬದಲಾಗುವ ವೆಚ್ಚದ ರೇಖೆ (AVC) ಯನ್ನು ಆಧರಿಸಿದ ಉದ್ಯಮ ಘಟಕದ ಪೂರೈಕೆ ರೇಖೆಯನ್ನು ಗಾಢವಾದ ರೇಖೆಯ ಮೂಲಕ ಪ್ರತಿನಿಧಿಸಲಾಗಿದೆ.



### 4.4.2 ಉದ್ಯಮ ಘಟಕದ ದೀರ್ಘಾವಧಿ ಪೂರೈಕೆ ರೇಖೆ: *Long Run Supply Curve of a Firm*

ರೇಖಾಚಿತ್ರ 4.9ನ್ನು ಗಮನಿಸಿಸೋಣ ಮತ್ತು ಉದ್ಯಮ ಘಟಕದ ಪೂರೈಕೆ ರೇಖೆಯನ್ನು ಪಡೆದುಕೊಳ್ಳೋಣ. ಅಲ್ಪಾವಧಿಯ ಸನ್ನಿವೇಶ ದಂತೆಯೇ ನಾವು ಈ ಪ್ರಕ್ರಿಯೆಯನ್ನು ಎರಡು ಭಾಗಗಳಾಗಿ ವಿಭಜಿಸುತ್ತೇವೆ. ಮಾರುಕಟ್ಟೆಯ ಬೆಲೆಯು ಕನಿಷ್ಠ AC (ದೀರ್ಘಾವಧಿ)ಗಿಂತ ಹೆಚ್ಚಾಗಿದ್ದರೆ ಅಥವಾ ಸಮನಾಗಿದ್ದರೆ ಉದ್ಯಮ ಘಟಕದ ಲಾಭ ಗರಿಷ್ಠಗೊಳಿಸುವ ಉತ್ಪನ್ನ ಮಟ್ಟವನ್ನು ಮೊದಲಿಗೆ ನಿರ್ಧರಿಸಿತ್ತೇವೆ. ಇದಾದನಂತರ ಕನಿಷ್ಠ AC (ದೀರ್ಘಾವಧಿ) ಗಿಂತ ಮಾರುಕಟ್ಟೆ ಬೆಲೆಯು ಕಡಿಮೆ ಇದ್ದಾಗ ಲಾಭಗಳಿಸುವ ಉದ್ಯಮಘಟಕದ ಉತ್ಪನ್ನ ಮಟ್ಟವನ್ನು ನಾವು ನಿರ್ಧರಿಸುತ್ತೇವೆ.




**ರೇಖಾಚಿತ್ರ 4.9: ದೀರ್ಘವಧಿಯಲ್ಲಿ ವಿವಿದ ಮಾರುಕಟ್ಟೆ ಬೆಲೆ ಮೌಲ್ಯಗಳಿಗೆ ಲಾಭ ಗರಿಷ್ಟಗೊಳಿಸುವಿಕೆ** ದೀರ್ಘಾವಧಿಯಲ್ಲಿ ಲಾಭ ಗರಿಷ್ಟಗೋಳಿಸುವ ಉದ್ಯಮಘಟಕವು ಆಯ್ಕೆ ಮಾಡಿದ ಉತ್ಪನ್ನ ಮಟ್ಟಗಳ ಎರಡು ಮಾರುಕಟ್ಟೆ ಬೆಲೆ ಮೌಲ್ಯಗಳಾದ $p_1$ ಮತ್ತು $p_2$ವನ್ನು ರೇಖಾಚಿತ್ರ 4.9 ತೋರಿಸುತ್ತದೆ. ಮಾರುಟ್ಟೆ ಬೆಲೆ $p_1$ಆಗಿದ್ದರೆ, ಉದ್ಯಮ ಘಟಕದ ಉತ್ಪನ್ನ ಮಟ್ಟವು $q_1$ ಮಾರುಕಟ್ಟೆ ಬೆಲೆ $p_2$ ಆಗಿದ್ದರೆ, ಉದ್ಯಮಘಟಕವು ಶೂನ್ಯ ಉತ್ಪನ್ನವನ್ನು ಉತ್ಪಾದಿಸುತ್ತದೆ..

**ಸನ್ನಿವೇಶ 1 : ಬೆಲೆಯು ಕನಿಷ್ಠ LRAC ಗಿಂತ ಹೆಚ್ಚು ಅಥವಾ ಸಮನಾದಾಗ:**

ಮಾರುಕಟ್ಟೆ ಬೆಲೆ $p_1$ ಎಂದು ಭಾವಿಸೋಣ, ಇದು ಕನಿಷ್ಠ LRAC ಯನ್ನು ಮೀರಿಸುತ್ತದೆ. LRMC ರೇಖೆಯ ಏರುತ್ತಿರುವ ಭಾಗದಲ್ಲಿ LRMC ಯೊಂದಿಗೆ $p_1$ ಅನ್ನು ಸಮೀಕರಿಣಗೊಳಿಸುವುದರ ಮೂಲಕ $q_1$ ನಷ್ಟು ಉತ್ಪನ್ನ ಪಡೆಯುತ್ತೇವೆ. $q_1$ನಲ್ಲಿನ LRAC ಮಾರುಕಟ್ಟೆ ಬೆಲೆ, $p_1$ ನ್ನು ಮೀರುವುದಿಲ್ಲ ಎಂದು ಗಮನಿಸಿ. ಹೀಗಾಗಿ ವಿಭಾಗ 3ರಲ್ಲಿ ಹೇಳಲಾದ ಎಲ್ಲಾ ಮೂರು ಷರತ್ತುಗಳು $q_1$ ನಲ್ಲಿ ನೆರವೇರಿವೆ. ಆದ್ದರಿಂದ ಮಾರುಕಟ್ಟೆ ಬೆಲೆ $p_1$ ಆಗಿದ್ದರೆ, ದೀರ್ಘಾವಧಿಯಲ್ಲಿ ಉದ್ಯಮಘಟಕದ ಪೂರೈಕೆಯು $q_1$ಗೆ ಸಮನಾದ ಉತ್ಪನ್ನವಾಗುತ್ತದೆ.

**ಸನ್ನಿವೇಶ 2: ಬೆಲೆಯು ಕನಿಷ್ಠ LRACಗಿಂತ ಕಡಿಮೆಯಾದಾಗ.**

ಮಾರುಕಟ್ಟೆಯ ಬೆಲೆ $p_2$ ಎಂದು ಭಾವಿಸೋಣ, ಇದು ಕನಿಷ್ಠ LRAC ಗಿಂತ ಕಡಿಮೆ ಇರುತ್ತದೆ. ಲಾಭ ಗರಿಷ್ಠಗೊಳಿಸುವ ಉದ್ಯಮಘಟಕವು ದೀರ್ಘಾವಧಿಯಲ್ಲಿ ಧನಾತ್ಮಕ ಉತ್ಪಾದನೆಯನ್ನು ಉತ್ಪಾದಿಸಿದರೆ, ಮಾರುಕಟ್ಟೆಯ ಬೆಲೆ, $p_2$, ಆ ಉತ್ಪನ್ನ ಮಟ್ಟದಲ್ಲಿ LRAC ಗಿಂತ ಹೆಚ್ಚಾಗಿರಬೇಕು ಅಥವಾ ಸಮನಾಗಿರಬೇಕು ಎಂದು (ವಿಭಾಗ 3ರಲ್ಲಿ 3ನೇ ಷರತ್ತನ್ನು ನೋಡಿ) ತಿಳಿದುಕೊಂಡಿದ್ದೇವೆ. ಆದರೆ ಎಲ್ಲಾ ಧನಾತ್ಮಕ ಉತ್ಪನ್ನ ಮಟ್ಟಗಳಿಗೆ, LRAC ಖಂಡಿತವಾಗಿ $p_2$ ನ್ನು ಮೀರಿದೆ. ಎಂದು ರೇಖಾ ಚಿತ್ರ 4.9ರಲ್ಲಿ ಗಮನಿಸಿ. ಬೇರೆ ರೀತಿಯಲ್ಲಿ ಹೇಳುವುದಾದರೆ, ಇದು ಉದ್ಯಮಘಟಕವು ಧನಾತ್ಮಕ ಉತ್ಪನ್ನವನ್ನು ಪೂರೈಸುವ ಸನ್ನಿವೇಶವಾಗಲು ಸಾಧ್ಯವಿಲ್ಲ. ಆದ್ದರಿಂದ ಮಾರುಕಟ್ಟೆಯ ಬೆಲೆ $p_2$ ಆಗಿದ್ದರೆ ಉದ್ಯಮಘಟಕವು ಶೂನ್ಯ ಉತ್ಪನ್ನವನ್ನು ಉತ್ಪಾದಿಸುತ್ತದೆ.




**ರೇಖಾಚಿತ್ರ 4.10: ಒಂದು ಉದ್ಯಮ ಘಟಕದ ದೀರ್ಘಾವಧಿ ಪೂರೈಕೆ ರೇಖೆ** ಒಂದು ಉದ್ಯಮ ಘಟಕದ ದೀರ್ಘಾವಧಿ ಪೂರೈಕೆ ರೇಖೆಯ ತನ್ನ ದೀರ್ಘಾವಧಿ ಸೀಮಾಂತ ವೆಚ್ಚದ ರೇಖೆ (LRMC) ಮತ್ತು ದೀರ್ಘಾವದಿ ಸರಾಸರಿ ವೆಚ್ಚದ ರೇಖೆ (LRAC) ಗಳನ್ನು ಆಧರಿಸಿದ್ದು ಇದನ್ನು ಗಾಢ ರೇಖೆಯಿಂದ ಪ್ರತಿನಿಧಿಸಲಾಗಿದೆ..

1 ಮತ್ತು 2ನೇ ಸನ್ನಿವೇಶಗಳನ್ನು ಒಟ್ಟು ಗೂಡಿಸಿ, ನಾವು ಒಂದು ಪ್ರಮುಖ ತೀರ್ಮಾನವನ್ನು ಪಡೆಯುತ್ತೇವೆ. ಉದ್ಯಮ ಘಟಕದ ದೀರ್ಘಾವದಿ ಪೂರೈಕೆ ರೇಖೆಯು ಕನಿಷ್ಠ LRAC ಯಿಂದ ಮೇಲೇರುವ ಮತ್ತು LRMC ರೇಖೆಯ ಭಾಗವಾಗಿದೆ ಮತ್ತು ಕನಿಷ್ಠ LRAC ಗಿಂತಲೂ ಕಡಿಮೆ ಇರುವ ಎಲ್ಲಾ ಬೆಲೆಗಳಲ್ಲಿ ಉತ್ಪನ್ನವು ಶೂನ್ಯವಾಗಿರುತ್ತದೆ. ರೇಖಾ ಚಿತ್ರ 4.10ರಲ್ಲಿ, ಗಾಢವಾದ ರೇಖೆಯು ಉದ್ಯಮ ಘಟಕದ ದೀರ್ಘಾವಧಿಯ ಪೂರೈಕೆ ರೇಖೆಯನ್ನು ಪ್ರತಿನಿಧಿಸುತ್ತದೆ.

### 4.4.3 ಸ್ಥಗಿತತೆಯ ಬಿಂದು *The Shut Down Point*

ಈ ಹಿಂದೆ ಪೂರೈಕೆ ರೇಖೆಯನ್ನು ಪಡೆಯುವಾಗ ನಾವು ಅಲ್ಪಾವಧಿಯಲ್ಲಿ ಬೆಲೆಯು ಕನಿಷ್ಠ AVC ಗಿಂತ ಹೆಚ್ಚು ಅಥವಾ ಸಮವಾಗಿ ಇರುವವರೆಗೂ ಉದ್ಯಮಘಟಕವು ಉತ್ಪಾದಿಸುವುದನ್ನು ಮುಂದುವರಿಸುತ್ತದೆ. ಎಂದು ಚರ್ಚಿಸಿದ್ದೇವೆ. ಆದ್ದರಿಂದ, ನಾವು ಪೂರೈಕೆ ರೇಖೆಯುದ್ದಕ್ಕೂ ಕೆಳಗೆ ಚಲಿಸಿದಂತೆ, AVCಯ ಕನಿಷ್ಟ ಬಿಂದುವು ಕೊನೆಯ ಬೆಲೆ– ಉತ್ಪನ್ನ ಸಂಯೋಜನೆಯಾಗಿದ್ದು ಅಲ್ಲಿ ಉದ್ಯಮಘಟಕವು ಧನಾತ್ಮಕ ಉತ್ಪನ್ನವನ್ನು ಉತ್ಪಾದಿಸುತ್ತದೆ, ಮತ್ತು ಈ ಬಿಂದುವಿನಲ್ಲಿ SMC ರೇಖೆಯು AVC ರೇಖೆಯನ್ನು ಛೇದಿಸುತ್ತದೆ. ಇದರ ಕೆಳಗೆ (ಈ ಹಂತದಲ್ಲಿ) ಯಾವುದೇ ಉತ್ಪಾದನೆ ಇರುವುದಿಲ್ಲ. ಈ ಬಿಂದುವನ್ನು ಉದ್ಯಮಘಟಕದ ಅಲ್ಪಾವಧಿಯ (ಮುಚ್ಚುವ ಬಿಂದು) ಸ್ಥಗಿತತೆಯ ಬಿಂದು ಎಂದು ಕರೆಯಲಾಗುತ್ತದೆ. ದೀರ್ಘಾವಧಿಯಲ್ಲಿ, LRAC ರೇಖೆಯು ಕನಿಷ್ಠ ಸ್ಥಗಿತತೆಯ ಬಿಂದುವಾಗಿದೆ.

### 4.4.4 ಸಾಮಾನ್ಯ ಲಾಭ ಮತ್ತು ಸಮಸ್ಥಿತಿ ಬಿಂದು *The Normal Profit and Break-even Point*

ಉತ್ಪಾದನಾ ಪ್ರಕ್ರಿಯೆಯಲ್ಲಿ ಉದ್ಯಮಘಟಕವು ವಿಭಿನ್ನ ಬಗೆಯ ಆದಾನಗಳನ್ನು ಬಳಸುತ್ತದೆ. ಅವುಗಳಲ್ಲಿ ಕೆಲವನ್ನು ಪಡೆಯಲು, ಉದ್ಯಮಘಟಕವು ನೇರವಾಗಿ ಪಾವತಿಸಬೇಕಾಗುತ್ತದೆ. ಉದಾಹರಣೆಗೆ, ಉದ್ಯಮಘಟಕವು ಕಾರ್ಮಿಕರನ್ನು ನೇಮಿಸಿದರೆ ಅದು ಅವರಿಗೆ ಕೂಲಿಯನ್ನು ಪಾವತಿಸಬೇಕಾಗುತ್ತದೆ; ಇದು ಏನಾದರೂ ಕೆಲವು ಕಚ್ಚಾ ವಸ್ತುಗಳನ್ನು ಬಳಿಸಿದರೆ, ಅವುಗಳನ್ನು ಅದು ಖರೀದಿಸಬೇಕಾಗುತ್ತದೆ. ಉದ್ಯಮಘಟಕವು ಸ್ವತಃ ಇತರ ಕೆಲವು ರೀತಿಯ ಆದಾನಗಳನ್ನು ಹೊಂದಿರಬಹುದು, ಮತ್ತು ಅವುಗಳಿಗಾಗಿ ಯಾರಿಗೂ ಪಾವತಿ ಮಾಡಬೇಕಾದ ಅಗತ್ಯವಿರುವುದಿಲ್ಲ. ಈ ಆದಾನಗಳು ವ್ಯಕ್ತ ವೆಚ್ಚವನ್ನು ಒಳಗೊಳ್ಳದಿದ್ದರೂ, ಅವು ಉದ್ಯಮಘಟಕದ ಕೆಲವು ಅವಕಾಶ ವೆಚ್ಚವನ್ನು ಒಳಗೊಂಡಿರುತ್ತದೆ. ಪ್ರಸ್ತುತ ಉತ್ಪಾದನಾ ಪ್ರಕ್ರಿಯೆಯಲ್ಲಿ ಈ ಆದಾನಗಳನ್ನು ಬಳಸುವ

ಬದಲು ಉದ್ಯಮಘಟಕವು ಅವುಗಳನ್ನು ಬೇರೆ ಉದ್ದೇಶಕ್ಕಾಗಿ ಬಳಸಿಕೊಂಡಿರಬಹುದಾಗಿತ್ತು ಮತ್ತು ಸ್ವಲ್ಪ ಪ್ರತಿಫಲವನ್ನು ಗಳಿಸಬಹುದಾಗಿತ್ತು ಈ ಬಿಟ್ಟುಕೊಟ್ಟ ಗಳಿಕೆಯು ಉದ್ಯಮಘಟಕದ ಅವಕಾಶವೆಚ್ಚವಾಗಿದೆ. ಉದ್ಯಮಘಟಕವು ಸಾಮಾನ್ಯವಾಗಿ ವ್ಯಕ್ತ ವೆಚ್ಚಗಳ ಜೊತೆಗೆ ಅವಕಾಶ ವೆಚ್ಚಗಳನ್ನು ಒಳಗೊಂಡಿರುವ ಲಾಭವನ್ನು ಗಳಿಸಲು ನಿರೀಕ್ಷಿಸುತ್ತದೆ. ಉದ್ಯಮಘಟಕದ ವ್ಯಕ್ತ ವೆಚ್ಚಗಳು ಮತ್ತು ಅವಕಾಶ ವೆಚ್ಚಗಳನ್ನು ಸರಿದೂಗಿಸಲು ಸಾಕಾಗುವಷ್ಟು ಲಾಭದಾಯಕ ಮಟ್ಟವನ್ನು **ಸಾಮಾನ್ಯ ಲಾಭ** ಎಂದು ಕರೆಯಲಾಗುತ್ತದೆ. ಒಂದು ಉದ್ಯಮಘಟಕದ ಒಟ್ಟು ವೆಚ್ಚದ ಲೆಕ್ಕಾಚಾರದಲ್ಲಿ ಅದರ ವ್ಯಕ್ತ (ಸ್ಪಷ್ಟವಾದ) ವೆಚ್ಚಗಳು ಮತ್ತು ಅವಕಾಶ ವೆಚ್ಚಗಳನ್ನು ಸೇರಿಸಿದರೆ, ಸಾಮಾನ್ಯ ಲಾಭವು ಒಟ್ಟು ಆದಾಯ ಮತ್ತು ಒಟ್ಟು ವೆಚ್ಚಕ್ಕೆ ಸಮನಾದ ಲಾಭದ ಮಟ್ಟವಾಗುತ್ತದೆ. ಅಂದರೆ ಶೂನ್ಯ ಮಟ್ಟದ ಲಾಭ. ಸಾಧಾರಣ ಲಾಭಕ್ಕಿಂತ ಗಳಿಸಿದ ಹೆಚ್ಚಿನ ಲಾಭವನ್ನು ಅಸಾಮಾನ್ಯ ಲಾಭ (ಅಸಾಧಾರಣ ಲಾಭ) ಎಂದು ಕರೆಯಲಾಗುತ್ತದೆ. ದೀರ್ಘಾವಧಿಯಲ್ಲಿ, ಸಾಮಾನ್ಯ ಲಾಭಕ್ಕಿಂತ ಕಡಿಮೆ ಲಾಭ ಗಳಿಸಿದರೆ ಉದ್ಯಮಘಟಕವು ಉತ್ಪಾದನೆ ಮಾಡುವುದಿಲ್ಲ. ಅಲ್ಪಾವಧಿಯಲ್ಲಿ, ಲಾಭವು ಈ ಮಟ್ಟಕ್ಕಿಂತ ಕಡಿಮೆ ಇದ್ದರೂ ಸಹ ಉದ್ಯಮ ಘಟಕ ಉತ್ಪಾದಿಸಬಹುದು. ಉದ್ಯಮಘಟಕವು ಸಾಧಾರಣ ಲಾಭವನ್ನು ಗಳಿಸುವ ಪೂರೈಕೆ ರೇಖೆಯ ಮೇಲಿನ ಬಿಂದುವನ್ನು **ಸಮ ಸ್ಥಿತಿ ಬಿಂದು** ಎಂದು ಕರೆಯಲಾಗುತ್ತದೆ. ಪೂರೈಕೆ ರೇಖೆಯನ್ನು LRAC ರೇಖೆಯು ಛೇದಿಸುವ ಸರಾಸರಿ ವೆಚ್ಚದ ಕನಿಷ್ಟ ಬಿಂದು ಉದ್ಯಮಘಟಕದ ಸಮಸ್ಥಿತಿ ಬಿಂದುವಾಗಿದೆ. (ಅಲ್ಪಾವಧಿಯಲ್ಲಿ SAC ರೇಖೆಯಲ್ಲಿ).

**ಸದಾವಕಾಶ ವೆಚ್ಚ** ***Opportunity cost***

ಅರ್ಥಶಾಸ್ತ್ರದಲ್ಲಿ ಆಗಾಗ್ಗೆ ಆವಕಾಶ ವೆಚ್ಚದ ಪರಿಕಲ್ಪನೆಯನ್ನು ಎದುರಿಸುತ್ತೇವೆ. ಕೆಲವು ಚಟುವಟಿಕೆಗಳ ಅವಕಾಶವೆಚ್ಚವು ಎರಡನೇ ಉತ್ತಮ ಚಟುವಟಿಕೆ ಬಿಟ್ಟುಕೊಟ್ಟ ಗಳಿಕೆಯಾಗಿರುತ್ತದೆ. ನಿಮ್ಮ ಕುಟುಂಬದ ವ್ಯವಹಾರದಲ್ಲಿ ಒಂದು ಸಾವಿರ ರೂ (1000)ಗಳನ್ನು ಹೂಡಲು ತಿರ್ಮಾನಿಸುವಿರಿ ಎಂದು ಊಹಿಸಿಕೊಳ್ಳಿ. ನಿಮ್ಮ ಈ ಕಾರ್ಯದ ಸದಾವಕಾಶ ವೆಚ್ಚವೇನು? ನೀವು ಈ ಹಣವನ್ನು ಹೂಡಿಕೆ ಮಾಡದಿದ್ದರೆ, ನೀವು ಅದನ್ನು ಮನೆಯಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳಬಹುದು, ಅದು ನಿಮಗೆ ಶೂನ್ಯ ಗಳಿಕೆ ನೀಡುತ್ತದೆ. ಅಥವಾ ನೀವು ಬ್ಯಾಂಕ್–1 ಅಥವಾ ಬ್ಯಾಂಕ್–2 ರಲ್ಲಿ ಠೇವಣಿ ಇಟ್ಟರೆ ಈ ಸಂದರ್ಭದಲ್ಲಿ ನೀವು ಅನುಕ್ರಮವಾಗಿ ಶೇಕಡ 10ರ ದರದಲ್ಲಿ ಅಥವಾ ಶೇ.5ರ ದರದಲ್ಲಿ ಬಡ್ಡಿಯನ್ನು ಪಡೆಯುವಿರಿ. ಆದುದರಿಂದ ನೀವು ಇತರೆ ಪರ್ಯಾಯ ಚಟುವಟಿಕೆಗಳಿಂದ ಪಡೆಯಬಹುದಾದ ಗರಿಷ್ಠ ಪ್ರಯೋಜನವೆಂದರೆ ಬ್ಯಾಂಕ್ –1ರಿಂದ ಪಡೆದ ಬಡ್ಡಿಯಾಗಿದೆ. ಅದರೆ ನೀವು ಕುಟುಂಬ ವ್ಯವಹಾರದಲ್ಲಿ ಹಣವನ್ನು ಹೂಡಿಕೆ ಮಾಡಿದ ನಂತರ ಈ ಅವಕಾಶ ಇರುವುದಿಲ್ಲ. ನಿಮ್ಮ ಕುಟುಂಬದ ವ್ಯವಹಾರದಲ್ಲಿ ಹಣವನ್ನು ಹೂಡಿಕೆ ಮಾಡುವ ಅವಕಾಶದ ವೆಚ್ಚವು ಬ್ಯಾಂಕ್–1ರಿಂದ ಬಿಟ್ಟುಕೊಟ್ಟ ಬಡ್ಡಿಯಾಗಿದೆ.

## 4.5 ಉದ್ಯಮಘಟಕದ ಪೂರೈಕೆ ರೇಖೆಯನ್ನು ನಿರ್ದರಿಸುವ ಅಂಶಗಳು (ನಿರ್ಧಾರಕಗಳು) *Determinants of a Firm's Supply Curve*

ಹಿಂದಿನ ಭಾಗದಲ್ಲಿ ನಾವು ಉದ್ಯಮಘಟಕದ ಪೂರೈಕೆ ರೇಖೆಯು ಸೀಮಾಂತ ವೆಚ್ಚದ ರೇಖೆಯ ಭಾಗವಾಗಿದೆ ಎಂದು ನೋಡಿದ್ದೇವೆ. ಹೀಗಾಗಿ, ಉದ್ಯಮಘಟಕದ ಸೀಮಾಂತ ವೆಚ್ಚದ ರೇಖೆಯ ಮೇಲೆ ಪ್ರಭಾವ ಬೀರುವ ಯಾವುದೇ ಅಂಶವು ಅದರ **ಪೂರೈಕೆ ರೇಖೆಯ ನಿರ್ಧಾರಕ**ವಾಗುತ್ತದೆ. ಈ ವಿಭಾಗದಲ್ಲಿ, ನಾವು ಅಂತಹ ಮೂರು ಅಂಶಗಳನ್ನು ಚರ್ಚಿಸುತ್ತೇವೆ.

### 4.5.1 ತಂತ್ರಜ್ಞಾನದ ಪ್ರಗತಿ *Technological Progress*

ಒಂದು ಉದ್ಯಮಘಟಕವು ಒಂದು ನಿರ್ದಿಷ್ಟ ಸರಕನ್ನು ಉತ್ಪಾದಿಸಲು ಎರಡು ಉತ್ಪಾದನಾಂಗಗಳನ್ನು ಬಳಸಿಕೊಳ್ಳುತ್ತದೆ, ಅವು ಬಂಡವಾಳ ಮತ್ತು ಶ್ರಮಗಳಾಗಿವೆ ಎಂದುಕೊಳ್ಳೋಣ. ಉದ್ಯಮಘಟಕವು ತನ್ನ ಸಂಘಟನೆಯಲ್ಲಿ ಹೊಸತನವನ್ನು ತಂದನಂತರ ಅದೇ ಮಟ್ಟದ ಬಂಡವಾಳ ಮತ್ತು ಶ್ರಮಗಳೊಂದಿಗೆ

ಈಗ ಹೆಚ್ಚಿನ ಘಟಕಗಳನ್ನು ಉತ್ಪಾದಿಸುತ್ತದೆ. ಇದನ್ನೇ ವಿಭಿನ್ನವಾಗಿ ಹೇಳುವುದಾದರೆ, ಉದ್ಯಮ ಘಟಕದ ಸಂಘಟನಾ ಹೊಸತನವು ಆದಾನದ ಕಡಿಮೆ ಘಟಕಗಳನ್ನು ಬಳಸಿಕೊಂಡು ಅದೇ ಮಟ್ಟದ ಉತ್ಪನ್ನವನ್ನು ಉತ್ಪಾದಿಸಲು ಅವಕಾಶ ಮಾಡಿಕೊಡುತ್ತದೆ. ಇದು ಯಾವುದೇ ಉತ್ಪನ್ನದ ಮಟ್ಟದಲ್ಲಿ ಉದ್ಯಮ ಘಟಕದ ಸೀಮಾಂತ ವೆಚ್ಚವನ್ನು ಕಡಿಮೆ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ; ಅಂದರೆ, MC ರೇಖೆಯು ಬಲಭಾಗಕ್ಕೆ (ಅಥವಾ ಕೆಳಕ್ಕೆ) ಪಲ್ಲಟಗೊಳ್ಳುತ್ತದೆ. ಉದ್ಯಮ ಘಟಕದ ಪೂರೈಕೆ ರೇಖೆಯು ಅಗತ್ಯವಾಗಿ MC ರೇಖೆಯ ಭಾಗವಾಗಿರುವುದರಿಂದ, ತಂತ್ರಜ್ಞಾನದ ಪ್ರಗತಿಯು ಉದ್ಯಮ ಘಟಕದ ಪೂರೈಕೆ ರೇಖೆಯನ್ನು ಬಲಕ್ಕೆ ಪಲ್ಲಟಗೊಳಿಸುತ್ತದೆ. ಯಾವುದೇ ನೀಡಿದ ಮಾರುಕಟ್ಟೆ ಬೆಲೆಗೆ ಉದ್ಯಮಘಟಕವು ಈಗ ಹೆಚ್ಚು ಉತ್ಪನ್ನ ಘಟಕಗಳನ್ನು ಪೂರೈಸುತ್ತದೆ.

### 4.5.2 ಆದಾನದ ಬೆಲೆಗಳು *Input Prices*

ಆದಾನಗಳ ಬೆಲೆಯ ಬದಲಾವಣೆಯು ಸಹ ಪೂರೈಕೆ ರೇಖೆಯ ಮೇಲೆ ಪ್ರಭಾವ ಬೀರುತ್ತದೆ. ಒಂದು ಆದಾನದ ಬೆಲೆ (ಉದಾಹರಣೆಗೆ ಕಾರ್ಮಿಕರ ಕೂಲಿ ದರ) ಹೆಚ್ಚಾದರೆ, ಉತ್ಪಾದನಾವೆಚ್ಚವೂ ಹೆಚ್ಚಾಗುತ್ತದೆ. ಇದರ ಪರಿಣಾಮವಾಗಿ ಉದ್ಯಮಘಟಕದ ಯಾವುದೇ ಉತ್ಪನ್ನದ ಮಟ್ಟದಲ್ಲಿ ಸರಾಸರಿ ವೆಚ್ಚವು ಹೆಚ್ಚಾಗುವುದರೊಂದಿಗೆ ಸೀಮಾಂತ ವೆಚ್ಚವೂ ಹೆಚ್ಚಾಗುತ್ತದೆ. ಅಂದರೆ, ಇಲ್ಲಿ MC ರೇಖೆ ಎಡಭಾಗಕ್ಕೆ (ಅಥವಾ ಮೇಲ್ಮುಖವಾಗಿ) ಪಲ್ಲಟಗೊಳ್ಳುತ್ತದೆ. ಇದರರ್ಥ ಉದ್ಯಮ ಘಟಕದ ಪೂರೈಕೆ ರೇಖೆಯ ಎಡಕ್ಕೆ ಪಲ್ಲಟಗೊಳ್ಳತ್ತದೆ; ಯಾವುದೇ ನೀಡಿದ ಮಾರುಕಟ್ಟೆ ಬೆಲೆಯಲ್ಲಿ ಉದ್ಯಮಘಟಕವು ಈಗ ಕಡಿಮೆ ಪ್ರಮಾಣದಲ್ಲಿ ಉತ್ಪನ್ನದ ಘಟಕಗಳನ್ನು ಪೂರೈಸುತ್ತದೆ.



### 4.5.3 ಘಟಕ ತೆರಿಗೆ *Unit Tax*

ಸರಕು ಉತ್ಪಾದನೆಯ ಮಾರಾಟದ ಪ್ರತಿ ಘಟಕದ ಮೇಲೆ ಸರ್ಕಾರವು ವಿಧಿಸುವ ತೆರಿಗೆಗೆ ಘಟಕ ತೆರಿಗೆ ಎನ್ನುತ್ತೇವೆ. ಉದಾಹರಣೆಗೆ, ಸರ್ಕಾರ ಹೇರಿದ ಘಟಕ ತೆರಿಗೆ ರೂ. 2 ಆಗಿದೆ ಎಂದು ಕೊಳ್ಳೋಣ. ಆಗ ಉದ್ಯಮ ಘಟಕ 10 ಘಟಕಗಳನ್ನು ಉತ್ಪಾದಿಸಿ ಮತ್ತು ಮಾರಾಟ ಮಾಡಿದರೆ, ಉದ್ಯಮ ಘಟಕ ಸರ್ಕಾರಕ್ಕೆ ಪಾವತಿಸಬೇಕಾದ ಒಟ್ಟು ತೆರಿಗೆ 10 × ರೂ.2 = ರೂ.20 ಆಗಿದೆ.

ಒಂದು ಘಟಕ ತೆರಿಗೆ ವಿಧಿಸಿದಾಗ ಉದ್ಯಮ ಘಟಕದ ದೀರ್ಘಾವಧಿ ಪೂರೈಕೆ ರೇಖೆ ಹೇಗೆ ಬದಲಾಗುತ್ತದೆ? ನಾವು ಈಗ ರೇಖಾಚಿತ್ರ 4.11 ನ್ನು ಗಮನಿಸೋಣ. ಘಟಕ ತೆರಿಗೆ ವಿಧಿಸುವ ಮೊದಲು LRMC0 ಮತ್ತು LRAC0 ಅನುಕ್ರಮವಾಗಿ ಉದ್ಯಮ ಘಟಕದ ದೀರ್ಘಾವಧಿ ಸೀಮಾಂತ ವೆಚ್ಚದ ರೇಖೆ ಮತ್ತು ದೀರ್ಘಾವಧಿ ಸರಾಸರಿವೆಚ್ಚದ ರೇಖೆಗಾಳಗಿವೆ. ಈಗ, ಸರ್ಕಾರವು ರೂ. '*t*' ಗಳಷ್ಟು ಘಟಕ ತೆರಿಗೆಯನ್ನು ಹೇರುತ್ತದೆ ಎಂದುಕೊಳ್ಳೋಣ. ಉದ್ಯಮಘಟಕವು ಉತ್ಪಾದಿಸಿದ ಸರಕಿನ ಪ್ರತಿ ಘಟಕಕ್ಕೆ ರೂ. $t(n)$ಗಳಷ್ಟು ಘಟಕ ತೆರಿಗೆಯನ್ನು ಪಾವತಿಸಬೇಕಾದ ಕಾರಣ, ಯಾವುದೇ ಉತ್ಪನ್ನ ಮಟ್ಟದಲ್ಲಿ ಉದ್ಯಮಘಟಕದ ದೀರ್ಘಾವಧಿ ಸರಾಸರಿ ವೆಚ್ಚದ ಮತ್ತು ದೀರ್ಘಾವಧಿ ಸೀಮಾಂತ ವೆಚ್ಚದ ರೇಖೆಗಳು ರೂ $t(n)$ ಗಳಷ್ಟು ಹೆಚ್ಚಾಗುತ್ತದೆ. ರೇಖಾ ಚಿತ್ರ 4,11ರಲ್ಲಿ, $LRMC_1$ ಮತ್ತು $LRAC_1$ ಗಳು ಅನುಕ್ರಮವಾಗಿ, ಘಟಕ ತೆರಿಗೆಯನ್ನು ವಿಧಿಸಿದ ನಂತರದ ದೀರ್ಘಾವಧಿಯ ಸಿಮಾಂತ ವೆಚ್ಚದ ರೇಖೆಯ ಮತ್ತು ದೀರ್ಘಾವಧಿ ಸರಾಸರಿ ವೆಚ್ಚದ ರೇಖೆಗಳಾಗಿವೆ.




**ರೇಖಾಚಿತ್ರ 4.11: ವೆಚ್ಚದ ರೇಖೆಗಳು ಮತ್ತು ಘಟಕ ತೆರಿಗೆ**

$LRAC^0$ ಮತ್ತು $LRMC^0$ **ಗಳು ಅನುಕ್ರಮವಾಗಿ** ತೆರಿಗೆಯನ್ನು ವಿಧಿಸುವ ಮೊದಲಿನ ಒಂದು ಉದ್ಯಮಘಟಕದ ದೀರ್ಘಾವದಿ ಸರಾಸರಿ ವೆಚ್ಚ ಮತ್ತು ದೀರ್ಘಾವದಿ ಸೀಮಾಂತ ವೆಚ್ಚದ ರೇಖೆಗಳಾಗಿವೆ. ಅದೇ ರೀತಿ ರೂ '*t*' **ಯಷ್ಟು ಘಟಕ ತೆರಿಗೆ ವಿಧಿಸಿದನಂತರ ಉದ್ಯಮ ಘಟಕದ** $LRAC1_1$ ಮತ್ತು $LRMC_1$ **ಗಳು** ಅನುಕ್ರಮವಾಗಿ ದೀರ್ಘಾವದಿ ಸರಾಸರಿ ವೆಚ್ಚದ ರೇಖೆ ಮತ್ತು ದೀರ್ಘಾವದಿ ಸೀಮಾಂತ ವೆಚ್ಚ ರೇಖೆಯಾಗಿ**ವೆ.**

ಉದ್ಯಮಘಟಕದ ಧೀರ್ಘವಧಿ ಪೂರೈಕೆ ರೇಖೆಯು ಕನಿಷ್ಠ LRAC ರೇಖೆಯಿಂದ ಮೇಲೇರುವ LRMC ರೇಖೆಯ ಭಾಗವಾಗಿದೆ; ಅಲ್ಲದೇ ಕನಿಷ್ಠ LRAC ಗಿಂತ ಕಡಿಮೆ ಇರುವ ಬೆಲೆಗಳಲ್ಲಿ ಉತ್ಪನ್ನವು ಶೂನ್ಯವಾಗಿರುತ್ತದೆ. ಎಂಬುದನ್ನು ನೆನಪುಮಾಡಿಕೊಳ್ಳಿ. ರೇಖಾ ಚಿತ್ರ 4.12ನ್ನು ಗಮನಿಸಿದಾಗ $S^0$ ಮತ್ತು $S^1$ ಅನುಕ್ರಮವಾಗಿ, ಘಟಕ ತೆರಿಗೆ ವಿಧಿಸುವ ಮೊದಲು ಮತ್ತು ನಂತರದ ಉದ್ಯಮಘಟಕದ ಪೂರೈಕೆ ರೇಖೆಗಳಾಗಿರುತ್ತವೆ. ಘಟಕ ತೆರಿಗೆಯು ಉದ್ಯಮ ಘಟಕದ ದೀರ್ಘಾವದಿ ಪೂರೈಕೆ ರೇಖೆಯನ್ನು ಎಡಕ್ಕೆ ಪಲ್ಲಟಗೊಳಿಸುತ್ತದೆ ಎಂಬುದನ್ನು ಗಮನಿಸಿ; ಯಾವುದೇ ನೀಡಿದ ಮಾರುಕಟ್ಟೆ ಬೆಲೆಗೆ, ಈಗ ಉದ್ಯಮಘಟಕವು ಉತ್ಪನ್ನದ ಕಡಿಮೆ ಘಟಕಗಳನ್ನು ಪೂರೈಸುತ್ತದೆ.




**ರೇಖಾಚಿತ್ರ 4.12: ಪೂರೈಕೆ ರೇಖೆಗಳು ಮತ್ತು ಘಟಕ ತೆರಿಗೆ**

ಘಟಕ ತೆರಿಗೆಯನ್ನು ವಿಧಿಸುವ ಮೊದಲು $S^0$ ಉದ್ಯಮಘಟಕದ ಪೂರೈಕೆ ರೇಖೆಯಾಗಿದೆ. ರೂ *t* ಗಳಷ್ಟು ಘಟಕ ತೆರಿಗೆ ವಿಧಿಸಿದ ನಂತರ $S^1$ ಉದ್ಯಮ ಘಟಕದ ಪೂರೈಕೆಯನ್ನು ಪ್ರತಿನಿದಿಸುತ್ತದೆ.





## 4.6 ಮಾರುಕಟ್ಟೆ ಪೂರೈಕೆ ರೇಖೆ *Market Supply Curve*

ಉದ್ಯಮ ಘಟಕಗಳು ಮಾರುಕಟ್ಟೆಯ ವಿವಿಧ ಬೆಲೆಗಳಲ್ಲಿ (*y*–ಅಕ್ಷದಲ್ಲಿ ಗುರುತಿಸಿದೆ)ಉತ್ಪಾದಿಸುವ ಉತ್ಪನ್ನ ಮಟ್ಟಗಳನ್ನು (*x*–ಅಕ್ಷದಲ್ಲಿ ಗುರುತಿಸಿದೆ) ಮಾರುಕಟ್ಟೆ ಪೂರೈಕೆ ರೇಖೆಯು ತೋರಿಸುತ್ತದೆ.

ಮಾರುಕಟ್ಟೆ ಪೂರೈಕೆ ರೇಖೆಯನ್ನು ಹೇಗೆ ಪಡೆಯುವಿರಿ? ಒಂದು ಮಾರುಕಟ್ಟೆಯಲ್ಲಿ n ಸಂಖ್ಯೆಯಷ್ಟು ಉದ್ಯಮಘಟಕಗಳಿವೆ ಎಂದು ಪರಿಗಣಿಸಿ; ಉದ್ಯಮಘಟಕ 1, ಉದ್ಯಮಘಟಕ2, ಉದ್ಯಮಘಟಕ3 ಮತ್ತು ಮುಂತಾಗಿ ಮಾರುಕಟ್ಟೆ ದರವನ್ನು *p* ನಲ್ಲಿ ನಿರ್ದಿರಿಸಿದೆ ಎಂದುಕೊಳ್ಳೋಣ. ನಂತರ, ಸಮಗ್ರವಾಗಿ *n* ಉದ್ಯಮಘಟಕಗಳಿಂದ ಉತ್ಪದನೆಯಾಗುವ ಉತ್ಪನ್ನವು (ಬೆಲೆ *p* ನಲ್ಲಿ ಉದ್ಯಮಘಟಕ 1ರ ಪೂರೈಕೆ) ಪೂರೈಕೆಯಾಗಿದೆ + (ಬೆಲೆ *P* ನಲ್ಲಿ ಉದ್ಯಮ ಘಟಕ 2ರ ಪೂರೈಕೆ) +...+ (ಬೆಲೆ *p* ನಲ್ಲಿ ಉದ್ಯಮ ಘಟಕಗಳಾದ *n* ನ ಪೂರೈಕೆ) ಆಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಬೆಲೆಯ *p* ನಲ್ಲಿ ಮಾರುಕಟ್ಟೆ ಬೆಲೆ *p* ನಲ್ಲಿ ಆ ಬೆಲೆಗೆ ವೈಯಕ್ತಿಕ ಉದ್ಯಮ ಘಟಕಗಳು ಪೂರೈಸಿದ ಒಟ್ಟು ಮೊತ್ತವಾಗಿದೆ.

ಈಗ ನಾವು ಮಾರುಕಟ್ಟೆಯಲ್ಲಿ ಕೇವಲ 2 ಉದ್ಯಮ ಘಟಕಗಳಿವೆ ಎಂದುಕೊಂಡು ಮಾರುಕಟ್ಟೆ ಪೂರೈಕೆ ರೇಖೆಯನ್ನು ರೇಖಾಗಣಿತಾತ್ಮಕವಾಗಿ ರಚಿಸೋಣ; ಉದ್ಯಮ ಘಟಕ 1 ಮತ್ತು ಉದ್ಯಮ ಘಟಕ 2. ಎರಡು ಉದ್ಯಮ ಘಟಕಗಳು ವಿಭಿನ್ನ ವೆಚ್ಚದ ರಚನೆಗಳನ್ನು ಹೊಂದಿವೆ. ಮಾರುಕಟ್ಟೆಯ ಬೆಲೆ $\overline{P_1}$ ಗಿಂತ ಕಡಿಮೆ ಇದ್ದರೆ ಉದ್ಯಮಘಟಕ 1 ಏನನ್ನೂ ಉತ್ಪಾದಿಸವುದಿಲ್ಲ ಮತ್ತು ಮಾರುಕಟ್ಟೆ ಬೆಲೆ $\overline{P_2}$ ಗಿಂತ ಕಡಿಮೆ ಇದ್ದರೆ ಉದ್ಯಮಘಟಕ 2 ಏನನ್ನು ಉತ್ಪಾದಿಸುವುದಿಲ್ಲ. $\overline{P_1}$ ಗಿಂತಲೂ $\overline{P_2}$ ಹೆಚ್ಚಾಗಿದೆ ಎಂದು ಕೂಡ ಊಹಿಸಿಕೊಳ್ಳೋಣ.

ರೇಖಾ ಚಿತ್ರ 4.13ರ ಫಲಕ (ಎ)ದಲ್ಲಿ ಉದ್ಯಮಘಟಕ 1ರ ಪೂರೈಕೆ ರೇಖೆಯನ್ನು $S_1$ ಸೂಚಿಸುತ್ತದೆ; ಫಲಕ (ಬಿ)ದಲ್ಲಿ ಸೂಚಿಸುವ ಉದ್ಯಮಘಟಕ 2ರ ಪೂರೈಕೆ ರೇಖೆಯನ್ನು $S_2$ ಎಷ್ಟು ಸೂಚಿಸುತ್ತದೆ. ರೇಖಾ ಚಿತ್ರ 4.13ರ ಪ್ಯಾನೆಲ್ (ಸಿ)ದಲ್ಲಿ ಮಾರುಕಟ್ಟೆ ಪೂರೈಕೆ ರೇಖೆಯನ್ನು *Sm* ಸೂಚಿಸುತ್ತದೆ. ಮಾರುಕಟ್ಟೆಯ ಬೆಲೆ ಕಟ್ಟುನಿಟ್ಟಾಗಿ $\overline{P_1}$ ಗಿಂತ ಕಡಿಮೆಯಿದ್ದಾಗ, ಎರಡೂ ಉದ್ಯಮಘಟಕಗಳು ಯಾವುದೇ ಪ್ರಮಾಣದ ಸರಕುಗಳನ್ನು ಉತ್ಪಾದಿಸಲು ಇಚ್ಛಿಸುವುದಿಲ್ಲ. ಹಾಗಾಗಿ ಅಂತಹ ಬೆಲೆಗಳಿಗೆ ಮಾರುಕಟ್ಟೆ ಪೂರೈಕೆಯು ಸಹ ಶೂನ್ಯವಾಗಿರುತ್ತದೆ. ಮಾರುಕಟ್ಟೆ ಬೆಲೆಯು $\overline{P_1}$ ಗಿಂತ ಹೆಚ್ಚು ಅಥವಾ ಸಮನಾಗಿದ್ದಾಗ, ಆದರೆ $\overline{P_2}$ ಗಿಂತ ಕಡಿಮೆ ಇದ್ದಾಗ, ಉದ್ಯಮ ಘಟಕ 1 ಮಾತ್ರ ಧನಾತ್ಮಕ ಪ್ರಮಾಣದ ಸರಕನ್ನು ಉತ್ಪಾದಿಸುತ್ತದೆ.

ಆದ್ದರಿಂದ, ಈ ಶ್ರೇಣಿಯಲ್ಲಿ ಮಾರುಕಟ್ಟೆ ಪೂರೈಕೆಯು ಉದ್ಯಮ ಘಟಕ 1ರ ಪೂರೈಕೆ ರೇಖೆಯೊಂದಿಗೆ ತಾಳೆಯಾಗುತ್ತದೆ. ಮಾರುಕಟ್ಟೆಯ ಬೆಲೆ $\overline{P_2}$ ಗಿಂತ ಹೆಚ್ಚಾಗಿದ್ದಾಗ ಅಥವಾ ಸಮನಾಗಿದ್ದಾಗ, ಎರಡೂ ಉದ್ಯಮ ಘಟಕಗಳು ಧನಾತ್ಮಕ ಉತ್ಪನ್ನ ಮಟ್ಟವನ್ನು ಹೊಂದಿರುತ್ತವೆ. ಉದಾಹರಣೆಗೆ, ಮಾರುಕಟ್ಟೆ ಬೆಲೆಯು $P_3$ ಮೌಲ್ಯವನ್ನು ಹೊಂದುತ್ತದೆ ಎಂದು ಕೊಳ್ಳೋಣ ($P_3$ ಯು $\overline{P_2}$ ನ್ನು ಮೀರುತ್ತದೆ ಎಂಬುದನ್ನು ಗಮನಿಸಿ). ನೀಡಲಾದ $P_3$, ಬೆಲೆಗೆ ಉದ್ಯಮ ಘಟಕ 1 $q_3$ ಘಟಕಗಳಷ್ಟು ಉತ್ಪನ್ನವನ್ನು ಪೂರೈಸುತ್ತದೆ. ಆದರೆ ಉದ್ಯಮ ಘಟಕ 2, $q_4$ ಘಟಕಗಳ ಉತ್ಪನ್ನವನ್ನು ಪೂರೈಸುತ್ತದೆ. ಆದ್ದರಿಂದ, ಬೆಲೆ $p_3$ ನಲ್ಲಿ ಮಾರುಕಟ್ಟೆ ಪೂರೈಕೆ $q_5$, ಆಗಿರುತ್ತದೆ. ಇಲ್ಲಿ $q_5=q_3+q_4$. ಮಾರುಕಟ್ಟೆಯ ಪೂರೈಕೆ ರೇಖೆ S*m*, ಫಲಕ (ಸಿ) ದಲ್ಲಿ ರಚಿತವಾಗಿದೆ. ಎಂಬುದನ್ನು ಗಮನಿಸಿ; ಮಾರುಕಟ್ಟೆಯಲ್ಲಿನ ಎರಡು ಉದ್ಯಮ ಘಟಕಗಳ ಪೂರೈಕೆ ರೇಖೆಗಳಾದ $S_1$ ಮತ್ತು $S_2$ ಗಳ ಸಮಾನಾಂತರ ಸಂಕಲನವನ್ನು ಮಾಡುವುದರ ಮೂಲಕ ನಾವು S*m* ನ್ನು ಪಡೆಯಬಹುದು. ಮತ್ತು ಮಾರುಕಟ್ಟೆ ಪೂರೈಕೆ ರೇಖೆಯನ್ನು ಮಾರುಕಟ್ಟೆಯಲ್ಲಿನ್ನ ನಿರ್ದಿಷ್ಟ ಸಂಖ್ಯೆಯ ಉದ್ಯಮ ಘಟಕಗಳಿಗೆ ಪಡೆಯಲಾಗಿದೆ ಎಂದು ಗಮನಿಸಬೇಕು. ಉದ್ಯಮ ಘಟಕಗಳ ಸಂಖ್ಯೆ ಬದಲಾಗುತ್ತಾ ಹೋದಂತೆ, ಮಾರುಕಟ್ಟೆಯ ಪೂರೈಕೆಯ ರೇಖೆ ಕೂಡ ಪಲ್ಲಟಗೊಳ್ಳುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಮಾರುಕಟ್ಟೆಯಲ್ಲಿನ ಉದ್ಯಮ ಘಟಕಗಳ ಸಂಖ್ಯೆ ಹೆಚ್ಚಾಗಿದ್ದರೆ (ಕಡಿಮೆಯಾದರೆ), ಮಾರುಕಟ್ಟೆ ಪೂರೈಕೆ ರೇಖೆಯು ಬಲಕ್ಕೆ (ಎಡಭಾಗ) ಪಲ್ಲಟಗೊಳ್ಳುತ್ತದೆ. ಇದಕ್ಕೆ ಪೂರಕವಾಗಿ ನಾವು ಈಗ ಮೇಲೆ ನೀಡಲಾದ ರೇಖಾತ್ಮಕ ವಿಶ್ಲೇಷಣೆಯನ್ನು ಸಂಬಂಧಿಸಿದ ಸಂಖ್ಯಾತ್ಮಕ ಉದಾಹರಣೆಯನ್ನು ನೀಡೋಣ. ಎರಡು ಉದ್ಯಮ ಘಟಕಗಳೊಂದಿಗೆ ಒಂದು ಮಾರುಕಟ್ಟೆಯಲ್ಲಿ ಎರಡು ಉದ್ಯಮ ಘಟಕಗಳಿವೆ ಎಂದು ಪರಿಗಣಿಸೋಣ: ಉದ್ಯಮ ಘಟಕ 1 ಮತ್ತು ಉದ್ಯಮ ಘಟಕ 2. ಉದ್ಯಮ ಘಟಕಗಳಿವೆ 1ರ ಪೂರೈಕೆ ರೇಖೆ ಹೀಗಿದೆ.

$$S_1(p) = \begin{Bmatrix} 0 & : p < 10 \\ p - 10 & : \geq 10 \end{Bmatrix}$$




**ರೇಖಾಚಿತ್ರ 4.13 ಮಾರುಕಟ್ಟೆ ಪೂರೈಕೆ ರೇಖೆಯ ಫಲಕ (ಪ್ಯಾನೆಲ್)**

**ಪ್ಯಾನೆಲ್** (ಎ) ಉದ್ಯಮಘಟಕ ಒಂದರ ಪೂರೈಕೆ ರೇಖೆಯನ್ನು ತೋರಿಸುತ್ತದೆ. **ಪ್ಯಾನೆಲ್** (ಬಿ) ಉದ್ಯಮಘಟಕ ಎರಡರ ಪೂರೈಕೆ ರೇಖೆಯನ್ನು ತೋರಿಸುತ್ತದೆ. **ಪ್ಯಾನೆಲ್** (ಸಿ) ಮಾರುಕಟ್ಟೆ ಪೂರೈಕೆ ರೇಖೆಯನ್ನು ತೋರಿಸುತ್ತದೆ. ಇದು ಎರಡು ಉದ್ಯಮಘಟಕಗಳ ಸಮನಾಂತರ ಸಂಕಲನವನ್ನು ಪಡೆದುಕೊಳ್ಳುವುದರ ಮೂಲಕ ಪಡೆಯಲಾಗಿದೆ.

$S_1$ (*p*) ಸೂಚಿಸುವುದೇನೆಂದರೆ (1) ಮಾರುಕಟ್ಟೆ ಬೆಲೆ '*p*' ಯು ಕಟ್ಟುನಿಟ್ಟಾಗಿ 10ಕ್ಕಿಂತ ಕಡಿಮೆಯಿದ್ದಾಗ ಉದ್ಯಮಘಟಕ 1ರ ಉತ್ಪನ್ನವು ಶೂನ್ಯವಾಗಿರುತ್ತದೆ ಮತ್ತು (2) ಮಾರುಕಟ್ಟೆ ಬೆಲೆ '*p*' ಯು 10ಕ್ಕಿಂತ ಹೆಚ್ಚು ಅಥವಾ ಸಮವಾಗಿದ್ದರೆ ಉದ್ಯಮಘಟಕ 1ರ ಉತ್ಪನ್ನವು (*p*–10) ಆಗಿರುತ್ತದೆ. ಉದ್ಯಮಘಟಕದ 2ರ ಪೂರೈಕೆ ರೇಖೆಯು ಈ ಕೆಳಗಿನಂತೆ ಇದೆ.

$$S_2(p) = \begin{Bmatrix} 0 & : p < 15 \\ p - 15 & : \geq 15 \end{Bmatrix}$$

$S_2(p)$ ನ ವ್ಯಾಖ್ಯಾನವು $S_1(p)$ ನಂತೆಯೇ ಇರುತ್ತದೆ. ಈಗ, ಮಾರುಕಟ್ಟೆಯ ಪೂರೈಕೆ ರೇಖೆ, $Sm(p)$, ಎರಡು ಉದ್ಯಮ ಘಟಕಗಳ ಪೂರೈಕೆ ರೇಖೆಯನ್ನು ಸರಳವಾಗಿ ಸಂಕಲಿಸುತ್ತದೆ;

$$S_m(p)= S_1(p) + S_2(p)$$

ಇದರ ಅರ್ಥ $S_m(p)$ ಈ ಮುಂದಿನಂತಿದೆ.

$$S_2(p) = \begin{cases} 0 & : p < 15 \\ p - 15 & : p \geq 10 \text{ ಮತ್ತು } p \geq 15 \\ (p-10)+(p-15)=(2p-25) & : p \geq 15 \end{cases}$$

## 4.7 ಪೂರೈಕೆ ಬೆಲೆ ಸ್ಥಿತಿಸ್ಥಾಪಕತ್ವ *Price Elasticity of Supply*

ಪೂರೈಕೆ ಬೆಲೆ ಸ್ಥಿತಿಸ್ಥಾಪಕತೆ ಸರಕಿನ ಬೆಲೆಯಲ್ಲಿ ಉಂಟಾದ ಬದಲಾವಣೆಯಿಂದಾಗಿ ಪೂರೈಕೆಯ ಪ್ರಮಾಣದಲ್ಲಾಗುವ ಪ್ರತಿಕ್ರಿಯೆಯನ್ನು ಮಾಪನ ಮಾಡುತ್ತದೆ. ಇನ್ನು ನಿರ್ಧಿಷ್ಟವಾಗಿ ಹೇಳುವುದಾದರೆ, ಪೂರೈಕೆ ಬೆಲೆ ಸ್ಥಿತಿ ಸ್ಥಾಪಕತೆಯನ್ನು $e_s$ ನಿಂದ ಸೂಚಿಸುತ್ತೇವೆ. ಇದನ್ನು ಈ ಮುಂದಿನಂತೆ ವ್ಯಾಖ್ಯಾನಿಸಬಹುದು.

$$\text{ಪೂರೈಕೆ ಬೆಲೆ ಸ್ಥಿತಿ ಸ್ಥಾಪಕತ್ವ } (e_s) = \frac{\text{ಪೂರೈಕೆ ಪ್ರಮಾಣದಲ್ಲಾದ ಶೇಕಡವಾರು ಬದಲಾವಣೆ}}{\text{ಬೆಲೆಯಲ್ಲಿ ಆದ ಶೇಕಡವಾರು ಬದಲಾವಣೆ}}$$

ಮಾರುಕಟ್ಟೆ ಪೂರೈಕೆ ರೇಖೆಯನ್ನು ನೀಡಲಾಗಿದೆ; (ಅಂದರೆ, $S_m(p_1)$ ) ಮಾರುಕಟ್ಟೆ ಬೆಲೆಯು $p^0$ ಆಗಿದ್ದಾಗ $p$ ಸರಕಿನ ಪೂರೈಕೆ ಪ್ರಮಾಣ $q^0$ ಎಂದುಕೊಳ್ಳೋಣ. ಕೆಲವು ಕಾರಣಗಳಿಂದಾಗಿ, ಆ ಸರಕಿನ ಮಾರುಕಟ್ಟೆ ಬೆಲೆಯು $p^0$ ಯಿಂದ $p^1$ ಗೆ ಬದಲಾಗುತ್ತದೆ. ಮಾರುಕಟ್ಟೆ ಬೆಲೆ $p^1$ ಆಗಿದ್ದಾಗ ಪೂರೈಕೆಯ ಪ್ರಮಾಣ $q^1$ ಆಗುತ್ತದೆ ಎಂದುಕೊಳ್ಳೋಣ. ಮಾರುಕಟ್ಟೆ ಬೆಲೆ $p^0$ ದಿಂದ $p^1$ ಗೆ ಬದಲಾದಾಗ, ಬೆಲೆಯಲ್ಲಿನ ಶೇಕಡವಾರು ಬದಲಾವಣೆಯು $100 \times \frac{p^1 - p^0}{p^o}$ ಆಗುತ್ತದೆ; ಹಾಗೆಯೇ, ಪೂರೈಕೆ ಪ್ರಮಾಣ $q^0$ ನಿಂದ $q^1$ ಗೆ ಬದಲಾದಾಗ, $p_0$ ಪೂರೈಕೆ ಪ್ರಮಾಣದಲ್ಲಾದ ಶೇಕಡವಾರು ಬದಲಾವಣೆಯು $100 \times \frac{q^1 - q^0}{q^0}$ ಆದ್ದರಿಂದ $e_s = \frac{100 \times (q^1 - q^0)/q^0}{100 \times (p^1 - p^0)/p^0} = \frac{q^1/q^0 - 1}{p^1/p^0 - 1}$ ವಿಷಯಗಳನ್ನು ಇನ್ನೂ ಖಚಿತ ಗೊಳಿಸಲು ಮುಂದಿನ ಸಂಖ್ಯಾತ್ಮಕ ಉದಾಹರಣೆಯನ್ನು ಪರಿಗಣಿಸಿ. ಕ್ರಿಕೆಟ್ ಚೆಂಡುಗಳ ಮಾರುಕಟ್ಟೆ ಪರಿಪೂರ್ಣವಾಗಿ ಪೈಪೋಟಿಯಿತವಾಗಿದೆ ಎಂದುಕೊಳ್ಳೋಣ. ಕ್ರಿಕೆಟ್ ಚೆಂಡಿನ ಬೆಲೆಯು 10 ರೂ.ಆಗಿದ್ದಾಗ, ಮಾರುಕಟ್ಟೆಯಲ್ಲಿನ ಉದ್ಯಮ ಘಟಕಗಳು ಸಮಗ್ರವಾಗಿ 200 ಕ್ರಿಕೆಟ್ ಚೆಂಡುಗಳನ್ನು ಉತ್ಪಾದಿಸುತ್ತವೆ. ಎಂದು ಕಲ್ಪಿಸಿಕೊಳ್ಳೋಣ. ಒಂದು ಕ್ರಿಕೆಟ್ ಚೆಂಡಿನ ಮೇಲೆ ಬೆಲೆ ರೂ.30ಕ್ಕೆ ಏರಿದಾಗ ಮಾರುಕಟ್ಟೆಯಲ್ಲಿರುವ ಉದ್ಯಮ ಘಟಕಗಳು ಸಮಗ್ರವಾಗಿ 1000 ಕ್ರಿಕೆಟ್ ಚೆಂಡುಗಳನ್ನು ಉತ್ಪಾದಿಸುತ್ತದೆ ಎಂದು ಊಹಿಸಿಕೊಳ್ಳೋಣ. ಆಗ,

1. $\frac{q'}{q^0} - 1 = \frac{1,000}{200} - 1 = 4$
2. $\frac{p'}{p^0} - 1 = \frac{30}{10} - 1 = 2$
3. $e_s = \frac{4}{2} = 2$

ಪೂರೈಕೆ ರೇಖೆಯು ಲಂಬವಾಗಿದ್ದಾಗ, ಪೂರೈಕೆಯು ಪೂರ್ಣವಾಗಿ ಬೆಲೆಗೆ ಸ್ಪಂದಿಸುವುದಿಲ್ಲ ಮತ್ತು ಪೂರೈಕೆಯ ಸ್ಥಿತಿಸ್ಥಾಪಕತ್ವವು ಶೂನ್ಯವಾಗಿರುತ್ತದೆ. ಇತರೆ ಸನ್ನಿವೇಶಗಳಲ್ಲಿ ಪೂರೈಕೆ ರೇಖೆಯು ಧನಾತ್ಮಕವಾಗಿ ಆಗಿರುವಾಗ, ಬೆಲೆ ಹೆಚ್ಚಳದೊಂದಿಗೆ, ಪೂರೈಕೆಯು ಹೆಚ್ಚುತ್ತದೆ ಅದರಿಂದ ಪೂರೈಕೆ ಸ್ಥಿತಿಸ್ಥಾಪಕತ್ವವು ಧನಾತ್ಮಕವಾಗಿರುತ್ತದೆ. ಬೆಲೆ ಬೇಡಿಕೆ ಸ್ಥಿತಿ ಸ್ಥಾಪಕತ್ವದಂತೆಯೇ ಬೆಲೆ ಪೂರೈಕೆ ಸ್ಥಿತಿ ಸ್ಥಾಪಕತ್ವವು ಕೂಡ ಘಟಕಗಳಿಂದ (ಯೂನಿಟ್‌ಗಳಿಂದ) ಸ್ವತಂತ್ರವಾಗಿರುತ್ತದೆ.

### 4.7.1 ಜ್ಯಾಮಿತಿಯ ವಿಧಾನ *The Geometric Method*

ರೇಖಾ ಚಿತ್ರ 4.11ನ್ನು ಪರಿಗಣಿಸಿ. ಫಲಕ (ಎ) ಯು ಸರಳರೇಖಾ ಪೂರೈಕೆ ರೇಖೆಯನ್ನು ತೋರಿಸುತ್ತದೆ. 'S' ಬೆಲೆ ಬಿಂದು ಪೂರೈಕೆ ರೇಖೆಯ ಮೇಲಿರುವ ಬಿಂದುವಾಗಿದೆ. ಬೆಲೆ ಅಕ್ಷವನ್ನು ಅದರ ಧನಾತ್ಮಕ ವ್ಯಾಪ್ತಿಯಲ್ಲಿ ಛೇಧಿಸುತ್ತದೆ ಮತ್ತು ನಾವು ಸರಳ ರೇಖೆಯನ್ನು ವಿಸ್ತರಿಸಿದಂತೆ ಅದು M ನಲ್ಲಿ ಪ್ರಮಾಣದ ಅಕ್ಷವನ್ನು ಛೇಧಿಸುತ್ತದೆ. ಇದು ಅದರ ಋಣಾತ್ಮಕ ವ್ಯಾಪ್ತಿಯಲ್ಲಿದೆ. 'S' ಬಿಂದುವಿನಲ್ಲಿ ಈ ಪೂರೈಕೆ ರೇಖೆಯ ಬೆಲೆ ಸ್ಥಿತಿಸ್ಥಾಪಕತ್ವವನ್ನು $Mq_0 / Oq_0$ ಅನುಪಾತದಿಂದ ನೀಡಲಾಗಿದೆ. ಅಂತಹ ಪೂರೈಕೆ ರೇಖೆಯಲ್ಲಿ 'S' ನ ಯಾವುದೇ ಬಿಂದುವಿನಲ್ಲಿ, $Mq_0 / Oq_0$ ಆಗಿರುತ್ತದೆ. ಅಂತಹ ಪೂರೈಕೆ ರೇಖೆಯಲ್ಲಿ ಯಾವುದೇ ಬಿಂದುವಿಲ್ಲಿ ಸ್ಥಿತಿ ಸ್ಥಾಪಕತ್ವವು 1ಕ್ಕಿಂತ ಹೆಚ್ಚಾಗಿರುವುದು.

ಫಲಕ (ಸಿ) ದಲ್ಲಿ ನಾವು ಸರಳ ರೇಖೆಯ ಪೂರೈಕೆ ರೇಖೆಯನ್ನು ಪರಿಗಣಿಸುತ್ತೇವೆ ಮತ್ತು S ಎನ್ನುವುದು ಅದರ ಮೇಲಿನ ಒಂದು ಬಿಂದುವಾಗಿದೆ. ಇದು ಅದರ ಧನಾತ್ಮಕ ಶ್ರೇಣಿಯಲ್ಲಿರುವ M ನಲ್ಲಿ ಪ್ರಮಾಣ ಅಕ್ಷವನ್ನು ಛೇಧಿಸುತ್ತದೆ. ಪುನಃ S ನಲ್ಲಿ ಈ ಪೂರೈಕೆ ರೇಖೆಯ ಬೆಲೆಯ ಸ್ಥಿತಿಸ್ಥಾಪಕತ್ವವನ್ನು $Mq_0 / Oq_0$ದ ಅನುಪಾತದಿಂದ ನೀಡಲಾಗಿದೆ. ಈಗ, $Mq_0 < Oq_0$ ಮತ್ತು ಆದ್ದರಿಂದ, ಅಂತಹ $e_s < 1$. ಪೂರೈಕೆ ರೇಖೆಯಲ್ಲಿ 'S' ಯಾವುದೇ ಬಿಂದುವಾಗಬಹುದು, ಮತ್ತು ಆದ್ದರಿಂದ ಅಂತಹ ಪೂರೈಕೆ ರೇಖೆಯಲ್ಲಿ $e_s <$ ಆಗಿರುತ್ತದೆ ಬಿಂದುವು 'S' ಪೂರೈಕೆ ರೇಖೆಯಲ್ಲಿ ಯಾವುದೂ ಬಿಂದುವಾಗಬಹುದು, ಆದ್ದರಿಂದ ಅಂತಹ ಎಲ್ಲಾ ಬಿಂದುಗಳಲ್ಲಿ '$Q_s$ 2' ಆಗಿರುತ್ತದೆ.

ಈಗ ನಾವು ಫಲಕ (ಬಿ)ಯನ್ನು ನೋಡೋಣ ಇಲ್ಲಿ ಪೂರೈಕೆ ರೇಖೆ ಮೂಲದ ಮೂಲಕ ಹಾದುಹೋಗುತ್ತದೆ. ಯಾರೇ ಆದರೂ ಇಲ್ಲಿ M ಬಿಂದುವು ಮೂಲದೊಂದಿಗೆ ತಾಳೆಯಾಗುತ್ತದೆ ಎಂದು ಕಲ್ಪಿಸಿಕೊಳ್ಳಬಹುದು, ಅಂದರೆ, $Mq_0 / Oq_0$ಗೆ ಸಮನಾಗಿದೆ. ಬಿಂದು S ನಲ್ಲಿ ಈ ಬೆಲೆ ಪೂರೈಕೆ ರೇಖೆ ಸ್ಥಿತಿ ಸ್ಥಾಪಕತ್ವವು 'S' ಬಿಂದುವಿನಲ್ಲಿ $Mq_0 < Oq_0$ ಅನುಪಾತದಿಂದ ನೀಡಲಾಗಿದೆ, ಇದು 1ಕ್ಕೆ ಸಮನಾಗಿರುತ್ತದೆ. ಸರಳ ರೇಖೆಯ ಯಾವುದೇ ಬಿಂದುವಿನಲ್ಲಿ, ಮೂಲದ ಮೂಲಕ ಹಾದು ಹೋಗುವ ಪೂರೈಕೆ ರೇಖೆಯ ಬೆಲೆ ಸ್ಥಿತಿಸ್ಥಾಪಕತ್ವವು ಒಂದು ಆಗಿರುತ್ತದೆ.




**ರೇಖಾಚಿತ್ರ 4.14 ಸರಳ ರೇಖೆ ಪೂರೈಕೆ ರೇಖೆಯ ಬೆಲೆ ಸ್ಥಿತಿಸ್ಥಾಪಕತ್ವ.** ಫಲಕ(ಎ), ಬೆಲೆ ಸ್ಥಿತಿ ಸ್ಥಾಪಕತ್ವ ($e_s$) Sನಲ್ಲಿ ಒಂದಕ್ಕಿಂತ ಹೆಚ್ಚಾಗಿದೆ. ಫಲಕ (ಬಿ), ಬೆಲೆ ಸ್ಥಿತಿ ಸ್ಥಾಪಕತ್ವ ($e_s$)ವು Sನಲ್ಲಿ ಒಂದಕ್ಕೆ ಸಮನಾಗಿದೆ. ಫಲಕ (ಸಿ), ಬೆಲೆ ಸ್ಥಿತಿ ಸ್ಥಾಪಕತ್ವ ($e_s$) ವು Sನಲ್ಲಿ ಒಂದಕ್ಕಿಂತ ಕಡಿಮೆಯಿದೆ.

- ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಉದ್ಯಮ ಘಟಕಗಳು ಬೆಲೆಯನ್ನು ಪಡೆಯುತ್ತವೆ.
- ಒಂದು ಉದ್ಯಮ ಘಟಕದ ಸರಕಿನ ಮಾರುಕಟ್ಟೆ ಬೆಲೆಯನ್ನು ಆ ಉದ್ಯಮ ಘಟಕದ ಉತ್ಪನ್ನ ಪ್ರಮಾಣದಿಂದ ಗುಣಿಸಿದರೆ ಬರುವುದೇ ಒಟ್ಟು ಆದಾಯ.
- ಬೆಲೆ ಪಡೆಯುವ ಉದ್ಯಮ ಘಟಕಕ್ಕೆ, ಸರಾಸರಿ ಆದಾಯವು ಮಾರುಕಟ್ಟೆ ಬೆಲೆಗೆ ಸಮನಾಗಿರುತ್ತದೆ.
- ಬೆಲೆ ಪಡೆಯುವ ಉದ್ಯಮ ಘಟಕಕ್ಕೆ, ಸೀಮಾಂತ ಆದಾಯವು ಮಾರುಕಟ್ಟೆ ಬೆಲೆಗೆ ಸಮನಾಗಿರುತ್ತದೆ.
- ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಬೇಡಿಕೆ ರೇಖೆಯು ಪರಿಪೂರ್ಣ ಸ್ಥಿತಿಸ್ಥಾಪಕತ್ವವನ್ನು ಎದುರಿಸುತ್ತದೆ; ಇದು ಮಾರುಕಟ್ಟೆ ಬೆಲೆಗೆ ಸಮನಾಂತರ ರೇಖೆಯಾಗಿರುತ್ತದೆ.
- ಒಂದು ಉದ್ಯಮಘಟಕವು ಗಳಿಸಿದ ಒಟ್ಟು ಆದಾಯ ಮತ್ತು ಭರಿಸಿದ ಒಟ್ಟು ವೆಚ್ಚದ ನಡುವಿನ ವ್ಯತ್ಯಾಸವೇ ಲಾಭ.
- ಉದ್ಯಮ ಘಟಕದ ಲಾಭವು ಗರಿಷ್ಟವಾಗಿದ್ದಾಗಿನ ಉತ್ಪನ್ನ ಮಟ್ಟವು ಧನಾತ್ಮಕವಾಗಿದ್ದರೆ ಅಲ್ಪಾವಧಿಯಲ್ಲಿ ಆ ಉತ್ಪನ್ನ ಮಟ್ಟದಲ್ಲಿ ಮೂರು ಶರತ್ತುಗಳು ಈಡೇರಬೇಕಾಗುತ್ತದೆ.

  i. $p$ = SMC (ಬೆಲೆ MR SMC ಗೆ ಸಮನಾಗಿರುತ್ತದೆ ಅಲ್ಪಾವಧಿ ಸೀಮಾಂತ ವೆಚ್ಚಕ್ಕೆ ಸಮನಾಗಿರುತ್ತದೆ)

  ii SMC (ಅಲ್ಪಾವಧಿ ಸೀಮಾಂತ ವೆಚ್ಚ)ವು ಇಳಿಮುಖವಾಗಿರುವುದಿಲ್ಲ

  iii $p >$ AVC (ಬೆಲೆಯು ಅಲ್ಪಾವಧಿ ಬದಲಾಗುವ ವೆಚ್ಚಕ್ಕಿಂತ ಹೆಚ್ಚು ಅಥವಾ ಸಮನಾಗಿರುತ್ತದೆ)

- ಉದ್ಯಮ ಘಟಕದ ಲಾಭವು ಗರಿಷ್ಟವಾಗಿದ್ದಾಗಿನ ಉತ್ಪನ್ನ ಮಟ್ಟವು ಧನಾತ್ಮಕವಾಗಿದ್ದರೆ ಧೀರ್ಘಾವಧಿಯಲ್ಲಿ ಆ ಉತ್ಪನ್ನ ಮಟ್ಟದಲ್ಲಿ ಮೂರು ಶರತ್ತುಗಳು ಈಡೇರಲೇಬೇಕಾಗುತ್ತದೆ.

  1. $p$ = LRMC (ಬೆಲೆ MR ಯು LRMC ಗೆ ಸಮನಾಗಿರುತ್ತದೆ ದೀರ್ಘಾವಧಿ ಸೀಮಾಂತ ವೆಚ್ಚಕ್ಕೆ ಸಮನಾಗಿರುತ್ತದೆ)

  2 LRMC (ದೀರ್ಘಾವಧಿ ಸೀಮಾಂತ ವೆಚ್ಚ) ವು ಇಳಿಮುಖವಾಗಿರುವುದಿಲ್ಲ

  3. $p>$LRAC(ಬೆಲೆಯು ದೀರ್ಘಾವಧಿ ಬದಲಾಗುವ ವೆಚ್ಚಕ್ಕಿಂತ ಹೆಚ್ಚು ಅಥವಾ ಸಮನಾಗಿರುತ್ತದೆ)

- ಒಂದು ಉದ್ಯಮ ಘಟಕದ ಅಲ್ಪಾವಧಿ ಪೂರೈಕೆ ರೇಖೆಯು ಕನಿಷ್ಟ AVC ಯಿಂದ ಮೇಲೆರುವ SMC ರೇಖೆಯ ಭಾಗವಾಗಿದೆ ಮತ್ತು ಇದು ಕನಿಷ್ಠ AVCಗಿಂತ ಕಡಿಮೆ ಇರುವ ಎಲ್ಲಾ ಬೆಲೆಗಳಲ್ಲಿ ಉತ್ಪನವು ಶೂನ್ಯವಾಗಿರುತ್ತದೆ.
- ಉದ್ಯಮಘಟಕದ ದೀರ್ಘಾವದಿ ಪೂರೈಕೆ ರೇಖೆಯು ಕನಿಷ್ಠ LRAC ಯಿಂದ ಮೇಲೇರುವ ಮತ್ತು LRMC ರೇಖೆಯ ಭಾಗವಾಗಿದೆ ಮತ್ತು ಕನಿಷ್ಠ LRAC ಗಿಂತಲೂ ಕಡಿಮೆ ಇರುವ ಎಲ್ಲಾ ಬೆಲೆಗಳಲ್ಲಿ ಉತ್ಪನ್ನವು ಶೂನ್ಯವಾಗಿರುತ್ತದೆ.
- ತಂತ್ರಜ್ಞಾನದ ಪ್ರಗತಿಯ ನಿರೀಕ್ಷೆ ಉದ್ಯಮಘಟಕದ ಪೂರೈಕೆರೇಖೆಯ ರೇಖೆಯನ್ನು ಬಲಕ್ಕೆ ಪಲ್ಲಟಗೊಳಿಸುತ್ತದೆ.
- ಉದ್ಯಮಘಟಕ ಪೂರೈಕೆ ರೇಖೆಯನ್ನು ಬಲಕ್ಕೆ ಪಲ್ಲಟಗೊಳಿಸುವುದನ್ನು ತಂತ್ರಜ್ಞಾನದ ಪ್ರಗತಿಯು ನಿರೀಕ್ಷಿಸುತ್ತದೆ. ಆದಾನಗಳ ಬೆಲೆಯಲ್ಲಿನ ಹೆಚ್ಚಳದ (ಇಳಿಕೆಯು) ನಿರೀಕ್ಷೆಯು ಉದ್ಯಮ ಘಟಕದ ಪೂರೈಕೆ ರೇಖೆಯನ್ನು ಎಡಕ್ಕೆ (ಬಲಕ್ಕೆ) ಪಲ್ಲಟಗೊಳ್ಳುತ್ತದೆ ಎಂದು ನಿರೀಕ್ಷಿಸಲಾಗುತ್ತದೆ.
- ಘಟಕ ತೆರಿಗೆಯನ್ನು ವಿಧಿಸುವುದರಿಂದ ಉದ್ಯಮಘಟಕದ ಪೂರೈಕೆ ರೇಖೆಯು ಎಡಕ್ಕೆ ಪಲ್ಲಟಗೊಳುವುದು.
- ಒಂದು ಮಾರುಕಟ್ಟೆ ಪೂರೈಕೆ ರೇಖೆಯು ಉದ್ಯಮಘಟಕಗಳ ಸಮನಾಂತರ ಪೂರೈಕೆ ರೇಖೆಗಳ ಸಂಕಲನವಾಗಿರುತ್ತದೆ.
- ಒಂದು ಸರಕಿನ ಮಾರುಕಟ್ಟೆ ಬೆಲೆಯಲ್ಲಾದ ಶೇಕಡವಾರು ಬದಲಾವಣೆಯ ಕಾರಣದಿಂದಾಗಿ ಸರಕುಗಳ ಪೂರೈಕೆಯ ಪ್ರಮಾಣದಲ್ಲಿನ ಶೇಕಡವಾರು ಬದಲಾವಣೆಯೇ ಬೆಲೆ ಪೂರೈಕೆ ಸ್ಥಿತಿಸ್ಥಾಪಕತ್ವ.

ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| **ಪರಿಪೂರ್ಣ ಪೈಪೋಟಿ** | **ಆದಾಯ, ಲಾಭ** |
| **ಲಾಭ ಗರಿಷ್ಠಗೊಳಿಸುವಿಕೆ** | **ಉದ್ಯಮ ಘಟಕಗಳ ಪೂರೈಕೆ ರೇಖೆ** |
| **ಮಾರುಕಟ್ಟೆ ಪೂರೈಕೆ ರೇಖೆ** | **ಪೂರೈಕೆ ಬೆಲೆ ಸ್ಥಿತಿಸ್ಥಾಪಕತ್ವ** |

ಅಭ್ಯಾಸಗಳು *Exercises*

1. ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯ ಲಕ್ಷಣಗಳಾವುವು?
2. ಒಂದು ಉದ್ಯಮಘಟಕದ ಒಟ್ಟು ಆದಾಯ, ಮಾರುಕಟ್ಟೆ ಬೆಲೆ ಮತ್ತು ಉದ್ಯಮ ಘಟಕ ಮಾರಾಟ ಮಾಡಿದ ಪ್ರಮಾಣ ಹೇಗೆ ಒಂದಕ್ಕೊಂದು ಸಂಬಂಧಿಸಿವೆ?
3. ಬೆಲೆ ರೇಖೆ ಎಂದರೇನು ?
4. ಬೆಲೆ ಪಡೆಯುವ ಉದ್ಯಮ ಘಟಕದ ಒಟ್ಟು ಆದಾಯ ರೇಖೆಯು ಮೇಲ್ಮುಖ ಇಳಿಜಾರನ್ನು ಹೊಂದಿರುವ ಸರಳ ರೇಖೆಯಾಗಿದೆ ಏಕೆ? ರೇಖೆಯು ಏಕೆ ಮೂಲದಿಂದ ಹಾದು ಹೊಗುತ್ತದೆ?
5. ಮಾರುಕಟ್ಟೆ ಬೆಲೆ ಮತ್ತು ಬೆಲೆ ಪಡೆಯುವ ಉದ್ಯಮ ಘಟಕದ ಸರಾಸರಿ ಆದಾಯಕ್ಕಿರುವ ಸಂಬಂಧವೇನು?
6. ಮಾರುಕಟ್ಟೆ ಬೆಲೆ ಮತ್ತು ಬೆಲೆ ಪಡೆಯುವ ಉದ್ಯಮ ಘಟಕದ ಸೀಮಾಂತ ಆದಾಯಕ್ಕಿರುವ ಸಂಬಂಧವೇನು?
7. ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಗರಿಷ್ಠ ಲಾಭ ಗಳಿಸುವ ಉದ್ಯಮಘಟಕವು ಧನಾತ್ಮಕ ಉತ್ಪನ್ನ ಉತ್ಪಾದಿಸಬೇಕಾದರೆ ಯಾವ ಶರತ್ತುಗಳು ಈಡೇರಬೇಕು?
8. ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಗರಿಷ್ಠ ಲಾಭ ಗಳಿಸುವ ಉದ್ಯಮಘಟಕವು ಧನಾತ್ಮಕ ಉತ್ಪನ್ನವನ್ನು ಉತ್ಪಾದಿಸುತ್ತದೆ ಹಾಗು ಮಾರುಕಟ್ಟೆ ಬೆಲೆಯು ಸೀಮಾಂತ ವೆಚ್ಚಕ್ಕೆ ಸಮನಾಗಿರುವುದಿಲ್ಲ. ವಿವರಣೆ ನೀಡಿ.
9. ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಒಂದು ಉದ್ಯಮಘಟಕವು ಸೀಮಾಂತ ವೆಚ್ಚವು ಇಳಿಯುತ್ತಿರುವ ಶ್ರೇಣಿಯಲ್ಲಿ ಧನಾತ್ಮಕ ಉತ್ಪನ್ನವನ್ನು ಉತ್ಪಾದಿಸುತ್ತದೆಯೇ? ವಿವರಣೆ ನೀಡಿ.
10. ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಲಾಭ ಗರಿಷ್ಠಗೊಳಿಸಿಕೊಳ್ಳುವ ಒಂದು ಉದ್ಯಮಘಟಕವು ಅಲ್ಪಾವಧಿಯಲ್ಲಿ ಮಾರುಕಟ್ಟೆ ಬೆಲೆಯು ಕನಿಷ್ಠ AVC ಗಿಂತ ಕಡಿಮೆ ಇದ್ದಾಗ ಧನಾತ್ಮಕ ಉತ್ಪನ್ನವನ್ನು ಉತ್ಪಾದಿಸುತ್ತದೆಯೇ? ವಿವರಣೆ ನೀಡಿ.
11. ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಲಾಭ ಗರಿಷ್ಠಗೊಳಿಸುವ ಒಂದು ಉದ್ಯಮಘಟಕವು ದೀರ್ಘಾವಧಿಯಲ್ಲಿ ಮಾರುಕಟ್ಟೆ ಬೆಲೆಯು ಕನಿಷ್ಠ ಸರಾಸರಿ ವೆಚ್ಚ (AC) ಕ್ಕಿಂತ ಕಡಿಮೆ ಇದ್ದಾಗ ಧನಾತ್ಮಕ ಮಟ್ಟದ ಉತ್ಪನ್ನವನ್ನು ಉತ್ಪಾದಿಸುತ್ತದೆಯೇ? ವಿವರಣೆ ನೀಡಿ.
12. ಅಲ್ಪಾವದಿಯಲ್ಲಿ ಉದ್ಯಮ ಘಟಕದ ಪೂರೈಕೆ ರೇಖೆ ಎಂದರೇನು?
13. ದೀರ್ಘಾವದಿಯಲ್ಲಿ ಉದ್ಯಮ ಘಟಕದ ಪೂರೈಕೆ ರೇಖೆ ಎಂದರೇನು?
14. ಉದ್ಯಮ ಘಟಕದ ಪೂರೈಕೆ ರೇಖೆಯ ಮೇಲೆ ತಂತ್ರಜ್ಞಾನದ ಪ್ರಗತಿಯು ಹೇಗೆ ಪರಿಣಾಮ ಬೀರುತ್ತದೆ?
15. ಘಟಕ ತೆರಿಗೆ ವಿಧಿಸುವುದರಿಂದ ಉದ್ಯಮ ಘಟಕದ ಪೂರೈಕೆ ಮೇಲೆ ಯಾವ ಪರಿಣಾಮ ಉಂಟಾಗುತ್ತದೆ?

16. ಆದಾನಗಳ ಬೆಲೆಯ ಹೆಚ್ಚಳವು ಉದ್ಯಮ ಘಟಕದ ಪೂರೈಕೆ ರೇಖೆಯ ಮೇಲೆ ಹೇಗೆ ಪರಿಣಾಮಬೀರುತ್ತದೆ?

17. ಉದ್ಯಮ ಘಟಕಗಳ ಸಂಖ್ಯಾ ಪ್ರಮಾಣದ ಹೆಚ್ಚಳವು ಹೇಗೆ ಮಾರುಕಟ್ಟೆ ಪೂರೈಕೆ ರೇಖೆಯ ಮೇಲೆ ಪರಿಣಾಮಬೀರುತ್ತದೆ?

18. ಬೆಲೆ ಪೂರೈಕೆ ಸ್ಥಿತಿಸ್ಥಾಪಕತೆಯ ಅರ್ಥವೇನು? ಅದನ್ನು ನಾವು ಹೇಗೆ ಮಾಪನ ಮಾಡುತ್ತೇವೆ?

19. ಕೆಳಗೆ ನೀಡಿರುವ ಕೋಷ್ಟಕದಲ್ಲಿ ಸರಕಿನ ಪ್ರತಿ ಘಟಕದ ಮಾರುಕಟ್ಟೆ ಬೆಲೆ ರೂ 10 ಇದ್ದು, ಒಟ್ಟು ಆದಾಯ, ಸೀಮಾಂತ ಮತ್ತು ಸರಾಸರಿ ಆದಯದ ಪಟ್ಟಿಯನ್ನು ಲೆಕ್ಕಾಚಾರ ಮಾಡಿ

| ಮಾರಾಟದ ಪ್ರಮಾಣ | TR | MR | AR |
|---|---|---|---|
| 0 | | | |
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |

20. ಕೆಳಗೆ ನೀಡಿರುವ ಕೋಷ್ಟಕದಲ್ಲಿ ಪೈಪೋಟಿಯುತ ಉದ್ಯಮ ಘಟಕದ ಒಟ್ಟು ಆದಾಯ ಮತ್ತು ಒಟ್ಟು ವೆಚ್ಚದ ಪಟ್ಟಿ ತೋರಿಸಲಾಗಿದೆ ಉತ್ಪಾದನೆಯ ಪ್ರತಿ ಹಂತದ ಲಾಭವನ್ನು ಲೆಕ್ಕಾಚಾರ ಮಾಡಿ ಸರಕಿನ ಮಾರುಕಟ್ಟೆ ಬೆಲೆಯನ್ನು ಸಹ ನಿರ್ಧರಿಸಿ.

| ಮಾರಾಟದ ಪ್ರಮಾಣ | TR (Rs) | TC (Rs) | Profit (Rs) |
|---|---|---|---|
| 0 | 0 | 5 | |
| 1 | 5 | 7 | |
| 2 | 10 | 10 | |
| 3 | 15 | 12 | |
| 4 | 20 | 15 | |
| 5 | 25 | 23 | |
| 6 | 30 | 33 | |
| 7 | 35 | 40 | |

21. ಕೆಳಗೆ ನೀಡಿರುವ ಕೋಷ್ಟಕದಲ್ಲಿ ಪೈಪೋಟಿಯುತ ಉದ್ಯಮ ಘಟಕದ ಒಟ್ಟು ವೆಚ್ಚವನ್ನು ತೋರಿಸಲಾಗಿದೆ. ಸರಕಿನ ಬೆಲೆ ರೂ 10 ಎಂದು ನೀಡಿದೆ ಪ್ರತಿ ಉತ್ಪನ್ನ ಮಟ್ಟದ ಲಾಭವನ್ನು ಲೆಕ್ಕಾಚಾರ ಮಾಡಿ ಗರಿಷ್ಠ ಲಾಭ ಗಳಿಸುವ ಉತ್ಪನ್ನ ಮಟ್ಟವನ್ನು ಕಂಡುಹಿಡಿಯಿರಿ.

| ಮಾರಾಟದ ಉತ್ಪನ್ನ | TR(Rs) |
|---|---|
| 0 | 0 |
| 1 | 15 |
| 2 | 22 |
| 3 | 27 |
| 4 | 38 |
| 5 | 49 |
| 6 | 63 |
| 7 | 81 |
| 8 | 81 |
| 9 | 101 |
| 10 | 123 |

22. ಎರಡು ಉದ್ಯಮ ಘಟಕಗಳಿರುವ ಮಾರುಕಟ್ಟೆಯೊಂದನ್ನು ಪರಿಗಣಿಸಿ, ಕೋಷ್ಠಕದಲ್ಲಿ ಎರಡು ಉದ್ಯಮ ಘಟಕಗಳ ಪೂರೈಕೆ ಅನುಸೂಚಿಯನ್ನು ತೊರಿಸಲಾಗಿದೆ $SS_1$ ಕಂಬಸಾಲು ಒಂದನೇ ಉದ್ಯಮ ಘಟಕದ ಪೂರೈಕೆ ಅನುಸೂಚಿಯನ್ನು ಮತ್ತು $SS_2$ ಕಂಬ ಸಾಲು ಎರಡನೇ ಉದ್ಯಮ ಘಟಕದ ಪೂರೈಕೆ ಅನುಸೂಚಿಯನ್ನು ನೀಡುತ್ತದೆ. ಮಾರುಕಟ್ಟೆ ಪೂರೈಕೆ ಅನುಸೂಚಿಯನ್ನು ಲೆಕ್ಕಾಚಾರ ಮಾಡಿ

| ಬೆಲೆ (Rs) | $SS_1$ (units) | $SS_2$ (units) |
|---|---|---|
| 0 | 0 | 0 |
| 1 | 0 | 0 |
| 2 | 0 | 0 |
| 3 | 1 | 1 |
| 4 | 2 | 2 |
| 5 | 3 | 3 |
| 6 | 4 | 4 |

23. ಒಂದು ಮಾರುಕಟ್ಟೆಯಲ್ಲಿ ಎರಡು ಉದ್ಯಮ ಘಟಕಗಳಿವೆ ಎಂದು ಪರಿಗಣಿ $SS_1$ ಮತ್ತು $SS_2$ ಕಂಬಸಾಲುಗಳು ಕ್ರಮವಾಗಿ ಉದ್ಯಮ ಘಟಕ 1 ಮತ್ತು ಉದ್ಯಮ ಘಟಕ 2 ರ ಪೂರೈಕೆ ಅನುಸೂಚಿಯನ್ನು ನೀಡುತ್ತವೆ. ಮಾರಕಟ್ಟೆ ಪೂರೈಕೆ ಅನುಸೂಚಿಯನ್ನು ಲೆಕ್ಕಾಚಾರ ಮಾಡಿ.

| **ಬೆಲೆ (Rs)** | **$SS_1$ (kg)** | **$SS_2$ (kg)** |
|---|---|---|
| 0 | 0 | 0 |
| 1 | 0 | 0 |
| 2 | 0 | 0 |
| 3 | 1 | 0 |
| 4 | 2 | 0.5 |
| 5 | 3 | 1 |
| 6 | 4 | 1.5 |
| 7 | 5 | 2 |
| 8 | 6 | 2.5 |

24. ಮಾರುಕಟ್ಟೆಯಲ್ಲಿ ಏಕರೂಪದ ಮೂರು ಉದ್ಯಮ ಘಟಕಗಳಿವೆ ನೀಡಿರುವ ಕೋಷ್ಠಕವು ಒಂದನೇ ಉದ್ಯಮ ಘಟಕದ ಪೂರೈಕೆ ಅನುಸೂಚಿಯನ್ನು ತೋರಿಸುತ್ತದೆ. ಮಾರುಕಟ್ಟೆ ಪೂರೈಕೆ ಅನುಸೂಚಿಯನ್ನು ಲೆಕ್ಕಾಚಾರ ಮಾಡಿ

| **ಬೆಲೆ(Rs)** | **$SS_1$(units)** |
|---|---|
| 0 | 0 |
| 1 | 0 |
| 2 | 2 |
| 3 | 4 |
| 4 | 6 |
| 5 | 8 |
| 6 | 10 |
| 7 | 12 |
| 8 | 14 |



25. ಒಂದು ಸರಕಿನ ಮಾರುಕಟ್ಟೆ ಬೆಲೆಯು ರೂ 10 ಇದ್ದಾಗ ಒಂದು ಉದ್ಯಮಘಟಕವು 50 ರೂಪಾಯಿ ಆದಾಯ ಗಳಿಸುತ್ತದೆ. ಮಾರುಕಟ್ಟೆ ಬೆಲೆ 15 ರೂಪಾಯಿಗೆ ಹೆಚ್ಚಾದಾಗ ಉದ್ಯಮಘಟಕವು 150 ರೂಪಾಯಿ ಆದಾಯ ಗಳಿಸುತ್ತದೆ ಆಗ ಉದ್ಯಮ ಘಟಕದ ಪೂರೈಕೆ ರೇಖೆಯ ಬೆಲೆ ಸ್ಥಿತಿಸ್ಥಾಪಕತ್ವವೇನು?

26. ಒಂದು ಸರಕಿನ ಮಾರುಕಟ್ಟೆ ಬೆಲೆಯು ರೂ 5 ರಿಂದ 20 ಕ್ಕೆ ಹೆಚ್ಚಾಗುತ್ತದೆ ಇದರ ಪರಿಣಾಮವಾಗಿ ಉದ್ಯಮ ಘಟಕದ ಪೂರೈಕೆ ಪ್ರಮಾಣ 15 ಘಟಕಗಳಷ್ಟು ಹೆಚ್ಚಾಗುತ್ತದೆ. ಉದ್ಯಮ ಘಟಕದ ಪೂರೈಕೆ ರೇಖೆಯ ಬೆಲೆ ಸ್ಥಿತಿಸ್ಥಾಪಕತೆ 0.5 ಆದರೆ ಉದ್ಯಮ ಘಟಕ ಪ್ರಾರಂಭಿಕ ಮತ್ತು ಅಂತಿಮ ಉತ್ಪನ್ನ ಹಂತಗಳನ್ನು ಕಂಡು ಹಿಡಿಯಿರಿ.

27. ಮಾರುಕಟ್ಟೆ ದರ ರೂ 10 ರಲ್ಲಿ ಒಂದು ಉದ್ಯಮಘಟಕವು 4 ಘಟಕಗಳಷ್ಟು ಉತ್ಪನ್ನವನ್ನು ಪೂರೈಕೆ ಮಾಡುತ್ತದೆ. ಮಾರುಕಟ್ಟೆ ಬೆಲೆ 30 ರೂಪಾಯಿಗಳಿಗೆ ಹೆಚ್ಚಾಗಿದೆ. ಉದ್ಯಮ ಘಟಕದ ಪೂರೈಕೆ ಬೆಲೆ ಸ್ಥಿತಿಸ್ಥಾಪಕತೆ 1.25 ಆಗಿದೆ. ಹೊಸ ಬೆಲೆಯಲ್ಲಿ ಉದ್ಯಮ ಘಟಕ ಎಷ್ಟು ಪ್ರಮಾಣವನ್ನು ಪೂರೈಕೆ ಮಾಡುತ್ತದೆ?

❖ ❖ ❖ ❖

# ಅಧ್ಯಾಯ 5




# ಮಾರುಕಟ್ಟೆ ಸಮತೋಲನ

## *Market Equilibrium*

ಈ ಅಧ್ಯಾಯವನ್ನು ಈ ಹಿಂದೆ ಅಭ್ಯಸಿಸಿದ ಅಧ್ಯಾಯ2 ಮತ್ತು ಅಧ್ಯಾಯ4ರ ತಳಹದಿಯ ಮೇಲೆ ರಚಿಸಲಾಗಿದೆ. ಆ ಎರಡು ಅಧ್ಯಾಯಗಳಲ್ಲಿ ಅನುಭೋಗಿಗಳು ಮತ್ತು ಉದ್ಯಮಘಟಕಗಳು ಬೆಲೆ ಪಡೆಯುವವರಾಗಿದ್ದಾಗ ಅವುಗಳ ವರ್ತನೆಯ ಬಗ್ಗೆ ನಾವು ಅಭ್ಯಸಿಸಿದ್ದೇವೆ. ಒಬ್ಬ ಅನುಭೋಗಿಯು **ಬೆಲೆಯನ್ನು ನೀಡಲಾಗಿದೆ** ಎಂದು ಪರಿಗಣಿಸಿದಾಗ, ವಿವಿಧ ಬೆಲೆಗೆ ಆತನು ಕೊಳ್ಳಲು ಬಯಸಿದ ಸರಕಿನ ಪ್ರಮಾಣವನ್ನು ವೈಯಕ್ತಿಕ ಬೇಡಿಕೆ ರೇಖೆಯು ತಿಳಿಸುತ್ತದೆ ಎಂಬುದನ್ನು ಎರಡನೇ ಅಧ್ಯಾಯದಲ್ಲಿ ನಾವು ಗಮನಿಸಿದ್ದೇವೆ. ಅದೇರೀತಿ, ಮಾರುಕಟ್ಟೆ ಬೇಡಿಕೆ ರೇಖೆಯು ಮಾರುಕಟ್ಟೆಯಲ್ಲಿನ ಎಲ್ಲಾ ಅನುಭೋಗಿಗಳು **ಬೆಲೆಯನ್ನು ನೀಡಲಾಗಿದೆ** ಎಂದು ಪರಿಗಣಿಸಿದಾಗ, ವಿವಿಧ ಬೆಲೆಗಳಲ್ಲಿ ಅವರೇಲ್ಲರೂ ಒಟ್ಟಾರೆ ಕೊಳ್ಳಲು ಬಯಸಿದ ಒಟ್ಟು ಸರಕುಗಳ ಪ್ರಮಾಣವನ್ನು ಮಾರುಕಟ್ಟೆ ಬೇಡಿಕೆಯು ತಿಳಿಸುತ್ತದೆ. ನಾಲ್ಕನೇ ಅಧ್ಯಾಯದಲ್ಲಿ, ಗರಿಷ್ಠ ಲಾಭಗಳಿಸುವ ಉದ್ದೇಶ ಹೊಂದಿರುವ ಉದ್ಯಮಘಟಕವೊಂದು, **ಬೆಲೆಯನ್ನು ನೀಡಲಾಗಿದೆ** ಎಂದು ಪರಿಗಣಿಸಿದಾಗ, ವಿವಿಧ ಬೆಲೆಗಳಲ್ಲಿ ಮಾರಾಟ ಮಾಡಲು ಬಯಸುವ ಸರಕುಗಳ ಪ್ರಮಾಣವನ್ನು ವೈಯಕ್ತಿಕ ಪೂರೈಕೆ ರೇಖೆಯು ವ್ಯಕ್ತಪಡಿಸುತ್ತದೆ. ಹಾಗೂ **ಬೆಲೆ ನೀಡಲಾಗಿದ್ದಾಗ** ವಿಧಧ ಬೆಲೆಗಳಲ್ಲಿ ಎಲ್ಲ ಉದ್ಯಮಘಟಕಗಳು ಒಟ್ಟಾಗಿ ಸೇರಿ ಅವುಗಳು ಮಾರಾಟ ಮಾಡಲು ಬಯಸಿದ ಸರಕುಗಳ ಪ್ರಮಾಣವನ್ನು ಮಾರುಕಟ್ಟೆ ಪೂರೈಕೆ ರೇಖೆಯು ವ್ಯಕ್ತಪಡಿಸುತ್ತದೆ ಎಂಬುದನ್ನು ತಿಳಿದಿದ್ದೇವೆ.

ಈ ಅಧ್ಯಾಯದಲ್ಲಿ ಬೇಡಿಕೆ–ಪೂರೈಕೆ ವಿಶ್ಲೇಷಣೆಯ ಮೂಲಕ ಮಾರುಕಟ್ಟೆ ಸಮತೋಲನವನ್ನು ಅಧ್ಯಯನ ಮಾಡಲು ನಾವು ಅನುಭೋಗಿಗಳ ಮತ್ತು ಉದ್ಯಮಘಟಕಗಳ ವರ್ತನೆಗಳನ್ನು ಸಂಯೋಜಿಸುತ್ತೇವೆ. ಆ ಮೂಲಕ ಯಾವ ಬೆಲೆಯಲ್ಲಿ ಸಮತೋಲನವು ಸಾಧಿತವಾಗುತ್ತದೆ. ಎಂಬುದನ್ನು ನಿರ್ಧರಿಸುತ್ತೇವೆ. ಅಲ್ಲದೇ ಈ ಸಮತೋಲನದ ಮೇಲೆ ಬೇಡಿಕೆ ಮತ್ತು ಪೂರೈಕೆ ಪಲ್ಲಟಗಳ ಪರಿಣಾಮಗಳನ್ನು ಕೂಡ ಪರಿಶೀಲಿಸುತ್ತೇವೆ. ಅಧ್ಯಾಯದ ಕೊನೆಯಲ್ಲಿ ಬೇಡಿಕೆ–ಪೂರೈಕೆ ವಿಶ್ಲೇಷಣೆಯ ಕೆಲವು ಅನ್ವಯಿಕಗಳ ಕುರಿತಾಗಿಯೂ ಗಮನಹರಿಸೋಣ.

### 5.1 ಸಮತೋಲನ, ಅಧಿಕ ಬೇಡಿಕೆ, ಅಧಿಕ ಪೂರೈಕೆ
*Equilibrium, Excess Demand, Excess Supply*

ಒಂದು ಪರಿಪೂರ್ಣ ಸ್ಪರ್ಧಾತ್ಮಕ ಮಾರುಕಟ್ಟೆಯು ತಮ್ಮ ಸ್ವ–ಹಿತಾಸಕ್ತಿ ಉದ್ದೇಶಗಳೊಂದಿಗೆ ಪ್ರೇರಣೆಗೊಂಡಿರುವಂತಹ ಕೊಳ್ಳುವವರನ್ನು ಮತ್ತು ಮಾರುವವರನ್ನು ಒಳಗೊಂಡಿರುತ್ತದೆ. ಅನುಭೋಗಿಗಳು ತಮ್ಮ ತಮ್ಮ ಆದ್ಯತೆಗಳನ್ನು ಗರಿಷ್ಠಗೊಳಿಸಿಕೊಳ್ಳುವ ಉದ್ದೇಶ ಹೊಂದಿದ್ದರೆ, ಉದ್ಯಮಘಟಕಗಳು ತಮ್ಮ ಲಾಭಗಳನ್ನು ಗರಿಷ್ಠಗೊಳಿಸಿಕೊಳ್ಳುವ ಉದ್ದೇಶ ಹೊಂದಿರುತ್ತವೆ ಎಂಬುದನ್ನು ಅಧ್ಯಾಯ 2 ಮತ್ತು ಅಧ್ಯಾಯ 4ರಿಂದ ನೆನಪಿಸಿಕೊಳ್ಳೋಣ. ಅನುಭೋಗಿಗಳು ಹಾಗೂ ಉದ್ಯಮಘಟಕಗಳೆರಡರ ಧ್ಯೇಯಗಳು ಸಮತೋಲನದಲ್ಲಿ ಯೋಗ್ಯವಾಗಿ ಹೊಂದಾಣಿಕೆಯಾಗುತ್ತವೆ.

ಮಾರುಕಟ್ಟೆಯಲ್ಲಿನ ಎಲ್ಲಾ ಅನುಭೋಗಿಗಳು ಮತ್ತು ಎಲ್ಲಾ ಉದ್ಯಮಘಟಕಗಳ ಯೋಜನೆಗಳು ಹೊಂದಾಣಿಕೆಯಾಗುವ ಒಂದು ಸನ್ನಿವೇಶವನ್ನೇ ಸಮತೋಲನವೆಂದು ವ್ಯಾಖ್ಯಾನಿಸಲಾಗಿದೆ. ಆಗ ಮಾರುಕಟ್ಟೆಯು ತೆರವುಗೊಳ್ಳುತ್ತದೆ (ಅಂದರೆ ಪೂರೈಕೆಯ ಅಥವಾ ಬೇಡಿಕೆಯ ಹೆಚ್ಚಳವಿರುವುದಿಲ್ಲ). ಸಮತೋಲನದಲ್ಲಿ ಎಲ್ಲಾ ಉದ್ಯಮಘಟಕಗಳು ಮಾರಾಟ ಮಾಡಲು ಬಯಸುವ ಸಮಗ್ರ ಉತ್ಪನ್ನವು ಎಲ್ಲಾ ಅನುಭೋಗಿಗಳು ಮಾರುಕಟ್ಟೆಯಲ್ಲಿ

ಕೊಳ್ಳಲು ಬಯಸುವ ಸರಕುಗಳ ಪ್ರಮಾಣಕ್ಕೆ ಸಮನಾಗಿರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮಾರುಕಟ್ಟೆ ಪೂರೈಕೆಯು ಮಾರುಕಟ್ಟೆ ಬೇಡಿಕೆಗೆ ಸಮನಾಗಿರುತ್ತದೆ. ಯಾವ ಬೆಲೆಯಲ್ಲಿ ಸಮತೋಲನವನ್ನು ತಲುಪಲಾಗುತ್ತದೆಯೋ ಆ ಬೆಲೆಗೆ **ಸಮತೋಲನ ಬೆಲೆ** ಎಂದು ಕರೆಯಲಾಗುತ್ತದೆ. ಹಾಗೂ ಈ ಬೆಲೆಯಲ್ಲಿ ಖರೀದಿಸಿದ ಮತ್ತು ಮಾರಾಟ ಮಾಡಲಾದ ಪ್ರಮಾಣವನ್ನು **ಸಮತೋಲನ ಪ್ರಮಾಣ** ಎಂದು ಕರೆಯಲಾಗುತ್ತದೆ. ಆದ್ದರಿಂದ, $q^D(p^*) = q^S(p^*)$ ಆದಾಗ, $(p^*, q^*)$ ಸಮತೋಲನವಾಗಿರುತ್ತದೆ.

ಇಲ್ಲಿ $p^*$ ಎಂಬುದು ಸಮತೋಲನ ಬೆಲೆಯನ್ನು, ಹಾಗೂ $q^D(p^*)$ ಮತ್ತು $q^S(p^*)$ಗಳು ಅನುಕ್ರಮವಾಗಿ ಸರಕಿನ ಮಾರುಕಟ್ಟೆ ಬೇಡಿಕೆ ಮತ್ತು ಮಾರುಕಟ್ಟೆ ಪೂರೈಕೆಯನ್ನು $p^*$ ಬೆಲೆಯಲ್ಲಿ ಪ್ರತಿನಿಧಿಸುತ್ತವೆ.

ಯಾವ ಒಂದು ಬೆಲೆಯಲ್ಲಿ ಮಾರುಕಟ್ಟೆ ಪೂರೈಕೆಯು ಮಾರುಕಟ್ಟೆ ಬೇಡಿಕೆಗಿಂತ ಅಧಿಕವಾಗಿರುತ್ತದೆಯೋ ಆ ಬೆಲೆಯಲ್ಲಿ ಮಾರುಕಟ್ಟೆಯಲ್ಲಿ **ಅಧಿಕ ಪೂರೈಕೆ** ಇದೆ ಎನ್ನುತ್ತೇವೆ. ಮತ್ತು ಯಾವ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯು ಮಾರುಕಟ್ಟೆ ಪೂರೈಕೆಯನ್ನು ಮೀರುತ್ತದೆಯೋ ಆ ಬೆಲೆಯಲ್ಲಿ ಮಾರುಕಟ್ಟೆಯಲ್ಲಿ **ಅಧಿಕಬೇಡಿಕೆ** ಇದೆ ಎನ್ನುತ್ತೇವೆ. ಆದ್ದರಿಂದ, ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯ ಸಮತೋಲನವನ್ನು ಇನ್ನೊಂದು ಅರ್ಥದಲ್ಲಿ, ಶೂನ್ಯ **ಅಧಿಕ ಬೇಡಿಕೆ** – ಶೂನ್ಯ **ಅಧಿಕ ಪೂರೈಕೆ**ಯ ಸನ್ನಿವೇಶವೆಂದೂ ಸಹ ವ್ಯಾಖ್ಯಾನಿಸಬಹುದು. ಮಾರುಕಟ್ಟೆ ಪೂರೈಕೆಯು ಮಾರುಕಟ್ಟೆ ಬೇಡಿಕೆಗೆ ಸಮನಾಗಿಲ್ಲದಿದ್ದಾಗ, ಮತ್ತು ಆ ಪರಿಣಾಮವಾಗಿ ಮಾರುಕಟ್ಟೆಯು ಸಮತೋಲನದಲ್ಲಿಲ್ಲದಿದ್ದಾಗ, ಅಲ್ಲಿ ಬೆಲೆಯು ಬದಲಾಗುವ ಪ್ರವೃತ್ತಿ ಹೊಂದಿರುತ್ತದೆ. ಯಾವುದು ಈ ಬದಲಾವಣೆಯನ್ನು ತರುತ್ತದೆ ಎಂಬುದನ್ನು ಮುಂದಿನ ಎರಡು ಭಾಗಗಳಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ.



**ಸಮತೋಲನದ ಆಚೆಗಿನ ವರ್ತನೆ (ಅಸಮತೋಲನದ ನಡವಳಿಕೆ)** ***Out–of-equilibrium Behaviour***

ಆಡಂಸ್ಮಿತ್‌ರವರ ಕಾಲ(1723–1790)ದಿಂದಲೂ, ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ 'ಕಾಣದ ಕೈ' ಕಾರ್ಯಾಚರಣೆಯಲ್ಲಿದ್ದು, ಮಾರುಕಟ್ಟೆಯಲ್ಲಿ ಅಸಮತೋಲನ ಕಂಡು ಬಂದಾಗಲೆಲ್ಲಾ ಈ ಕಾಣದ ಕೈ ನ ಕಾರ್ಯಾಚರಣೆಯು ಬೆಲೆಯಲ್ಲಿ ಬದಲಾವಣೆ ತರುತ್ತದೆ ಎಂಬ ನಂಬಿಕೆಯನ್ನು ಉಳಿಸಿಕೊಂಡು ಬರಲಾಗಿದೆ. ಈ ಕಾಣದ ಕೈ 'ಅಧಿಕ ಬೇಡಿಕೆ' ಸನ್ನಿವೇಶಗಳಲ್ಲಿ ಬೆಲೆಗಳನ್ನು ಹೆಚ್ಚಿಸಬೇಕು ಮತ್ತು 'ಅಧಿಕ ಪೂರೈಕೆ' ಸನ್ನಿವೇಶಗಳಲ್ಲಿ ಬೆಲೆಗಳನ್ನು ಕಡಿಮೆಗೊಳಿಸಬೇಕು ಎಂದು ನಮ್ಮ ಒಳಅರಿವು ಸಹ ನಮಗೆ ಹೇಳುತ್ತದೆ. ನಾವು ನಮ್ಮ ವಿಶ್ಲೇಷಣೆಯುದ್ದಕ್ಕೂ ಕಾಣದ ಕೈ ಈ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆಂದು ಸಮರ್ಥಿಸಿಕೊಂಡು ಹೋಗೋಣ. ಇದಕ್ಕಿಂತ ಹೆಚ್ಚಾಗಿ ಈ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ 'ಕಾಣದ ಕೈ'ಯು ಸಮತೋಲನವನ್ನು ತಲುಪಲು ಸಮರ್ಥವಾಗಿರುತ್ತದೆ ಎಂದು ನಾವು ತಿಳಿದುಕೊಳ್ಳೋಣ. ನಾವು ಪಠ್ಯದಲ್ಲಿ ಚರ್ಚಿಸುವ ಎಲ್ಲವನ್ನೂ ಈ ಕಲ್ಪನೆಯ ಮೂಲಕ ಕೊಂಡೊಯ್ಯಲಾಗುತ್ತದೆ.

### ೫.1.1 ಮಾರುಕಟ್ಟೆ ಸಮತೋಲನ: ಸ್ಥಿರ ಸಂಖ್ಯೆಯ ಉದ್ಯಮಘಟಕಗಳು *Market Equilibrium: Fixed Number of Firms*

ಅಧ್ಯಾಯ2 ರಲ್ಲಿ ನಾವು ಬೆಲೆ ಪಡೆಯುವ ಅನುಭೋಗಿಗಳಿಗೆ ಮಾರುಕಟ್ಟೆ ಬೇಡಿಕೆ ರೇಖೆಯನ್ನು ಮತ್ತು ಅಧ್ಯಾಯ 4ರಲ್ಲಿ ಸ್ಥಿರಸಂಖ್ಯೆಯ ಉದ್ಯಮಘಟಕಗಳ ಊಹೆಯ ಅಡಿಯಲ್ಲಿ ಬೆಲೆ ಪಡೆಯುವ ಉದ್ಯಮಘಟಕಗಳಿಗಾಗಿ ಮಾರುಕಟ್ಟೆ ಪೂರೈಕೆ ರೇಖೆಯನ್ನು ಹೊಂದಿದ್ದೇವೆ ಎಂಬುದನ್ನು ನೆನಪಿಸಿಕೊಳ್ಳೋಣ. ಈ ಎರಡೂ ರೇಖೆಗಳ ನೆರವಿನೊಂದಿಗೆ ಉದ್ಯಮಘಟಕಗಳ ಸಂಖ್ಯೆ ಸ್ಥಿರವಾಗಿದ್ದಾಗ ಮಾರುಕಟ್ಟೆಯು ಎಲ್ಲಿ ಸಮತೋಲನ ಹೊಂದುತ್ತದೆ ಎಂಬುದನ್ನು ನಿರ್ಧರಿಸಲು ಪೂರೈಕೆ ಹಾಗೂ ಬೇಡಿಕೆ ಶಕ್ತಿಗಳು ಹೇಗೆ ಒಟ್ಟಿಗೆ ಕೆಲಸ ಮಾಡುತ್ತವೆ ಎಂಬುದನ್ನು ನಾವು ಈ ವಿಭಾಗದಲ್ಲಿ ನೋಡೋಣ. ಬೇಡಿಕೆ ಮತ್ತು ಪೂರೈಕೆ ರೇಖೆಗಳ ಪಲ್ಲಟಗಳು ಸಮತೋಲನ ಬೆಲೆ ಹಾಗೂ ಸಮತೋಲನ ಪ್ರಮಾಣಗಳಲ್ಲಿ ಹೇಗೆ ಬದಲಾವಣೆ ತರುತ್ತವೆ ಎಂಬುದನ್ನು ಕೂಡ ನಾವು ಅಭ್ಯಸಿಸೋಣ.

ರೇಖಾಚಿತ್ರ 5.1ರಲ್ಲಿ ಉದ್ಯಮಘಟಕಗಳ ಸಂಖ್ಯೆ ಸ್ಥಿರವಿದ್ದಾಗ, ಪರಿಪೂರ್ಣ ಪೈಪೋಟಿಯು ಮಾರುಕಟ್ಟೆಯ ಸಮತೋಲನವನ್ನು ನಿರೂಪಿಸುತ್ತದೆ. ಇಲ್ಲಿ SS ರೇಖೆಯು ಒಂದು ಸರಕಿನ ಮಾರುಕಟ್ಟೆ

ಪೂರೈಕೆ ರೇಖೆಯಾಗಿದ್ದು, DDರೇಖೆಯು ಮಾರುಕಟ್ಟೆ ಬೇಡಿಕೆ ರೇಖೆಯಾಗಿದೆ. ಮಾರುಕಟ್ಟೆ ಪೂರೈಕೆ ರೇಖೆಯಾದ SS ರೇಖೆಯು ವಿವಿಧ ಬೆಲೆಗಳಲ್ಲಿ ಉದ್ಯಮಘಟಕಗಳು ಪೂರೈಸಲು ಬಯಸುವ ಒಂದು ಸರಕಿನ ಪ್ರಮಾಣವನ್ನು ಸೂಚಿಸುತ್ತದೆ ಮತ್ತು ಮಾರುಕಟ್ಟೆ ಬೇಡಿಕೆ ರೇಖೆಯಾದ DD ರೇಖೆಯು ವಿವಿಧಬೆಲೆಗಳಲ್ಲಿ ಗ್ರಾಹಕರು ಕೊಂಡು ಕೊಳ್ಳಲು ತಯಾರಿರುವ ಸರಕಿನ ಪ್ರಮಾಣವನ್ನು ತಿಳಿಸುತ್ತದೆ. ರೇಖಾತ್ಮಕವಾಗಿ, ಸಮತೋಲನವೆಂದರೆ, ಮಾರುಕಟ್ಟೆ ಪೂರೈಕೆ ರೇಖೆಯು ಮಾರುಕಟ್ಟೆ ಬೇಡಿಕೆ ರೇಖೆಯನ್ನು ಛೇದಿಸುವ ಒಂದು ಬಿಂದುವಾಗಿದೆ. ಏಕೆಂದರೆ ಇಲ್ಲಿ ಮಾರುಕಟ್ಟೆ ಬೇಡಿಕೆಯು ಮಾರುಕಟ್ಟೆ ಪೂರೈಕೆಗೆ ಸಮನಾಗಿರುತ್ತದೆ. ಈ ಬಿಂದುವನ್ನು ಹೊರತುಪಡಿಸಿದ ಇತರೆ ಯಾವುದೇ ಬಿಂದುವು ಅಧಿಕಪೂರೈಕೆ ಇಲ್ಲವೇ ಅಧಿಕಬೇಡಿಕೆಯನ್ನು ವ್ಯಕ್ತಪಡಿಸುತ್ತದೆ. ಮಾರುಕಟ್ಟೆ ಬೇಡಿಕೆಯು ಮಾರುಕಟ್ಟೆ ಪೂರೈಕೆಗೆ ಸಮನಾಗಿಲ್ಲದಿದ್ದಾಗ ಏನಾಗುತ್ತದೆಂಬುದನ್ನು ತಿಳಿದುಕೊಳ್ಳಲು ರೇಖಾಚಿತ್ರ 5.1ರಲ್ಲಿ ಸಮಾನತೆ ಹೊಂದಿರದ ಯಾವುದೇ ಬೆಲೆಯನ್ನು ಗಮನಿಸೋಣ.




**ರೇಖಾಚಿತ್ರ 5.1: ಸ್ಥಿರಸಂಖ್ಯೆಯ ಉದ್ಯಮಘಟಕಗಳೊಂದಿಗೆ ಮಾರುಕಟ್ಟೆ ಸಮತೋಲನ.** ಮಾರುಕಟ್ಟೆ ಬೇಡಿಕೆರೇಖೆಯಾದ DDರೇಖೆಯು ಮಾರುಕಟ್ಟೆ ಪೂರೈಕೆ ರೇಖೆಯಾದ SSರೇಖೆಯನ್ನು ಛೇದಿಸಿದಾಗ ಸಮತೋಲನ ಸಂಭವಿಸುತ್ತದೆ. $q^*$ ಇದು ಸಮತೋಲನ ಪ್ರಮಾಣವಾಗಿದೆ ಮತ್ತು $p^*$ಸಮತೋಲನ ಬೆಲೆಯಾಗಿದೆ. $p^*$ ಗಿಂತ ಹೆಚ್ಚಿನ ಬೆಲೆಯು ಅಧಿಕ ಪೂರೈಕೆಗೂ, ಮತ್ತು $p^*$ ಗಿಂತ ಕಡಿಮೆ ಬೆಲೆಯು ಅಧಿಕ ಬೇಡಿಕೆಗೂ ಕಾರಣವಾಗುತ್ತದೆ.

ರೇಖಾಚಿತ್ರ 5.1ರಲ್ಲಿ ಜಾರಿಯಲ್ಲಿರುವ ಬೆಲೆ $p_1$ ಆದಾಗ, ಮಾರುಕಟ್ಟೆ ಬೇಡಿಕೆಯು $q_1$ ಹಾಗೂ ಮಾರುಕಟ್ಟೆ ಪೂರೈಕೆಯು $q'_1$ ಆಗಿದೆ. ಆದ್ದರಿಂದ, ಮಾರುಕಟ್ಟೆಯಲ್ಲಿ $q'_1$ $q_1$ಗೆ ಸಮನಾದ ಅಧಿಕ ಬೇಡಿಕೆ ಇರುತ್ತದೆ. ಎಲ್ಲ ಸರಕುಗಳನ್ನು ಅಥವಾ ತಮಗೆ ಅವಶ್ಯವಿರುವ ಪ್ರಮಾಣದ ಸರಕುಗಳನ್ನು ಪಡೆಯಲು ಸಾಧ್ಯವೇ ಇಲ್ಲದ ಕೆಲವು ಗ್ರಾಹಕರು $p_1$ ಗಿಂತ ಅಧಿಕ ಬೆಲೆ ಪಾವತಿಸಲು ಸಿದ್ಧರಿರುತ್ತಾರೆ. ಹಾಗಾಗಿ ಮಾರುಕಟ್ಟೆ ಬೆಲೆಯು ಏರಿಕೆ ಪ್ರವೃತ್ತಿಯನ್ನು ಹೊಂದುತ್ತದೆ. ಇತರೆ ಅಂಶಗಳು ಸ್ಥಿರವಾಗಿದ್ದಾಗ, ಬೆಲೆಯು ಹೆಚ್ಚಾದಂತೆ, ಬೇಡಿಕೆಯ ಪ್ರಮಾಣ ಕಡಿಮೆಯಾಗುತ್ತದೆ ಮತ್ತು ಪೂರೈಕೆಯ ಪ್ರಮಾಣ ಹೆಚ್ಚುತ್ತದೆ. ಮತ್ತು ಉದ್ಯಮಘಟಕಗಳು ಮಾರಾಟ ಮಾಡಲು ಬಯಸುವ ಪ್ರಮಾಣವು ಗ್ರಾಹಕರು ಖರೀದಿಸಲು ಬಯಸುವ ಪ್ರಮಾಣಕ್ಕೆ ಸಮನಾಗುವ ಹಂತದತ್ತ ಮಾರುಕಟ್ಟೆಯು ಚಲಿಸುತ್ತದೆ. $p^*$ ಬಿಂದುವಿನಲ್ಲಿ ಉದ್ಯಮಘಟಕಗಳ ಪೂರೈಕೆ ನಿರ್ಧಾರಗಳು ಗ್ರಾಹಕರ ಬೇಡಿಕೆ ನಿರ್ಧಾರಗಳೊಂದಿಗೆ ಹೊಂದಾಣಿಕೆಯಾಗುತ್ತವೆ.

ಅದೇರೀತಿ, ಚಾಲ್ತಿಯಲ್ಲಿರುವ ಬೆಲೆ $p_2$ ಆದಾಗ, ಮಾರುಕಟ್ಟೆ ಪೂರೈಕೆ($q_2$)ಯು ಮಾರುಕಟ್ಟೆ ಬೇಡಿಕೆ($q'_2$)ಯನ್ನು ಮೀರುತ್ತದೆ ಮತ್ತು ಆ ಬೆಲೆಯು $q'_2$ $q_2$ ಗೆ ಸಮನಾದ ಅಧಿಕ ಪೂರೈಕೆಗೆ ಕಾರಣವಾಗುತ್ತದೆ. ಇಂತಹ ಸನ್ನಿವೇಶದಲ್ಲಿ, ಕೆಲವು ಉದ್ಯಮಘಟಕಗಳು ತಾವು ಬಯಸಿದ ಪ್ರಮಾಣದಷ್ಟು ಸರಕುಗಳನ್ನು ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಅವುಗಳು ತಮ್ಮ ಸರಕುಗಳ ಬೆಲೆ ಕಡಿಮೆ ಮಾಡುತ್ತವೆ. ಇತರೆ ಎಲ್ಲಾ ಅಂಶಗಳು ಸ್ಥಿರವಿದ್ದು, ಬೆಲೆ ಕಡಿಮೆಯಾದಂತೆ, ಬೇಡಿಕೆಯ ಪ್ರಮಾಣವು ಅಧಿಕವಾಗುತ್ತಾ ಹೋಗುತ್ತದೆ ಹಾಗೂ ಪೂರೈಕೆಯ ಪ್ರಮಾಣವು ಕಡಿಮೆಯಾಗುತ್ತಾ ಹೋಗುತ್ತದೆ. ಬೆಲೆಯು $p^*$ ಮಟ್ಟಕ್ಕೆ ತಲುಪಿದಾಗ ಉದ್ಯಮಘಟಕಗಳು ತಾವು ಬಯಸಿದ ಪ್ರಮಾಣದ ಉತ್ಪನ್ನವನ್ನು ಮಾರಾಟ ಮಾಡಲು ಸಮರ್ಥವಾಗುತ್ತವೆ ಮತ್ತು ಆ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯು ಮಾರುಕಟ್ಟೆ ಪೂರೈಕೆಗೆ ಸಮನಾಗಿರುತ್ತದೆ. ಆದ್ದರಿಂದ, $p^*$ಬೆಲೆಯು ಸಮತೋಲನ ಬೆಲೆಯಾಗಿದೆ ಮತ್ತು ಅದಕ್ಕನುಗುಣವಾಗಿ $q^*$ ಪ್ರಮಾಣವು ಸಮತೋಲನ ಪ್ರಮಾಣವಾಗಿದೆ.

ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳ ನಿರ್ಧಾರವಾಗುವುದನ್ನು ಹೆಚ್ಚು ಸ್ಪಷ್ಟವಾಗಿ ತಿಳಿದುಕೊಳ್ಳಲು ನಾವು ಒಂದು ಉದಾಹರಣೆಯ ಮೂಲಕ ವಿವರಿಸೋಣ.

**ಉದಾಹರಣೆ 5.1**

ತದ್ರೂಪ ರೀತಿಯ ಸಂರಚನೆ ಹೊಂದಿರುವ ಕೃಷಿ ಜಮೀನುಗಳು ಉತ್ಪಾದಿಸುವ ಒಂದೇ ಗುಣಮಟ್ಟದ ಗೋಧಿ ಮಾರುಕಟ್ಟೆಯನ್ನು ಪರಿಗಣಿಸೋಣ. ಗೋಧಿಯ ಮಾರುಕಟ್ಟೆ ಬೇಡಿಕೆ ರೇಖೆ ಮತ್ತು ಮಾರುಕಟ್ಟೆ ಪೂರೈಕೆ ರೇಖೆಗಳನ್ನು ಈ ಕೆಳಗಿನಂತೆ ಕೊಡಲಾಗಿದೆ ಎಂದು ಭಾವಿಸೋಣ.

$$q^D = 200 - p \quad \text{ಗಾಗಿ} \quad 0 \leq P \leq 200$$
$$= 0 \quad \text{ಗಾಗಿ} \quad P > 200$$
$$q^S = 120 + P \quad \text{ಗಾಗಿ} \quad P \geq 10$$
$$= 0 \quad \text{ಗಾಗಿ} \quad 0 \leq P < 10$$

ಇಲ್ಲಿ $q^D$ ಮತ್ತು $q^S$ ಗಳು ಕ್ರಮವಾಗಿ ಗೋಧಿಯ ಬೇಡಿಕೆ ಮತ್ತು ಪೂರೈಕೆ(ಕೇಜಿಗಳಲ್ಲಿ)ಯನ್ನು ಪ್ರತಿನಿಧಿಸುತ್ತವೆ ಮತ್ತು $P$ಯು ಗೋಧಿಯ ಬೆಲೆ(ಪ್ರತೀ ಕೇಜಿಗೆ ರೂ.ಗಳಲ್ಲಿ)ಯನ್ನು ಪ್ರತಿನಿಧಿಸುತ್ತದೆ.

ಸಮತೋಲನ ಬೆಲೆಯಲ್ಲಿ ಮಾರುಕಟ್ಟೆಯು ತೆರವುಗೊಳ್ಳುವುದರಿಂದ, ನಾವು ಮಾರುಕಟ್ಟೆಯ ಬೇಡಿಕೆ ಮತ್ತು ಪೂರೈಕೆಯನ್ನು ಸಮನಾಗಿಸುವ ಮೂಲಕ ಸಮತೋಲನ ಬೆಲೆ($p^*$ದಿಂದ ತೋರಿಸಲಾದ)ಯನ್ನು ಕಂಡುಹಿಡಿಯುತ್ತೇವೆ ಮತ್ತು $p^*$ಗೆ ಪರಿಹಾರ ಕಂಡುಕೊಳ್ಳುತ್ತೇವೆ.

$$q^D(p^*) = q^S(p^*)$$
$$200 - p^* = 120 + p^*$$

ನಿಯಮಗಳನ್ನು ಮರುಹೊಂದಿಸಿದಾಗ,

$$2p^* = 80$$
$$p^* = 40$$

ಆದ್ದರಿಂದ, ಗೋಧಿಯ ಸಮತೋಲನ ಬೆಲೆಯು ಪ್ರತೀ ಕೇಜಿಗೆ ರೂ.40 ಆಗುತ್ತದೆ. ಸಮತೋಲನದಲ್ಲಿ ಬೇಡಿಕೆಯ ಪ್ರಮಾಣ ಮತ್ತು ಪೂರೈಕೆಯ ಪ್ರಮಾಣಗಳು ಸಮಾನವಾಗಿರುವುದರಿಂದ, ಸಮತೋಲನದ ಬೆಲೆಯನ್ನು ಬೇಡಿಕೆ ಅಥವಾ ಪೂರೈಕೆ ರೇಖೆಗಳ ಸಮೀಕರಣದಲ್ಲಿ ಅಳವಡಿಸುವುದದರ ಮೂಲಕ ಸಮತೋಲನದ ಪ್ರಮಾಣವನ್ನು($q^*$ ನಿಂದ ಸೂಚಿಸಲಾದ) ಪಡೆಯಲಾಗುತ್ತದೆ.

$$q^D = q^* = 200 - 40 = 160$$

ಪರ್ಯಾಯವಾಗಿ,

$$qs = q^* = 120 + 40 = 160$$

ಹೀಗೆ, ಸಮತೋಲನ ಪ್ರಮಾಣವು 160ಕೆಜಿ ಆಗಿದೆ. $p^*$ ಗಿಂತ ಕಡಿಮೆ ಬೆಲೆ($p_1$ ಎಂದುಕೊಳ್ಳೋಣ) ಯಲ್ಲಿ, ಅಂದರೆ $p^1 = 25$ ಆದಾಗ

$$q^D = 200 - 25 = 175$$
$$q^S = 120 + 25 = 145$$

ಆದ್ದರಿಂದ, $p^1 = 25$ ಆದಾಗ, $q^D > q^S$ ಆಗುತ್ತದೆ. ಅದು ಈ ಬೆಲೆಯಲ್ಲಿ ಅಧಿಕ ಬೇಡಿಕೆ ಇದೆ ಎಂಬುದನ್ನು ಸೂಚಿಸುತ್ತದೆ.

ಬೀಜಗಣಿತಾತ್ಮಕವಾಗಿ ಅಧಿಕ ಬೇಡಿಕೆ(ED)ಯನ್ನು ಈ ಮುಂದಿನಂತೆ ವ್ಯಕ್ತಪಡಿಸಬಹುದು.

$$ED(p) = q^D - q^S$$
$$= 200 - p - (120 + p)$$
$$= 80 - 2p$$

ಮೇಲಿನ ಅಭಿಪ್ರಾಯವನ್ನು ಗಮನಿಸಿದಾಗ, $p^*$ (=40)ಗಿಂತ ಕಡಿಮೆ ಇರುವ ಯಾವುದೇ ಬೆಲೆಯು ಅಧಿಕ ಬೇಡಿಕೆಯ ಧನಾತ್ಮಕತೆಗೆ ಕಾರಣವಾಗುತ್ತದೆ.

ಅದೇರೀತಿ, $p^*$ಗಿಂತ ಅಧಿಕ ಬೆಲೆ($p_2$ ಎಂದುಕೊಳ್ಳೋಣ) $p_2$ =45 ಎಂದಾದರೆ,

$$q^D = 200 - 45 = 155$$

$$q^S = 120 + 45 = 165$$

ಆದ್ದರಿಂದ, $q > q^D$ ಆಗಿರುವುದರಿಂದ, ಈ ಬೆಲೆಯಲ್ಲಿ ಅಧಿಕ ಪೂರೈಕೆ ಇರುತ್ತದೆ. ಬೀಜಗಣಿತಾತ್ಮಕವಾಗಿ ಅಧಿಕ ಪೂರೈಕೆ(ES)ಯನ್ನು ಮುಂದಿನಂತೆ ವ್ಯಕ್ತಪಡಿಸಬಹುದು.

$$\begin{aligned} ES(p) &= q^S - q^D \\ &= 120 + p - (200 - p) \\ &= 2p - 80 \end{aligned}$$

ಮೇಲಿನ ವಿಶ್ಲೇಷಣೆಯಿಂದ ತಿಳಿದು ಬರುವುದೇನೆಂದರೆ, $p^*$(=40), ಗಿಂತ ಅಧಿಕವಿರುವ ಯಾವುದೇ ಬೆಲೆಯು ಅಧಿಕ ಪೂರೈಕೆಯ ಧನಾತ್ಮಕತೆಗೆ ಕಾರಣವಾಗುತ್ತದೆ.

ಆದ್ದರಿಂದ, $p^*$ ಗಿಂತ ಅಧಿಕವಿರುವ ಯಾವುದೇ ಬೆಲೆಯಲ್ಲಿ ಅಧಿಕ ಪೂರೈಕೆ, ಮತ್ತು $p^*$ ಗಿಂತ ಕಡಿಮೆ ಇರುವ ಯಾವುದೇ ಬೆಲೆಯಲ್ಲಿ ಅಧಿಕ ಬೇಡಿಕೆ ಇರುತ್ತದೆ.




**ಶ್ರಮದ ಮಾರುಕಟ್ಟೆಯಲ್ಲಿ ಕೂಲಿಯ ನಿರ್ಧಾರ**

ಇಲ್ಲಿ ನಾವು ಬೇಡಿಕೆ–ಪೂರೈಕೆ ವಿಶ್ಲೇಷಣೆಯನ್ನು ಬಳಸಿ, ಪರಿಪೂರ್ಣ ಪೈಪೋಟಿಯಿರುವ ಮಾರುಕಟ್ಟೆ ರಚನೆಯಡಿಯಲ್ಲಿ ಕೂಲಿ ನಿರ್ಧಾರದ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ಚರ್ಚಿಸೋಣ. ಶ್ರಮದ ಮಾರುಕಟ್ಟೆ ಮತ್ತು ಸರಕುಗಳ ಮಾರುಕಟ್ಟೆ ನಡುವಿನ ಮೂಲ ವ್ಯತ್ಯಾಸವು ಅವುಗಳ ಪೂರೈಕೆ ಮತ್ತು ಬೇಡಿಕೆಯ ಮೂಲಗಳಿಗೆ ಸಂಬಂಧಿಸಿದ್ದಾಗಿದೆ. ಶ್ರಮದ ಮಾರುಕಟ್ಟೆಯಲ್ಲಿ, ಕುಟುಂಬಗಳು ಶ್ರಮದ ಪೂರೈಕೆದಾರರಾಗಿರುತ್ತವೆ. ಮತ್ತು ಉದ್ಯಮಘಟಕಗಳಿಂದ ಅವುಗಳಿಗೆ ಬೇಡಿಕೆ ಉಂಟಾಗುತ್ತದೆ. ಆದರೆ ಸರಕುಗಳ ಮಾರುಕಟ್ಟೆಯಲ್ಲಿ ಇದು ತದ್ವಿರುದ್ಧವಾಗಿತ್ತದೆ. ಇಲ್ಲಿ ಶ್ರಮವೆಂದರೆ, ಶ್ರಮಿಕರು ಒದಗಿಸುವ ಕೆಲಸದ ಸಮಯವಾಗಿದೆಯೇ ಹೊರತು ಶ್ರಮಿಕರ ಸಂಖ್ಯೆಯಲ್ಲ ಎಂಬುದನ್ನು ಗಮನಿಸಬೇಕು. ಶ್ರಮದ ಬೇಡಿಕೆ ಮತ್ತು ಪೂರೈಕೆ ಸಮತೋಲನ ಸ್ಥಿತಿಯಲ್ಲಿ ಶ್ರಮಿಕರ ಬೇಡಿಕೆ ಮತ್ತು ಪೂರೈಕೆ ರೇಖೆಗಳು ಒಂದನ್ನೊಂದು ಛೇದಿಸಿದಾಗ ಕೂಲಿದರವು ನಿರ್ಧಾರವಾಗುತ್ತದೆ. ಈಗ ನಾವು ಶ್ರಮಿಕರ ಬೇಡಿಕೆ ಮತ್ತು ಪೂರೈಕೆ ರೇಖೆಗಳು ಹೇಗೆ ಕಾಣುತ್ತವೆ ಎಂಬುದನ್ನು ನೋಡೋಣ.

ಒಂದು ಉದ್ಯಮಘಟಕದ ಶ್ರಮದ ಬೇಡಿಕೆಯನ್ನು ಪರೀಕ್ಷಿಸಲು, ಶ್ರಮವು ಏಕೈಕ ಬದಲಾಗುವ ಉತ್ಪಾದನಾಂಗವಾಗಿದೆ ಮತ್ತು ಶ್ರಮದ ಮಾರುಕಟ್ಟೆಯು ಪರಿಪೂರ್ಣ ಪೈಪೋಟಿಯುತವಾಗಿದೆ ಎಂದು ನಾವು ಊಹಿಸಿಕೊಳ್ಳುತ್ತೇವೆ. ಇದು ಪ್ರತಿಯೊಂದು ಉದ್ಯಮಘಟಕವು ಕೊಡಮಾಡಿದ ಕೂಲಿದರವನ್ನು ಪಡೆದುಕೊಳ್ಳುತ್ತದೆ ಎಂದು ಸೂಚಿಸುತ್ತದೆ. ಹಾಗೂ ನಾವು ಪರಿಗಣನೆಗೆ ತೆಗೆದುಕೊಂಡಿರುವ ಉದ್ಯಮಘಟಕವು ಪರಿಪೂರ್ಣ ಪೈಪೋಟಿ ಸ್ವರೂಪವನ್ನು ಹೊಂದಿರುತ್ತದೆ ಮತ್ತು ಲಾಭವನ್ನು ಗರಿಷ್ಠಗೊಳಿಸಿಕೊಳ್ಳುವ ಗುರಿಯೊಂದಿಗೆ ಉತ್ಪಾದಿಸುತ್ತಿರುತ್ತದೆ. ಅಲ್ಲದೇ, ಉದ್ಯಮಘಟಕದ ತಾಂತ್ರಿಕಜ್ಞಾನವು ಸ್ಥಿರವಾಗಿರುವುದರಿಂದ ಇಳಿಮುಖ ಸೀಮಾಂತ ಉತ್ಪನ್ನ ನಿಯಮ ಕಾರ್ಯಾಚರಣೆಯಲ್ಲಿರುತ್ತದೆಂದು ಊಹಿಸಿಕೊಂಡಿದ್ದೇವೆ.

ಉದ್ಯಮಘಟಕವು ಗರಿಷ್ಠ ಲಾಭಗಳಿಕೆಯ ಗುರಿ ಹೊಂದಿರುವುದರಿಂದ, ಶ್ರಮದ ಕೊನೆಯ ಘಟಕವನ್ನು ಉತ್ಪಾದನೆಯಲ್ಲಿ ತೊಡಗಿಸಿದಾಗ ತಗಲುವ ಹೆಚ್ಚುವರಿ ವೆಚ್ಚವು, ಆ ಘಟಕದಿಂದ ಗಳಿಸುವ ಹೆಚ್ಚುವರಿ ಲಾಭಕ್ಕೆ ಸಮನಾಗಿರುವವರೆಗೆ ಶ್ರಮವನ್ನು ಉತ್ಪಾದನೆಯಲ್ಲಿ ತೊಡಗಿಸುತ್ತಾ ಹೋಗುತ್ತದೆ. ಒಂದು ಹೆಚ್ಚುವರಿ ಘಟಕದ ಶ್ರಮದ ನೇಮಕಾತಿಗೆ ತಗಲುವ ಹೆಚ್ಚುವರಿ ವೆಚ್ಚವು ಕೂಲಿಯ ದರ($w$) ಆಗಿದೆ. ಶ್ರಮದ ಒಂದು ಹೆಚ್ಚುವರಿ ಘಟಕದ ನೇಮಕಾತಿಯಿಂದ ಉತ್ಪಾದಿಸಲಾದ ಹೆಚ್ಚುವರಿ ಉತ್ಪನ್ನವು ಆ ಘಟಕದ ಸೀಮಾಂತ ಉತ್ಪನ್ನ($MP_L$)ಆಗಿರುತ್ತದೆ ಮತ್ತು ಪ್ರತೀ ಹೆಚ್ಚುವರಿ ಘಟಕದ ಉತ್ಪನ್ನದ

ಮಾರಾಟದಿಂದ, ಉದ್ಯಮಘಟಕವು ಪಡೆಯುವ ಹೆಚ್ಚುವರಿ ಗಳಿಕೆಯು ಆ ಘಟಕದ ಸೀಮಾಂತ ಆದಾಯ(MR)ವಾಗಿರುತ್ತದೆ. ಆದ್ದರಿಂದ, ಪ್ರತೀ ಹೆಚ್ಚುವರಿ ಘಟಕದ ಶ್ರಮಕ್ಕೆ ಪಡೆಯುವ ಹೆಚ್ಚುವರಿ ಲಾಭವು ಸೀಮಾಂತ ಆದಾಯದಷ್ಟೇ ಪ್ರಮಾಣದ ಸೀಮಾಂತ ಉತ್ಪನ್ನಕ್ಕೆ ಸಮನಾಗಿರುತ್ತದೆ. ಅದನ್ನೇ **ಶ್ರಮದ ಸೀಮಾಂತ ಆದಾಯದ ಉತ್ಪನ್ನ** *Marginal Revenue Product of Labour* ($MRP_L$) ಎಂದು ಕರೆಯಲಾಗುತ್ತದೆ. ಹೀಗೆ ಶ್ರಮದ ನೇಮಕಾತಿ ಮಾಡುವಾಗ, ಉದ್ಯಮಘಟಕವು ಕೂಲಿಯ ದರವು ಸೀಮಾಂತ ಆದಾಯದ ಉತ್ಪನ್ನಕ್ಕೆ ಸಮವಿರುವುದನ್ನು ಗಮನಿಸುತ್ತದೆ.

ಅಂದರೆ, $w = MRP_L$

ಮತ್ತು $MRP_L = MR \times MP_L$

ಇಲ್ಲಿ ನಾವು ಪರಿಪೂರ್ಣ ಪೈಪೋಟಿಯುತ ಉದ್ಯಮಘಟಕಯೊಂದಿಗೆ ವ್ಯವಹರಿಸುತ್ತಿರುವುದರಿಂದ, ಸೀಮಾಂತ ಆದಾಯವು ಸರಕಿನ ಬೆಲೆಗೆ ಸಮನಾಗಿರುತ್ತದೆ[a] ಮತ್ತು ಈ ಕಾರಣದಿಂದ ಶ್ರಮದ ಸೀಮಾಂತ ಆದಾಯದ ಉತ್ಪನ್ನವು ಈ ಸಂದರ್ಭದಲ್ಲಿ ಶ್ರಮದ ಸೀಮಾಂತ ಉತ್ಪನ್ನದ ಮೌಲ್ಯ($VMP_L$)ಕ್ಕೆ ಸಮನಾಗಿರುತ್ತದೆ.

ಎಲ್ಲಿಯವರೆಗೆ ಶ್ರಮದ ಸೀಮಾಂತ ಉತ್ಪನ್ನದ ಮೌಲ್ಯ($VMP_L$)ವು ಕೂಲಿಯ ದರಕ್ಕಿಂತ ಅಧಿಕವಾಗಿರುತ್ತದೆಯೋ, ಅಲ್ಲಿಯವರೆಗೆ ಶ್ರಮದ ಪ್ರತೀ ಹೆಚ್ಚುವರಿ ಘಟಕವನ್ನು ತೊಡಗಿಸುತ್ತಾ ಹೋದಂತೆ ಉದ್ಯಮಘಟಕವು ಅಧಿಕಲಾಭ ಗಳಿಸುತ್ತದೆ, ಮತ್ತು ಶ್ರಮದ ಸೀಮಾಂತ ಉತ್ಪನ್ನದ ಮೌಲ್ಯ($VMP_L$)ವು ಕೂಲಿಯ ದರಕ್ಕಿಂತ ಕಡಿಮೆ ಇರುವ ಶ್ರಮದ ಯಾವುದೇ ಪ್ರಮಾಣದ ನೇಮಕಾತಿಯಲ್ಲಿ, ಉದ್ಯಮಘಟಕವು ತಾನು ನೇಮಿಸಿದ ಶ್ರಮದ ಘಟಕಗಳನ್ನು ಕಡಿಮೆಗೊಳಿಸಿಕೊಳ್ಳುವ ಮೂಲಕ ತನ್ನ ಲಾಭವನ್ನು ಹೆಚ್ಚಿಸಿಕೊಳ್ಳಬಹುದು.

ಇಳಿಮುಖ ಸೀಮಾಂತ ಉತ್ಪನ್ನದ ನಿಯಮದ ಊಹೆಯಿಂದಾಗಿ, ಉದ್ಯಮಘಟಕವು ಯಾವಾಗಲೂ ಕೂಲಿಯದರಕ್ಕೆ ಸಮನಾಗಿರುವ ಶ್ರಮದ ಸೀಮಾಂತ ಉತ್ಪನ್ನದ ಮೌಲ್ಯ $w = VMP_L$ದಲ್ಲಿ ಉತ್ಪಾದಿಸುತ್ತಿರುತ್ತದೆ. ಇದು ಶ್ರಮದ ಬೇಡಿಕೆ ರೇಖೆಯು ಕೆಳಮುಖ ಚಲನೆ ಹೊಂದಿರುವುದನ್ನು ಸೂಚಿಸುತ್ತದೆ. ಏಕೆ ಹೀಗಾಗುತ್ತದೆ ಎಂಬುದನ್ನು ವಿವರಿಸಲು, ಬೇರೆ ಕೂಲಿದರ $w_1$ ಎಂದು ಊಹಿಸಿಕೊಳ್ಳೋಣ, ಶ್ರಮದ ಬೇಡಿಕೆಯು $l_1$ ಎಂದುಕೊಳ್ಳೋಣ. ಈಗ ಕೂಲಿದರವು $w_2$ಗೆ ಹೆಚ್ಚಾಗಿದೆ ಎಂದುಕೊಳ್ಳೋಣ. ಕೂಲಿದರ–$VMP_L$ ಗಳ ಸಮಾನತೆ ನಿರ್ವಹಿಸಬೇಕಾದರೆ $VMP_L$ ನ್ನು ಕೂಡಾ ಹೆಚ್ಚಿಸಬೇಕಾಗುತ್ತದೆ. ಸರಕಿನ ಬೆಲೆಯು ಸ್ಥಿರವಾಗಿ ಉಳಿಯುತ್ತದೆ[b]. ಇದು ಕೇವಲ $MP_L$ ಹೆಚ್ಚಾದಾಗ ಮಾತ್ರ ಸಾಧ್ಯವಾಗುತ್ತದೆ. ಶ್ರಮದ ಇಳಿಮುಖ ಸೀಮಾಂತ ಉತ್ಪಾದಕತೆಯ ಕಾರಣದಿಂದಾಗಿ ಕಡಿಮೆ ಶ್ರಮವನ್ನು ಬಳಸಿ ಕೊಳ್ಳಬೇಕೆಂದು ಇದು ಸೂಚಿಸುತ್ತದೆ. ಆದ್ದರಿಂದ, ಕೂಲಿ ಹೆಚ್ಚಿದ್ದಾಗ, ಶ್ರಮಿಕರಿಗೆ ಕಡಿಮೆ ಬೇಡಿಕೆ ಇರುತ್ತದೆ. ಇದು ಕೆಳಮುಖ ಚಲನೆಯ ಬೇಡಿಕೆ ರೇಖೆಗೆ ಕಾರಣವಾಗುತ್ತದೆ. ವೈಯಕ್ತಿಕ ಉದ್ಯಮಘಟಕಗಳ ಬೇಡಿಕೆ ರೇಖೆಯಿಂದ ಮಾರುಕಟ್ಟೆ ಬೇಡಿಕೆ ರೇಖೆಯನ್ನು ಪಡೆಯಲು ನಾವು ವಿಭಿನ್ನ ಕೂಲಿದರಗಳಲ್ಲಿ ವೈಯಕ್ತಿಕ ಉದ್ಯಮಘಟಕಗಳ ಶ್ರಮದ ಬೇಡಿಕೆಯನ್ನು



ಶ್ರಮದ ಬೇಡಿಕೆ ಮತ್ತು ಪೂರೈಕೆ ರೇಖೆಗಳು ಸಂಧಿಸುವ ಬಿಂದುವಿನಲ್ಲಿ ಕೂಲಿ ನಿರ್ಧಾರವಾಗುತ್ತದೆ

[a] ಪರಿಪೂರ್ಣ ಪೈಪೋಟಿಯುತ ಉದ್ಯಮಘಟಕವು, ಸೀಮಾಂತ ಆದಾಯವು ಬೆಲೆಗೆ ಸಮನಾಗಿರುತ್ತದೆ ಎಂಬುದನ್ನು ನಾಲ್ಕನೇ ಅಧ್ಯಾಯದಿಂದ ನೆನಪಿಸಿಕೊಳ್ಳಿರಿ.

[b] ಇಲ್ಲಿ ಪರಿಗಣಿಸಿರುವ ಉದ್ಯಮಘಟಕವು ಪರಿಪೂರ್ಣ ಪೈಪೋಟಿಯಲ್ಲಿರುವುದರಿಂದ, ಅದು ಸರಕಿನ ಬೆಲೆ ಮೇಲೆ ಪ್ರಭಾವ ಬೀರಲಾರದೆಂದು ಊಹಿಸಲಾಗಿದೆ.

ಒಗ್ಗೂಡಿಸಬೇಕಾಗುತ್ತದೆ ಮತ್ತು ಕೂಲಿದರ ಹೆಚ್ಚಾದಂತೆ ಪ್ರತಿಯೊಂದು ಉದ್ಯಮಘಟಕವು ಕಡಿಮೆ ಶ್ರಮ ಹೊಂದಲು ಬಯಸುವುದರಿಂದ ಶ್ರಮದ ಮಾರುಕಟ್ಟೆ ಬೇಡಿಕೆರೇಖೆಯೂ ಕೂಡ ಕೆಳಮುಖ ಇಳಿಜಾರು ಹೊಂದಿರುತ್ತದೆ.

ಬೇಡಿಕೆ ಭಾಗದ ಕೂಲಂಕಷ ಅಧ್ಯಯನದ ನಂತರ, ನಾವು ಈಗ ಪೂರೈಕೆ ಭಾಗದತ್ತ ಗಮನಹರಿಸೋಣ. ಈಗಾಗಲೇ ತಿಳಿದುಕೊಂಡಂತೆ, ಒಂದು ನಿರ್ದಿಷ್ಟ ಕೂಲಿದರದಲ್ಲಿ ಎಷ್ಟು ಪ್ರಮಾಣದ ಶ್ರಮಿಕರ ಪೂರೈಕೆಯಾಗಬೇಕೆಂಬುದನ್ನು ಕುಟುಂಬಗಳು ನಿರ್ಧರಿಸುತ್ತವೆ. ಕುಟುಂಬಗಳ ಪೂರೈಕೆ ನಿರ್ಧಾರವು ಪ್ರಮುಖವಾಗಿ ಆದಾಯ ಮತ್ತು ವಿಶ್ರಾಂತಿ ನಡುವಿನ ಆಯ್ಕೆಯಾಗಿರುತ್ತದೆ. ವ್ಯಕ್ತಿಗಳು ವಿಶ್ರಾಂತಿಯನ್ನು ಆನಂದಿಸಿ ಕೆಲಸಕ್ಕೆ ಬೇಸರಿಸಿಕೊಳ್ಳುತ್ತಾರೆ. ಆದರೆ ಅವರು ಮಾಡಬೇಕಾದ ಕೆಲಸದ ಆದಾಯವನ್ನು ಗೌರವಿಸುತ್ತಾರೆ.

ಹೀಗಾಗಿ ಅಲ್ಲಿ ವಿಶ್ರಾಂತಿಯನ್ನು ಆನಂದಿಸುವ ಮತ್ತು ಕೆಲಸಕ್ಕಾಗಿ ಹೆಚ್ಚು ಸಮಯವನ್ನು ಕಳೆಯುವುದರ ನಡುವೆ ಸಮತೂಕವಿರುತ್ತದೆ. ಒಬ್ಬ ವ್ಯಕ್ತಿಯ ಶ್ರಮದ ಪೂರೈಕೆ ರೇಖೆಯನ್ನು ಪಡೆಯಲು, ನಾವು $w_1$ ಕೂಲಿದರದಲ್ಲಿ ವ್ಯಕ್ತಿಗತ ಶ್ರಮದ ಪೂರೈಕೆಯು $l_1$ ಘಟಕವಾಗಿರುತ್ತದೆಂದು ಊಹಿಸೋಣ. ಈಗ ಒಂದುವೇಳೆ ಕೂಲಿದರ $w_2$ ಗೆ ಹೆಚ್ಚಾಗಿದೆ ಎಂದುಕೊಳ್ಳೋಣ. ಈ ಹೆಚ್ಚಳವು ಎರಡುರೀತಿಯ ಪರಿಣಾಮ ಬೀರುತ್ತದೆ. ಮೊದಲನೆಯದಾಗಿ, ಕೂಲಿದರದ ಹೆಚ್ಚಳದಿಂದ ವಿರಾಮದ ಸದಾವಕಾಶ ವೆಚ್ಚ ಹೆಚ್ಚುತ್ತದೆ ಮತ್ತು ವಿರಾಮವು ಹೆಚ್ಚು ವೆಚ್ಚದಾಯಕವೆನಿಸುತ್ತದೆ. ಆದ್ದರಿಂದ ವ್ಯಕ್ತಿಗಳು ಕಡಿಮೆ ವಿರಾಮವನ್ನು ಹೊಂದಲು ಬಯಸುತ್ತಾರೆ. ಇದರ ಪರಿಣಾಮವಾಗಿ ಅವರು ಅಧಿಕ ಸಮಯ ದುಡಿಯುತ್ತಾರೆ. ಎರಡನೆಯದಾಗಿ, ಕೂಲಿಯದರವು $w_2$ ಗೆ ಹೆಚ್ಚಾದ್ದರಿಂದ, ವ್ಯಕ್ತಿಗಳ ಕೊಳ್ಳುವ ಶಕ್ತಿಯು ಹೆಚ್ಚುತ್ತದೆ. ಹೀಗಾಗಿ, ಅವರು ವಿರಾಮದ ಚಟುವಟಿಕೆಗಳಲ್ಲಿ ಹೆಚ್ಚು ಕಾಲಕಳೆಯಲು ಬಯಸುವರು. ಕೂಲಿಯದರ ಹೆಚ್ಚಳದ ಅಂತಿಮ ಪರಿಣಾಮವು ಈ ಎರಡು ಪರಿಣಾಮಗಳಲ್ಲಿ ಯಾವುದು ಹೆಚ್ಚು ಪ್ರಾಬಲ್ಯವನ್ನು ಹೊಂದಿರುತ್ತದೆಯೋ ಅದನ್ನು ಅವಲಂಬಿಸಿರುತ್ತದೆ. ಕಡಿಮೆ ಕೂಲಿದರದಲ್ಲಿ, ಮೊದಲ ಪರಿಣಾಮವು ಎರಡನೇ ಪರಿಣಾಮದ ಮೇಲೆ ಪ್ರಾಬಲ್ಯ ಹೊಂದಿರುತ್ತದೆ ಮತ್ತು ಈ ಕಾರಣದಿಂದ ವ್ಯಕ್ತಿಗಳು ಹೆಚ್ಚಿನ ಕೂಲಿದರದಲ್ಲಿ ಅಧಿಕ ಶ್ರಮ ಪೂರೈಸಲು ಬಯಸುತ್ತಾರೆ. ಆದರೆ ಅಧಿಕ ಕೂಲಿದರದಲ್ಲಿ, ಎರಡನೇ ಪರಿಣಾಮವು ಮೊದಲ ಪರಿಣಾಮದ ಮೇಲೆ ಪ್ರಾಬಲ್ಯ ಹೊಂದುತ್ತದೆ ಮತ್ತು ವ್ಯಕ್ತಿಗಳು ಕೂಲಿದರದ ಪ್ರತೀ ಹೆಚ್ಚಳದೊಂದಿಗೆ ಕಡಿಮೆ ಶ್ರಮ ಪೂರೈಸಲು ಬಯಸುತ್ತಾರೆ. ಹೀಗೆ ನಾವು ಹಿಂದಕ್ಕೆ ಬಾಗಿದ (*backward bending*) ವೈಯಕ್ತಿಕ ಶ್ರಮದ ಪೂರೈಕೆ ರೇಖೆಯನ್ನು ಪಡೆಯುತ್ತೇವೆ. ಇಂತಹ ರೇಖೆಯು ಒಂದು ನಿರ್ದಿಷ್ಟ ಪ್ರಮಾಣದ ಕೂಲಿಯದರದವರೆಗೆ ಪ್ರತೀ ಕೂಲಿದರದ ಏರಿಕೆಯು, ಶ್ರಮದ ಪೂರೈಕೆಯ ಹೆಚ್ಚಳವನ್ನು ವ್ಯಕ್ತಪಡಿಸುತ್ತದೆ. ಒಂದು ನಿರ್ದಿಷ್ಟ ಹಂತವನ್ನು ತಲುಪಿದನಂತರದ ಪ್ರತೀ ಕೂಲಿದರದ ಏರಿಕೆಯು ಶ್ರಮದ ಪೂರೈಕೆಯ ಇಳಿಕೆಗೆ ಕಾರಣವಾಗುತ್ತದೆ. ಅದೇನೆ ಇದ್ದರೂ, ವೈಯಕ್ತಿಕ ಪೂರೈಕೆ ರೇಖೆಗಳನ್ನು ಒಗ್ಗೂಡಿಸುವುದರ ಮೂಲಕ ಪಡೆಯುವ ಶ್ರಮದ ಮಾರುಕಟ್ಟೆ ಪೂರೈಕೆ ರೇಖೆಯು ವಿವಿಧ ಕೂಲಿದರಗಳಲ್ಲಿ ಮೇಲ್ಮುಖ ಇಳಿಜಾರು ಹೊಂದಿರುತ್ತದೆ ಏಕೆಂದರೆ ಅಧಿಕ ಕೂಲಿ ಇದ್ದಾಗ ಕೆಲವು ವ್ಯಕ್ತಿಗಳು ಕಡಿಮೆ ಕೆಲಸ ಮಾಡಲು ಬಯಸಿದರೂ, ಅನೇಕರು ಅಧಿಕ ಶ್ರಮ ಪೂರೈಸಲು ಆಕರ್ಷಿತರಾಗುವರು.

ಮೇಲ್ಮುಖ ಇಳಿಜಾರಿನ ಪೂರೈಕೆ ರೇಖೆ ಮತ್ತು ಕೆಳಮುಖ ಇಳಿಜಾರಿನ ಬೇಡಿಕೆರೇಖೆಗಳು ಸಂಧಿಸುವ ಬಿಂದುವಿನಲ್ಲಿ ಸಮತೋಲನ ಕೂಲಿದರ ನಿರ್ಧಾರವಾಗುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಈ ಬಿಂದುವಿನಲ್ಲಿ ಕುಟುಂಬಗಳು ಪೂರೈಸಲು ಬಯಸುವ ಶ್ರಮವು ಉದ್ಯಮಘಟಕಗಳು ನೇಮಿಸಿಕೊಳ್ಳಲು ಬಯಸುವ ಶ್ರಮಕ್ಕೆ ಸಮನಾಗಿರುತ್ತದೆ. ಇದನ್ನು ರೇಖಾಚಿತ್ರದಲ್ಲಿ ತೋರಿಸಲಾಗಿದೆ.

### ಬೇಡಿಕೆ ಮತ್ತು ಪೂರೈಕೆಯಲ್ಲಿ ಪಲ್ಲಟಗಳು *Shifts in Demand and Supply*

ಮೇಲಿನ ವಿಭಾಗದಲ್ಲಿ, ನಾವು ಅನುಭೋಗಿಗಳ ಅಭಿರುಚಿ ಮತ್ತು ಒಲವುಗಳು, ಸಂಬಧಿತ ಸರಕುಗಳ ಬೆಲೆಗಳು, ಅನುಭೋಗಿಗಳ ಆದಾಯಗಳು, ತಂತ್ರಜ್ಞಾನ, ಮಾರುಕಟ್ಟೆಯ ಗಾತ್ರ, ಉತ್ಪಾದನೆಯಲ್ಲಿ ಬಳಸುವ ಆದಾನಗಳ

ಬೆಲೆಗಳು ಇತ್ಯಾದಿಗಳು ಸ್ಥಿರವಾಗಿರುತ್ತವೆ ಎಂಬ ಊಹೆಗಳ ಅಡಿಯಲ್ಲಿ ಮಾರುಕಟ್ಟೆ ಸಮತೋಲನವನ್ನು ಅಭ್ಯಸಿಸಿದ್ದೇವೆ. ಆದಾಗ್ಯೂ, ಇವುಗಳಲ್ಲಿ ಒಂದು ಅಥವಾ ಕೆಲವು ಅಂಶಗಳಲ್ಲಿ ಬದಲಾವಣೆಯಾದಾಗ ಪೂರೈಕೆ ರೇಖೆಯಲ್ಲಿ, ಅಥವಾ ಬೇಡಿಕೆ ರೇಖೆಯಲ್ಲಿ ಅಥವಾ ಎರಡೂ ರೇಖೆಗಳಲ್ಲಿ ಪಲ್ಲಟವಾಗಬಹುದು. ಇದು ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳ ಮೇಲೂ ಪ್ರಭಾವ ಬೀರುತ್ತದೆ. ಈ ಪಲ್ಲಟಗಳು ಸಮತೋಲನದ ಮೇಲೆ ಬೀರುವ ಪರಿಣಾಮಗಳ ರೂಪರೇಷೆಗಳನ್ನು ತಿಳಿಸುವ ಸಾಮಾನ್ಯ ಸಿದ್ಧಾಂತವನ್ನು ನಾವು ಮೊದಲು ಅಭಿವೃದ್ಧಿಪಡಿಸಿ, ನಂತರವಷ್ಟೇ ಮೇಲಿನ ಕೆಲವು ಅಂಶಗಳ ಬದಲಾವಣೆಯ ಕಾರಣದಿಂದ ಸಮತೋಲನದ ಮೇಲಾಗುವ ಪರಿಣಾಮಗಳ ಬಗ್ಗೆ ಚರ್ಚಿಸೋಣ.

### ಬೇಡಿಕೆಯ ಪಲ್ಲಟ *Demand Shift*

ಉದ್ಯಮಘಟಕಗಳ ಸಂಖ್ಯೆ ಸ್ಥಿರವಿದ್ದಾಗ, ಬೇಡಿಕೆ ಪಲ್ಲಟದಿಂದಾಗುವ ಪರಿಣಾಮವನ್ನು ರೇಖಾಚಿತ್ರ 5.2ರಲ್ಲಿ ಚಿತ್ರಿಸಲಾಗಿದೆ. ಇಲ್ಲಿ E ಬಿಂದು ಪ್ರಾರಂಭಿಕ ಸಮತೋಲನ ಬಿಂದುವಾಗಿದೆ. ಈ ಬಿಂದುವಿನಲ್ಲಿ ಮಾರುಕಟ್ಟೆ ಬೇಡಿಕೆರೇಖೆ $DD_0$ ಮತ್ತು ಮಾರುಕಟ್ಟೆ ಪೂರೈಕೆ ರೇಖೆ $SS_0$ಗಳು ಪರಸ್ಪರ ಛೇದಿಸಿವೆ, ಹಾಗಾಗಿ $q_0$ ಮತ್ತು $p_0$ಗಳು ಅನುಕ್ರಮವಾಗಿ ಸಮತೋಲನ ಪ್ರಮಾಣ ಮತ್ತು ಸಮತೋಲನ ಬೆಲೆಗಳಾಗಿವೆ.




**ರೇಖಾಚಿತ್ರ 5.2: ಬೇಡಿಕೆಯಲ್ಲಿನ ಪಲ್ಲಟಗಳು** (*Shifts in Demand*)ಪ್ರಾರಂಭದಲ್ಲಿ ಮಾರುಕಟ್ಟೆ ಸಮತೋಲನವು E ಬಿಂದುವಿನಲ್ಲಿದೆ. ಬೇಡಿಕೆಯ ಬಲಭಾಗದ ಪಲ್ಲಟದ ಕಾರಣದಿಂದಾಗಿ, ರೇಖಾಚಿತ್ರದ ಫಲಕ(ಎ)ದಲ್ಲಿ ತೋರಿಸಿರುವಂತೆ ಹೊಸ ಸಮತೋಲನವು G ಆಗಿದೆ ಮತ್ತು ಬೇಡಿಕೆಯ ಎಡಭಾಗದ ಪಲ್ಲಟದಿಂದಾಗಿ ರೇಖಾಚಿತ್ರದ ಫಲಕ(ಬಿ)ದಲ್ಲಿ ತೋರಿಸಿರುವಂತೆ ಹೊಸ ಸಮತೋಲನವು F ಆಗಿದೆ. ಬಲಭಾಗದ ಪಲ್ಲಟದೊಂದಿಗೆ ಸಮತೋಲನ ಪ್ರಮಾಣ ಮತ್ತು ಸಮತೋಲನ ಬೆಲೆ ಹೆಚ್ಚುತ್ತವೆ. ಅಂತೆಯೇ ಎಡಭಾಗದ ಪಲ್ಲಟವಾದಾಗ ಸಮತೋಲನ ಪ್ರಮಾಣ ಮತ್ತು ಸಮತೋಲನ ಬೆಲೆ ಕಡಿಮೆಯಾಗುತ್ತವೆ.

ಈಗ ರೇಖಾಚಿತ್ರದ ಫಲಕ(ಪ್ಯಾನೆಲ್)'ಎ' ದಲ್ಲಿ ತೋರಿಸಿರುವಂತೆ, ಮಾರುಕಟ್ಟೆ ಬೇಡಿಕೆರೇಖೆಯು ಬಲಭಾಗಕ್ಕೆ ಅಂದರೆ $DD_2$ ಗೆ ಪಲ್ಲಟಗೊಳ್ಳುತ್ತದೆ ಮತ್ತು ಪೂರೈಕೆ ರೇಖೆಯು ಬದಲಾವಣೆಯಾಗದೇ $SS_0$ ದಲ್ಲಿಯೇ ಇದೆ ಎಂದುಕೊಳ್ಳೋಣ. ಈ ಪಲ್ಲಟವು ಯಾವುದೇ ಬೆಲೆಯಲ್ಲಿ ಬೇಡಿಕೆ ಪ್ರಮಾಣವು ಈ ಮೊದಲಿಗಿಂತ ಅಧಿಕವಾಗಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ, ಮಾರುಕಟ್ಟೆಯಲ್ಲಿ $p_0$ ಬೆಲೆಯಲ್ಲಿ $q_0q''_0$ ಗೆ ಸಮನಾದ ಅಧಿಕ ಬೇಡಿಕೆ ಇರುತ್ತದೆ. ಈ ಅಧಿಕ ಬೇಡಿಕೆಗೆ ಪ್ರತಿಕ್ರಿಯೆಯಾಗಿ ಕೆಲವು ವ್ಯಕ್ತಿಗಳು ಹೆಚ್ಚಿನ ಬೆಲೆ ಪಾವತಿಸಲು ಇಚ್ಛಿಸುವ ಮೂಲಕ ಸ್ಪಂದಿಸುತ್ತಾರೆ ಮತ್ತು ಬೆಲೆ ಹೆಚ್ಚುತ್ತಾ ಹೋಗುತ್ತದೆ. ಹೊಸ ಸಮತೋಲನವನ್ನು G ನಲ್ಲಿ ಪಡೆಯಲಾಗುತ್ತದೆ. ಇಲ್ಲಿ ಸಮತೋಲನ ಪ್ರಮಾಣ $q_2$ ಇದು $q_0$ ಗಿಂತ ಹೆಚ್ಚಿರುತ್ತದೆ ಮತ್ತು ಸಮತೋಲನ ಬೆಲೆ $p_2$ ಇದು $p_0$ ಗಿಂತ ಹೆಚ್ಚಾಗಿರುತ್ತದೆ.

ಹಾಗೆಯೇ, ರೇಖಾಚಿತ್ರದ ಫಲಕ(ಬಿ)ದಲ್ಲಿ ತೋರಿಸಿರುವಂತೆ, ಒಂದು ವೇಳೆ ಬೇಡಿಕೆರೇಖೆಯು ಎಡಭಾಗಕ್ಕೆ ಅಂದರೆ $DD_1$ಗೆ ಪಲ್ಲಟಗೊಂಡರೆ, ಯಾವುದೇ ಬೆಲೆಯಲ್ಲಿ ಬೇಡಿಕೆ ಪ್ರಮಾಣವು, ಈ ಮೊದಲು ಅಂದರೆ ಪಲ್ಲಟಕ್ಕಿಂತ ಮೊದಲಿಗೆ ಹೋಲಿಸಿದರೆ, ಕಡಿಮೆ ಇರುತ್ತದೆ. ಆದ್ದರಿಂದ, ಪ್ರಾರಂಭಿಕ ಸಮತೋಲನ ಬೆಲೆ $p_0$ದಲ್ಲಿ ಮಾರುಕಟ್ಟೆಯಲ್ಲಿ $q'_0q_0$ಗೆ ಸಮನಾದ ಅಧಿಕ ಪೂರೈಕೆ ಇರುತ್ತದೆ. ಇದಕ್ಕೆ ಪ್ರತಿಕ್ರಿಯೆಯಾಗಿ

ಕೆಲವು ಉದ್ಯಮಘಟಕಗಳು ತಮ್ಮ ಸರಕಿನ ಬೆಲೆ ಕಡಿತಗೊಳಿಸುತ್ತವೆ. ಆಗ ಆ ಉದ್ಯಮಘಟಕಗಳು ತಾವು ಬಯಸಿದ ಪ್ರಮಾಣವನ್ನು ಮಾರಾಟ ಮಾಡಬಹುದಾಗಿದೆ. ಹೊಸ ಸಮತೋಲನವನ್ನು F ಬಿಂದುವಿನಲ್ಲಿ ಪಡೆಯಲಾಗುತ್ತದೆ. ಇಲ್ಲಿ ಬೇಡಿಕೆ ರೇಖೆ $DD_1$ ಮತ್ತು ಪೂರೈಕೆ ರೇಖೆ $SS_0$ಗಳು ಸಂಧಿಸುತ್ತವೆ ಮತ್ತು ಪರಿಣಾಮವಾಗಿ ಸಮತೋಲನ ಬೆಲೆ $p_1$ಆಗಿದ್ದು, ಅದು $p_0$ ಗಿಂತ ಕಡಿಮೆ ಇರುತ್ತದೆ ಮತ್ತು ಸಮತೋಲನ ಪ್ರಮಾಣವು $q_1$ ಆಗಿದ್ದು, ಅದು $q_0$ ಗಿಂತ ಕಡಿಮೆ ಇರುತ್ತದೆ. ಇಲ್ಲಿ ಬೇಡಿಕೆ ರೇಖೆಯು ಪಲ್ಲಟವಾದಾಗಲೆಲ್ಲ ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣದಲ್ಲಾಗುವ ಬದಲಾವಣೆಯ ದಿಕ್ಕು ಒಂದೇ ಆಗಿರುತ್ತದೆ ಎಂಬುದನ್ನು ಗಮನಿಸಿರಿ.

ಸಾಮಾನ್ಯ ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಿದನಂತರ, ಮೇಲೆ ತಿಳಿಸಿದ ಹಾಗೂ ಈಗಾಗಲೇ ಅಧ್ಯಾಯ 2ರಲ್ಲಿ ಪಟ್ಟಿ ಮಾಡಿರುವ ಕೆಲವು ಅಂಶಗಳಲ್ಲಿನ ಬದಲಾವಣೆಗೆ ಪ್ರತಿಕ್ರಿಯೆಯಾಗಿ ಬೇಡಿಕೆ ರೇಖೆ ಮತ್ತು ಸಮತೋಲನ ಪ್ರಮಾಣ ಮತ್ತು ಸಮತೋಲನ ಬೆಲೆಗಳು ಹೇಗೆ ಪ್ರಭಾವಿತಗೊಳ್ಳುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಾವು ಈಗ ಕೆಲವು ಉದಾಹರಣೆಗಳನ್ನು ಪರಿಗಣಿಸೋಣ. ಹೆಚ್ಚು ನಿರ್ದಿಷ್ಟವಾಗಿ, ಅನುಭೋಗಿಗಳ ಆದಾಯ ಮತ್ತು ಅನುಭೋಗಿಗಳ ಸಂಖ್ಯೆಯ ಹೆಚ್ಚಳವು ಸಮತೋಲನದ ಮೇಲೆ ಬೀರುವ ಪರಿಣಾಮವನ್ನು ವಿಶ್ಲೇಷಿಸೋಣ.

ಉದಾಹರಣೆಗೆ ಅನುಭೋಗಿಗಳ ವೇತನಗಳಲ್ಲಿನ ಹೆಚ್ಚಳದಿಂದ ಅವರ ಆದಾಯಗಳು ಹೆಚ್ಚಾಗುತ್ತವೆ ಎಂದು ಭಾವಿಸೋಣ. ಅದು ಸಮತೋಲನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ? ಆದಾಯದಲ್ಲಿನ ಹೆಚ್ಚಳದೊಂದಿಗೆ, ಅನುಭೋಗಿಗಳು ಕೆಲವು ಸರಕುಗಳ ಮೇಲೆ ಅಧಿಕ ಹಣ ಖರ್ಚು ಮಾಡಲು ಸಮರ್ಥರಾಗುತ್ತಾರೆ. ಅನುಭೋಗಿಗಳು ಆದಾಯದ ಹೆಚ್ಚಳದೊಂದಿಗೆ, ಕೆಳದರ್ಜೆಯ ಸರಕುಗಳ ಮೇಲೆ ಕಡಿಮೆ ವೆಚ್ಚವನ್ನು ಮಾಡುತ್ತಾರೆ ಆದರೆ ಸಾಮಾನ್ಯ ಸರಕುಗಳ ವಿಚಾರದಲ್ಲಿ, ಎಲ್ಲಾ ಸರಕುಗಳ ಬೆಲೆಗಳು ಮತ್ತು ಅನುಭೋಗಿಗಳ ಅಭಿರುಚಿಗಳು ಮತ್ತು ಆದ್ಯತೆಗಳು ಸ್ಥಿರವಾಗಿದ್ದಾಗ, ಪ್ರತಿಬೆಲೆಯಲ್ಲಿ ಸರಕಿನ ಬೇಡಿಕೆ ಹೆಚ್ಚಾಗುವುದನ್ನು ನಾವು ನಿರೀಕ್ಷಿಸಬಹುದು ಇದರ ಪರಿಣಾಮವಾಗಿ ಮಾರುಕಟ್ಟೆ ಬೇಡಿಕೆ ರೇಖೆಯು ಬಲಭಾಗಕ್ಕೆ ಪಲ್ಲಟಗೊಳ್ಳುತ್ತದೆ ಎಂಬುದನ್ನು ಅಧ್ಯಾಯ 2ರಲ್ಲಿ ಅಭ್ಯಾಸ ಮಾಡಿದ್ದೇವೆ. ಇಲ್ಲಿ ನಾವು ಬಟ್ಟೆಯಂತಹ ಒಂದು ಸಾಮಾನ್ಯ ಸರಕಿನ ಉದಾಹರಣೆಯನ್ನು ಪರಿಗಣಿಸೋಣ. ಇಲ್ಲಿ ಅನುಭೋಗಿಗಳ ಆದಾಯದ ಹೆಚ್ಚಳದೊಂದಿಗೆ ಬಟ್ಟೆಯ ಬೇಡಿಕೆ ಹೆಚ್ಚುತ್ತದೆ. ಇದು ಬೇಡಿಕೆ ರೇಖೆಯ ಬಲಭಾಗದ ಪಲ್ಲಟಕ್ಕೆ ಕಾರಣವಾಗುತ್ತದೆ. ಆದಾಗ್ಯೂ, ಈ ಆದಾಯದ ಹೆಚ್ಚಳವು ಪೂರೈಕೆ ರೇಖೆಯ ಮೇಲೆ ಯಾವುದೇ ಪರಿಣಾಮ ಬೀರಲಾರದು. ಪೂರೈಕೆ ರೇಖೆಯು ಉದ್ಯಮಘಟಕಗಳ ತಂತ್ರಜ್ಞಾನ ಅಥವಾ ಉತ್ಪಾದನಾ ವೆಚ್ಚದ ಅಂಶಗಳಿಗೆ ಸಂಬಂಧಿಸಿದಂತೆ ಕೆಲವು ಬದಲಾವಣೆಯಾದಾಗ ಮಾತ್ರ ಪಲ್ಲಟಗೊಳ್ಳುತ್ತದೆ. ಹೀಗೆ ಪೂರೈಕೆ ರೇಖೆಯು ಬದಲಾವಣೆಯಾಗದೇ ಉಳಿಯುತ್ತದೆ. ರೇಖಾಚಿತ್ರ 5.2(ಎ)ದಲ್ಲಿ ಬೇಡಿಕೆ ರೇಖೆಯು $DD_0$ ದಿಂದ $DD_2$ ಗೆ ಪಲ್ಲಟಗೊಂಡಿರುವುದನ್ನು ತೋರಿಸಲಾಗಿದ್ದು, ಪೂರೈಕೆ ರೇಖೆಯು $SS_0$ ದಲ್ಲಿ ಬದಲಾಗದೇ ಉಳಿದಿರುವುದನ್ನು ತೋರಿಸಲಾಗಿದೆ. ಈ ರೇಖಾಚಿತ್ರದಿಂದ ಸ್ಪಷ್ಟವಾಗುವುದೇನೆಂದರೆ, ಹೊಸ ಸಮತೋಲನದಲ್ಲಿ ಬಟ್ಟೆಗಳ ಬೆಲೆ ಅಧಿಕವಾಗಿದ್ದು, ಬೇಡಿಕೆಯ ಪ್ರಮಾಣ ಮತ್ತು ಮಾರಾಟದ ಪ್ರಮಾಣಗಳೂ ಸಹ ಅಧಿಕವಾಗಿವೆ.

ಈಗ ನಾವು ಇನ್ನೊಂದು ಉದಾಹರಣೆಯತ್ತ ನೋಡೋಣ. ಉದಾಹರಣೆಗೆ ಕೆಲವು ಕಾರಣಗಳಿಂದಾಗಿ, ಮಾರುಕಟ್ಟೆಯಲ್ಲಿ ಬಟ್ಟೆಗಳನ್ನು ಕೊಳ್ಳುವ ಗ್ರಾಹಕರ ಸಂಖ್ಯೆಯು ಹೆಚ್ಚಾಗುತ್ತದೆಂದು ಭಾವಿಸೋಣ. ಗ್ರಾಹಕರ ಸಂಖ್ಯೆ ಹೆಚ್ಚಾದಂತೆ, ಇತರ ಸಂಗತಿಗಳಲ್ಲಿ ಬದಲಾವಣೆ ಇಲ್ಲದಿದ್ದಾಗ, ಪ್ರತಿಬೆಲೆಯಲ್ಲಿ, ಅಧಿಕ ಬಟ್ಟೆಗಳಿಗೆ ಬೇಡಿಕೆ ಉಂಟಾಗುತ್ತದೆ. ಹೀಗೆ ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುತ್ತದೆ. ಆದರೆ ಗ್ರಾಹಕರ ಸಂಖ್ಯೆಯಲ್ಲಿನ ಹೆಚ್ಚಳವು ಪೂರೈಕೆ ರೇಖೆಯ ಮೇಲೆ ಯಾವುದೇ ಪ್ರಭಾವ ಬೀರಲಾರದು. ಏಕೆಂದರೆ ಅಧ್ಯಾಯ 4ರಲ್ಲಿ ಉಲ್ಲೇಖಿಸಿದಂತೆ, ಪೂರೈಕೆ ರೇಖೆಯು ಉದ್ಯಮಘಟಕಗಳ ವರ್ತನೆಗೆ ಸಂಬಂಧಿಸಿದ ಅಳತೆಗೋಲುಗಳಲ್ಲಿನ ಬದಲಾವಣೆ ಅಥವಾ ಉದ್ಯಮಘಟಕಗಳ ಸಂಖ್ಯೆಯಲ್ಲಿನ ಹೆಚ್ಚಳದೊಂದಿಗೆ ಮಾತ್ರ ಪಲ್ಲಟಗೊಳ್ಳಬಹುದಾಗಿದೆಯೆಂದು ಈ ಸಂಗತಿಯನ್ನು ಮತ್ತೊಮ್ಮೆ ರೇಖಾಚಿತ್ರ 5.2(ಎ)ದ ಮೂಲಕ

ವಿವರಿಸಬಹುದು. ಇಲ್ಲಿ ಬೇಡಿಕೆ ರೇಖೆ $DD_0$ ಯು ಬಲಭಾಗಕ್ಕೆ $DD_2$ಗೆ ಪಲ್ಲಟಗೊಂಡಿದೆ. ಪೂರೈಕೆ ರೇಖೆಯು $SS_0$ ದಲ್ಲಿ ಬದಲಾಗದೇ ಉಳಿದಿದೆ. ಹಳೆಯ ಸಮತೋಲನ ಬಿಂದು E ಗೆ ಹೋಲಿಸಿದಾಗ ಹೊಸ ಸಮತೋಲನ ಬಿಂದುವಾದ G ಬಿಂದುವಿನಲ್ಲಿ ಬೆಲೆ ಹಾಗೂ ಬೇಡಿಕೆ ಮತ್ತು ಪೂರೈಕೆ ಪ್ರಮಾಣಗಳೆರಡರಲ್ಲಿಯೂ ಹೆಚ್ಚಳವಾಗುತ್ತದೆಂಬುದನ್ನು ರೇಖಾಚಿತ್ರವು ಸ್ಪಷ್ಟಪಡಿಸುತ್ತದೆ.

**ಪೂರೈಕೆಯ ಪಲ್ಲಟ *Supply Shift***

ಸಮತೋಲನ ಬೆಲೆ ಮತ್ತು ಪ್ರಮಾಣಗಳ ಮೇಲೆ ಪೂರೈಕೆ ರೇಖೆಯ ಪಲ್ಲಟದ ಪರಿಣಾಮವನ್ನು ನಾವು ರೇಖಾಚಿತ್ರ 5.3ರಲ್ಲಿ ತೋರಿಸಿದ್ದೇವೆ. ಪ್ರಾರಂಭದಲ್ಲಿ ಮಾರುಕಟ್ಟೆಯು E ಬಿಂದುವಿನಲ್ಲಿ ಸಮತೋಲನ ಹೊಂದಿದೆ ಎಂದು ಭಾವಿಸೋಣ. ಇಲ್ಲಿ ಮಾರುಕಟ್ಟೆ ಬೇಡಿಕೆ ರೇಖೆ $DD_0$ಯು ಮಾರುಕಟ್ಟೆ ಪೂರೈಕೆ ರೇಖೆ $SS_0$ವನ್ನು ಛೇದಿಸಿದೆ. ಆಗ $p_0$ ಸಮತೋಲನ ಬೆಲೆಯಾಗಿದೆ ಮತ್ತು $q_0$ ಸಮತೋಲನ ಪ್ರಮಾಣವಾಗಿದೆ.




**ರೇಖಾಚಿತ್ರ 5.3: ಪೂರೈಕೆಯಲ್ಲಿ ಪಲ್ಲಟಗಳು.** ಪ್ರಾರಂಭದಲ್ಲಿ ಮಾರುಕಟ್ಟೆಯು ಬಿಂದುವಿನಲ್ಲಿ ಸಮತೋಲನ ಹೊಂದಿದೆ. ಪೂರೈಕೆ ರೇಖೆಯ ಎಡಭಾಗದ ಪಲ್ಲಟದಿಂದಾಗಿ, ರೇಖಾಚಿತ್ರದ ಫಲಕ(ಎ)ದಲ್ಲಿ ತೋರಿಸಿದಂತೆ, ಹೊಸ ಸಮತೋಲನ ಬಿಂದುವು G ಆಗಿದೆ. ಫಲಕ(ಬಿ) ದಲ್ಲಿ ತೋರಿಸಿದಂತೆ, ಪೂರೈಕೆ ರೇಖೆಯು ಬಲಗಡೆಗೆ ಪಲ್ಲಟವಾಗಿದ್ದಕ್ಕಾಗಿ, ಹೊಸ ಸಮತೋಲನ ಬಿಂದುವು F ಆಗಿದೆ. ಪೂರೈಕೆ ರೇಖೆಯ ಬಲಭಾಗದ ಪಲ್ಲಟದೊಂದಿಗೆ, ಸಮತೋಲನ ಪ್ರಮಾಣವು ಹೆಚ್ಚಾಗುತ್ತದೆ ಮತ್ತು ಬೆಲೆ ಕಡಿಮೆಯಾಗುತ್ತದೆ. ಆದರೆ ಪೂರೈಕೆ ರೇಖೆಯ ಎಡಭಾಗದ ಪಲ್ಲಟದೊಂದಿಗೆ, ಸಮತೋಲನ ಪ್ರಮಾಣವು ಕಡಿಮೆಯಾಗುತ್ತದೆ. ಮತ್ತು ಸಮತೋಲನ ಬೆಲೆ ಹೆಚ್ಚಾಗುತ್ತದೆ.



ಈಗ ರೇಖಾಚಿತ್ರದ ಫಲಕ(ಎ)ದಲ್ಲಿ ತೋರಿಸಿರುವಂತೆ, ಕೆಲವು ಕಾರಣದಿಂದಾಗಿ, ಮಾರುಕಟ್ಟೆ ಪೂರೈಕೆ ರೇಖೆಯು ಎಡಭಾಗ $SS_2$ ಗೆ ಪಲ್ಲಟವಾಗುತ್ತದೆಂದು ಹಾಗೂ ಬೇಡಿಕೆರೇಖೆಯು ಬದಲಾಗದೇ ಉಳಿದಿದೆ ಎಂದು ಭಾವಿಸೋಣ. ಪೂರೈಕೆ ರೇಖೆಯ ಪಲ್ಲಟದಿಂದಾಗಿ ಪ್ರಸ್ತುತಬೆಲೆ $p_0$ ದಲ್ಲಿ ಮಾರುಕಟ್ಟೆಯಲ್ಲಿ $q''_0\ q_0$ ಗೆ ಸಮನಾದ ಅಧಿಕ ಬೇಡಿಕೆ ಉಂಟಾಗುತ್ತದೆ. ಸರಕನ್ನು ಪಡೆಯಲು ಸಾಧ್ಯವಾಗದ ಕೆಲವು ಗ್ರಾಹಕರು ಹೆಚ್ಚಿನ ಬೆಲೆಗಳನ್ನು ಪಾವತಿಸಲು ಬಯಸುತ್ತಾರೆ ಮತ್ತು ಮಾರುಕಟ್ಟೆ ಬೆಲೆಯಲ್ಲಿ ಹೆಚ್ಚಳದ ಪ್ರವೃತ್ತಿ ಕಂಡುಬರುತ್ತದೆ. ಹೊಸ ಸಮತೋಲನವು G ಬಿಂದುವಿನಲ್ಲಿ ಸಾಧಿತವಾಗುತ್ತದೆ. ಇಲ್ಲಿ ಪೂರೈಕೆ ರೇಖೆ $SS_2$ ರೇಖೆಯು ಬೇಡಿಕೆ ರೇಖೆಯಾದ $DD_0$ ರೇಖೆಯನ್ನು ಛೇದಿಸುತ್ತದೆ ಆಗ $p_2$ ಬೆಲೆಯಲ್ಲಿ $q_2$ ಪ್ರಮಾಣವನ್ನು ಕೊಳ್ಳಲಾಗುತ್ತದೆ ಮತ್ತು ಮಾರಾಟ ಮಾಡಲಾಗುತ್ತದೆ. ಅದೇರೀತಿ, ಪೂರೈಕೆ ರೇಖೆಯು ಬಲಗಡೆಗೆ ಪಲ್ಲಟವಾದಾಗ ಫಲಕ(ಬಿ) ದಲ್ಲಿ ತೋರಿಸಿದಂತೆ, $p_0$ ಬೆಲೆಯಲ್ಲಿ $q_0q'_0$ ಗೆ ಸಮನಾದ ಪ್ರಮಾಣದಲ್ಲಿ ಸರಕುಗಳ ಪೂರೈಕೆಯ ಹೆಚ್ಚಳ ಕಂಡುಬರುತ್ತದೆ. ಈ ಅಧಿಕ ಪೂರೈಕೆಗೆ ಪ್ರತಿಕ್ರಿಯೆಯಾಗಿ, ಕೆಲವು ಉದ್ಯಮಘಟಕಗಳು ತಮ್ಮ ಸರಕಿನ ಬೆಲೆ ಕಡಿತಗೊಳಿಸುತ್ತವೆ ಮತ್ತು ಹೊಸ ಸಮತೋಲನವು F ಬಿಂದುವಿನಲ್ಲಿ ಸಾಧಿತವಾಗುತ್ತದೆ. ಇಲ್ಲಿ ಪೂರೈಕೆ ರೇಖೆಯಾದ $SS_1$ ರೇಖೆಯನ್ನು ಬೇಡಿಕೆರೇಖೆ $DD_0$ ರೇಖೆಯು ಛೇದಿಸುತ್ತದೆ. ಆಗ ಹೊಸ ಮಾರುಕಟ್ಟೆ ಬೆಲೆ $p_1$ ನಲ್ಲಿ $q_1$ ಪ್ರಮಾಣದ ಖರೀದಿ ಮತ್ತು ಮಾರಾಟ ನಡೆಯುತ್ತದೆ. ಪೂರೈಕೆ ರೇಖೆಯು ಪಲ್ಲಟಗೊಂಡಾಗಲೆಲ್ಲಾ ಬೆಲೆ ಮತ್ತು ಪ್ರಮಾಣಗಳ ಬದಲಾವಣೆಯ ದಿಕ್ಕು ವಿರುದ್ಧವಾಗುವುದನ್ನು ಗಮನಿಸಿ.

ಈ ತಿಳುವಳಿಕೆಯೊಂದಿಗೆ, ಮಾರುಕಟ್ಟೆಯ ವಿವಿಧ ಸಂಗತಿಗಳು ಬದಲಾದಾಗ, ಸಮತೋಲನ ಬೆಲೆ ಮತ್ತು ಪ್ರಮಾಣಗಳ ವರ್ತನೆಗಳನ್ನು ವಿಶ್ಲೇಷಿಸಬಹುದು. ಇಲ್ಲಿ ಸಮತೋಲನದ ಮೇಲೆ ಆದಾನಗಳ ಬೆಲೆಯಲ್ಲಿನ ಹೆಚ್ಚಳದ ಪರಿಣಾಮ ಮತ್ತು ಉದ್ಯಮಘಟಕಗಳ ಸಂಖ್ಯೆಯ ಹೆಚ್ಚಳದ ಪರಿಣಾಮಗಳನ್ನು ಪರಿಗಣಿಸೋಣ.

ಈಗ ನಾವು ಇತರೆ ಎಲ್ಲಾ ಅಂಶಗಳು ಸ್ಥಿರವಾಗಿರುವ, ಒಂದು ಸರಕಿನ ಉತ್ಪಾದನೆಯಲ್ಲಿ ಬಳಸುವ ಆದಾನವೊಂದರ ಬೆಲೆಯಲ್ಲಿ ಹೆಚ್ಚಳವಾಗುವ ಸನ್ನಿವೇಶವನ್ನು ಪರಿಗಣಿಸೋಣ. ಇದು ಈ ಆದಾನವನ್ನು ಬಳಸುವ ಉದ್ಯಮಘಟಕಗಳ ಸೀಮಾಂತ ಉತ್ಪಾದನಾ ವೆಚ್ಚದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಆದ್ದರಿಂದ ಪ್ರತೀಬೆಲೆಯಲ್ಲಿ ಮಾರುಕಟ್ಟೆ ಪೂರೈಕೆಯು ಈ ಮೊದಲಿಗಿಂತ ಕಡಿಮೆಯಾಗುತ್ತದೆ. ಹೀಗಾಗಿ ಪೂರೈಕೆ ರೇಖೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ. ರೇಖಾಚಿತ್ರ 5.3(ಎ)ದಲ್ಲಿ ಪೂರೈಕೆ ರೇಖೆಯು $SS_0$ ದಿಂದ $SS_2$ ಗೆ ಪಲ್ಲಟಗೊಂಡಿರುವುದನ್ನು ತೋರಿಸಲಾಗಿದೆ. ಆದರೆ ಆದಾನ ಬೆಲೆಯಲ್ಲಿನ ಈ ಏರಿಕೆಯು ಅನುಭೋಗಿಗಳ ಬೇಡಿಕೆಯ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ. ಏಕೆಂದರೆ ಬೇಡಿಕೆಯು ಆದಾನ ಬೆಲೆಗಳನ್ನು ನೇರವಾಗಿ ಅವಲಂಬಿಸಿರುವುದಿಲ್ಲ. ಆದ್ದರಿಂದ ಬೇಡಿಕೆರೇಖೆಯು ಬದಲಾಗದೇ ಉಳಿಯುತ್ತದೆ. ರೇಖಾಚಿತ್ರ 5.3(ಎ)ದಲ್ಲಿ ಇದನ್ನು ತೋರಿಸಲಾಗಿದ್ದು, ಬೇಡಿಕೆರೇಖೆಯು $DD_0$ದಲ್ಲಿ ಬದಲಾಗದೇ ಉಳಿದಿದೆ. ಪರಿಣಾಮವಾಗಿ ಮೊದಲಿನ ಸಮತೋಲನಕ್ಕೆ ಹೋಲಿಸಿದರೆ, ಈಗ ಮಾರುಕಟ್ಟೆ ಬೆಲೆಯು ಏರುತ್ತದೆ ಮತ್ತು ಉತ್ಪನ್ನದ ಪ್ರಮಾಣ ಕಡಿಮೆಯಾಗುತ್ತದೆ.

ಈಗ ನಾವು ಉದ್ಯಮಘಟಕಗಳ ಸಂಖ್ಯೆಯಲ್ಲಿನ ಹೆಚ್ಚಳದ ಪರಿಣಾಮವನ್ನು ಚರ್ಚಿಸೋಣ. ಪ್ರತೀಬೆಲೆಯಲ್ಲಿ ಈಗ ಹೆಚ್ಚಿನ ಉದ್ಯಮಘಟಕಗಳು ಸರಕನ್ನು ಪೂರೈಸುತ್ತವೆ, ಹಾಗಾಗಿ ಪೂರೈಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುತ್ತದೆ. ಆದರೆ ಇದು ಬೇಡಿಕೆ ರೇಖೆಯ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ. ಈ ಉದಾಹರಣೆಯನ್ನು ರೇಖಾಚಿತ್ರ 5.3(ಬಿ) ದಲ್ಲಿ ನಿರೂಪಿಸಬಹುದು. ಇಲ್ಲಿ ಪೂರೈಕೆ ರೇಖೆಯು $SS_0$ ದಿಂದ $SS_1$ಗೆ ಪಲ್ಲಟವಾಗಿದೆ. ಆದರೆ ಬೇಡಿಕೆ ರೇಖೆಯು ಬದಲಾಗದೇ ಹಾಗೇ $DD_0$ ದಲ್ಲಿ ಉಳಿದಿದೆ. ಪ್ರಾರಂಭದ ಸನ್ನಿವೇಶಕ್ಕೆ ಹೋಲಿಸಿದರೆ, ಸರಕಿನ ಬೆಲೆಯು ಕಡಿಮೆಯಾಗುತ್ತದೆ ಮತ್ತು ಉತ್ಪನ್ನದ ಪ್ರಮಾಣವು ಹೆಚ್ಚುತ್ತದೆಂಬುದನ್ನು ಈ ರೇಖಾಚಿತ್ರದಿಂದ ನಾವು ತಿಳಿಯಬಹುದು.

### ಬೇಡಿಕೆ ಮತ್ತು ಪೂರೈಕೆಯ ಏಕಕಾಲಿಕ ಪಲ್ಲಟಗಳು
### *Simultaneous Shifts of Demand and Supply*

ಬೇಡಿಕೆ ಮತ್ತು ಪೂರೈಕೆಗಳೆರಡೂ ಏಕಕಾಲಕ್ಕೆ ಪಲ್ಲಟಗೊಂಡರೆ ಏನಾಗುತ್ತದೆ? ನಾಲ್ಕು ಸಂಭವನೀಯ ವಿಧಾನಗಳಲ್ಲಿ ಪಲ್ಲಟಗಳು ಏಕಕಾಲದಲ್ಲಿ ಸಂಭವಿಸಬಹುದು.

(i) ಪೂರೈಕೆ ರೇಖೆ ಮತ್ತು ಬೇಡಿಕೆ ರೇಖೆಗಳೆರಡೂ ಬಲಗಡೆಗೆ ಪಲ್ಲಟಗೊಳ್ಳುವುದು.

(ii) ಪೂರೈಕೆ ರೇಖೆ ಮತ್ತು ಬೇಡಿಕೆ ರೇಖೆಗಳೆರಡೂ ಎಡಗಡೆಗೆ ಪಲ್ಲಟಗೊಳ್ಳುವುದು.

(iii) ಪೂರೈಕೆ ರೇಖೆಯು ಎಡಗಡೆಗೆ ಪಲ್ಲಟಗೊಳ್ಳುವುದು ಮತ್ತು ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುವುದು.

(iv) ಪೂರೈಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುವುದು ಮತ್ತು ಬೇಡಿಕೆ ರೇಖೆಯು ಎಡಗಡೆಗೆ ಪಲ್ಲಟಗೊಳ್ಳುವುದು.

ಎಲ್ಲಾ ನಾಲ್ಕೂ ಸನ್ನಿವೇಶಗಳಲ್ಲಿ ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳ ಮೇಲಿನ ಪರಿಣಾಮವನ್ನು ಕೋಷ್ಟಕ 5.1ರಲ್ಲಿ ನೀಡಲಾಗಿದೆ. ಬೇಡಿಕೆ ಮತ್ತು ಪೂರೈಕೆ ರೇಖೆಗಳ ಪ್ರತಿಯೊಂದು ಸಂಭವನೀಯ ಸಂಯೋಜನೆಗಳ ಏಕಕಾಲಿಕ ಪಲ್ಲಟಗಳಿಗೆ ಬದಲಾಗುವ ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳು ಯಾವದಿಕ್ಕಿನಲ್ಲಿ ಬದಲಾಗುತ್ತದೆ ಎಂಬುದನ್ನು ಕೋಷ್ಟಕದ ಪ್ರತಿಯೊಂದು ಅಡ್ಡಸಾಲು ವಿವರಿಸುತ್ತದೆ. ಉದಾಹರಣೆಗೆ, ಕೋಷ್ಟಕದ ಎರಡನೇ ಅಡ್ಡಸಾಲಿನಲ್ಲಿ ನಾವು ಕಾಣುವುದೇನೆಂದರೆ,

ಬೇಡಿಕೆ ಮತ್ತು ಪೂರೈಕೆ ರೇಖೆಗಳು ಬಲಗಡೆಗೆ ಪಲ್ಲಟಗೊಳ್ಳುವುದರಿಂದ ಸಮತೋಲನ ಪ್ರಮಾಣವು ಬದಲಾಗದೇ ಹೆಚ್ಚಾಗುತ್ತದೆ. ಆದರೆ ಸಮತೋಲನ ಬೆಲೆಯು ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಇಲ್ಲವೇ ಬದಲಾಗದೇ ಉಳಿಯಬಹುದು. ಬೆಲೆಯಲ್ಲಿನ ಬದಲಾವಣೆಯ ನೈಜದಿಕ್ಕು ಪಲ್ಲಟಗಳ ಪರಿಮಾಣವನ್ನು ಅವಲಂಬಿಸಿರುತ್ತದೆ. ಈ ನಿರ್ದಿಷ್ಟ ಸಂಗತಿಯ ಪರಿಶೀಲನೆಗಾಗಿ ಪಲ್ಲಟಗಳ ಪರಿಮಾಣವನ್ನು ಬದಲಿಸಿ ನೀವೇ ಪರಿಶೀಲಿಸಿ.

ಕೋಷ್ಟಕದ ಮೊದಲ ಎರಡು ಅಡ್ಡಸಾಲುಗಳಲ್ಲಿ ತೋರಿಸಿದಂತೆ ಮೊದಲ ಎರಡು ಸನ್ನಿವೇಶಗಳಲ್ಲಿ ಸಮತೋಲನದ ಪ್ರಮಾಣದ ಮೇಲೆ ಪರಿಣಾಮವು ಸ್ಪಷ್ಟವಾದುದಾಗಿದೆ. ಆದರೆ ಸಮತೋಲನ ಬೆಲೆಯು ಪಲ್ಲಟಗಳ ಪ್ರಮಾಣಗಳನ್ನು ಅವಲಂಬಿಸಿ ಎರಡೂ ದಿಕ್ಕಿನಲ್ಲಿ ಬದಲಾಗಬಹುದು. ಕೋಷ್ಟಕದ ಕೊನೆಯ ಎರಡು ಅಡ್ಡಸಾಲುಗಳಲ್ಲಿ ತೋರಿಸಿದಂತೆ ನಂತರದ ಎರಡು ಸನ್ನಿವೇಶಗಳಲ್ಲಿ ಬೆಲೆ ಮೇಲಿನ ಪರಿಣಾಮ ಸ್ಪಷ್ಟವಾದುದಾಗಿದೆ. ಆದರೆ, ಪ್ರಮಾಣದಲ್ಲಿನ ಪರಿಣಾಮವು ಎರಡು ರೇಖೆಗಳಲ್ಲಿನ ಪಲ್ಲಟಗಳ ವಿಸ್ತಾರವನ್ನು ಅವಲಂಬಿಸಿರುತ್ತದೆ.

**ಕೋಷ್ಟಕ 5.1 ಸಮತೋಲನದ ಮೇಲೆ ಏಕಕಾಲದ ಪಲ್ಲಟಗಳ ಪರಿಣಾಮ**

| ಬೇಡಿಕೆಯಲ್ಲಿ ಪಲ್ಲಟ | ಪೂರೈಕೆಯಲ್ಲಿ ಪಲ್ಲಟ | ಪ್ರಮಾಣ | ಬೆಲೆ |
|---|---|---|---|
| ಎಡಗಡೆಗೆ | ಎಡಗಡೆಗೆ | ಕಡಿಮೆಯಾಗುತ್ತದೆ | ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಇಲ್ಲವೇ ಬದಲಾಗದೇ ಉಳಿಯಬಹುದು |
| ಬಲಗಡೆಗೆ | ಬಲಗಡೆಗೆ | ಹೆಚ್ಚಾಗುತ್ತದೆ | ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಇಲ್ಲವೇ ಬದಲಾಗದೇ ಉಳಿಯಬಹುದು |
| ಎಡಗಡೆಗೆ | ಬಲಗಡೆಗೆ | ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಇಲ್ಲವೇ ಬದಲಾಗದೇ ಉಳಿಯಬಹುದು | ಕಡಿಮೆಯಾಗುತ್ತದೆ |
| ಬಲಗಡೆಗೆ | ಎಡಗಡೆಗೆ | ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಇಲ್ಲವೇ ಬದಲಾಗದೇ ಉಳಿಯಬಹುದು | ಹೆಚ್ಚಾಗುತ್ತದೆ |

ಇಲ್ಲಿ ರೇಖಾಚಿತ್ರ 5.4 ರಲ್ಲಿ ಪ್ರಕರಣ (ii) ಮತ್ತು ಪ್ರಕರಣ (iii) ಗಳಿಗೆ ರೇಖಾಚಿತ್ರದ ನಿರೂಪಣೆಗಳನ್ನು ನೀಡಲಾಗಿದೆ ಮತ್ತು ಉಳಿದವುಗಳನ್ನು ಓದುಗರ ಅಭ್ಯಾಸಕ್ಕಾಗಿ ಬಿಡಲಾಗಿದೆ.




**ರೇಖಾಚಿತ್ರ 5.4: ಬೇಡಿಕೆ ಮತ್ತು ಪೂರೈಕೆಯಲ್ಲಿನ ಏಕಕಾಲಿಕ ಪಲ್ಲಟಗಳು.** ಆರಂಭದಲ್ಲಿ ಸಮತೋಲನವು ಬೇಡಿಕೆ ರೇಖೆ $DD_0$ ಮತ್ತು ಪೂರೈಕೆ ರೇಖೆ $SS_0$ಗಳು ಸಂಧಿಸುವ E ಬಿಂದುವಿನಲ್ಲಿದೆ. ರೇಖಾಚಿತ್ರದ ಫಲಕ(ಎ)ದಲ್ಲಿ, ಪೂರೈಕೆ ಮತ್ತು ಬೇಡಿಕೆ ರೇಖೆಗಳೆರಡೂ ಬಲಭಾಗಕ್ಕೆ ಪಲ್ಲಟಗೊಂಡಿವೆ. ಇಲ್ಲಿ ಬೆಲೆಯು ಬದಲಾಗುವುದಿಲ್ಲ ಆದರೆ ಪ್ರಮಾಣವು ಹೆಚ್ಚಾಗುತ್ತದೆ. ಫಲಕ(ಬಿ)ದಲ್ಲಿ ಪೂರೈಕೆ ರೇಖೆಯು ಬಲಭಾಗಕ್ಕೆ ಪಲ್ಲಟಗೊಳ್ಳುತ್ತದೆ. ಮತ್ತು ಬೇಡಿಕೆ ರೇಖೆಯು ಎಡಭಾಗಕ್ಕೆ ಪಲ್ಲಟಗೊಳ್ಳುತ್ತದೆ. ಇಲ್ಲಿ ಪ್ರಮಾಣವು ಬದಲಾಗುವುದಿಲ್ಲ ಆದರೆ ಬೆಲೆಯು ಇಳಿಕೆಯಾಗುತ್ತದೆ.

ರೇಖಾಚಿತ್ರ 5.4(ಎ)ದಲ್ಲಿ, ಬೇಡಿಕೆ ಮತ್ತು ಪೂರೈಕೆ ರೇಖೆಗಳೆರಡರಲ್ಲಿ ಬಲಭಾಗದ ಪಲ್ಲಟಗಳಿಂದಾಗಿ, ಸಮತೋಲನ ಪ್ರಮಾಣವು ಹೆಚ್ಚಾಗುತ್ತದೆ ಆದರೆ ಸಮತೋಲನ ಬೆಲೆಯು ಬದಲಾಗದೇ ಉಳಿದಿರುವುದನ್ನು ಕಾಣಬಹುದು ಮತ್ತು ರೇಖಾಚಿತ್ರ 5.4(ಬಿ)ದಲ್ಲಿ, ಸಮತೋಲನ ಪ್ರಮಾಣವು ಬದಲಾಗದೇ ಇರುತ್ತದೆ. ಆದರೆ ಬೇಡಿಕೆ ರೇಖೆಯಲ್ಲಿನ ಎಡಭಾಗದ ಪಲ್ಲಟ ಮತ್ತು ಪೂರೈಕೆ ರೇಖೆಯಲ್ಲಿನ ಬಲಭಾಗದ ಪಲ್ಲಟದ ಕಾರಣದಿಂದಾಗಿ, ಸಮತೋಲನ ಬೆಲೆಯು ಇಳಿಕೆಯಾಗುತ್ತದೆ.

### 5.1.2 ಮಾರುಕಟ್ಟೆ ಸಮತೋಲನ: ಮುಕ್ತ ಪ್ರವೇಶ ಮತ್ತು ನಿರ್ಗಮನ *Market Equilibrium: Free Entry and Exit*

ಹಿಂದಿನ ವಿಭಾಗದಲ್ಲಿ, ಸ್ಥಿರಸಂಖ್ಯೆಯ ಉದ್ಯಮಘಟಕಗಳ ಊಹೆಯ ಅಡಿಯಲ್ಲಿ ಮಾರುಕಟ್ಟೆ ಸಮತೋಲನವನ್ನು ಅಭ್ಯಸಿಸಿದ್ದೇವೆ. ಈ ವಿಭಾಗದಲ್ಲಿ, ಉದ್ಯಮಘಟಕಗಳು ಮುಕ್ತವಾಗಿ ಮಾರುಕಟ್ಟೆಯನ್ನು ಪ್ರವೇಶಿಸುವ ಮತ್ತು ನಿರ್ಗಮಿಸುವ ಅವಕಾಶವಿದ್ದಾಗ, ಮಾರುಕಟ್ಟೆ ಸಮತೋಲನವನ್ನು ಅಭ್ಯಸಿಸುತ್ತೇವೆ. ಇಲ್ಲಿ ಸರಳತೆಗಾಗಿ, ಮಾರುಕಟ್ಟೆಯಲ್ಲಿನ ಎಲ್ಲಾ ಉದ್ಯಮಘಟಕಗಳು ತದ್ರೂಪಿಗಳಾಗಿವೆ ಎಂದು ನಾವು ಊಹಿಸಿಕೊಂಡಿದ್ದೇವೆ.

ಪ್ರವೇಶ ಮತ್ತು ನಿರ್ಗಮನ ಕಲ್ಪನೆಯ ಅಂತರಾರ್ಥವೇನು? ಈ ಊಹೆಯು ಸಮತೋಲನದಲ್ಲಿ ಯಾವ ಉದ್ಯಮಘಟಕಗಳೂ ಅಸಾಮಾನ್ಯ (*Super normal*)ಲಾಭ ಗಳಿಸುವುದಿಲ್ಲ ಅಥವಾ ಉತ್ಪಾದನೆಯಲ್ಲಿರುವುದರಿಂದ ಯಾವ ಉದ್ಯಮಘಟಕವೂ ನಷ್ಟ ಅನುಭವಿಸುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಸಮತೋಲನ ಬೆಲೆಯು, ಉದ್ಯಮಘಟಕಗಳ ಕನಿಷ್ಠ ಸರಾಸರಿ ವೆಚ್ಚಕ್ಕೆ ಸಮನಾಗಿರುತ್ತದೆ.

ಏಕೆ ಹೀಗಾಗುತ್ತದೆ ಎಂಬುದನ್ನು ತಿಳಿದುಕೊಳ್ಳಲು, ಸದ್ಯದ ಮಾರುಕಟ್ಟೆ ಬೆಲೆಯಲ್ಲಿ, ಪ್ರತಿ ಉದ್ಯಮಘಟಕವೂ ಅಸಾಮಾನ್ಯಲಾಭಗಳಿಸುತ್ತಿದೆ ಎಂದು ಭಾವಿಸೋಣ. ಅಸಾಮಾನ್ಯ ಲಾಭಗಳಿಸುವ ಸಾಧ್ಯತೆಯು ಕೆಲವು ಹೊಸ ಉದ್ಯಮಘಟಕಗಳನ್ನು ಆಕರ್ಷಿಸುತ್ತದೆ. ಇದು ಅಸಾಮಾನ್ಯಲಾಭದ ಕಡಿತಕ್ಕೆ ಕಾರಣವಾಗುತ್ತದೆ ಮತ್ತು ಅಂತಿಮವಾಗಿ ಸಾಕಷ್ಟು ಸಂಖ್ಯೆಯ ಉದ್ಯಮಘಟಕಗಳ ಆಗಮನದಿಂದಾಗಿ ಅಸಾಮಾನ್ಯಲಾಭವು ಇಲ್ಲವಾಗುತ್ತದೆ. ಈ ಸ್ಥಿತಿಯಲ್ಲಿ (ಬಿಂದುವಿನಲ್ಲಿ) ಮಾರುಕಟ್ಟೆಯಲ್ಲಿನ ಎಲ್ಲ ಉದ್ಯಮ

ಘಟಕಗಳು ಸಾಮಾನ್ಯಲಾಭ ಗಳಿಸುವುದರೊಂದಿಗೆ ಯಾವುದೊಂದು ಉದ್ಯಮಘಟಕಕ್ಕೂ ಮಾರುಕಟ್ಟೆ ಪ್ರವೇಶಿಸಲು ಉತ್ತೇಜನ ಸಿಗುವುದಿಲ್ಲ. ಅಂತೆಯೇ, ಸದ್ಯದಬೆಲೆಯಲ್ಲಿ ಒಂದುವೇಳೆ ಉದ್ಯಮಘಟಕಗಳು ಸಾಮಾನ್ಯಲಾಭಕ್ಕಿಂತ ಕಡಿಮೆ ಲಾಭಗಳಿಸುತ್ತಿದ್ದರೆ, ಕೆಲವು ಉದ್ಯಮಘಟಕಗಳು ಮಾರುಕಟ್ಟೆಯಿಂದ ನಿರ್ಗಮಿಸುತ್ತವೆ. ಇದು ಉದ್ಯಮಘಟಕಗಳ ಲಾಭಗಳಿಕೆಯಲ್ಲಿನ ಹೆಚ್ಚಳಕ್ಕೆ ಕಾರಣವಾಗುತ್ತದೆ ಮತ್ತು ಸಾಕಷ್ಟು ಸಂಖ್ಯೆಯ ಉದ್ಯಮಘಟಕಗಳೊಂದಿಗೆ, ಪ್ರತೀ ಉದ್ಯಮಘಟಕದ ಲಾಭವು ಸಾಮಾನ್ಯಲಾಭದ ಮಟ್ಟಕ್ಕೆ ಹೆಚ್ಚಾಗುತ್ತದೆ. ಈ ಸ್ಥಿತಿಯಲ್ಲಿ(ಬಿಂದು)ದಲ್ಲಿ, ಯಾವ ಉದ್ಯಮಘಟಕವೂ ಹೊರಹೋಗಲು ಬಯಸುವುದಿಲ್ಲ. ಏಕೆಂದರೆ ಅವುಗಳು ಈ ಸ್ಥಿತಿಯಲ್ಲಿ ಸಾಮಾನ್ಯಲಾಭ ಗಳಿಸುತ್ತಿರುತ್ತವೆ. ಹೀಗೆ ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನದೊಂದಿಗೆ, ಪ್ರತಿಯೊಂದು ಉದ್ಯಮಘಟಕವೂ ಸದ್ಯದ ಮಾರುಕಟ್ಟೆ ಬೆಲೆಯಲ್ಲಿ ಯಾವಾಗಲೂ ಸಾಮಾನ್ಯಲಾಭ ಗಳಿಸುತ್ತಿರುತ್ತದೆ.



ಎಲ್ಲರಿಗೂ ಉಚಿತ



ಹಿಂದಿನ ಅಧ್ಯಾಯದಿಂದ ನೆನಪಿಸಿಕೊಳ್ಳುವುದಾದರೆ, ಬೆಲೆಯು ಕನಿಷ್ಠ ಸರಾಸರಿ ವೆಚ್ಚಕ್ಕಿಂತ ಹೆಚ್ಚಾಗಿರುವವರೆಗೆ ಉದ್ಯಮಘಟಕಗಳು ಅಸಾಮಾನ್ಯ ಲಾಭಗಳಿಸುತ್ತವೆ ಮತ್ತು ಕನಿಷ್ಠ ಸರಾಸರಿ ವೆಚ್ಚಕ್ಕಿಂತ ಕಡಿಮೆಬೆಲೆಗಳಲ್ಲಿ ಉದ್ಯಮಘಟಕಗಳು ಸಾಮಾನ್ಯಲಾಭಕ್ಕಿಂತ ಕಡಿಮೆಗಳಿಸುತ್ತವೆ. ಆದ್ದರಿಂದ ಕನಿಷ್ಠ ಸರಾಸರಿ ವೆಚ್ಚಕ್ಕಿಂತ ಹೆಚ್ಚಾಗಿರುವ ಬೆಲೆಗಳಲ್ಲಿ ಹೊಸ ಉದ್ಯಮಘಟಕಗಳು ಮಾರುಕಟ್ಟೆ ಪ್ರವೇಶಿಸುತ್ತವೆ ಮತ್ತು ಕನಿಷ್ಠ ಸರಾಸರಿ ವೆಚ್ಚಕ್ಕಿಂತ ಕಡಿಮೆ ಇರುವ ಬೆಲೆಗಳಲ್ಲಿ, ಅಸ್ತಿತ್ವದಲ್ಲಿರುವ ಉದ್ಯಮಘಟಕಗಳು ನಿರ್ಗಮಿಸಲು ಪ್ರಾರಂಭಿಸುತ್ತವೆ. ಉದ್ಯಮಘಟಕಗಳ ಕನಿಷ್ಠ ಸರಾಸರಿ ವೆಚ್ಚಕ್ಕೆ ಸಮನಾದ ಬೆಲೆಮಟ್ಟದಲ್ಲಿ, ಪ್ರತೀ ಉದ್ಯಮಘಟಕವು ಸಾಮಾನ್ಯಲಾಭ ಗಳಿಸುತ್ತದೆ. ಹೀಗಾಗಿ ಯಾವುದೇ ಹೊಸ ಉದ್ಯಮಘಟಕವೂ ಮಾರುಕಟ್ಟೆಯನ್ನು ಪ್ರವೇಶಿಸಲು ಆಕರ್ಷಿತವಾಗುವುದಿಲ್ಲ ಹಾಗೂ ಈ ಹಂತದಲ್ಲಿನ ಉತ್ಪಾದನೆಯಿಂದಾಗಿ ಯಾವುದೇ ಉದ್ಯಮಘಟಕವು ನಷ್ಟ ಅನುಭವಿಸುವುದಿಲ್ಲವಾದ್ದರಿಂದ ಅಸ್ತಿತ್ವದಲ್ಲಿರುವ ಯಾವ ಉದ್ಯಮಘಟಕವೂ ಮಾರುಕಟ್ಟೆಯಿಂದ ನಿರ್ಗಮಿಸಲು ಬಯಸುವುದಿಲ್ಲ. ಹೀಗಾಗಿ ಈ ಬೆಲೆಯು ಮಾರುಕಟ್ಟೆಯಲ್ಲಿ ಅಸ್ತಿತ್ವದಲ್ಲಿರುತ್ತದೆ.

ಆದ್ದರಿಂದ, ಮಾರುಕಟ್ಟೆ ಬೆಲೆಯು ಯಾವಾಗಲೂ ಕನಿಷ್ಠ ಸರಾಸರಿ ವೆಚ್ಚಕ್ಕೆ ಸಮನಾಗಿರುತ್ತದೆ ಎಂಬುದನ್ನು ಉದ್ಯಮಘಟಕಗಳ ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನವು ಸೂಚಿಸುತ್ತದೆ. ಅದನ್ನು P = ಕನಿಷ್ಠ AC ಎಂದು ವ್ಯಕ್ತಪಡಿಸಬಹುದು.

ಸಮತೋಲನ ಬೆಲೆಯು ಕನಿಷ್ಠ ಸರಾಸರಿ ವೆಚ್ಚಕ್ಕೆ ಸಮನಾಗಿರುತ್ತದೆ ಎಂಬುದು ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಸಮತೋಲನದಲ್ಲಿ ಪೂರೈಕೆಯ ಪ್ರಮಾಣವು ಮಾರುಕಟ್ಟೆ ಬೇಡಿಕೆಯಿಂದ ನಿರ್ಧರಿಸಲ್ಪಡುತ್ತದೆ. ಸಮತೋಲನ ಬೆಲೆಯಲ್ಲಿ ಪೂರೈಕೆ–ಬೇಡಿಕೆಗಳು ಸಮನಾಗಿರುತ್ತವೆ. ರೇಖಾತ್ಮಕವಾಗಿ, ಇದನ್ನು ರೇಖಾಚಿತ್ರ 5.5ರಲ್ಲಿ ತೋರಿಸಲಾಗಿದೆ. ಇಲ್ಲಿ ಬೇಡಿಕೆ ರೇಖೆಯಾದ DD ರೇಖೆಯು $p_0$ = ಕನಿಷ್ಠ AC ರೇಖೆಯನ್ನು ಛೇದಿಸುವ E ಬಿಂದುವಿನಲ್ಲಿ ಮಾರುಕಟ್ಟೆಯು ಸಮತೋಲನದಲ್ಲಿದೆ. ಇಲ್ಲಿ ಮಾರುಕಟ್ಟೆ ಬೆಲೆ $p_0$ ಆಗಿದ್ದು ಮತ್ತು ಒಟ್ಟು ಬೇಡಿಕೆಯ ಪ್ರಮಾಣ ಮತ್ತು ಪೂರೈಕೆಯ ಪ್ರಮಾಣವು $q_0$ ಗೆ ಸಮನಾಗಿದೆ.

$p_0$=ಕನಿಷ್ಠ AC ರೇಖೆಯಲ್ಲಿ ಪ್ರತಿಯೊಂದು ಉದ್ಯಮಘಟಕವು ಒಂದೇ ಮೊತ್ತದ ಉತ್ಪನ್ನವನ್ನು $q_{of}$ ಪ್ರಮಾಣದಷ್ಟು ಪೂರೈಸುತ್ತದೆ.

ಆದ್ದರಿಂದ ಮಾರುಕಟ್ಟೆಯಲ್ಲಿ ಉದ್ಯಮ ಘಟಕಗಳ ಸಮತೋಲನ ಸಂಖ್ಯೆಯು $p_0$ ಬೆಲೆಯಲ್ಲಿ $q_0$ ಉತ್ಪನ್ನವನ್ನು ಪೂರೈಸಲು ಅಗತ್ಯವಿರುವ ಉದ್ಯಮಘಟಕಗಳ ಸಂಖ್ಯೆಗೆ ಸಮನಾಗಿರುತ್ತದೆ. ಪ್ರತಿಯೊಂದು ಸಂಸ್ಥೆಯೂ ಆ ಬೆಲೆಗೆ $q_{of}$ ಪ್ರಮಾಣವನ್ನು ಪೂರೈಸುತ್ತದೆ. ಒಂದುವೇಳೆ ನಾವು ಉದ್ಯಮಘಟಕಗಳ ಸಮತೋಲನ ಸಂಖ್ಯೆಯನ್ನು $n_0$ ಎಂದು ವ್ಯಕ್ತಪಡಿಸಿದರೆ, ಆಗ

$$n_0 = \frac{q_0}{q_{of}}$$ ಆಗುತ್ತದೆ.




**ರೇಖಾಚಿತ್ರ 5.5: ಮುಕ್ತ ಪ್ರವೇಶ ಮತ್ತು ನಿರ್ಗಮನದ ಮೂಲಕ ಬೆಲೆ ನಿರ್ಧಾರ.** ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಮುಕ್ತ ಪ್ರವೇಶ ಮತ್ತು ನಿರ್ಗಮನದೊಂದಿಗೆ ಸಮತೋಲನ ಬೆಲೆಯು ಯಾವಾಗಲೂ ಕನಿಷ್ಠ AC ಗೆ ಸಮನಾಗಿರುತ್ತದೆ ಮತ್ತು ಸಮತೋಲನ ಪ್ರಮಾಣವು ಮಾರುಕಟ್ಟೆ ಬೇಡಿಕೆ ರೇಖೆ DDಯು ಬೆಲೆರೇಖೆ( $p$ = ಕನಿಷ್ಠ AC) ಯೊಂದಿಗೆ ಛೇದಿಸುವ ಬಿಂದುವಿನಲ್ಲಿ ನಿರ್ಧರಿಸಲ್ಪಡುತ್ತದೆ.

ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣದ ನಿರ್ಧಾರಗಳನ್ನು ಹೆಚ್ಚು ಸ್ಪಷ್ಟವಾಗಿ ತಿಳಿದುಕೊಳ್ಳಲು ಈ ಮುಂದಿನ ಉದಾಹರಣೆಯನ್ನು ಗಮನಿಸೋಣ.

## ಉದಾಹರಣೆ 5.2

ಗೋಧಿ ಮಾರುಕಟ್ಟೆಯ ಉದಾಹರಣೆಯನ್ನು ಗಮನಿಸೋಣ. ಗೋಧಿಯ ಬೇಡಿಕೆ ರೇಖೆಯನ್ನು ಮುಂದಿನಂತೆ ಕೊಡಲಾಗಿದೆ.

$$q_D = 200 - p \text{ ಗೆ } 0 \le p \le 200$$
$$= 0 \quad \text{ ಗೆ } \; p > 200$$

ಮಾರುಕಟ್ಟೆಯು ಏಕರೂಪದ ಕೃಷಿಭೂಮಿಯನ್ನು ಹೊಂದಿದೆ ಎಂದು ಊಹಿಸಿಕೊಳ್ಳಿ. ಒಂದು ಕೃಷಿಭೂಮಿಯ ಪೂರೈಕೆ ರೇಖೆಯನ್ನು ಮುಂದಿನಂತೆ ಕೊಡಲಾಗಿದೆ.

$$q^s_f = 10 + p \quad \text{ ಗೆ } \; p \ge 20$$
$$= 0 \quad \text{ ಗೆ } \; 0 \le p < 20$$

ಕೃಷಿಭೂಮಿಯ ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನದ ಅರ್ಥವೇನೆಂದರೆ, ಕೃಷಿಕ್ಷೇತ್ರಗಳು ಕನಿಷ್ಠ ಸರಾಸರಿ ವೆಚ್ಚಕ್ಕಿಂತ ಕೆಳಮಟ್ಟದಲ್ಲಿ ಎಂದಿಗೂ ಉತ್ಪಾದಿಸುವುದಿಲ್ಲ. ಏಕೆಂದರೆ ಇಂತಹ ಉತ್ಪಾದನೆಯಿಂದ ಕೃಷಿಕರು ನಷ್ಟವನ್ನು ಅನುಭವಿಸುತ್ತಾರೆ. ಈ ಸನ್ನಿವೇಶದಲ್ಲಿ ಅವರು ಮಾರುಕಟ್ಟೆಯಿಂದ ನಿರ್ಗಮಿಸುತ್ತಾರೆ.

ನಮಗೆಲ್ಲ ತಿಳಿದಿರುವಂತೆ, ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನದೊಂದಿಗೆ ಕೃಷಿಯ ಕನಿಷ್ಠ ಸರಾಸರಿ ವೆಚ್ಚಕ್ಕೆ ಸಮನಾದ ಬೆಲೆಯಲ್ಲಿ ಮಾರುಕಟ್ಟೆಯು ಸಮತೋಲನ ಹೊಂದುತ್ತದೆ. ಆದ್ದರಿಂದ ಸಮತೋಲನ ಬೆಲೆಯು $p_0$ =20 ಆಗಿದೆ.

ಈ ಬೆಲೆಯಲ್ಲಿ ಮಾರುಕಟ್ಟೆಯ ಬೇಡಿಕೆಗೆ ಸಮನಾದ ಪ್ರಮಾಣದಲ್ಲಿ ಮಾರುಕಟ್ಟೆಯು ಪೂರೈಕೆಯನ್ನು ಒದಗಿಸುತ್ತದೆ. ಆದ್ದರಿಂದ ಬೇಡಿಕೆರೇಖೆಯಿಂದ ನಾವು ಸಮತೋಲನ ಪ್ರಮಾಣವನ್ನು ಪಡೆಯುತ್ತೇವೆ.

$$q_0 = 200 - 20 = 180$$

$p_0$ =20 ಬೆಲೆಯಲ್ಲಿಯೂ ಕೂಡ ಪ್ರತೀ ಕೃಷಿಭೂಮಿಯ ಪೂರೈಕೆಯು

$$q_{of} = 10 + 20 = 30$$

ಇರುತ್ತದೆ. ಆದ್ದರಿಂದ, ಕೃಷಿಭೂಮಿಗಳ ಸಂಖ್ಯೆಯು

$$n_0 = \frac{d_0}{d_{of}} = \frac{180}{30} = 6$$

ಹೀಗೆ ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನದೊಂದಿಗೆ, ಸಮತೋಲನ ಬೆಲೆ, ಸಮತೋಲನ ಪ್ರಮಾಣ ಮತ್ತು ಕೃಷಿಭೂಮಿಗಳ ಸಂಖ್ಯೆಗಳು ಅನುಕ್ರಮವಾಗಿ, ರೂ. 20, 180 ಕೆಜಿ ಮತ್ತು 6 ಆಗಿದೆ.

**ಬೇಡಿಕೆಯಲ್ಲಿ ಪಲ್ಲಟಗಳು *Shifts in Demand***

ಉದ್ಯಮಘಟಕಗಳು ಮಾರುಕಟ್ಟೆಯಲ್ಲಿ ಮುಕ್ತವಾಗಿ ಪ್ರವೇಶಿಸುವಾಗ ಹಾಗೂ ಮಾರುಕಟ್ಟೆಯಿಂದ ನಿರ್ಗಮಿಸುವಾಗ ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳ ಮೇಲೆ ಬೇಡಿಕೆಯಲ್ಲಿನ ಪಲ್ಲಟದ ಪರಿಣಾಮವನ್ನು ಪರಿಶೀಲಿಸೋಣ. ಎಲ್ಲಾ ಪರಿಸ್ಥಿತಿಗಳಲ್ಲಿ ಸಮತೋಲನ ಬೆಲೆಗಳು ಅಸ್ತಿತ್ವದಲ್ಲಿರುವ ಉದ್ಯಮಘಟಕಗಳ ಕನಿಷ್ಠ ಸರಾಸರಿ ವೆಚ್ಚಕ್ಕೆ ಸಮಾನವಾಗಿರುತ್ತವೆ ಎಂದು ಉದ್ಯಮಘಟಕಗಳ ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನವು ಸೂಚಿಸುತ್ತದೆ ಎಂಬುದು ಹಿಂದಿನ ವಿಭಾಗದ ಅಧ್ಯಾಯನದಿಂದ ನಮಗೆ ತಿಳಿದಿದೆ. ಈ ಪರಿಸ್ಥಿತಿಯಡಿಯಲ್ಲಿ, ಮಾರುಕಟ್ಟೆ ಬೇಡಿಕೆ ರೇಖೆಯು ಎರಡೂ ದಿಕ್ಕಿನಲ್ಲಿಯೂ ಪಲ್ಲಟಗೊಂಡರೂ ಸಹ ಹೊಸ ಸಮತೋಲನದಲ್ಲಿ ಮಾರುಕಟ್ಟೆಯು ಅಪೇಕ್ಷಿತ ಪ್ರಮಾಣವನ್ನು ಒಂದೇ ಬೆಲೆಗೆ ಪೂರೈಸುತ್ತದೆ.

ರೇಖಾಚಿತ್ರ 5.6ರಲ್ಲಿ $DD_0$ ರೇಖೆಯು ಮಾರುಕಟ್ಟೆ ಬೇಡಿಕೆ ರೇಖೆಯಾಗಿದ್ದು, ಇದು ವಿವಿಧ ಬೆಲೆಗಳಲ್ಲಿ ಅನುಭೋಗಿಗಳ ಬೇಡಿಕೆ ಪ್ರಮಾಣವನ್ನು ವ್ಯಕ್ತಪಡಿಸುತ್ತದೆ ಮತ್ತು $p_0$ ಉದ್ಯಮಘಟಕದ ಕನಿಷ್ಠ ಸರಾಸರಿ ವೆಚ್ಚಕ್ಕೆ ಸಮನಾದ ಬೆಲೆಯನ್ನು ಸೂಚಿಸುತ್ತದೆ. ಬೇಡಿಕೆರೇಖೆ $DD_0$ ಇದು $p_0$ = ಕನಿಷ್ಠ AC ರೇಖೆಯನ್ನು ಛೇದಿಸುವ E ಬಿಂದುವಿನಲ್ಲಿ ಆರಂಭಿಕ ಸಮತೋಲನವಿರುತ್ತದೆ ಮತ್ತು $q_0$ ಇದು ಒಟ್ಟು ಬೇಡಿಕೆಯ ಮತ್ತು ಒಟ್ಟು ಪೂರೈಕೆಯ ಪ್ರಮಾಣವಾಗಿದೆ. ಈ ಸನ್ನಿವೇಶದಲ್ಲಿ ಉದ್ಯಮಘಟಕಗಳ ಸಮತೋಲನ ಸಂಖ್ಯೆಯು $n_0$ ಆಗಿರುತ್ತದೆ.

ಈಗ ಕೆಲವು ಕಾರಣಗಳಿಂದ ಬೇಡಿಕೆ ರೇಖೆಯು ಬಲಕ್ಕೆ ಪಲ್ಲಟಗೊಂಡಿದೆ ಎಂದು ಭಾವಿಸೋಣ. $p_0$ ದಲ್ಲಿ ಸರಕಿಗೆ ಅಧಿಕ ಬೇಡಿಕೆ ಇದೆ. ಕೆಲವು ಅತೃಪ್ತ ಅನುಭೋಗಿಗಳು ಸರಕಿಗೆ ಅಧಿಕ ಬೆಲೆ ಪಾವತಿಸಲು ಬಯಸಿರುತ್ತಾರೆ. ಹೀಗಾಗಿ ಬೆಲೆಯು ಏರಿಕೆ ಪ್ರವೃತ್ತಿಯನ್ನು ಹೊಂದುತ್ತದೆ. ಇದು ಉದ್ಯಮಘಟಕಗಳು ಅಸಾಮಾನ್ಯ ಲಾಭಗಳಿಸುವ ಸಾಧ್ಯತೆಗೆ ಇಂಬು ನೀಡುತ್ತದೆ. ಇಂತಹ ಲಾಭವು ಮಾರುಕಟ್ಟೆಯಲ್ಲಿ ಹೊಸ ಉದ್ಯಮಗಳ ಆಕರ್ಷಣೆಗೆ ಕಾರಣವಾಗುತ್ತದೆ. ಈ ಹೊಸ ಉದ್ಯಮಘಟಕಗಳ ಪ್ರವೇಶದಿಂದಾಗಿ ಕ್ರಮೇಣ ಅಸಾಮಾನ್ಯ ಲಾಭ ಇಲ್ಲವಾಗುತ್ತದೆ. ಮತ್ತು ಬೆಲೆಯು ಪುನಃ $p_0$ ತಲುಪುತ್ತದೆ. ಈಗ ಮೊದಲಿನ ಬೆಲೆಯಲ್ಲಿ ಅಧಿಕ ಪ್ರಮಾಣವು ಪೂರೈಸಲ್ಪಡುತ್ತದೆ. ರೇಖಾಚಿತ್ರದ ಫಲಕ(ಎ)ದಿಂದ ನಾವು ಹೊಸ ಬೇಡಿಕೆ ರೇಖೆ $DD_1$, $p_0$ = ಕನಿಷ್ಠ AC ರೇಖೆಯನ್ನು F ಬಿಂದುವಿನಲ್ಲಿ ಛೇದಿಸುವುದನ್ನು ಕಾಣಬಹುದು. ಅಂದರೆ ಹೊಸ ಸಮತೋಲನವು ($p_0$, $q_1$)ಆಗಿದೆ. ಇಲ್ಲಿ $q_1$ ಪ್ರಮಾಣವು $q_0$ ಕ್ಕಿಂತ ದೊಡ್ಡದಾಗಿದೆ. ಹೊಸ ಉದ್ಯಮಘಟಕಗಳ ಪ್ರವೇಶದೊಂದಿಗೆ ಉದ್ಯಮಘಟಕಗಳ ಸಂಖ್ಯೆಯ ಹೊಸ ಸಮತೋಲನ $n_1$ ಇದು $n_0$ ಗಿಂತ ದೊಡ್ಡದಾಗಿದೆ. ಅದೇರೀತಿ ಬೇಡಿಕೆ ರೇಖೆಯು ಎಡಭಾಗಕ್ಕೆ $DD_2$ಗೆ ಪಲ್ಲಟಗೊಂಡಾಗ ಅಲ್ಲಿ $p_0$ ಬೆಲೆಯಲ್ಲಿ ಅಧಿಕ ಪೂರೈಕೆ ಇರುತ್ತದೆ.




**ರೇಖಾಚಿತ್ರ 5.6: ಬೇಡಿಕೆಯಲ್ಲಿ ಪಲ್ಲಟಗಳು.** ಆರಂಭದಲ್ಲಿ ಬೇಡಿಕೆ ರೇಖೆಯು $DD_0$ ಆಗಿರುತ್ತದೆ. ಸಮತೋಲನ ಪ್ರಮಾಣ ಮತ್ತು ಸಮತೋಲನ ಬೆಲೆಗಳು ಕ್ರಮವಾಗಿ $q_0$ ಮತ್ತು $p_0$ ಆಗಿರುತ್ತವೆ. ಬೇಡಿಕೆ ರೇಖೆಯು ಬಲಭಾಗಕ್ಕೆ $DD_1$ಗೆ ಪಲ್ಲಟವಾಗುವುದರೊಂದಿಗೆ, ರೇಖಾಚಿತ್ರದ ಫಲಕ(ಎ)ದಲ್ಲಿ ತೋರಿಸಿರುವಂತೆ ಸಮತೋಲನ ಪ್ರಮಾಣವು ಹೆಚ್ಚಾಗುತ್ತದೆ. ಮತ್ತು ಬೇಡಿಕೆ ರೇಖೆಯು ಎಡಭಾಗಕ್ಕೆ $DD_2$ ಗೆ ಪಲ್ಲಟವಾಗುವುದರೊಂದಿಗೆ, ರೇಖಾಚಿತ್ರದ ಫಲಕ(ಬಿ)ದಲ್ಲಿ ತೋರಿಸಿರುವಂತೆ ಸಮತೋಲನ ಪ್ರಮಾಣವು ಕಡಿಮೆಯಾಗುತ್ತದೆ. ಈ ಎರಡೂ ಸನ್ನಿವೇಶಗಳಲ್ಲಿ, ಸಮತೋಲನ ಬೆಲೆಯು ಬದಲಾಗದೆ $p_0$ ದಲ್ಲಿಯೇ ಉಳಿದಿದೆ.

ಈ ಅಧಿಕ ಪೂರೈಕೆಗೆ ಪ್ರತಿಕ್ರಿಯೆಯಾಗಿ $p_0$ ಬೆಲೆಯಲ್ಲಿ ತಾವು ಇಚ್ಛಿಸಿದ ಪ್ರಮಾಣದಲ್ಲಿ ಮಾರಾಟ ಮಾಡಲು ಸಾಧ್ಯವಾಗದ ಕೆಲವು ಉದ್ಯಮಘಟಕಗಳು ತಮ್ಮ ಸರಕಿನ ಬೆಲೆ ಕಡಿತಗೊಳಿಸಲು ಬಯಸುತ್ತವೆ. ಆಗ ಬೆಲೆ ಇಳಿಕೆ ಉಂಟಾಗುತ್ತದೆ. ಇದು ಅಸ್ತಿತ್ವದಲ್ಲಿರುವ ಕೆಲವು ಉದ್ಯಮಘಟಕಗಳ ನಿರ್ಗಮನಕ್ಕೆ ಕಾರಣವಾಗುತ್ತದೆ. ಮತ್ತು ಬೆಲೆಯು ಪುನಃ $p_0$ ತಲುಪುತ್ತದೆ. ಆದ್ದರಿಂದ, ಹೊಸ ಸಮತೋಲನದಲ್ಲಿ $p_0$ ಬೆಲೆಯಲ್ಲಿ, ಕಡಿಮೆಯಾದ ಬೇಡಿಕೆಗೆ ಸಮನಾದ ಕಡಿಮೆ ಪ್ರಮಾಣವು ಪೂರೈಸಲ್ಪಡುತ್ತದೆ. ಇದನ್ನು ರೇಖಾಚಿತ್ರದ ಫಲಕ(ಬಿ)ದಲ್ಲಿ ತೋರಿಸಲಾಗಿದೆ. ಇಲ್ಲಿ ಬೇಡಿಕೆ ರೇಖೆಯು $DD_0$ ದಿಂದ $DD_2$ಗೆ ಪಲ್ಲಟಗೊಂಡಿದ್ದಕ್ಕಾಗಿ, ಬೇಡಿಕೆಯ ಹಾಗೂ ಪೂರೈಕೆಯ ಪ್ರಮಾಣವು $q_2$ ಗೆ ಕಡಿಮೆಯಾಗುತ್ತದೆ. ಆದರೆ ಬೆಲೆಯು ಬದಲಾಗದೇ $p_0$ ದಲ್ಲಿಯೇ ಉಳಿಯುತ್ತದೆ. ಇಲ್ಲಿ ಅಸ್ತಿತ್ವದಲ್ಲಿರುವ ಕೆಲವು ಉದ್ಯಮಘಟಕಗಳ ನಿರ್ಗಮನದಿಂದಾಗಿ ಉದ್ಯಮಘಟಕಗಳ ಸಮತೋಲನ ಸಂಖ್ಯೆಯಾದ $n_2$ ಇದು $n_0$ ಗಿಂತ ಕಡಿಮೆಯಾಗುತ್ತದೆ. ಹೀಗೆ ಬೇಡಿಕೆಯಲ್ಲಿನ ಬಲಗಡೆ(ಎಡಗಡೆ) ಪಲ್ಲಟದಿಂದಾಗಿ, ಸಮತೋಲನ ಪ್ರಮಾಣ ಮತ್ತು ಉದ್ಯಮಘಟಕಗಳ ಸಂಖ್ಯೆಯು ಹೆಚ್ಚಾಗುತ್ತದೆ (ಕಡಿಮೆಯಾಗುತ್ತದೆ). ಆದರೆ ಸಮತೋಲನ ಬೆಲೆಯು ಬದಲಾಗುವುದಿಲ್ಲ.

ಇಲ್ಲಿ ನಾವು ಗಮನಿಸಬೇಕಾಗಿರುವುದೇನೆಂದರೆ, ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನದೊಂದಿಗೆ, ಬೇಡಿಕೆಯಲ್ಲಿನ ಪಲ್ಲಟವು ಸ್ಥಿರಸಂಖ್ಯೆಯ ಉದ್ಯಮಘಟಕಗಳ ಸಂಖ್ಯೆಯ ಮೇಲಿನ ಪರಿಣಾಮಕ್ಕಿಂತ, ಪ್ರಮಾಣದ ಮೇಲೆ ಹೆಚ್ಚಿನ ಪರಿಣಾಮ ಹೊಂದಿರುತ್ತದೆ. ಆದರೆ ಸ್ಥಿರಸಂಖ್ಯೆಯ ಉದ್ಯಮಘಟಕಗಳಂತಲ್ಲದೆ, ಇಲ್ಲಿ ಸಮತೋಲನ ಬೆಲೆಯ ಮೇಲೆ ಯಾವುದೇ ಪರಿಣಾಮವಿರುವುದಿಲ್ಲ.



## 5.2 ಅನ್ವಯಿಕೆಗಳು *Applications*

ಈ ಭಾಗದಲ್ಲಿ ನಾವು ಪೂರೈಕೆ–ಬೇಡಿಕೆ ವಿಶ್ಲೇಷಣೆಯನ್ನು ಹೇಗೆ ಅನ್ವಯಿಸಬಹುದೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ. ನಿರ್ದಿಷ್ಟವಾಗಿ ಬೆಲೆ ನಿಯಂತ್ರಣ ರೂಪದಲ್ಲಿ ಸರ್ಕಾರದ ಹಸ್ತಕ್ಷೇಪದ ಎರಡು ಉದಾಹರಣೆಗಳನ್ನು ನೋಡೋಣ. ಕೆಲವು ಸರಕು ಮತ್ತು ಸೇವೆಗಳ ಬೆಲೆಗಳು ಅಪೇಕ್ಷಿತ ಮಟ್ಟಕ್ಕಿಂತ ತೀರಾ ಅಧಿಕ ಅಥವಾ ತೀರಾ ಕಡಿಮೆಯಿದ್ದಾಗ ಸರ್ಕಾರವು ಅವುಗಳ ಬೆಲೆಗಳನ್ನು ನಿಯಂತ್ರಿಸುವ ಅವಶ್ಯಕತೆ ಆಗಾಗ್ಗೆ ಉಂಟಾಗುತ್ತದೆ. ಈ ಸರಕು ಸೇವೆಗಳಿಗೆ ಇಂತಹ ನಿಯಂತ್ರಣಗಳು ಮಾರುಕಟ್ಟೆಯ ಮೇಲೆ ಯಾವ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ಅವಲೋಕಿಸಲು ಪರಿಪೂರ್ಣ ಪೈಪೋಟಿಯ ಚೌಕಟ್ಟಿನಲ್ಲಿ ಈ ಸಮಸ್ಯೆಗಳನ್ನು ವಿಶ್ಲೇಷಿಸೋಣ.




### 5.2.1 ಬೆಲೆಮಿತಿ *Price ceiling*

ಕೆಲವು ನಿರ್ದಿಷ್ಟ ಸರಕುಗಳಿಗೆ ಗರಿಷ್ಠ ಅನುಮತಿಸುವ ಬೆಲೆಯನ್ನು ನಿಗದಿಪಡಿಸುವ ಸಂದರ್ಭಗಳಲ್ಲಿ ಸರ್ಕಾರವು ಕಾಣಿಸಿಕೊಳ್ಳುವುದು ತೀರಾ ಅಸಾಮಾನ್ಯವಾದುದೇನೂ ಅಲ್ಲ. **ಸರ್ಕಾರವು ಸರಕು ಅಥವಾ ಸೇವೆಯ ಬೆಲೆಗೆ ವಿಧಿಸಿದ ಮೇಲ್ಮಿತಿಯನ್ನು ಬೆಲೆಮಿತಿ** ಎಂದು ಕರೆಯಲಾಗುತ್ತದೆ. ಬೆಲೆಮಿತಿಯನ್ನು ಸಾಮಾನ್ಯವಾಗಿ ಅವಶ್ಯಕ ಸರಕುಗಳಾದ ಗೋಧಿ, ಅಕ್ಕಿ, ಸೀಮೆಎಣ್ಣೆ, ಸಕ್ಕರೆ ಇತ್ಯಾದಿಗಳ ಮೇಲೆ ವಿಧಿಸಲಾಗುತ್ತದೆ. ಮತ್ತು ಈ ಬೆಲೆಯು ಮಾರುಕಟ್ಟೆ ನಿರ್ಧರಿತ ಬೆಲೆಗಿಂತ ಕಡಿಮೆ ನಿಗದಿಯಾಗಿರುತ್ತದೆ. ಏಕೆಂದರೆ ಮಾರುಕಟ್ಟೆ ನಿರ್ಧರಿತ ಬೆಲೆಯಲ್ಲಿ ಜನಸಂಖ್ಯೆಯ ಕೆಲಭಾಗವು ಈ ಸರಕುಗಳನ್ನು ಪಡೆಯಲು ಶಕ್ತವಾಗಿರುವುದಿಲ್ಲ. ಈಗ ನಾವು ಗೋಧಿ

ಮಾರುಕಟ್ಟೆಯ ಉದಾಹರಣೆಯೊಂದಿಗೆ ಮಾರುಕಟ್ಟೆ ಸಮತೋಲನದ ಮೇಲೆ ಬೆಲೆಮಿತಿಯ ಪರಿಣಾಮಗಳನ್ನು ಪರಿಶೀಲಿಸೋಣ.

ರೇಖಾಚಿತ್ರ 5.7ರಲ್ಲಿ ಗೋಧಿಯ ಮಾರುಕಟ್ಟೆ ಪೂರೈಕೆ ರೇಖೆ SSಯನ್ನು ಮತ್ತು ಮಾರುಕಟ್ಟೆ ಬೇಡಿಕೆ ರೇಖೆ DDಯನ್ನು ತೋರಿಸಲಾಗಿದೆ.

ಗೋಧಿಯ ಸಮತೋಲನ ಬೆಲೆ ಮತ್ತು ಪ್ರಮಾಣಗಳು ಅನುಕ್ರಮವಾಗಿ $p^*$ ಮತ್ತು $q^*$ ಆಗಿವೆ. ಯಾವಾಗ ಸರ್ಕಾರವು ಸಮತೋಲನ ಬೆಲೆ ಮಟ್ಟಕ್ಕಿಂತ ಕಡಿಮೆ ಇರುವ $p_c$ ಪ್ರಮಾಣದ ಬೆಲೆಮಿತಿಯನ್ನು ವಿಧಿಸುತ್ತದೆಯೋ, ಆಗ ಅನುಭೋಗಿಗಳ ಗೋಧಿಯ ಬೇಡಿಕೆಯು $q_c$ ಕಿಲೋಗ್ರಾಂಗಳಾಗಿರುತ್ತದೆ. ಆದರೆ ಉದ್ಯಮ ಘಟಕಗಳ ಪೂರೈಕೆಯು $q^1_c$ ಕಿಲೋಗ್ರಾಂ ಆಗಿರುತ್ತದೆ. ಆದ್ದರಿಂದ $p_c$ ಬೆಲೆಯಲ್ಲಿ ಮಾರುಕಟ್ಟೆಯಲ್ಲಿ ಗೋಧಿಗೆ ಅಧಿಕ ಬೇಡಿಕೆ ಇರುತ್ತದೆ.




**ರೇಖಾಚಿತ್ರ 5.7: ಗೋಧಿ ಮಾರುಕಟ್ಟೆಯಲ್ಲಿ ಬೆಲೆಮಿತಿಯ ಪರಿಣಾಮ.** ಸಮತೋಲನ ಬೆಲೆ ಮತ್ತು ಪ್ರಮಾಣಗಳು ಅನುಕ್ರಮವಾಗಿ $p^*$ಮತ್ತು $q^*$ಆಗಿವೆ. $p_c$ ದರದ ಬೆಲೆಮಿತಿಯನ್ನು ವಿಧಿಸುವುದರಿಂದ ಗೋಧಿ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ ಸಂಭವಿಸುತ್ತದೆ.





ಹೀಗಾಗಿ ಅನುಭೋಗಿಗಳಿಗೆ ಸಹಾಯ ಮಾಡುವುದು ಸರ್ಕಾರದ ಉದ್ದೇಶವಾಗಿದ್ದರೂ, ಅದು ಅಂತಿಮವಾಗಿ ಗೋಧಿಯ ಕೊರತೆ ಸೃಷ್ಟಿಸುತ್ತದೆ. ಆದ್ದರಿಂದ ಎಲ್ಲರಿಗೂ ಗೋಧಿ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಅನುಭೋಗಿಗಳಿಗೆ ಪಡಿತರ ಚೀಟಿಗಳನ್ನು ನೀಡಲಾಗುತ್ತದೆ. ಹೀಗಾದಾಗ ಯಾವೊಬ್ಬ ವ್ಯಕ್ತಿಯೂ ಒಂದು ನಿರ್ದಿಷ್ಟ ಪ್ರಮಾಣದ ಗೋಧಿಗಿಂತ ಹೆಚ್ಚು ಖರೀದಿಸಲಾರ ಮತ್ತು ಈ ನಿರ್ದಿಷ್ಟ ಪ್ರಮಾಣದ ಗೋಧಿಯನ್ನು ನ್ಯಾಯಬೆಲೆ ಅಂಗಡಿಗಳು ಎಂದು ಕರೆಯಲಾಗುವ ಪಡಿತರ ಅಂಗಡಿಗಳ ಮೂಲಕ ಮಾರಾಟ ಮಾಡಲಾಗುತ್ತದೆ.

ಸಾಮಾನ್ಯವಾಗಿ ಬೆಲೆಮಿತಿಯೊಂದಿಗೆ ಜೊತೆಗೂಡಿದ ಸರಕುಗಳ ಪಡಿತರವು ಅನುಭೋಗಿಗಳ ಮೇಲೆ ಕೆಳಗಿನ ಪ್ರತಿಕೂಲ ಪರಿಣಾಮಗಳನ್ನು ಬೀರಬಹುದು: (ಎ) ಪ್ರತಿಯೊಬ್ಬ ಅನುಭೋಗಿಯು ಪಡಿತರ ಅಂಗಡಿಗಳಿಂದ ಸರಕುಗಳನ್ನು ಖರೀದಿಸಲು ಉದ್ದಸಾಲುಗಳಲ್ಲಿ ನಿಲ್ಲಬೇಕಾಗುತ್ತದೆ. (ಬಿ) ನ್ಯಾಯಬೆಲೆ ಅಂಗಡಿಯಿಂದ ಪಡೆಯುವ ಸರಕುಗಳ ಪ್ರಮಾಣದಿಂದ ಎಲ್ಲ ಅನುಭೋಗಿಗಳು ತೃಪ್ತಿಯನ್ನು ಪಡೆಯುವುದಿಲ್ಲವಾದ್ದರಿಂದ ಅವರಲ್ಲಿ ಕೆಲವರು ಹೆಚ್ಚಿನಬೆಲೆ ಪಾವತಿಸಲು ಸಿದ್ಧರಿರುತ್ತಾರೆ. ಇದು ಕಾಳಸಂತೆಯ ಸೃಷ್ಟಿಗೆ ಕಾರಣವಾಗಬಹುದು.

### 5.2.2 ಬೆಲೆ ಅಂತಸ್ತು (ಬೆಲೆಯ ಕನಿಷ್ಠದ ಮಟ್ಟ) *Price Floor*

ಕೆಲವು ಸರಕುಗಳು ಮತ್ತು ಸೇವೆಗಳ ಬೆಲೆಗಳು ಒಂದು ನಿರ್ದಿಷ್ಟ ಮಟ್ಟಕ್ಕಿಂತ ಕೆಳಗಿಳಿಯುವುದು ಸಾಧುವಾದುದಲ್ಲ. ಹಾಗಾಗಿ ಸರ್ಕಾರವು ಇಂತಹ ಸರಕುಗಳು ಮತ್ತು ಸೇವೆಗಳಿಗೆ ಅಂತಸ್ತುಗಳನ್ನು ಅಥವಾ ಕನಿಷ್ಠ ಬೆಲೆಗಳನ್ನು ನಿಗದಿಪಡಿಸುತ್ತದೆ. ನಿರ್ದಿಷ್ಟ ಸರಕು ಅಥವಾ ಸೇವೆಗೆ ವಿಧಿಸಬಹುದಾದ ಬೆಲೆಗೆ ಸರ್ಕಾರವು ಕನಿಷ್ಠಮಿತಿ ವಿಧಿಸಿರುವುದನ್ನೇ **ಬೆಲೆ ಕನಿಷ್ಠದ ಮಟ್ಟ** ಎಂದು ಕರೆಯಲಾಗುವುದು. ಬೆಲೆ ಅಂತಸ್ತು ವಿಧಿಸಿದ ಅತ್ಯಂತ ಜನಪ್ರಿಯ ಉದಾಹರಣೆಗಳೆಂದರೆ, ಕೃಷಿ ಬೆಂಬಲ ಬೆಲೆ ಕಾರ್ಯಕ್ರಮಗಳು ಮತ್ತು ಕನಿಷ್ಠಕೂಲಿ ಕಾಯ್ದೆಗಳಾಗಿವೆ.




**ರೇಖಾಚಿತ್ರ 5.8 ಸರಕುಗಳ ಮಾರುಕಟ್ಟೆಯ ಮೇಲೆ ಬೆಲೆ ಅಂತಸ್ತಿನ ಪರಿಣಾಮ.** ಮಾರುಕಟ್ಟೆ ಸಮತೋಲನವು $(p^*,q^*)$ನಲ್ಲಿದೆ. $p_f$ ನಲ್ಲಿನ ಬೆಲೆಅಂತಸ್ತಿನ ವಿಧಿಸುವಿಕೆಯು ಅಧಿಕ ಪೂರೈಕೆಗೆ ಕಾರಣವಾಗುತ್ತದೆ.

ಕೃಷಿ ಬೆಂಬಲ ಬೆಲೆ ಕಾರ್ಯಕ್ರಮಗಳ ಮೂಲಕ ಸರ್ಕಾರವು ಕೆಲವು ಕೃಷಿ ಸರಕುಗಳಿಗೆ ಖರೀದಿ ಬೆಲೆಯ ಮೇಲೆ ಕೆಳಮಿತಿಯನ್ನು ವಿಧಿಸುತ್ತದೆ ಮತ್ತು ಬೆಲೆ ಅಂತಸ್ತು ಸಾಮಾನ್ಯವಾಗಿ ಈ ಸರಕುಗಳಿಗೆ ಮಾರುಕಟ್ಟೆ ನಿರ್ಧಾರಿತ ಬೆಲೆಗಿಂತ ಹೆಚ್ಚಿನ ಮಟ್ಟದಲ್ಲಿ ನಿಗದಿಪಡಿಸುತ್ತದೆ. ಹಾಗೆಯೇ ಕನಿಷ್ಠ ಕೂಲಿ ಕಾಯ್ದೆ ಮೂಲಕ ಕಾರ್ಮಿಕರ ವೇತನ ದರ ನಿರ್ದಿಷ್ಟ ಮಟ್ಟಕ್ಕಿಂತ ಕಡಿಮೆಯಾಗುವುದಿಲ್ಲ ಎಂದು ಸರ್ಕಾರ ಖಾತ್ರಿಪಡಿಸುತ್ತದೆ ಮತ್ತು ಇಲ್ಲಿ ವೇತನ ದರವನ್ನು ಸಮತೋಲನ ವೇತನದರಕ್ಕಿಂತಲೂ ಹೆಚ್ಚಿಗೆ ನಿಗದಿಪಡಿಸಲಾಗುತ್ತದೆ.

ರೇಖಾಚಿತ್ರ 5.8ರಲ್ಲಿ ಬೆಲೆ ಅಂತಸ್ತನ್ನು ವಿಧಿಸಿದ ಸರಕಿಗೆ ಮಾರುಕಟ್ಟೆ ಪೂರೈಕೆ ರೇಖೆ ಮತ್ತು ಮಾರುಕಟ್ಟೆ ಬೇಡಿಕೆ ರೇಖೆಯನ್ನು ತೋರಿಸಲಾಗಿದೆ. ಇಲ್ಲಿ ಮಾರುಕಟ್ಟೆ ಸಮತೋಲನವು $p^*$ ಬೆಲೆಯಲ್ಲಿ ಮತ್ತು $q^*$ ಪ್ರಮಾಣದಲ್ಲಿ ಸಂಭವಿಸುತ್ತದೆ. ಆದರೆ ಸರ್ಕಾರವು $q_f$ ನಲ್ಲಿ ಸಮತೋಲನ ಬೆಲೆಗಿಂತ ಹೆಚ್ಚಿನಮಟ್ಟವನ್ನು ವಿಧಿಸುವುದಾದರೆ, ಮಾರುಕಟ್ಟೆ ಬೇಡಿಕೆಯು $q_f$ ಆಗಿದೆ. ಆದರೆ ಉದ್ಯಮಗಳು $q^1_f$ ಪ್ರಮಾಣದಲ್ಲಿ ಪೂರೈಸಲು ಬಯಸುತ್ತವೆ. ಇದರಿಂದಾಗಿ ಮಾರುಕಟ್ಟೆಯಲ್ಲಿ $q_f q^1_f$ ಗೆ ಸಮಾನವಾದ ಅಧಿಕ ಪೂರೈಕೆಗೆ ಕಾರಣವಾಗುತ್ತದೆ.

ಕೃಷಿ ಬೆಂಬಲದ ವಿಷಯದಲ್ಲಿ ಅಧಿಕ ಪೂರೈಕೆಯ ಕಾರಣದಿಂದಾಗಿ ಬೆಲೆ ಇಳಿಕೆಯನ್ನು ತಡೆಗಟ್ಟಲು ಸರ್ಕಾರವು ಹೆಚ್ಚುವರಿ ಪ್ರಮಾಣವನ್ನು ಪೂರ್ವ ನಿರ್ಧಾರಿತ ಬೆಲೆಯಲ್ಲಿ ಖರೀದಿ ಮಾಡಬೇಕಾಗುತ್ತದೆ.

## ಸಾರಾಂಶ Summary

- ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ, ಮಾರುಕಟ್ಟೆ ಬೇಡಿಕೆಯು ಮಾರುಕಟ್ಟೆ ಪೂರೈಕೆಗೆ ಸಮನಾಗಿದ್ದಾಗ ಸಮತೋಲನ ಸಂಭವಿಸುತ್ತದೆ.
- ಸ್ಥಿರ ಸಂಖ್ಯೆಯ ಉದ್ಯಮಘಟಕಗಳಿರುವಾಗ ಮಾರುಕಟ್ಟೆ ಬೇಡಿಕೆ ಮತ್ತು ಮಾರುಕಟ್ಟೆ ಪೂರೈಕೆ ರೇಖೆಗಳ ಛೇದಕದಲ್ಲಿ ಸಮತೋಲನ ಬೆಲೆ ಮತ್ತು ಪ್ರಮಾಣವನ್ನು ನಿರ್ಧರಿಸಲಾಗುತ್ತದೆ.
- ಕಾರ್ಮಿಕರ ಕನಿಷ್ಠ ವರಮಾನ ಉತ್ಪನ್ನ(MRPL)ವು ಕೂಲಿದರಕ್ಕೆ ಸಮನಾಗಿರುವ ಬಿಂದುವಿನವರೆಗೆ ಪ್ರತೀ ಉದ್ಯಮಘಟಕವೂ ಕಾರ್ಮಿಕರನ್ನು ನೇಮಿಸುತ್ತದೆ.
- ಸ್ಥಿರ ಸಂಖ್ಯೆಯ ಉದ್ಯಮಘಟಕಗಳಿರುವಾಗ, ಪೂರೈಕೆ ರೇಖೆಯು ಬದಲಾವಣೆಯಾಗದೇ ಉಳಿದಿದ್ದು, ಬೇಡಿಕೆರೇಖೆಯು ಬಲಗಡೆ(ಎಡಗಡೆ)ಗೆ ಪಲ್ಲಟಗೊಂಡಾಗ, ಸಮತೋಲನ ಪ್ರಮಾಣವು ಹೆಚ್ಚುತ್ತದೆ(ಕಡಿಮೆಯಾಗುತ್ತದೆ) ಮತ್ತು ಸಮತೋಲನ ಬೆಲೆಯು ಹೆಚ್ಚುತ್ತದೆ (ಕಡಿಮೆಯಾಗುತ್ತದೆ).
- ಸ್ಥಿರ ಸಂಖ್ಯೆಯ ಉದ್ಯಮಘಟಕಗಳಿರುವಾಗ, ಬೇಡಿಕೆರೇಖೆಯು ಬದಲಾವಣೆಯಾಗದೇ ಉಳಿದಿದ್ದು, ಪೂರೈಕೆ ರೇಖೆಯು ಬಲಗಡೆ(ಎಡಗಡೆ)ಗೆ ಪಲ್ಲಟಗೊಂಡಾಗ, ಸಮತೋಲನ ಪ್ರಮಾಣವು ಹೆಚ್ಚುತ್ತದೆ(ಕಡಿಮೆಯಾಗುತ್ತದೆ) ಮತ್ತು ಸಮತೋಲನ ಬೆಲೆಯು ಕಡಿಮೆಯಾಗು ತ್ತದೆ(ಹೆಚ್ಚುತ್ತದೆ).
- ಬೇಡಿಕೆ ಮತ್ತು ಪೂರೈಕೆ ರೇಖೆಗಳೆರಡೂ ಒಂದೇ ದಿಕ್ಕಿನಲ್ಲಿ ಪಲ್ಲಟಗೊಂಡಾಗ, ಸಮತೋಲನ ಪ್ರಮಾಣದ ಮೇಲಿನ ಪರಿಣಾಮವನ್ನು ಸ್ಪಷ್ಟವಾಗಿ ನಿರ್ಧರಿಸಬಹುದು. ಆದರೆ ಸಮತೋಲನ ಬೆಲೆಯ ಮೇಲಿನ ಪರಿಣಾಮವು ಪಲ್ಲಟಗಳ ಪರಿಮಾಣವನ್ನು ಅವಲಂಬಿಸಿರುತ್ತದೆ.
- ಬೇಡಿಕೆ ಮತ್ತು ಪೂರೈಕೆ ರೇಖೆಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಪಲ್ಲಟಗೊಂಡಾಗ, ಸಮತೋಲನ ಬೆಲೆಯ ಮೇಲಿನ ಪರಿಣಾಮವನ್ನು ಸ್ಪಷ್ಟವಾಗಿ ನಿರ್ಧರಿಸಬಹುದು ಆದರೆ ಸಮತೋಲನ ಪ್ರಮಾಣದ ಮೇಲಿನ ಪರಿಣಾಮವು ಪಲ್ಲಟಗಳ ಪರಿಮಾಣವನ್ನು ಅವಲಂಬಿಸಿರುತ್ತದೆ.
- ಏಕರೂಪದ (ತದ್ರೂಪಿ) ಉದ್ಯಮಘಟಕಗಳಿದ್ದು, ಉದ್ಯಮಘಟಕಗಳು ಮುಕ್ತವಾಗಿ ಮಾರುಕಟ್ಟೆಯನ್ನು ಪ್ರವೇಶಿಸುವ ಮತ್ತು ನಿರ್ಗಮಿಸುವ ಅವಕಾಶವಿದ್ದಾಗ, ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಸಮತೋಲನ ಬೆಲೆಯು ಯಾವಾಗಲೂ ಉದ್ಯಮಘಟಕಗಳ ಕನಿಷ್ಠ ಸರಾಸರಿ ವೆಚ್ಚಕ್ಕೆ ಸಮನಾಗಿರುತ್ತದೆ.

- ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನದ ಸನ್ನಿವೇಶವಿರುವಾಗ, ಬೇಡಿಕೆಯಲ್ಲಿನ ಪಲ್ಲಟವು ಸಮತೋಲನ ಬೆಲೆ ಮೇಲೆ ಯಾವುದೇ ಪರಿಣಾಮ ಹೊಂದಿರುವುದಿಲ್ಲ ಆದರೆ ಬೇಡಿಕೆಯಲ್ಲಿನ ಬದಲಾವಣೆಯೊಂದಿಗೆ ಸಮತೋಲನ ಪ್ರಮಾಣ ಮತ್ತು ಉದ್ಯಮಘಟಕಗಳ ಸಂಖ್ಯೆಯು ಒಂದೇ ದಿಕ್ಕಿನಲ್ಲಿ ಬದಲಾಗುತ್ತವೆ.
- ಸ್ಥಿರ ಸಂಖ್ಯೆಯ ಉದ್ಯಮಘಟಕಗಳ ಮಾರುಕಟ್ಟೆಗೆ ಹೋಲಿಸಿದರೆ, ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನದ ಸನ್ನಿವೇಶವಿರುವ ಮಾರುಕಟ್ಟೆಯಲ್ಲಿ ಸಮತೋಲನ ಪ್ರಮಾಣದ ಮೇಲಿನ ಬೇಡಿಕೆರೇಖೆಯ ಪಲ್ಲಟದ ಪರಿಣಾಮವು ಹೆಚ್ಚು ಸ್ಫುಟವಾಗಿರುತ್ತದೆ.
- ಸಮತೋಲನ ಬೆಲೆಗಿಂತ ಕಡಿಮೆ ಮಟ್ಟದ ಬೆಲೆಮಿತಿ ವಿಧಿಸುವಿಕೆಯು ಅಧಿಕ ಬೇಡಿಕೆಗೆ ಕಾರಣವಾಗುತ್ತದೆ.
- ಸಮತೋಲನ ಬೆಲೆಗಿಂತ ಅಧಿಕ ಪ್ರಮಾಣದ ಬೆಲೆ ಅಂತಸ್ತಿನ ವಿಧಿಸುವಿಕೆಯು ಅಧಿಕ ಪೂರೈಕೆಗೆ ಕಾರಣವಾಗುತ್ತದೆ.

## ಪ್ರಮುಖ ಪರಿಭಾಷೆಗಳು *Key Concepts*

ಸಮತೋಲನ

ಅಧಿಕ ಬೇಡಿಕೆ

ಅಧಿಕ ಪೂರೈಕೆ

ಶ್ರಮದ ಸೀಮಾಂತ ಆದಾಯದ ಉತ್ಪನ್ನ

ಶ್ರಮದ ಸೀಮಾಂತ ಉತ್ಪನ್ನದ ಮೌಲ್ಯ

ಬೆಲೆಮಿತಿ, ಬೆಲೆಅಂತಸ್ತು

## ಅಭ್ಯಾಸಗಳು *Exercises*

1. ಮಾರುಕಟ್ಟೆ ಸಮತೋಲನವನ್ನು ವಿವರಿಸಿ.
2. ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಅಧಿಕ ಬೇಡಿಕೆ ಇದೆ ಎಂದು ನಾವು ಯಾವಾಗ ಹೇಳುತ್ತೇವೆ?
3. ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಅಧಿಕಪೂರೈಕೆ ಇದೆ ಎಂದು ನಾವು ಯಾವಾಗ ಹೇಳುತ್ತೇವೆ?
4. ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ಬೆಲೆಯು ಈ ಕೆಳಗಿನಂತಿದ್ದಾಗ ಏನು ಸಂಭವಿಸುತ್ತದೆ?
   (i) ಸಮತೋಲನ ಬೆಲೆಗಿಂತ ಜಾಸ್ತಿ (ii) ಸಮತೋಲನ ಬೆಲೆಗಿಂತ ಕಡಿಮೆ
5. ಸ್ಥಿರಸಂಖ್ಯೆಯ ಉದ್ಯಮ ಘಟಕಗಳಿದ್ದಾಗ, ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಬೆಲೆ ಹೇಗೆ ನಿರ್ಧರಿಸಲ್ಪಡುತ್ತದೆ ಎಂಬುದನ್ನು ವಿವರಿಸಿ.
6. ಅಭ್ಯಾಸ(ಪ್ರಶ್ನೆ)5ರಲ್ಲಿ ಸಾಧಿತವಾಗಿರುವ ಸಮತೋಲನ ಬೆಲೆಯು ಮಾರುಕಟ್ಟೆಯಲ್ಲಿ ಅಸ್ತಿತ್ವದಲ್ಲಿರುವ ಉದ್ಯಮಘಟಕಗಳ ಕನಿಷ್ಠ ಸರಾಸರಿ ವೆಚ್ಚಕ್ಕಿಂತ ಜಾಸ್ತಿ ಇದೆ ಎಂದು ಭಾವಿಸೋಣ. ಈಗ ಒಂದುವೇಳೆ ನಾವು ಉದ್ಯಮಘಟಕಗಳ ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನಕ್ಕೆ ಅವಕಾಶ ಮಾಡಿಕೊಟ್ಟರೆ, ಮಾರುಕಟ್ಟೆ ಬೆಲೆಯು ಹೇಗೆ ಇದಕ್ಕೆ ಹೊಂದಿಕೊಳ್ಳುತ್ತದೆ?
7. ಮಾರುಕಟ್ಟೆಯಲ್ಲಿ ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನಕ್ಕೆ ಅವಕಾಶವಿರುವಾಗ, ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಉದ್ಯಮಘಟಕಗಳು ಯಾವ ಮಟ್ಟದ ಬೆಲೆಯಲ್ಲಿ ಪೂರೈಸುತ್ತವೆ? ಇಂತಹ ಮಾರುಕಟ್ಟೆಯಲ್ಲಿ ಸಮತೋಲನ ಪ್ರಮಾಣವು ಹೇಗೆ ನಿರ್ಧರಿಸಲ್ಪಡುತ್ತದೆ?
8. ಪ್ರವೇಶ ಮತ್ತು ನಿರ್ಗಮನವನ್ನು ಅನುಮತಿಸುವ ಮಾರುಕಟ್ಟೆಯಲ್ಲಿ ಉದ್ಯಮಘಟಕಗಳ ಸಮತೋಲನ ಸಂಖ್ಯೆಯು ಹೇಗೆ ನಿರ್ಧರಿಸಲ್ಪಡುತ್ತದೆ?

9. ಈ ಕೆಳಗಿನ ಸಂದರ್ಭಗಳಲ್ಲಿ ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳು ಹೇಗೆ ಪ್ರಭಾವಿತವಾಗುತ್ತವೆ?
   (a) ಅನುಭೋಗಿಗಳ ಆದಾಯವು ಹೆಚ್ಚಾದಾಗ?
   (b) ಅನುಭೋಗಿಗಳ ಆದಾಯವು ಕಡಿಮೆಯಾದಾಗ?

10. ಷೂ ಗಳ ಬೆಲೆಯಲ್ಲಿನ ಹೆಚ್ಚಳವು ಒಂದು ಜೊತೆ ಸಾಕ್ಸಗಳ ಬೆಲೆ ಮತ್ತು ಹಲವು ಜೊತೆ ಸಾಕ್ಸಗಳ ಖರೀದಿ ಮತ್ತು ಮಾರಾಟದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಪೂರೈಕೆ ಮತ್ತು ಬೇಡಿಕೆರೇಖೆಗಳನ್ನು ಬಳಸಿ ನಿರೂಪಿಸಿ.

11. ಕಾಫಿ ಬೆಲೆಯಲ್ಲಿನ ಬದಲಾವಣೆಯು, ಚಹಾದ ಸಮತೋಲನ ಬೆಲೆ ಹಾಗೂ ಸಮತೋಲನ ಪ್ರಮಾಣದ ಮೇಲೆ ಹೇಗೆ ಪ್ರಭಾವ ಬೀರುತ್ತದೆ? ರೇಖಾಚಿತ್ರದೊಂದಿಗೆ ವಿವರಿಸಿ.

12. ಉತ್ಪಾದನೆಯಲ್ಲಿ ಬಳಸಿದ ಆದಾನಗಳ ಬೆಲೆಯಲ್ಲಿ ಬದಲಾವಣೆಗಳಾದಾಗ ಒಂದು ಸರಕಿನ ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳು ಹೇಗೆ ಬದಲಾಗುತ್ತವೆ?

13. Xಸರಕಿನ ಬದಲೀ ಸರಕಾದ Yನ ಬೆಲೆಯಲ್ಲಿ ಹೆಚ್ಚಳವಾದರೆ, ಇದು Xಸರಕಿನ ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ?

14. ಪ್ರವೇಶ–ನಿರ್ಗಮನವನ್ನು ಅನುಮತಿಸುವ ಸನ್ನಿವೇಶದಲ್ಲಿ ಮಾರುಕಟ್ಟೆಯಲ್ಲಿ ಉದ್ಯಮಘಟಕಗಳ ಸಂಖ್ಯೆಸ್ಥಿರವಿರುವಾಗ, ಸಮತೋಲನದ ಮೇಲೆ ಬೇಡಿಕೆ ರೇಖೆಯ ಪಲ್ಲಟದ ಪರಿಣಾಮವನ್ನು ಹೋಲಿಸಿ.

15. ಬೇಡಿಕೆ ಮತ್ತು ಪೂರೈಕೆ ರೇಖೆಗಳೆರಡರ ಬಲಗಡೆ ಪಲ್ಲಟವು ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳ ಮೇಲೆ ಬೀರುವ ಪರಿಣಾಮವನ್ನು ರೇಖಾಚಿತ್ರದ ಮೂಲಕ ವಿವರಿಸಿ.

16. ಕೆಳಗಿನ ಸನ್ನಿವೇಶದಲ್ಲಿ ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳು ಹೇಗೆ ಪ್ರಭಾವಿತಗೊಳ್ಳುತ್ತವೆ?
   (a) ಬೇಡಿಕೆ ಮತ್ತು ಪೂರೈಕೆ ರೇಖೆಗಳೆರಡೂ ಒಂದೇ ದಿಕ್ಕಿನಲ್ಲಿ ಪಲ್ಲಟಗೊಂಡಾಗ?
   (b) ಬೇಡಿಕೆ ಮತ್ತು ಪೂರೈಕೆ ರೇಖೆಗಳು ವಿರುದ್ಧ ದಿಕ್ಕಿನಲ್ಲಿ ಪಲ್ಲಟಗೊಂಡಾಗ?

17. ಶ್ರಮದ ಮಾರುಕಟ್ಟೆಯಲ್ಲಿನ ಪೂರೈಕೆ ಮತ್ತು ಬೇಡಿಕೆ ರೇಖೆಗಳು ಸರಕುಗಳ ಮಾರುಕಟ್ಟೆಯ ಪೂರೈಕೆ ಮತ್ತು ಬೇಡಿಕೆ ರೇಖೆಗಳಿಗಿಂತ ಯಾವರೀತಿ ಭಿನ್ನವಾಗಿವೆ?

18. ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ ಆದರ್ಶ ಶ್ರಮಿಕರ ಪ್ರಮಾಣವು ಹೇಗೆ ನಿರ್ಧಾರವಾಗುತ್ತದೆ?

19. ಪರಿಪೂರ್ಣ ಪೈಪೋಟಿಯುತ ಶ್ರಮದ ಮಾರುಕಟ್ಟೆಯಲ್ಲಿ ಕೂಲಿದರವು ಹೇಗೆ ನಿರ್ಧಾರವಾಗುತ್ತದೆ?

20. ಭಾರತದಲ್ಲಿ ಯಾವುದಾದರೂ ಸರಕಿನ ಮೇಲೆ ಬೆಲೆಮಿತಿಯನ್ನು ವಿಧಿಸಲಾಗಿದೆಯೆಂದು ಭಾವಿಸುವಿರಾ? ಬೆಲೆಮಿತಿಯ ಪರಿಣಾಮವೇನಾಗಬಹುದು?

21. ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನವನ್ನು ಅನುಮತಿಸುವ ಸನ್ನಿವೇಶಕ್ಕೆ ಹೋಲಿಸಿದರೆ, ಉದ್ಯಮಘಟಕಗಳ ಸಂಖ್ಯೆ ಸ್ಥಿರವಿರುವಾಗ ಬೇಡಿಕೆ ರೇಖೆಯಲ್ಲಿನ ಪಲ್ಲಟವು ಬೆಲೆಯ ಮೇಲೆ ಹೆಚ್ಚಿನ ಪರಿಣಾಮವನ್ನು ಮತ್ತು ಪ್ರಮಾಣದ ಮೇಲೆ ಸಣ್ಣ ಪರಿಣಾಮವನ್ನು ಉಂಟು ಮಾಡುತ್ತದೆ. ವಿವರಿಸಿ.

22. ಪರಿಪೂರ್ಣ ಪೈಪೋಟಿಯುತ ಮಾರುಕಟ್ಟೆಯಲ್ಲಿ X ಸರಕಿನ ಬೇಡಿಕೆ ಮತ್ತು ಪೂರೈಕೆ ರೇಖೆಯನ್ನು ಈ ಕೆಳಗಿನಂತೆ ನೀಡಲಾಗಿದೆ ಎಂದುಕೊಳ್ಳೋಣ.

$q^D = 700 - p$

$q^s = 500 + 3p$ ಗಾಗಿ $p \geq 15$

$= 0$ ಗಾಗಿ $0 \leq p < 15$

ಮಾರುಕಟ್ಟೆಯು ಏಕರೂಪದ (ತದ್ರೂಪಿ) ಉದ್ಯಮ ಘಟಕಗಳಿಂದ ಕೂಡಿದೆ ಎಂದು ಊಹಿಸಿಕೊಳ್ಳಿ. ರೂ. 15ಕ್ಕಿಂತ ಕಡಿಮೆ ಇರುವ ಯಾವುದೇ ಬೆಲೆಯಲ್ಲಿ X ಸರಕಿನ ಮಾರುಕಟ್ಟೆ ಪೂರೈಕೆಯು ಶೂನ್ಯ(ಸೊನ್ನೆ)ವಾಗಿರುವುದರ ಹಿಂದಿನ ಕಾರಣವನ್ನು ಗುರುತಿಸಿ. ಈ ಸರಕಿನ ಸಮತೋಲನ ಬೆಲೆಯು ಎಷ್ಟಾಗುತ್ತದೆ? ಸಮತೋಲನದಲ್ಲಿ Xಸರಕಿನ ಎಷ್ಟುಪ್ರಮಾಣವನ್ನುಉತ್ಪಾದಿಸಲಾಗುತ್ತದೆ?

23. ಅಭ್ಯಾಸ (ಪ್ರಶ್ನೆ) 22ರಲ್ಲಿರುವ ಬೇಡಿಕೆ ರೇಖೆಯನ್ನು ಪರಿಗಣಿಸೋಣ. ಈಗ ನಾವು X ಸರಕನ್ನು ಉತ್ಪಾದಿಸುವ ಉದ್ಯಮಘಟಕಗಳ ಮುಕ್ತ ಪ್ರವೇಶ ಮತ್ತು ಮುಕ್ತ ನಿರ್ಗಮನಕ್ಕೆ ಅವಕಾಶ ಮಾಡಿಕೊಡೋಣ. ಮಾರುಕಟ್ಟೆಯು X ಸರಕನ್ನು ಉತ್ಪಾದಿಸುವ ಏಕರೂಪದ ಉದ್ಯಮ ಘಟಕಗಳಿಂದ ಕೂಡಿದೆ ಎಂದೂ ಸಹ ಊಹಿಸಿಕೊಳ್ಳೋಣ. ಒಂದು ಉದ್ಯಮ ಘಟಕದ ಪೂರೈಕೆ ರೇಖೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

$q^s_f = 8 + 3p$ ಗೆ $p \geq 20$

$= 0$ ಗೆ $0 \leq p < 20$

(a) $p = 20$ ರ ಮಹತ್ವವೇನು?

(b) ಯಾವ ಬೆಲೆಯಲ್ಲಿ Xಸರಕಿನ ಮಾರುಕಟ್ಟೆಯು ಸಮತೋಲನದಲ್ಲಿರುತ್ತದೆ? ನಿಮ್ಮ ಉತ್ತರಕ್ಕೆ ಕಾರಣ ತಿಳಿಸಿ.

(c) ಸಮತೋಲನ ಪ್ರಮಾಣ ಮತ್ತು ಸಮತೋಲನ ಉದ್ಯಮಘಟಕಗಳ ಸಂಖ್ಯೆಗಳನ್ನು ಲೆಕ್ಕಾಚಾರ ಮಾಡಿ.

24. ಉಪ್ಪಿನ ಬೇಡಿಕೆ ಮತ್ತು ಪೂರೈಕೆ ರೇಖೆಗಳನ್ನು ಈ ಕೆಳಗಿನಂತೆ ನೀಡಲಾಗಿದೆ ಎಂದು ಭಾವಿಸೋಣ.

$q^D = 1{,}000 - p$ $\quad q^s = 700 + 2p$

(a) ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳನ್ನು ಕಂಡುಹಿಡಿಯಿರಿ.

(b) ಈಗ ಉಪ್ಪಿನ ಉತ್ಪಾದನೆಯಲ್ಲಿ ಬಳಸುವ ಒಂದು ಆದಾನದ ಬೆಲೆಯು ಹೆಚ್ಚಾಗಿದೆ ಎಂದು ಭಾವಿಸಿದಾಗ, ಹೊಸ ಪೂರೈಕೆ ರೇಖೆಯು ಈ ಮುಂದಿನಂತಿರುತ್ತದೆ.

$q^s = 400 + 2p$

ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳು ಹೇಗೆ ಬದಲಾಗುತ್ತವೆ? ಈ ಬದಲಾವಣೆಗಳು ನಿಮ್ಮ ನಿರೀಕ್ಷೆಗೆ ಅನುಗುಣವಾಗಿವೆಯೇ?

(c) ಒಂದುವೇಳೆ ಸರ್ಕಾರವು ಉಪ್ಪಿನ ಮಾರಾಟದ ಪ್ರತಿ ಘಟಕದ ಮೇಲೆ ರೂ.3 ರಷ್ಟು ತೆರಿಗೆ ವಿಧಿಸಲು ನಿರ್ಧರಿಸಿದರೆ, ಇದು ಸಮತೋಲನ ಬೆಲೆ ಮತ್ತು ಸಮತೋಲನ ಪ್ರಮಾಣಗಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ?

25. ಸಾಮಾನ್ಯ ಜನರು ಅಪಾರ್ಟಮೆಂಟ್‌ಗಳನ್ನು ಪಡೆಯಲು, ಮಾರುಕಟ್ಟೆ ನಿರ್ಧರಿತ ಬಾಡಿಗೆಯು ತೀರಾ ಅಧಿಕವಿದೆ ಎಂದು ಭಾವಿಸೋಣ. ಸರ್ಕಾರವು ಬಾಡಿಗೆ ಮೇಲೆ ನಿಯಂತ್ರಣ ವಿಧಿಸುವ ಮೂಲಕ ಅಪಾರ್ಟಮೆಂಟ್‌ಗಳನ್ನು ಬಾಡಿಗೆಗಾಗಿ ಪಡೆಯುವವರಿಗೆ ಸಹಾಯ ಮಾಡಲು ಮುಂದೆ ಬಂದರೆ, ಅಪಾರ್ಟಮೆಂಟ್‌ಗಳ ಮಾರುಕಟ್ಟೆ ಮೇಲೆ ಇದು ಯಾವ ಪ್ರಭಾವವನ್ನು ಬೀರುತ್ತದೆ?

❖ ❖ ❖ ❖

# ಅಧ್ಯಾಯ 6



# ಪೈಪೋಟಿ ರಹಿತ ಮಾರುಕಟ್ಟೆಗಳು

## *Non-Competitive Markets*

ಅನುಭೋಗಿಗಳು ಮತ್ತು ಉದ್ಯಮ ಘಟಕಗಳು ಬೆಲೆ ಪಡೆಯುವವರಾಗಿರುವ ಒಂದು ಮಾರುಕಟ್ಟೆ ಸಂರಚನೆಯನ್ನು ಪರಿಪೂರ್ಣ ಪೈಪೋಟಿ ಎಂಬ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡಿರುವುದನ್ನು ನಾವು ನೆನಪಿಸಿಕೊಳ್ಳೋಣ. ಅಂತಹ ಸನ್ನಿವೇಶದಲ್ಲಿ ಉದ್ಯಮದ ವರ್ತನೆಯನ್ನು ಅದ್ಯಾಯ 4ರಲ್ಲಿ ವಿವರಿಸಲಾಗಿದೆ. ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಸಂರಚನೆ ಈ ಕೆಳಗಿನ ಷರತ್ತುಗಳನ್ನು ಈಡೇರಿಸುತ್ತದೆಂದು ಅಂದಾಜಿಸಲಾಗಿ ನಾವು ಚರ್ಚಿಸಿದ್ದೇವೆ.

(i) ಸರಕುಗಳಿಗೆ ಸಂಬಂಧಿಸಿದಂತೆ ಅಧಿಕ ಸಂಖ್ಯೆಯ ಉದ್ಯಮ ಘಟಕಗಳು ಮತ್ತು ಅನುಭೋಗಿಗಳು ಅಸ್ತಿತ್ವದಲ್ಲಿದ್ದು. ಎಲ್ಲಾ ಉದ್ಯಮ ಘಟಕಗಳ ಒಟ್ಟು ಉತ್ಪನ್ನಕ್ಕೆ ಹೋಲಿಸಿದಾಗ ಇದರಲ್ಲಿ ಪ್ರತಿ ಉದ್ಯಮ ಘಟಕವು ಬಹಳ ನಿರ್ಲಕ್ಷಿಸಬಹುದಾದ ಉತ್ಪನ್ನವನ್ನು ಮಾರಾಟ ಮಾಡುತ್ತಿರುತ್ತದೆ. ಹಾಗೆಯೇ ಎಲ್ಲಾ ಅನುಭೋಗಿಗಳು ಒಟ್ಟಾಗಿ ಖರೀದಿಸಿದ ಪ್ರಮಾಣಕ್ಕೆ ಹೋಲಿಸಿದರೆ ಪ್ರತಿ ಅನುಭೋಗಿಯು ಖರೀದಿಸಿದ ಪ್ರಮಾಣವು ಕಡಿಮೆಯಿರುತ್ತದೆ.

(ii) ಉದ್ಯಮ ಘಟಕಗಳು ಸರಕಿನ ಉತ್ಪಾದನೆಯನ್ನು ಪ್ರಾರಂಭಿಸಲು ಅಥವಾ ಉತ್ಪಾದನೆ ನಿಲ್ಲಿಸಲು ಸ್ವತಂತ್ರವಾಗಿರುತ್ತವೆ.

(iii) ಕೈಗಾರಿಕೆಯಲ್ಲಿ ಪ್ರತಿ ಉದ್ಯಮ ಘಟಕವು ಉತ್ಪಾದಿಸಿದ ಉತ್ಪನ್ನವನ್ನು ಇತರ ಉದ್ಯಮ ಘಟಕಗಳಿಂದ ಪ್ರತ್ಯೇಕಿಸಲು ಸಾಧ್ಯವಾಗುವುದಿಲ್ಲ ಮತ್ತು ಇತರ ಯಾವುದೇ ಕೈಗಾರಿಕೆಯ ಉತ್ಪನ್ನವು ಈ ಕೈಗಾರಿಕೆಯ ಉತ್ಪನ್ನಕ್ಕೆ ಪರ್ಯಾಯವಾಗಿರಲು ಸಾಧ್ಯವಿಲ್ಲ ಮತ್ತು

(iv) ಅನುಭೋಗಿಗಳಿಗೆ ಮತ್ತು ಉದ್ಯಮ ಘಟಕಗಳಿಗೆ ಉತ್ಪನ್ನ, ಆದಾನಗಳು ಮತ್ತು ಅವುಗಳ ಬೆಲೆಗಳ ಬಗ್ಗೆ ಪರಿಪೂರ್ಣ ಜ್ಞಾನ ಇರುತ್ತದೆ.

ಈ ಅಧ್ಯಾಯದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕಲ್ಪನೆಗಳನ್ನು ಈಡೇರಿಸಲಾಗದ ಸನ್ನಿವೇಶಗಳನ್ನು ವಿವರಿಸೋಣ. (i)ನೇ ಮತ್ತು (ii)ನೇ ಕಲ್ಪನೆಗಳನ್ನು ಕೈಬಿಟ್ಟರೆ ನಮಗೆ ಏಕಸ್ವಾಮ್ಯ ಮತ್ತು ಕೆಲಜನ ಸ್ವಾಮ್ಯ ಮಾರುಕಟ್ಟೆಯ ಸಂರಚನೆಗಳು ದೊರೆಯುತ್ತದೆ. (iii)ನೇ ಕಲ್ಪನೆಯನ್ನು ಕೈಬಿಟ್ಟರೆ ಸ್ವಾಮ್ಯಯುತ ಪೈಪೋಟಿ ಮಾರುಕಟ್ಟೆಯನ್ನು ಪಡೆಯುತ್ತೇವೆ. (iv)ನೇ ಕಲ್ಪನೆಯನ್ನು ಕೈಬಿಟ್ಟರೆ 'ಗಂಡಾಂತರಗಳ ಅರ್ಥಶಾಸ್ತ್ರವನ್ನು' (*Economics of risks*) ಪಡೆಯಬಹುದು. ಈ ಅಧ್ಯಾಯವು ಏಕಸ್ವಾಮ್ಯ, ಸ್ವಾಮ್ಯಯುತ ಪೈಪೋಟಿ ಮತ್ತು ಕೆಲಜನ ಸ್ವಾಮ್ಯದ ಮಾರುಕಟ್ಟೆ ಸಂರಚನೆಯನ್ನು ಪರಿಶೀಲಿಸುತ್ತದೆ.

## 6.1 ಸರಕು ಮಾರುಕಟ್ಟೆಯಲ್ಲಿ ಸರಳ ಏಕಸ್ವಾಮ್ಯ *Simple Monopoly In The Commodity Market*



'I' 'M' ಪರಿಪೂರ್ಣ ಪೈಪೋಟಿ

ಒಬ್ಬನೇ ಮಾರಾಟಗಾರನಿರುವ ಮಾರುಕಟ್ಟೆ ಸಂರಚನೆಯನ್ನು ಏಕಸ್ವಾಮ್ಯ ಎಂದು ಕರೆಯಲಾಗುತ್ತದೆ. ಆದಾಗ್ಯೂ ಒಂದೇ ವಾಕ್ಯದ ಈ ವ್ಯಾಖ್ಯೆಯಲ್ಲಿ ಅಡಕವಾಗಿರುವ ಷರತ್ತುಗಳು ವ್ಯಾಪಕವಾಗಿ ವಿವರಣೆಗೆ ಒಳಪಡಿಸಬಹುದಾಗಿದೆ. ಏಕಸ್ವಾಮ್ಯದ ಮಾರುಕಟ್ಟೆಯ ಸಂರಚನೆಯಲ್ಲಿ ಏಕಮಾತ್ರ ಉತ್ಪಾದಕನು ಒಂದು ನಿರ್ಧಿಷ್ಟ ಸರಕನ್ನು ಉತ್ಪಾದಿಸುವ ಅವಶ್ಯಕತೆಯಿರುತ್ತದೆ, ಇತರ ಯಾವುದೇ ಸರಕುಗಳು ಈ ಸರಕಿಗೆ ಪರ್ಯಾಯ ಸರಕುಗಳಾಗಿರುವುದಿಲ್ಲ ಮತ್ತು ಈ ಸನ್ನಿವೇಶವು ಕಾಲಾನಂತರದಲ್ಲಿ ಮುಂದುವರಿಯಲು ಯಾವುದೇ ಉದ್ಯಮ ಘಟಕವು ಮಾರುಕಟ್ಟೆಗೆ ಪ್ರವೇಶಿಸಿ ಸರಕುಗಳನ್ನು ಮಾರಾಟ ಮಾಡದಂತೆ ಸಾಕಷ್ಟು ನಿರ್ಬಂಧಗಳ ಅವಶ್ಯಕತೆಯಿದೆ.



ಸ್ಪರ್ಧಾತ್ಮಕ ವರ್ತನೆ ಎದುರಾಗಿ ಸ್ಪರ್ಧಾತ್ಮಕ ಸಂರಚನೆ

***Competitive Behaviour versus Competitive Structure***

ಒಂದು ಉದ್ಯಮ ಘಟಕವು ಮಾರುಕಟ್ಟೆಯಲ್ಲಿ ಮಾರಲ್ಪಡುವ ಸರಕಿನ ಬೆಲೆಯನ್ನು ಪ್ರಭಾವಿಸಲು ಸಾಧ್ಯವಿಲ್ಲವಿರುವುದನ್ನು ಪರಿಪೂರ್ಣ ಪೈಪೋಟಿ ಮಾರುಕಟ್ಟೆ ಎಂದು ವ್ಯಾಖ್ಯಾನಿಸಲಾಗಿದೆ. ಒಂದು ಉದ್ಯಮ ಘಟಕದ ಯಾವುದೇ ಮಟ್ಟದ ಉತ್ಪನ್ನದ ಬೆಲೆಯು ಒಂದೇ ಆಗಿದ್ದಾಗ ಅಂತಹ ಉದ್ಯಮ ಘಟಕವು ನೀಡಲಾದ ಮಾರುಕಟ್ಟೆ ಬೆಲೆಗಳಲ್ಲಿ ತಾನು ಮಾರಾಟ ಮಾಡಲು ಬಯಸುವ ಯಾವುದೇ ಪ್ರಮಾಣವನ್ನು ಮಾರಲು ಸಮರ್ಥವಾಗಿರುತ್ತದೆ. ಆದ್ದರಿಂದ ಇದು ತನ್ನ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಪಡೆಯಲು ಇತರ ಉದ್ಯಮ ಘಟಕಗಳೊಂದಿಗೆ ಸ್ಪರ್ಧಿಸುವ ಅವಶ್ಯಕತೆ ಇರುವುದಿಲ್ಲ.

ಇದು, ಸಾಮಾನ್ಯವಾಗಿ ಅರ್ಥೈಸಲಾಗಿರುವ ಪೈಪೋಟಿ ಅಥವಾ ಪೈಪೋಟಿ ವರ್ತನೆಗೆ ಸ್ಪಷ್ಟವಾಗಿ ವಿರುದ್ಧವಾಗಿದೆ. ಕೋಕ್ ಮತ್ತು ಪೆಪ್ಸಿಗಳು ಅಧಿಕ ಮಟ್ಟದ ಮಾರಾಟವನ್ನು ಸಾಧಿಸಲು ಅಥವಾ ಮಾರುಕಟ್ಟೆಯಲ್ಲಿ ಅಧಿಕ ಪಾಲನ್ನು ಪಡೆಯಲು ವಿಭಿನ್ನ ರೀತಿಯಲ್ಲಿ ಪರಸ್ಪರ ಸ್ಪರ್ಧಿಸುವುದನ್ನು ನಾವು ಕಾಣುತ್ತೇವೆ. ಇದಕ್ಕೆ ವಿರುದ್ಧವಾಗಿ ಒಬ್ಬ ರೈತನು ದೊಡ್ಡ ಮೊತ್ತದಲ್ಲಿ ಬೆಳೆಯನ್ನು ಮಾರಾಟ ಮಾಡಲು ತಮ್ಮ ತಮ್ಮೊಳಗೆ ಉಳಿದ ರೈತರೊಡನೆ ಪೈಪೋಟಿ ನಡೆಸುವುದು ಕಂಡುಬರುವುದಿಲ್ಲ. ಏಕೆಂದರೆ ಕೋಕ್ ಮತ್ತು ಪೆಪ್ಸಿಗಳೆರಡು ತಂಪು ಪಾನೀಯದ ಮಾರುಕಟ್ಟೆ ಬೆಲೆಯನ್ನು ಪ್ರಭಾವಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಆದರೆ ಒಬ್ಬ ರೈತನಿಗೆ ಇದು ಸಾಧ್ಯವಾಗುವುದಿಲ್ಲ.

ಹೀಗೆ ಪೈಪೋಟಿಯ ವರ್ತನೆ ಮತ್ತು ಪೈಪೋಟಿಯ ಮಾರುಕಟ್ಟೆ ಸಂರಚನೆ ಸಾಮಾನ್ಯವಾಗಿ ವಿರುದ್ಧ ಸಂಬಂಧವನ್ನು ಹೊಂದಿದೆ. ಮಾರುಕಟ್ಟೆ ಸಂರಚನೆ ಹೆಚ್ಚು ಸ್ಪರ್ಧಾತ್ಮಕವಾಗಿದ್ದರೆ ಉದ್ಯಮ ಘಟಕಗಳ ಸ್ಪರ್ಧಾತ್ಮಕ ವರ್ತನೆ ಕಡಿಮೆ ಇರುತ್ತದೆ. ಇನ್ನೊಂದೆಡೆ ಮಾರುಕಟ್ಟೆ ಸಂರಚನೆಯಲ್ಲಿ ಕಡಿಮೆ ಸ್ಪರ್ಧೆ ಇದ್ದರೆ, ಉದ್ಯಮ ಘಟಕಗಳ ವರ್ತನೆಯಲ್ಲಿ ಅಧಿಕ ಸ್ಪರ್ಧಾತ್ಮಕ ವರ್ತನೆ ಕಂಡು ಬರುತ್ತದೆ. ಶುದ್ಧ ಏಕಸ್ವಾಮ್ಯ ಇದಕ್ಕೆ ಅಪವಾದವಾಗಿರುವುದನ್ನು ಕಾಣಬಹುದು.

ಇತರೆ ಮಾರುಕಟ್ಟೆ ಸಂರಚನೆಗಳೊಂದಿಗೆ ಹೋಲಿಸಿದಾಗ ಸರಕು ಮಾರುಕಟ್ಟೆಯಲ್ಲಿ ಏಕಸ್ವಾಮ್ಯದ ಪರಿಣಾಮವಾಗಿ ಸಮತೋಲನದಲ್ಲಿನ ವ್ಯತ್ಯಾಸವನ್ನು ಪರೀಶಿಲಿಸಲು ನಾವು ಎಲ್ಲಾ ಮಾರುಕಟ್ಟೆಗಳು ಪರಿಪೂರ್ಣ ಪೈಪೋಟಿಯಲ್ಲಿರುತ್ತವೆ ಎಂದು ಊಹಿಸಿಕೊಳ್ಳಬೇಕು. ನಿರ್ದಿಷ್ಟವಾಗಿ ಹೇಳುವುದಾದರೆ ನಾವು (i) ಬೇಡಿಕೆ ಕಡೆಯಿಂದ ಒಂದು ನಿರ್ದಿಷ್ಟ ಸರಕಿನ ಮಾರುಕಟ್ಟೆಯು ಪರಿಪೂರ್ಣ ಪೈಪೋಟಿಯದ್ದಾಗಿರುತ್ತದೆ.

ಅಂದರೆ ಎಲ್ಲಾ ಅನುಭೋಗಿಗಳು ಬೆಲೆ ಪಡೆಯುವವರಾಗಿರುತ್ತಾರೆ ಮತ್ತು (ii) ಈ ಸರಕಿನ ಉತ್ಪಾದನೆಯಲ್ಲಿ ಬಳಸಲಾದ ಆದಾನಗಳ ಮಾರುಕಟ್ಟೆಗಳು ಪೂರೈಕೆ ಮತ್ತು ಬೇಡಿಕೆ ಕಡೆಯಿಂದ ಪರಿಪೂರ್ಣ ಪೈಪೋಟಿಯುತವಾಗಿರುತ್ತವೆ.

ಈ ಎಲ್ಲಾ ಷರತ್ತುಗಳು ಪೂರೈಸಲ್ಪಟ್ಟರೆ ಅಂತಹ ಸನ್ನಿವೇಶವನ್ನು ಏಕ ಸರಕಿನ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಎಂದು ವ್ಯಾಖ್ಯಾನಿಸುತ್ತೇವೆ.

### 6.1:1 ಮಾರುಕಟ್ಟೆ ಬೇಡಿಕೆ ರೇಖೆಯೇ ಸರಾಸರಿ ಆದಾಯ ರೇಖೆ *Market Demand Curve is the Average Revenue Curve*

ಚಿತ್ರ 6.1ರಲ್ಲಿರುವ ಮಾರುಕಟ್ಟೆ ಬೇಡಿಕೆ ರೇಖೆಯು ಎಲ್ಲಾ ಅನುಭೋಗಿಗಳು ವಿಭಿನ್ನ ಬೆಲೆಗಳಲ್ಲಿ ಕೊಳ್ಳಲು ಇಚ್ಛಿಸುವ ಸರಕಿನ ಪ್ರಮಾಣವನ್ನು ತೋರಿಸುತ್ತದೆ. ಮಾರುಕಟ್ಟೆ ಬೆಲೆಯು ಅಧಿಕವಾಗಿದ್ದರೆ ಅಂದರೆ $p_0$ ಇದ್ದರೆ ಅನುಭೋಗಿಗಳು $q_0$ನಷ್ಟು ಕಡಿಮೆ ಪ್ರಮಾಣವನ್ನು ಕೊಳ್ಳಲು ಬಯಸುತ್ತಾರೆ. ಇನ್ನೊಂದೆಡೆ ಮಾರುಕಟ್ಟೆ ಬೆಲೆ $p_1$ಗೆ ಇಳಿದಾಗ ಅನುಭೋಗಿಗಳು ಕೊಳ್ಳಲು ಇಚ್ಛಿಸುವ ಸರಕಿನ ಪ್ರಮಾಣ $q_1$ ಆಗಿರುತ್ತದೆ. ಅನುಭೋಗಿಗಳು ಕೊಳ್ಳಲು ಬಯಸುವ ಸರಕಿನ ಪ್ರಮಾಣವು ಮಾರುಕಟ್ಟೆಯಲ್ಲಿನ ಬೆಲೆಯಿಂದ ಪ್ರಭಾವಿತವಾಗಿರುತ್ತದೆ. ಅನುಭೋಗಿಗಳು ಖರೀದಿಸಿದ ಸರಕುಗಳ ಪ್ರಮಾಣವು ಬೆಲೆಯ ಇಳಿಕೆಯ ಸಂಬಂಧವಾಗಿದೆ.




**ರೇಖಾಚಿತ್ರ: 6.1 ಮಾರುಕಟ್ಟೆ ಬೇಡಿಕೆ ರೇಖೆ:**

ವಿವಿಧ ಬೆಲೆಗಳಲ್ಲಿ ಎಲ್ಲಾ ಅನುಭೋಗಿಗಳು ಕೊಳ್ಳಲು ಬಯಸುವ ಪ್ರಮಾಣವನ್ನು ತೋರಿಸುತ್ತದೆ.

ಏಕಸ್ವಾಮ್ಯದ ಉದ್ಯಮ ಘಟಕಗಳಿಗೆ ಮೇಲಿನ ವಾದವು ವಿರುದ್ಧ ದಿಕ್ಕಿನಿಂದ ಕ್ರಿಯಾಶೀಲವಾಗಿರುತ್ತದೆ. ಅಧಿಕ ಪ್ರಮಾಣದ ಸರಕುಗಳನ್ನು ಮಾರಾಟ ಮಾಡುವ ಏಕಸ್ವಾಮ್ಯ ನಿರ್ಧಾರ ಬೆಲೆಯನ್ನು ಕಡಿಮೆ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಏಕಸ್ವಾಮ್ಯ ಉದ್ಯಮ ಘಟಕವು ಕಡಿಮೆ ಪ್ರಮಾಣದ ಸರಕುಗಳನ್ನು ಮಾರಾಟ ಮಾಡಲು ಮಾರುಕಟ್ಟೆಗೆ ತಂದರೆ ಅದು ಅಧಿಕ ಬೆಲೆಗೆ ಮಾರಲು ಸಮರ್ಥವಾಗಿರುತ್ತದೆ. ಆದ್ದರಿಂದ ಏಕಸ್ವಾಮ್ಯ ಉದ್ಯಮ ಘಟಕಕ್ಕೆ ಸಂಬಂಧಿಸಿದಂತೆ ಬೆಲೆಯು ಮಾರಾಟ ಮಾಡಿದ ಸರಕುಗಳ ಪ್ರಮಾಣವನ್ನು ಅವಲಂಬಿಸಿದೆ. ಇದನ್ನೇ ಬೆಲೆಯು ಮಾರಾಟ ಮಾಡಿದ ಪ್ರಮಾಣದ ಇಳಿಕೆಯ ಸಂಬಂಧವಾಗಿದೆ ಎಂದು ವ್ಯಕ್ತಪಡಿಸಬಹುದು. ಹೀಗೆ ಒಂದು ಏಕಸ್ವಾಮ್ಯ ಉದ್ಯಮ ಘಟಕದ ಮಾರುಕಟ್ಟೆ ಬೇಡಿಕೆ ರೇಖೆಯು ಲಭ್ಯವಿರುವ ವಿಭಿನ್ನ ಪೂರೈಕೆಯ ಪ್ರಮಾಣಗಳನ್ನು ಅಭಿವ್ಯಕ್ತಿಸುತ್ತದೆ. ಈ ವಿಚಾರವು ಏಕಸ್ವಾಮ್ಯ ಉದ್ಯಮ ಘಟಕ ಮಾರುಕಟ್ಟೆ ಬೇಡಿಕೆ ರೇಖೆಯನ್ನು ಎದುರಿಸುತ್ತದೆ ಎಂಬ ಹೇಳಿಕೆಯಲ್ಲಿ ಪ್ರತಿಬಿಂಬಿಸಲ್ಪಟ್ಟಿದೆ.

ಮೇಲಿನ ವಿಚಾರವನ್ನು ಇನ್ನೊಂದು ಆಯಾಮದಿಂದ ನೋಡಬಹುದು. ಉದ್ಯಮ ಘಟಕಕ್ಕೆ ಮಾರುಕಟ್ಟೆ ಬೇಡಿಕೆ ರೇಖೆಯ ಪರಿಪೂರ್ಣ ಜ್ಞಾನ ಇರುತ್ತದೆ ಎಂದು ಊಹಿಸಿಕೊಂಡರೆ, ಏಕಸ್ವಾಮ್ಯ ಉದ್ಯಮ ಘಟಕವು ತನ್ನ ಸರಕನ್ನು ಎಷ್ಟು ಬೆಲೆಗೆ ಮಾರಾಟ ಮಾಡಬಹುದು ಎಂಬುದನ್ನು ನಿರ್ಧರಿಸುತ್ತದೆ ಮತ್ತು ಇದು ಮಾರಾಟ ಮಾಡಬಹುದಾದ ಸರಕಿನ ಪ್ರಮಾಣವನ್ನು ನಿರ್ಧರಿಸುತ್ತದೆ. ಉದಾ: ಚಿತ್ರ 6.1ನ್ನು ಪರಿಶೀಲಿಸಿದಾಗ ಏಕಸ್ವಾಮ್ಯ ಉದ್ಯಮ ಘಟಕದ DD ರೇಖೆಯ ಆಕಾರದ ಬಗ್ಗೆ ಜ್ಞಾನ ಇದ್ದಾಗ ಅದು $p_0$ ಬೆಲೆಯಲ್ಲಿ ಸರಕನ್ನು ಮಾರಾಟ ಮಾಡಲು ಇಚ್ಛಿಸಿದರೆ ಮತ್ತು ಹಾಗೆ ಮಾಡಲು $q_0$ ಪ್ರಮಾಣವನ್ನು ಉತ್ಪಾದನೆ ಮಾಡಿ ಮಾರಾಟ ಮಾಡಬೇಕು. ಬೆಲೆ $p_0$ದಲ್ಲಿ ಅನುಭೋಗಿಗಳು $q_0$ ಸರಕು ಪ್ರಮಾಣವನ್ನು ಕೊಳ್ಳಲು ಇಚ್ಛಿಸುತ್ತಾರೆ. ಈ ವಿಚಾರವು 'ಏಕಸ್ವಾಮ್ಯ ಉದ್ಯಮ ಘಟಕವು ಬೆಲೆ ನಿರ್ಧಾರಕ' ಎಂಬ ಘೋಷಣೆಯನ್ನು ಬಲಪಡಿಸುತ್ತದೆ.

ಪರಿಪೂರ್ಣ ಪೈಪೋಟಿ ಮಾರುಕಟ್ಟೆ ಸಂರಚನೆಯ ಉದ್ಯಮ ಘಟಕವು ಇದಕ್ಕೆ ವಿರುದ್ಧವಾಗಿದೆ ಎಂಬುದು ಸ್ಪಷ್ಟವಾಗಿರಬೇಕು. ಅಂತಹ ಸನ್ನಿವೇಶದಲ್ಲಿ ಉದ್ಯಮ ಘಟಕವು ತಾನು ಬಯಸಿದಷ್ಟು ಹೆಚ್ಚಿನ ಪ್ರಮಾಣದ ಸರಕುಗಳನ್ನು ಮಾರಾಟ ಮಾಡಲು ಮಾರುಕಟ್ಟೆಗೆ ತರಬಹುದು ಮತ್ತು ಅದೇ ಬೆಲೆಯಲ್ಲಿ ಮಾರಾಟ ಮಾಡಲು ಸಾಧ್ಯವಿದೆ. ಇದು ಏಕಸ್ವಾಮ್ಯ ಉದ್ಯಮ ಘಟಕಕ್ಕೆ ಸಾಧ್ಯವಾಗದಿರುವುದರಿಂದ ಸರಕುಗಳ ಮಾರಾಟದ ಮೂಲಕ ಉದ್ಯಮ ಘಟಕವು ಪಡೆಯುವ ಹಣದ ಮೊತ್ತವನ್ನು ಪುನಃ ಪರಿಶೀಲಿಸಬೇಕಾಗುತ್ತದೆ.

ಇದನ್ನು ಒಂದು ಅನುಸೂಚಿ, ಒಂದು ನಕ್ಷೆ ಮತ್ತು ಒಂದು ನೇರ ಬೇಡಿಕೆ ರೇಖೆಯ ಸರಳ ಸೂತ್ರವನ್ನು ಬಳಸಿ ಅಭ್ಯಾಸ ಮಾಡಬಹುದು. ಉದಾ: ಒಂದು ಬೇಡಿಕೆಯ ಬಿಂಬಕವನ್ನು ಸೂತ್ರವೊಂದರಿಂದ ಹೀಗೆ ತೋರಿಸಲಾಗುತ್ತದೆ.

$$q = 20 - 2p,$$

ಇಲ್ಲಿ $q$ ಮಾರಾಟ ಪ್ರಮಾಣವನ್ನು ಮತ್ತು $p$ಯು ಬೆಲೆಯನ್ನು ರೂ.ಗಳಲ್ಲಿ ತೋರಿಸುತ್ತದೆ.

ಈ ಸೂತ್ರವನ್ನು ಬೆಲೆಯ ಮುಖಾಂತರ ಹೀಗೆ ವ್ಯಕ್ತಪಡಿಸಬಹುದು.

$$p = 10 - 0.5\,q$$





$q$ ನ ಬೇರೆ ಬೇರೆ ಮೌಲ್ಯಗಳನ್ನು 0 ಯಿಂದ 13ರವರೆಗೆ ಬದಲಾಯಿಸಿದರೆ ನಮಗೆ 10 ರಿಂದ 3.5ರವರೆಗಿನ ಬೆಲೆಗಳು ದೊರೆಯುತ್ತವೆ. ಇವುಗಳನ್ನು ಕೋಷ್ಟಕ 6.1ರಲ್ಲಿ $q$ ಮತ್ತು $p$ ಕಂಬ ಸಾಲುಗಳಲ್ಲಿ ತೋರಿಸಲಾಗಿದೆ.

ಈ ಸಂಖ್ಯೆಗಳನ್ನು ಚಿತ್ರ 6.2ರ ರೇಖಾ ನಕ್ಷೆಯಲ್ಲಿ ಚಿತ್ರಿಸಲಾಗಿದೆ. ಲಂಬ ಅಕ್ಷದಲ್ಲಿ ಬೆಲೆಗಳನ್ನು, ಸಮತಲ ಅಕ್ಷದಲ್ಲಿ ಪ್ರಮಾಣಗಳನ್ನು ತೋರಿಸಲಾಗಿದೆ. ಸರಕುಗಳ ವಿವಿಧ ಪ್ರಮಾಣಕ್ಕೆ ಲಭ್ಯವಿರುವ ಬೆಲೆಗಳನ್ನು ಗಾಢವಾದ ನೇರ ರೇಖೆ D ತೋರಿಸುತ್ತದೆ.

ಉದ್ಯಮ ಘಟಕವು ತನ್ನ ಸರಕುಗಳನ್ನು ಮಾರಾಟ ಮಾಡಿದಾಗ ದೊರೆಯುವ ಒಟ್ಟು ಆದಾಯ (TR) ಉತ್ಪನ್ನದ ಬೆಲೆ ಮತ್ತು ಮಾರಾಟ ಮಾಡಿದ ಪ್ರಮಾಣಕ್ಕೆ ಸಮವಾಗಿರುತ್ತದೆ. ಏಕಸ್ವಾಮ್ಯದ ಉದ್ಯಮ ಘಟಕದಲ್ಲಿ ಒಟ್ಟು ಆದಾಯದ (TR) ರೇಖೆಯು ನೇರ ರೇಖೆಯಾಗಿರುವುದಿಲ್ಲ. ಅದರ ಆಕಾರವು ಬೇಡಿಕೆ ರೇಖೆಯ ಆಕಾರವನ್ನು ಅವಲಂಭಿಸಿರುತ್ತದೆ. ಗಣಿತಾತ್ಮಕವಾಗಿ TR ಮಾರಾಟ ಮಾಡಿದ ಪ್ರಮಾಣದ ಬಿಂಬಕವನ್ನು ಪ್ರತಿನಿಧಿಸುತ್ತದೆ. ಆದುದರಿಂದ ನಮ್ಮ ಉದಾಹರಣೆಯಲ್ಲಿ

**ಕೋಷ್ಟಕ 6.1: ಬೆಲೆಗಳು ಮತ್ತು ಆದಾಯ**

| q | p | TR | AR | MR |
|---|---|---|---|---|
| 0 | 10 | 0 | – | – |
| 1 | 9.5 | 9.5 | 9.5 | 9.5 |
| 2 | 9 | 18 | 9 | 8.5 |
| 3 | 8.5 | 25.5 | 8.5 | 7.5 |
| 4 | 8 | 32 | 8 | 6.5 |
| 5 | 7.5 | 37.5 | 7.5 | 5.5 |
| 6 | 7 | 42 | 7 | 4.5 |
| 7 | 6.5 | 45.5 | 6.5 | 3.5 |
| 8 | 6 | 48 | 6 | 2.5 |
| 9 | 5.5 | 49.5 | 5.5 | 1.5 |
| 10 | 5 | 50 | 5 | 0.5 |
| 11 | 4.5 | 49.5 | 4.5 | –0.5 |
| 12 | 4 | 48 | 4 | –1.5 |
| 13 | 3.5 | 45.5 | 3.5 | –2.5 |

$$\begin{aligned} TR &= p \times q \\ &= (10 - 0.5q) \times q \\ &= 10q - 0.5q^2 \end{aligned}$$

ಇದು ಒಂದು ಸರಳ ರೇಖೆಯ ಸಮೀಕರಣವಲ್ಲ. ಇದು ಒಂದು ವರ್ಗ ಸಮೀಕರಣವಾಗಿದ್ದು, ಋಣಾತ್ಮಕ ಸಹಗುಣಕ ಹೊಂದಿರುವ ವರ್ಗವಾಗಿರುತ್ತದೆ. ಇಂತಹ ಒಂದು ಸಮೀಕರಣವು ತಲೆಕೆಳಗಾದ ಲಂಬ ಪರವಲಯವನ್ನು ಪ್ರತಿನಿಧಿಸುತ್ತದೆ.

ಕೋಷ್ಟಕ 6.1ರಲ್ಲಿ TR ಕಂಬ ಸಾಲು $p$ ಮತ್ತು $q$ನ ಕಂಬ ಸಾಲುಗಳ ಗುಣಲಬ್ದವನ್ನು ಪ್ರತಿನಿಧಿಸುತ್ತದೆ. ಪ್ರಮಾಣವು ಅಧಿಕವಾದಂತೆ TR ಹೆಚ್ಚಾಗುತ್ತದೆ. **ಉದಾ:–** ಉತ್ಪನ್ನದ ಪ್ರಮಾಣವು 10 ಘಟಕಗಳಾದಾಗ TR ರೂ. 50ಕ್ಕೆ ಏರಿಕೆಯಾಗುತ್ತದೆ. ಈ ಹಂತದ ಉತ್ಪನ್ನದ ನಂತರ ಒಟ್ಟು ಆದಾಯ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಇದನ್ನು ಚಿತ್ರ 6.2ರಲ್ಲಿ ಕಾಣಬಹುದು.




**ರೇಖಾಚಿತ್ರ 6.2: ಒಟ್ಟು, ಸರಾಸರಿ ಮತ್ತು ಸೀಮಾಂತ ಆದಾಯ ರೇಖೆಗಳು:** ಒಟ್ಟು ಆದಾಯ, ಸರಾಸರಿ ಆದಾಯ ಮತ್ತು ಸೀಮಾಂತ ಆದಾಯ ರೇಖೆಗಳನ್ನು ಇಲ್ಲಿ ಚಿತ್ರಿಸಲಾಗಿದೆ.

ಪ್ರತಿ ಘಟಕಗಳಷ್ಟು ಸರಕನ್ನು ಮಾರಾಟ ಮಾಡಿದಾಗ ಉದ್ಯಮ ಘಟಕವು ಪಡೆಯುವ ಆದಾಯವನ್ನು ಸರಾಸರಿ ಆದಾಯ (AR) ಎಂದು ಕರೆಯಲಾಗುತ್ತದೆ.

ಗಣಿತಾತ್ಮಕವಾಗಿ AR = TR/$q$ ಕೋಷ್ಟಕ 6.1ರಲ್ಲಿ AR ಕಂಬ ಸಾಲು TRನ ಮೌಲ್ಯಗಳನ್ನು $q$ನ ಮೌಲ್ಯಗಳಿಂದ ಭಾಗಿಸಿದಾಗ ಸಿಗುವ ಮೌಲ್ಯಗಳನ್ನು ಸೂಚಿಸುತ್ತದೆ. ARನ ಮೌಲ್ಯವು pಯ ಕಂಬ ಸಾಲಿನ ಮೌಲ್ಯದಷ್ಟೇ ಇರುವುದನ್ನು ಕಾಣಬಹುದಾಗಿದೆ. ಇದನ್ನು ಹೀಗೆ ತೋರಿಸಬಹುದು.

$$AR = \frac{TR}{q}$$

TR = $p \times q$ ಆಗಿರುವಾಗ ಇದನ್ನು AR ಸೂತ್ರದಲ್ಲಿ ಅಳವಡಿಸಿದಾಗ

$$AR = \frac{(p \times q)}{q} = p$$

ಈ ಹಿಂದೆ ನೋಡಿದಂತೆ, ರೇಖಾಚಿತ್ರ 6.2ರಲ್ಲಿ $P$ ಮೌಲ್ಯಗಳು ಮಾರುಕಟ್ಟೆ ಬೇಡಿಕೆ ರೇಖೆಯನ್ನು ಪ್ರತಿನಿಧಿಸುತ್ತವೆ. ಆದುದರಿಂದ AR ರೇಖೆಯು ಸರಿಯಾಗಿ ಮಾರುಕಟ್ಟೆ ಬೇಡಿಕೆ ರೇಖೆಯ ಮೇಲೆಯೇ ಇರುತ್ತದೆ. ಮಾರುಕಟ್ಟೆ ಬೇಡಿಕೆ ರೇಖೆಯು ಏಕಸ್ವಾಮ್ಯ ಉದ್ಯಮ ಘಟಕದ ಸರಾಸರಿ ಆದಾಯ (AR) ರೇಖೆಯಾಗಿರುತ್ತದೆ ಎಂದು ಒಂದು ಹೇಳಿಕೆಯ ಮೂಲಕ ವ್ಯಕ್ತಪಡಿಸಬಹುದು.

ರೇಖಾತ್ಮಕವಾಗಿ ARನ ಮೌಲ್ಯವನ್ನು TR ರೇಖೆಯಿಂದ ಪಡೆಯಬಹುದು. ರೇಖಾಚಿತ್ರ 6.3ರಲ್ಲಿ ನೀಡಿರುವಂತೆ, ಸರಳರಚನೆಯಿಂದ, ಮಾರಾಟವಾದ ಯಾವುದೇ ಪ್ರಮಾಣಕ್ಕೆ ಪ್ರಮಾಣವು 6 ಘಟಕಗಳಷ್ಟು ಆಗಿದ್ದಾಗ ಸಮಾನಾಂತರ




**ರೇಖಾಚಿತ್ರ 6.3: ಸರಾಸರಿ ಆದಾಯ ಮತ್ತು ಒಟ್ಟು ಆದಾಯ ರೇಖೆಗಳ ನಡುವಿನ ಸಂಬಂಧ** ಪರಿಗಣೆಯಲ್ಲಿರುವ ಉತ್ಪನ್ನದ ಮಟ್ಟ ಅನುಗುಣವಾಗಿ ಒಟ್ಟು ಆದಾಯದ ಮೇಲಿನ ಬಿಂದು ಮತ್ತು ಮೂಲಕ್ಕೆ ಎಳೆಯಲಾದ ರೇಖೆಯ ಇಳಿಜಾರು ಉತ್ಪನ್ನದ ಯಾವುದೇ ಮಟ್ಟಕ್ಕೆ ಸರಾಸರಿ ಆದಾಯವನ್ನು ನೀಡುತ್ತದೆ.

ಅಕ್ಷದಲ್ಲಿ 6ರ ಮೌಲ್ಯದ ಮೂಲಕ ಹಾದುಹೋಗುವ ಒಂದು ಲಂಬ ರೇಖೆಯನ್ನು ಎಳೆಯಿರಿ. ಈ ರೇಖೆಯು TR ರೇಖೆಯನ್ನು, ಎತ್ತರವು 42ಕ್ಕೆ ಸಮವಾಗಿರುವ ಬಿಂದು '*a*'ನಲ್ಲಿ ಛೇದಿಸುತ್ತದೆ. ಈಗ ಮೂಲ 'o' ಮತ್ತು ಬಿಂದು '*a*'ಗಳನ್ನು ನೇರ ರೇಖೆಯಿಂದ ಜೋಡಿಸಿ. ಮೂಲದಿಂದ TR ರೇಖೆಯ '*a*' ಬಿಂದುವಿನವರೆಗಿನ ರೇಖೆಯ ಇಳಿಜಾರು ARನ ಮೌಲ್ಯವನ್ನು ನೀಡುತ್ತದೆ. ಈ ರೇಖೆಯ ಇಳಿಜಾರು 7ಕ್ಕೆ ಸಮನಾಗಿರುತ್ತದೆ. ಆದುದರಿಂದ ARನ ಮೌಲ್ಯವು 7 ಆಗಿರುತ್ತದೆ. ಇದನ್ನು ಕೋಷ್ಟಕ 6.1ರಿಂದ ಪರಿಶೀಲಿಸಬಹುದು.

### 6.1.2 ಒಟ್ಟು, ಸರಾಸರಿ ಮತ್ತು ಸೀಮಾಂತ ಆದಾಯಗಳು *Total, Average and Marginal Revenues*

ಹೆಚ್ಚು ಜಾಗರೂಕ ದೃಷ್ಟಿಯಿದ ಕೋಷ್ಟಕ 6.1ನ್ನು ಅವಲೋಕಿಸಿದರೆ, TR ಪ್ರಮಾಣವು ಪ್ರತಿ ಘಟಕದ ಪ್ರಮಾಣದಲ್ಲಾದ ಹೆಚ್ಚಳಕ್ಕೆ ಸಮಾನ ಗಾತ್ರದಲ್ಲಿ ಹೆಚ್ಚಳವಾಗುವುದಿಲ್ಲ. ಮೊದಲ ಘಟಕದ ಮಾರಾಟದಿಂದ TR ರೂ. ಶೂನ್ಯದಿಂದ 9.50ಕ್ಕೆ ಮತ್ತು ಪ್ರಮಾಣವು 0 ಘಟಕದಿಂದ 1 ಘಟಕಕ್ಕೆ ಬದಲಾಗುತ್ತದೆ. ಅಂದರೆ ರೂ. 9.50ರ ಹೆಚ್ಚಳವಾಗಿರುತ್ತದೆ. ಪ್ರಮಾಣವು ಇನ್ನೂ ಹೆಚ್ಚಳವಾದಂತೆ TR ನಲ್ಲಾದ ಹೆಚ್ಚಳವು ಕಡಿಮೆಯಾಗಿರುತ್ತದೆ. ಉದಾಹರಣೆಗೆ ಸರಕಿನ ಐದನೆ ಘಟಕದಲ್ಲಿ TRನ ಹೆಚ್ಚಳ ರೂ. 5.50 ಆಗಿರುತ್ತದೆ. (5 ಘಟಕಕ್ಕೆ ರೂ. 37.50 – 4 ಘಟಕಕ್ಕೆ ರೂ. 32) ಈ ಹಿಂದೆ ಸೂಚಿಸಿದಂತೆ 10 ಘಟಕಗಳಷ್ಟು ಉತ್ಪನ್ನದ ನಂತರ TR ಇಳಿಯಲು ಪ್ರಾರಂಭಿಸುತ್ತದೆ. 10 ಘಟಕಗಳಿಗಿಂತ ಹೆಚ್ಚು ಪ್ರಮಾಣವನ್ನು ಮಾರಾಟಕ್ಕೆ ತಂದರೆ TR ರೂ. 50ರ ಮಟ್ಟದಿಂದ ಕೆಳಗೆ ಇಳಿಯುತ್ತದೆ ಎಂಬುದು ವ್ಯಕ್ತವಾಗುತ್ತದೆ. ಹೀಗೆ 12ನೇ ಘಟಕದಲ್ಲಿ TRನ ಹೆಚ್ಚಳವು 48 – 49.50 = – 1.5 ಅಂದರೆ ರೂ. 1.5ರಷ್ಟು ಇಳಿಕೆಯಾಗುತ್ತದೆ.

ಹೆಚ್ಚುವರಿ ಘಟಕಗಳ ಮಾರಾಟದಿಂದ ಬದಲಾಗುವ TRನ್ನು ಸೀಮಾಂತ ಆದಾಯ (MR) ಎನ್ನುತ್ತಾರೆ. ಇದನ್ನು ಕೋಷ್ಟಕ 6.1ರ ಕೊನೆಯ ಕಂಬ ಸಾಲಿನಲ್ಲಿ ತೋರಿಸಲಾಗಿದೆ. MR ಕಂಬ ಸಾಲಿನ ಮೊದಲನೇ ಅಡ್ಡ ಸಾಲಿನ ನಂತರದ ಪ್ರತಿಯೊಂದು ಅಡ್ಡ ಸಾಲಿನ ಮೌಲ್ಯವು ಆ ಅಡ್ಡ ಸಾಲಿನ TR ಮೌಲ್ಯ – ಹಿಂದಿನ ಅಡ್ಡ ಸಾಲಿನ TR ಮೌಲ್ಯವಾಗಿರುತ್ತದೆ. (ಈಗಿನ TR– ಈ ಹಿಂದಿನ TR = MR) ಮಾರಾಟ ಪ್ರಮಾಣವು ಹೆಚ್ಚಾದಂತೆ TR ನಿಧಾನ ಗತಿಯಲ್ಲಿ ಹೆಚ್ಚಾಗುತ್ತದೆ ಹಾಗೂ ಮಾರಾಟದ ಪ್ರಮಾಣವು 10ನೇ ಘಟಕಕ್ಕೆ ತಲುಪಿದಾಗ TR ಇಳಿಯಲು ಪ್ರಾರಂಭಿಸುತ್ತದೆ ಎಂಬುದನ್ನು ಈ ಹಿಂದಿನ ಪ್ಯಾರಾದಲ್ಲಿ ತೋರಿಸಲಾಗಿದೆ. ಅದೇ ರೀತಿಯಲ್ಲಿ *q* (ಪ್ರಮಾಣ) ಹೆಚ್ಚಾದಂತೆ MR ಮೌಲ್ಯಗಳು ಇಳಿಕೆಯಾಗುವುದನ್ನು ವೀಕ್ಷಿಸಬಹುದು. ಪ್ರಮಾಣವು 10ನೇ ಘಟಕವನ್ನು ತಲುಪಿದ ನಂತರ MR ಋಣಾತ್ಮಕ ಮೌಲ್ಯವನ್ನು ತಾಳುತ್ತದೆ. ಚಿತ್ರ 6.2ರಲ್ಲಿ MR ಅನ್ನು ಚುಕ್ಕಿ ಗೆರೆಯಾಗಿ ಚಿತ್ರಿಸಲಾಗಿದೆ.

ರೇಖಾತ್ಮಕವಾಗಿ MR ರೇಖೆಯ ಮೌಲ್ಯಗಳನ್ನು TR ರೇಖೆಯ ಇಳಿಜಾರಿನ ಮೂಲಕ ನೀಡಲಾಗಿದೆ. ಯಾವುದೇ ರೇಖೆಯ ಇಳಿಜಾರು ಆ ರೇಖೆಯ ಮತ್ತು ಬಿಂದುವಿನ ಸ್ಪರ್ಶ ಎಂದು ವ್ಯಾಖ್ಯಾನಿಸಲಾಗುತ್ತದೆ. ಇದನ್ನು ರೇಖಾಚಿತ್ರ 6.4ರಲ್ಲಿ ತೋರಿಸಲಾಗಿದೆ. TR ರೇಖೆಯ *a* ಬಿಂದುವಿನಲ್ಲಿ $L_1$ ರೇಖೆಯ ಇಳಿಜಾರು ಮತ್ತು *b* ಬಿಂದುವಿನಲ್ಲಿ $L_2$ ರೇಖೆಯ ಇಳಿಜಾರು MRನ ಮೌಲ್ಯವನ್ನು ನೀಡುತ್ತದೆ. ಎರಡೂ ರೇಖೆಗಳು ಧನಾತ್ಮಕ ಇಳಿಜಾರು ಹೊಂದಿದ್ದರೂ $L_2$ ರೇಖೆಯು $L_1$ ರೇಖೆಗಿಂತ ಹೆಚ್ಚು ಸಮತಟ್ಟಾಗಿರುವುದು ಕಂಡುಬರುತ್ತದೆ. ಅಂದರೆ $L_2$ ಕಡಿಮೆ ಇಳಿಜಾರು ಹೊಂದಿದೆ ಎಂದು ಅರ್ಥ. ಅದೇ ಮಟ್ಟದ ಪ್ರಮಾಣದಲ್ಲಿ




**ರೇಖಾಚಿತ್ರ 6.4: ಸೀಮಾಂತ ಆದಾಯ ಮತ್ತು ಒಟ್ಟು ಆದಾಯ ರೇಖೆಗಳ ನಡುವಿನ ಸಂಬಂಧ:** ಉತ್ಪಾದನೆಯ ಯಾವುದೇ ಮಟ್ಟದಲ್ಲಿ ಸೀಮಾಂತ ಆದಾಯವು ಆ ಮಟ್ಟದ ಉತ್ಪಾದನೆಯಲ್ಲಿನ ಒಟ್ಟು ಆದಾಯದ ರೇಖೆಯ ಇಳಿಜಾರುಗಳಿಂದ ನೀಡಲಾಗಿದೆ.

MRನ ಮೌಲ್ಯವೂ ಸಹ ಕಡಿಮೆ ಇರುತ್ತದೆ. 10 ಘಟಕಗಳಷ್ಟು ಸರಕುಗಳ ಮಾರಾಟವಾದಾಗ TRನ ಸ್ಪರ್ಶ ರೇಖೆ ಸಮತಲವಾಗಿದ್ದು, ಇದರ ಇಳಿಜಾರು ಶೂನ್ಯವಾಗಿದೆ. ಅದೇ ಪ್ರಮಾಣಕ್ಕೆ MRನ ಮೌಲ್ಯವು ಶೂನ್ಯವಾಗಿರುತ್ತದೆ. TR ರೇಖೆಯ $d$ ಬಿಂದುವಿನಲ್ಲಿನ ಸ್ಪರ್ಶ ರೇಖೆ ಋಣಾತ್ಮಕ ಇಳಿಜಾರನ್ನು ಹೊಂದಿರುತ್ತದೆ. ಆಗ MR ಋಣಾತ್ಮಕ ಮೌಲ್ಯವನ್ನು ಪಡೆಯುತ್ತದೆ.

ಒಟ್ಟು ಆದಾಯ ಹೆಚ್ಚುತ್ತಿರುವಾಗ ಸೀಮಾಂತ ಆದಾಯವು ಧನಾತ್ಮಕವಾಗಿರುತ್ತದೆ ಮತ್ತು ಒಟ್ಟು ಆದಾಯವು ಇಳಿಕೆಯನ್ನು ತೋರಿಸುವಾಗ ಸೀಮಾಂತ ಆದಾಯವು ಋಣಾತ್ಮಕವಾಗಿರುತ್ತದೆಂಬ ತೀರ್ಮಾನಕ್ಕೆ ನಾವು ಬರಬಹುದು.

AR ಮತ್ತು MR ರೇಖೆಗಳ ನಡುವೆ ಇನ್ನೊಂದು ಸಂಬಂಧವನ್ನು ಕಾಣಬಹುದು. ರೇಖಾಚಿತ್ರ 6.2ರಲ್ಲಿ MR ರೇಖೆಯು AR ರೇಖೆಗಿಂತ ಕೆಳಗಿರುವುದನ್ನು ತೋರಿಸಲಾಗಿದೆ. ಯಾವುದೇ ಮಟ್ಟದ ಉತ್ಪನ್ನದಲ್ಲಿ ARನ ಮೌಲ್ಯಕ್ಕೆ ಅನುಗುಣವಾಗಿ MRನ ಮೌಲ್ಯವು ಕಡಿಮೆಯಾಗಿರುವುದನ್ನು ಕೋಷ್ಟಕ 6.1ರಲ್ಲಿ ನೋಡಬಹುದಾಗಿದೆ. AR ರೇಖೆಯು (ಅಂದರೆ ಬೇಡಿಕೆ ರೇಖೆ) ಕಡಿದಾದ ಇಳಿಕೆಯಾಗುತ್ತಿದ್ದರೆ MR ರೇಖೆಯು AR ರೇಖೆಗಿಂತ ಬಹಳ ಕೆಳಗಿರುತ್ತದೆಂಬ ತೀರ್ಮಾನಕ್ಕೆ ನಾವು ಬರಬಹುದು. ಇನ್ನೊಂದೆಡೆ AR ರೇಖೆಯು ಕಡಿಮೆ ಇಳಿಜಾರನ್ನು ಹೊಂದಿದ್ದರೆ AR ಮತ್ತು MRಗಳ ನಡುವಣ ಲಂಬ ಅಂತರವು ಕಡಿಮೆ ಇರುತ್ತದೆ. ಚಿತ್ರ 6.5 (a) ದಲ್ಲಿ AR ರೇಖೆಯು ಹೆಚ್ಚು ಸಮತಟ್ಟಾಗಿದ್ದು, ಚಿತ್ರ 6.5 (b)ಯು ಕಡಿದಾದ AR ರೇಖೆಯನ್ನು ತೋರಿಸುತ್ತದೆ.




**ರೇಖಾಚಿತ್ರ 6.5:** ಸರಾಸರಿ ಆದಾಯ ಮತ್ತು ಸೀಮಾಂತ ಆದಾಯ ರೇಖೆಗಳ ನಡುವಿನ ಸಂಬಂಧ. AR ರೇಖೆಯು ಕಡಿದಾಗಿದ್ದಾಗ MR ರೇಖೆಯು AR ರೇಖೆಗಿಂತ ತುಂಬ ಕೆಳಗಿರುತ್ತದೆ.

ಸರಕಿನ ಅಷ್ಟೇ ಘಟಕಗಳಿಗೆ AR ಮತ್ತು MR ರ ನಡುವಣ ವ್ಯತ್ಯಾಸವು, ಫಲಕ (a) ಯಲ್ಲಿ (b) ಫಲಕಕ್ಕಿಂತ ಕಡಿಮೆ ಇದೆ.

### 6.1.3 ಸೀಮಾಂತ ಆದಾಯ ಮತ್ತು ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ *Marginal Revenue and Price Elasticity of Demand*

MRನ ಮೌಲ್ಯಗಳು ಕೂಡಾ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವದೊಂದಿಗೆ ಸಂಬಂಧ ಹೊಂದಿದೆ. ಸಂಬಂಧದ ಸಂಪೂರ್ಣ ವಿವರಣೆಯನ್ನು ಇಲ್ಲಿ ಪಡೆಯಲಾಗಿಲ್ಲ. ಇದು ಒಂದೇ ಒಂದು ಅಂಶವನ್ನು ಗಮನಿಸಿದರೆ ಸಾಕು. MR ಧನಾತ್ಮಕ ಮೌಲ್ಯವನ್ನು ಹೊಂದಿದ್ದಾಗ ಬೇಡಿಕೆಯ ಸ್ಥಿತಿಸ್ಥಾಪಕತ್ವ ಒಂದಕ್ಕಿಂತ ಹೆಚ್ಚು ಇರುತ್ತದೆ ಮತ್ತು MR ಋಣಾತ್ಮಕ ಮೌಲ್ಯವನ್ನು ಹೊಂದಿದ್ದಾಗ ಸ್ಥಿತಿಸ್ಥಾಪಕತ್ವ ಒಂದಕ್ಕಿಂತ ಕಡಿಮೆಯಾಗುತ್ತದೆ. ಇದನ್ನು ಕೋಷ್ಟಕ 6.1ರಲ್ಲಿ ನಿರೂಪಿಸಲಾಗಿರುವ ಅದೇ ದತ್ತಾಂಶಗಳನ್ನು ಬಳಸಿಕೊಂಡು ಕೋಷ್ಟಕ 6.2ರಲ್ಲಿ

ನೋಡಬಹುದಾಗಿದೆ. ಸರಕಿನ ಪ್ರಮಾಣ ಹೆಚ್ಚಾದಂತೆ MR ಮೌಲ್ಯವು ಕಡಿಮೆಯಾಗುತ್ತದೆ ಮತ್ತು ಬೇಡಿಕೆಯ ಸ್ಥಿತಿಸ್ಥಾಪಕತ್ವದ ಮೌಲ್ಯವು ಕೂಡ ಕಡಿಮೆಯಾಗುತ್ತದೆ. ಬೆಲೆ ಸ್ಥಿತಿಸ್ಥಾಪಕತ್ವವು ಒಂದಕ್ಕಿಂತ ಹೆಚ್ಚು ಇರುವ ಬಿಂಧುವಿನಲ್ಲಿ ಬೇಡಿಕೆ ರೇಖೆಯು ಸ್ಥಿತಿಸ್ಥಾಪಕತ್ವ ಹೊಂದಿದೆ ಎಂದು ಕರೆಯಲಾಗುತ್ತದೆ, ಬೆಲೆ ಸ್ಥಿತಿಸ್ಥಾಪಕತ್ವವು ಒಂದಕ್ಕಿಂತ ಕಡಿಮೆ ಇರುವ ಬಿಂದುವಿನಲ್ಲಿ ಸ್ಥಿತಿಸ್ಥಾಪಕ ರಹಿತವಾಗಿರುತ್ತದೆ ಮತ್ತು ಬೆಲೆ ಸ್ಥಿತಿಸ್ಥಾಪಕತ್ವವು ಒಂದಕ್ಕೆ ಸಮಾನಾಗಿದ್ದಾಗ ಸಮ ಸ್ಥಿತಿಸ್ಥಾಪಕತ್ವ ಇರುತ್ತದೆ ಎಂಬುದನ್ನು ನೆನಪಿಸಿಕೊಳ್ಳೋಣ. ಪ್ರಮಾಣವು 10 ಘಟಕಗಳಿಗಿಂತ ಕಡಿಮೆ ಇದ್ದಾಗ MR ಧನಾತ್ಮಕವಾಗಿದೆ ಮತ್ತು ಬೇಡಿಕೆ ರೇಖೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ ಮತ್ತು ಪ್ರಮಾಣವು 10 ಘಟಕಗಳಿಗಿಂತ ಹೆಚ್ಚು ಇದ್ದಾಗ ಬೇಡಿಕೆ ರೇಖೆಯು ಸ್ಥಿತಿಸ್ಥಾಪಕ ರಹಿತವಾಗಿರುತ್ತದೆ ಎಂಬುದನ್ನು ಕೋಷ್ಟಕ 6.2 ತೋರಿಸುತ್ತದೆ. ಪ್ರಮಾಣದ ಮಟ್ಟ 10 ಘಟಕಗಳಾಗಿದ್ದಾಗ ಬೇಡಿಕೆ ರೇಖೆಯು ಸಮಸ್ಥಿತಿ ಸ್ಥಾಪಕತ್ವವನ್ನು ಹೊಂದಿರುತ್ತದೆ.

### 6.1.4 ಏಕಸ್ವಾಮ್ಯ ಉದ್ಯಮ ಘಟಕದ ಅಲ್ಪಾವಧಿ ಸಮತೋಲನ

***Short Run equilibrium of the Monopoly Firm***

ಪರಿಪೂರ್ಣ ಪೈಪೋಟಿಯಲ್ಲಿ ಇರುವಂತೆ, ಏಕಸ್ವಾಮ್ಯದ ಉದ್ಯಮ ಘಟಕ ಕೂಡಾ ಗರಿಷ್ಠ ಲಾಭ ಗಳಿಸುತ್ತವೆಂದು ನಾವು ಭಾವಿಸುತ್ತೇವೆ. ಏಕಸ್ವಾಮ್ಯ ಉದ್ಯಮ ಘಟಕ ಉತ್ಪಾದಿಸಿದ ಪ್ರಮಾಣ ಮತ್ತು ಅದನ್ನು ಮಾರಾಟ ಮಾಡಿದ ಬೆಲೆಯನ್ನು ನಿರ್ಧರಿಸುವ ಲಾಭವನ್ನು ಗರಿಷ್ಠಗೊಳಿಸುವ ವರ್ತನೆಯನ್ನು ಈ ಭಾಗದಲ್ಲಿ ನಾವು ವಿಶ್ಲೇಷಿಸುತ್ತೇವೆ. ಉದ್ಯಮ ಘಟಕವು ಉತ್ಪಾದಿಸಿದ ಸರಕಿನ ದಾಸ್ತಾನನ್ನು ಕಾಯ್ದಿಡುವುದಿಲ್ಲ. ಮತ್ತು ಉತ್ಪಾದನೆಯಾದುದೆಲ್ಲವೂ ಮಾರಾಟವಾಗುತ್ತದೆಂಬ ಕಲ್ಪನೆಯನ್ನು ನಾವು ಮಾಡಿಕೊಳ್ಳುತ್ತೇವೆ.

**ಕೋಷ್ಟಕ 6.2: MR ಮತ್ತು ಬೆಲೆಯ ಸ್ಥಿತಿಸ್ಥಾಪಕತ್ವ**

| q | p | MR | ಸ್ಥಿತಿಸ್ಥಾಪಕತ್ವ |
|---|---|---|---|
| 0 | 10 | - | - |
| 1 | 9.5 | 9.5 | 19 |
| 2 | 9 | 8.5 | 9 |
| 3 | 8.5 | 7.5 | 5.67 |
| 4 | 8 | 6.5 | 4 |
| 5 | 7.5 | 5.5 | 3 |
| 6 | 7 | 4.5 | 2.33 |
| 7 | 6.5 | 3.5 | 1.86 |
| 8 | 6 | 2.5 | 1.5 |
| 9 | 5.5 | 1.5 | 1.22 |
| 10 | 5 | 0.5 | 1 |
| 11 | 4.5 | -0.5 | 0.82 |
| 12 | 4 | -1.5 | 0.67 |
| 13 | 3.5 | -2.5 | 0.54 |

**ಶೂನ್ಯ ವೆಚ್ಚದ ಸರಳ ಪ್ರಕರಣ**

ಇತರ ಗ್ರಾಮಗಳಿಂದ ಸಾಕಷ್ಟು ದೂರದಲ್ಲಿ ಒಂದು ಗ್ರಾಮ ಇದೆಯೆಂದು ಭಾವಿಸುತ್ತಾ ಈ ಹಳ್ಳಿಯಲ್ಲಿ ನೀರು ಲಭ್ಯವಿರುವ ಒಂದೇ ಒಂದು ಬಾವಿ ಇದೆ. ಗ್ರಾಮವಾಸಿಗಳೆಲ್ಲರೂ ನೀರಿಗಾಗಿ ಈ ಬಾವಿಯನ್ನೇ ಸಂಪೂರ್ಣವಾಗಿ ಆವಲಂಬಿಸಿಕೊಂಡಿರುತ್ತಾರೆ. ಈ ಬಾವಿ ಒಬ್ಬ ವ್ಯಕ್ತಿಯ ಒಡೆತನಕ್ಕೆ ಒಳಪಟ್ಟಿದ್ದು ನೀರನ್ನು ಕೊಳ್ಳುವವರನ್ನು ಹೊರತುಪಡಿಸಿ ಇತರರು ನೀರು ತೆಗೆಯದಂತೆ ತಡೆಯುವಲ್ಲಿ ಸಮರ್ಥನಾಗಿರುತ್ತಾನೆ.

ನೀರು ಕೊಳ್ಳುವವನು ಬಾವಿಯಿಂದ ನೀರನ್ನು ತಾನೇ ಸೇದಿಕೊಳ್ಳಬೇಕಾಗುತ್ತದೆ. ಆ ರೀತಿಯಲ್ಲಿ ಬಾವಿಯ ಮಾಲೀಕನು ಏಕಸ್ವಾಮ್ಯದ ಉದ್ಯಮಿಯಾಗಿದ್ದು, ಸರಕನ್ನು ಉತ್ಪಾದಿಸಲು ಶೂನ್ಯ ವೆಚ್ಚವನ್ನು ಭರಿಸುತ್ತಾನೆ. ಮಾರಾಟವಾಗುವ ನೀರಿನ ಪ್ರಮಾಣವನ್ನು ಮತ್ತು ಮಾರಾಟದ ಬೆಲೆಯನ್ನು ನಿರ್ಧರಿಸಲು ಶೂನ್ಯ ವೆಚ್ಚವನ್ನು ಮಾಡುವ ಏಕಸ್ವಾಮ್ಯದ ಸರಳ ಪ್ರಕರಣವನ್ನು ವಿಶ್ಲೇಷಿಸೋಣ.




**ರೇಖಾಚಿತ್ರ 6.6: ವೆಚ್ಚವು ಶೂನ್ಯವಿದ್ದಾಗ ಏಕಸ್ವಾಮ್ಯ ಮಾರಾಟಗಾರನ ಅಲ್ಪಾವಧಿ ಸಮತೋಲನ:** ಒಟ್ಟು ಆದಾಯವು ಗರಿಷ್ಠವಾಗಿರುವ ಉತ್ಪನ್ನದ ಮಟ್ಟದಲ್ಲಿ ಏಕಸ್ವಾಮ್ಯ ಮಾರಾಟಗಾರನ ಲಾಭವು ಗರಿಷ್ಠವಾಗಿರುತ್ತದೆ.

ಚಿತ್ರ 6.2ರಲ್ಲಿರುವ TR, AR, MR ರೇಖೆಗಳನ್ನೇ ಚಿತ್ರ 6.6ರಲ್ಲಿ ತೋರಿಸುತ್ತದೆ. ಉದ್ಯಮ ಘಟಕವು ಪಡೆದ ಆದಾಯವನ್ನು ಭರಿಸಿದ ವೆಚ್ಚವನ್ನು ಕಳೆದರೆ ಅದು ಉದ್ಯಮ ಘಟಕವು ಗಳಿಸಿದ ಲಾಭಕ್ಕೆ ಸಮಾನಾಗಿರುತ್ತದೆ. ಅಂದರೆ ಲಾಭ = TR–TC. ಈ ಪ್ರಕರಣದಲ್ಲಿ TC ಯು ಶೂನ್ಯವಾಗಿರುದರಿಂದ TR ಗರಿಷ್ಠವಾದಾಗ ಲಾಭವೂ ಗರಿಷ್ಠವಾಗುತ್ತದೆ. ನಾವು ಮೊದಲು ನೋಡಿದ ಹಾಗೆ ಇದು ಉತ್ಪಾದನೆಯು 10 ಘಟಕಗಳಾಗಿರುವಾಗ ಸಂಭವಿಸುತ್ತದೆ. ಇದು MR ಶೂನ್ಯಕ್ಕೆ ಸಮವಾಗಿರುವ ಹಂತವೂ ಆಗಿರುತ್ತದೆ. $a$ ಯಿಂದ ಸಮತಲ ಅಕ್ಷದವರೆಗಿನ ಲಂಬ ರೇಖೆಯ ಉದ್ದದ ಭಾಗವು ಲಾಭದ ಮೊತ್ತವನ್ನು ತೋರಿಸುತ್ತದೆ.

ಈ ಉತ್ಪನ್ನವು ಮಾರಾಟವಾಗುವ ಬೆಲೆಯು ಅನುಭೋಗಿಗಳು ಒಟ್ಟಾಗಿ ಪಾವತಿಸಲು ಇಚ್ಛಿಸುವ ಬೆಲೆಯಾಗಿರುತ್ತದೆ. ಮಾರುಕಟ್ಟೆ ಬೇಡಿಕೆ ರೇಖೆ D ಯಲ್ಲಿ ಇದನ್ನು ನೀಡಲಾಗಿದೆ. ಉತ್ಪನ್ನದ ಮಟ್ಟವು 10 ಆಗಿರುವಾಗ ಬೆಲೆಯು ರೂ. 5 ಆಗಿರುತ್ತದೆ. ಏಕ ಸ್ವಾಮ್ಯ ಉದ್ಯಮ ಘಟಕದ ಮಾರುಕಟ್ಟೆ ಬೇಡಿಕೆ ರೇಖೆಯು AR ರೇಖೆ ಆಗಿರುವುದರಿಂದ ಉದ್ಯಮ ಘಟಕವು ಪಡೆಯುವ ಆದಾಯವು ರೂ. 5 ಆಗಿರುತ್ತದೆ. AR ನ ಉತ್ಪನ್ನ ಮತ್ತು ಮಾರಾಟ ಮಾಡಲಾದ ಪ್ರಮಾಣಗಳು ಒಟ್ಟು ಆದಾಯವನ್ನು ನೀಡುತ್ತದೆ. ಅದು ರೂ. $5 \times 10 =$ ರೂ. 50 ಆಗಿರುತ್ತದೆ. ರೇಖಾಚಿತ್ರ 6.6ರಲ್ಲಿ ಛಾಯೆಯಿಂದ ಆವೃತವಾದ ಆಯತ ಪ್ರದೇಶವು ಇದನ್ನು ತೋರಿಸುತ್ತದೆ.

**ಪರಿಪೂರ್ಣ ಪೈಪೋಟಿಯೊಡನೆ ಹೋಲಿಕೆ**

ಮೇಲಿನ ಫಲಿತಾಂಶವು ಪರಿಪೂರ್ಣ ಪೈಪೋಟಿಯ ಮಾರುಕಟ್ಟೆ ಸಂರಚನೆಯಲ್ಲಿ ಏನಾಗುತ್ತದೆ ಎಂಬುದನ್ನು ಹೋಲಿಸಿ ನೋಡೋಣ. ಅಂತಹ ಬಾವಿಗಳ ಸಂಖ್ಯೆ ಅಸಂಖ್ಯಾತವಾಗಿರುತ್ತದೆಂದು ನಾವು ಭಾವಿಸೋಣ. ಒಂದು ಬಾವಿಯ ಮಾಲೀಕನು ರೂ. 50 ಲಾಭ ಪಡೆಯಲು ಪ್ರತೀ ಘಟಕಕ್ಕೆ ರೂ. 5 ದರವನ್ನು ವಿಧಿಸಿದರೆ ಇದಕ್ಕಿಂತ ಕಡಿಮೆ ದರಕ್ಕೆ ನೀರು ಕೊಳ್ಳಲು ಇಚ್ಛಿಸುವ ಗ್ರಾಹಕರು ಇನ್ನೂ ಇದ್ದಾರೆ ಎಂಬುದನ್ನು ತಿಳಿದುಕೊಂಡ ಮತ್ತೊಂದು ಬಾವಿಯ ಮಾಲೀಕ ರೂ. 5ರ ಬದಲು ಘಟಕಕ್ಕೆ ರೂ. 4ರಷ್ಟು ದರ ನಿಗಧಿಪಡಿಸುತ್ತಾನೆ. ಗ್ರಾಹಕರು ಈ ಎರಡನೇ ನೀರಿನ ಮಾರಾಟಗಾರನಿಂದ ಖರೀದಿಸಲು ನಿರ್ಧರಿಸಿ 12 ಘಟಕಗಳಷ್ಟು ದೊಡ್ಡ ಪ್ರಮಾಣದ ನೀರಿಗೆ ಬೇಡಿಕೆ ಇಟ್ಟಾಗ ರೂ. 48ರಷ್ಟು ಒಟ್ಟು ಆದಾಯ ಸೃಷ್ಟಿಯಾಗುತ್ತದೆ. ಅದೇ ರೀತಿ ಇನ್ನೊಬ್ಬ ನೀರಿನ ಮಾರಾಟಗಾರ ಆದಾಯನ್ನು ಪಡೆಯುವುದಕ್ಕಾಗಿ ಇನ್ನಷ್ಟು ಕಡಿಮೆ ಬೆಲೆ ಅಂದರೆ ರೂ. 3ರಷ್ಟು ನಿಗಧಿಪಡಿಸಿದಾಗ 14 ಘಟಕಗಳಷ್ಟು ನೀರನ್ನು ಮಾರಾಟ ಮಾಡುತ್ತಾನೆ ಮತ್ತು ಇದರಿಂದ ರೂ. 42ರಷ್ಟು ಆದಾಯವನ್ನು ಗಳಿಸುತ್ತಾನೆ. ಹೀಗೆ ಉದ್ಯಮ ಘಟಕಗಳ ಸಂಖ್ಯೆಯು ಅಸಂಖ್ಯಾತವಾಗಿರುವುದರಿಂದ ಬೆಲೆಯು ಅನಂತವಾಗಿ ಇಳಿಯುತ್ತಾ ಹೋಗಿ ಶೂನ್ಯವನ್ನು ತಲುಪುತ್ತದೆ. ಈ ಹಂತದಲ್ಲಿ 20 ಘಟಕಗಳಷ್ಟು ನೀರು ಮಾರಾಟವಾಗುತ್ತದೆ ಮತ್ತು ಲಾಭವು ಶೂನ್ಯವಾಗುತ್ತದೆ.

ಈ ಹೋಲಿಕೆಯ ಮೂಲಕ, ಪರಿಪೂರ್ಣ ಪೈಪೋಟಿ ಮಾರುಕಟ್ಟೆ ಸಮತೋಲನದ ಪರಿಣಾಮವಾಗಿ ಹೆಚ್ಚು ಪ್ರಮಾಣವು ಕಡಿಮೆ ಬೆಲೆಗೆ ಮಾರಾಟವಾಗುವುದನ್ನು ಕಾಣಬಹುದು. ಈಗ ನಾವು ಧನಾತ್ಮಕ ಉತ್ಪಾದನಾ ವೆಚ್ಚವು ಒಳಗೊಂಡಿರುವ ಸಾಮಾನ್ಯ ಸಂಗತಿಯತ್ತ ಮುಂದುವರಿಯೋಣ.

**ಧನಾತ್ಮಕ ವೆಚ್ಚವನ್ನು ಪರಿಚಯಿಸುವುದು**

ಒಟ್ಟು ರೇಖೆಗಳನ್ನು ಬಳಸಿ ವಿಶ್ಲೇಷಿಸುವುದು

ಅಧ್ಯಾಯ 3ರಲ್ಲಿ ನಾವು ವೆಚ್ಚದ ಪರಿಭಾವನೆ ಮತ್ತು ಒಟ್ಟು ವೆಚ್ಚದ ರೇಖೆಯ ಆಕಾರವನ್ನು ಚರ್ಚಿಸಿದ್ದು, ಇದನ್ನು ರೇಖಾಚಿತ್ರ 6.7ರಲ್ಲಿ TC ರೇಖೆಯ ಮೂಲಕ ಚಿತ್ರಿಸಲಾಗಿದೆ. ಅದೇ ರೇಖಾಚಿತ್ರದಲ್ಲಿ TR ರೇಖೆಯನ್ನು ಕೂಡಾ ಎಳೆಯಲಾಗಿದೆ. ಉದ್ಯಮ ಘಟಕವು ಗಳಿಸಿದ ಲಾಭವು ಒಟ್ಟು ಆದಾಯ ಒಟ್ಟು ವೆಚ್ಚವನ್ನು ಕಳೆದಾಗ ದೊರೆಯುವ ಆದಾಯಕ್ಕೆ ಸಮವಾಗುತ್ತದೆ. $q_1$ ಪ್ರಮಾಣವನ್ನು ಉತ್ಪಾದಿಸಿದಾಗ ಒಟ್ಟು ಆದಾಯವು $TR_1$ ಮತ್ತು ಒಟ್ಟು ವೆಚ್ಚವು $TC_1$ ಆಗುತ್ತದೆ ಎಂಬುದನ್ನು ರೇಖಾಚಿತ್ರದಲ್ಲಿ ಕಾಣಬಹುದು. $TR_1 - TC_1$ಗಳ ವ್ಯತ್ಯಾಸವು ಲಾಭಗಳಿಕೆಯಾಗಿದೆ. AB ಭಾಗದ ರೇಖೆಯ ಉದ್ದದ ಮೂಲಕ ಇದನ್ನು ಚಿತ್ರಿಸಿದೆ. ಅಂದರೆ ಇದು $q_1$ ಉತ್ಪನ್ನದ ಮಟ್ಟದಲ್ಲಿ TR ಮತ್ತು TC ರೇಖೆಗಳ ನಡುವಿನ ಲಂಬ ಅಂತರವಾಗಿದೆ. ಈ ಲಂಬ ಅಂತರವು ಉತ್ಪನ್ನದ ವಿವಿಧ ಮಟ್ಟಗಳಲ್ಲಿ ಬದಲಾಗುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಉತ್ಪಾದನಾ ಮಟ್ಟವು $q_2$ ಗಿಂತ ಕಡಿಮೆ ಇದ್ದಾಗ TC ರೇಖೆಯು TR ರೇಖೆಗಿಂತ ಮೇಲಿರುತ್ತದೆ. ಅಂದರೆ

TCಯು TRಗಿಂತ ದೊಡ್ಡದಿರುತ್ತದೆ. ಆದುದರಿಂದ ಲಾಭವು ಋಣಾತ್ಮಕವಾಗಿದ್ದು, ಉದ್ಯಮ ಘಟಕವು ನಷ್ಟವನ್ನು ಅನುಭವಿಸುತ್ತದೆ.

ಉತ್ಪನ್ನ ಮಟ್ಟವು $q_1$ಯಿಂದ ಅಧಿಕವಾದರೆ ಇದೇ ಪರಿಸ್ಥಿತಿ ಉದ್ಭವಿಸುತ್ತದೆ. ಹೀಗೆ TR ರೇಖೆಯು TC ರೇಖೆಗಿಂತ ಮೇಲ್ಗಡೆಯಿರುವ $q_2$ ಮತ್ತು $q_3$ ನಡುವಿನ ಉತ್ಪನ್ನದ ಮಟ್ಟಗಳಲ್ಲಿ ಉದ್ಯಮ ಘಟಕ ಧನಾತ್ಮಕ ಲಾಭಗಳಿಸಲು ಸಾಧ್ಯವಾಗುತ್ತದೆ. ಯಾವ ಉತ್ಪನ್ನದ ಮಟ್ಟವು ಅದರ ಲಾಭವನ್ನು ಗರಿಷ್ಠಗೊಳಿಸುತ್ತದೆಯೋ ಅದನ್ನು ಏಕಸ್ವಾಮ್ಯದ ಉದ್ಯಮ ಘಟಕ ಆಯ್ಕೆ ಮಾಡಿಕೊಳ್ಳುತ್ತದೆ. ಇದು TR ಮತ್ತು TCಗಳ ನಡುವಣ ಲಂಬ ಅಂತರವು ಗರಿಷ್ಠವಾಗಿರುವ ಉತ್ಪನ್ನದ ಮಟ್ಟವಾಗಿದೆ. ಅಂದರೆ TR–TC ಗರಿಷ್ಠವಾಗಿದೆ. ಇದು $q_0$ ಉತ್ಪನ್ನದ ಮಟ್ಟದಲ್ಲಿ ಸಂಭವಿಸುತ್ತದೆ. TR ಮತ್ತು TC ಗಳ ನಡುವಿನ ವ್ಯತ್ಯಾಸವನ್ನು ಲೆಕ್ಕ ಮಾಡಿ ರೇಖಾ ನಕ್ಷೆಯಲ್ಲಿ ಎಳೆದಾಗ ಅದು ರೇಖಾಚಿತ್ರ 6.7ರಲ್ಲಿರುವ ಲಾಭ ಎಂದು ಗುರುತಿಸಲಾದ ರೇಖೆಯಂತೆ ಕಾಣುತ್ತದೆ. $q_0$ಉತ್ಪನ್ನದ ಮಟ್ಟದಲ್ಲಿ ಲಾಭದ ರೇಖೆಯು ಗರಿಷ್ಠ ಮೌಲ್ಯವನ್ನು ಹೊಂದಿರುವುದನ್ನು ಗಮನಿಸಬಹುದು.




**ರೇಖಾಚಿತ್ರ 6.7:** ಒಟ್ಟು ರೇಖೆಗಳ ರೂಪದಲ್ಲಿ ಏಕಸ್ವಾಮ್ಯ ಮಾರಾಟಗಾರನ ಸಮತೋಲನ. TR ಮತ್ತು TC ಗಳ ನಡುವಿನ ಲಂಬ ಅಂತರವು ಗರಿಷ್ಠವಾಗಿದ್ದು, TR, TCಗಿಂತ ಮೇಲಿದ್ದಾಗ ಇರುವ ಉತ್ಪನ್ನದ ಮಟ್ಟದಲ್ಲಿ ಏಕಸ್ವಾಮ್ಯ ಮಾರಾಟಗಾರನ ಲಾಭವು ಗರಿಷ್ಠವಾಗಿರುತ್ತದೆ.



$q_0$ ಸರಕು ಉತ್ಪನ್ನದ ಪ್ರಮಾಣ ಯಾವ ಬೆಲೆಯಲ್ಲಿ ಮಾರಾಟವಾಗುತ್ತದೆಯೋ ಅದು ಅನುಭೋಗಿಯು ಪಾವತಿಸಲು ಇಚ್ಛಿಸುವ ಬೆಲೆಯಾಗಿರುತ್ತದೆ. ಆದುದರಿಂದ ಏಕಸ್ವಾಮ್ಯ ಉದ್ಯಮ ಘಟಕವು ವಿಧಿಸುವ ಬೆಲೆಯು ಬೇಡಿಕೆ ರೇಖೆಯ ಮೇಲಿನ $q_0$ ಪ್ರಮಾಣದ ಮಟ್ಟಕ್ಕೆ ಅನುಗುಣವಾಗಿರುತ್ತದೆ.

ಸರಾಸರಿ ಮತ್ತು ಸೀಮಾಂತ ರೇಖೆಗಳನ್ನು ಬಳಸುವುದು ಮೇಲೆ ತೋರಿಸಿದ ವಿಶ್ಲೇಷಣೆಯನ್ನು ಸರಾಸರಿ ಆದಾಯ, ಸೀಮಾಂತ ಆದಾಯ ಮತ್ತು ಸರಾಸರಿ ವೆಚ್ಚ ಮತ್ತು ಸೀಮಾಂತ ವೆಚ್ಚಗಳನ್ನು ಬಳಸಿ ನಿರೂಪಿಸಬಹುದು. ಈ ವಿಧಾನವು ಸ್ವಲ್ಪ ಹೆಚ್ಚು ಸಂಕೀರ್ಣವಾದರೂ ಪ್ರಕ್ರಿಯೆಯ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಲು ಸಮರ್ಥವಾಗುತ್ತದೆ.

ಚಿತ್ರ 6.8ರಲ್ಲಿ ಸರಾಸರಿ ವೆಚ್ಚ (AC), ಸರಾಸರಿ ಬದಲಾಗುವ ವೆಚ್ಚ (AVC) ಮತ್ತು ಸೀಮಾಂತ ವೆಚ್ಚ (MC)ದ ರೇಖೆಗಳನ್ನು ಬೇಡಿಕೆ ರೇಖೆ (AR), ಸೀಮಾಂತ ಆದಾಯ ರೇಖೆ (MR), ಗಳೊಂದಿಗೆ ಎಳೆಯಲಾಗಿದೆ.

$q_0$ ಪ್ರಮಾಣಕ್ಕಿಂತ ಕೆಳಗಿನ ಮಟ್ಟದಲ್ಲಿ MRನ ಮಟ್ಟವು MCಯ ಮಟ್ಟಕ್ಕಿಂತ ಹೆಚ್ಚಾಗಿದೆ ಎಂಬುದನ್ನು ಕಾಣಬಹುದು. ಸರಕಿನ ಹೆಚ್ಚುವರಿ ಘಟಕದ ಮಾರಾಟದಿಂದ ಒಟ್ಟು ಆದಾಯದಲ್ಲಾಗುವ ಹೆಚ್ಚಳವು, ಸರಕಿನ ಹೆಚ್ಚುವರಿ ಘಟಕವನ್ನು ಉತ್ಪಾದಿಸಲು ತಗಲುವ ಒಟ್ಟು ವೆಚ್ಚದ ಹೆಚ್ಚಳಕ್ಕಿಂತ ಅಧಿಕವಾಗಿರುತ್ತದೆ.




**ರೇಖಾಚಿತ್ರ 6.8:** ಸರಾಸರಿ ಮತ್ತು ಸೀಮಾಂತ ರೇಖೆಗಳ ರೂಪದಲ್ಲಿ ಏಕಸ್ವಮ್ಯ ಮಾರಾಟಗಾರನ ಸಮತೋಲನ. MR = MC ಮತ್ತು MCಯು ಏರಿಕೆಯಾಗುವ ಉತ್ಪನ್ನದ ಮಟ್ಟದಲ್ಲಿ ಏಕಸ್ವಾಮ್ಯ ಮಾರಾಟಗಾರನ ಲಾಭವು ಗರಿಷ್ಠಗೊಳ್ಳುತ್ತದೆ.

ಲಾಭದಲ್ಲಿನ ಬದಲಾವಣೆ = TRನಲ್ಲಿನ ಬದಲಾವಣೆ - TC ಯಲ್ಲಿನ ಬದಲಾವಣೆ ಆಗಿರುವುದರಿಂದ, ಸರಕಿನ ಒಂದು ಹೆಚ್ಚುವರಿ ಘಟಕದ ಉತ್ಪನ್ನವು ಹೆಚ್ಚುವರಿ ಲಾಭಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಇದು ತಿಳಿಸುತ್ತದೆ. ಆದುದರಿಂದ $q_0$ ಉತ್ಪನ್ನದ ಮಟ್ಟಕ್ಕಿಂತ ಕಡಿಮೆ ಉತ್ಪಾದಿಸುತ್ತಿದ್ದರೆ, ಅದು ತನ್ನ ಉತ್ಪನ್ನವನ್ನು ಹೆಚ್ಚಿಸಲು ಬಯಸುತ್ತದೆ. ಏಕೆಂದರೆ ಅದು ಉದ್ಯಮ ಘಟಕದ ಲಾಭಗಳಿಗೆ ಸೇರ್ಪಡೆಯಾಗುತ್ತದೆ. MR ರೇಖೆಯು MC ರೇಖೆಗಿಂತ ಮೇಲಿರುವವರೆಗೆ ಮೇಲೆ ಒದಗಿಸಿದ ಸಕಾರಣವು ಅನ್ವಯವಾಗುತ್ತದೆ ಮತ್ತು ಹೀಗೆ ಉದ್ಯಮ ಘಟಖವು ತನ್ನ ಉತ್ಪನ್ನವನ್ನು ಹೆಚ್ಚಿಸುತ್ತದೆ. ಈ ಪ್ರಕ್ರಿಯೆಯು ಉದ್ಯಮ ಘಟಕದ ಉತ್ಪನ್ನದ ಮಟ್ಟವು $q_0$ವನ್ನು ತಲುಪಿದಾಗ ನಿಂತು ಬಿಡುತ್ತದೆ. ಏಕೆಂದರೆ ಈ ಮಟ್ಟದಲ್ಲಿ ಸೀಮಾಂತ ಆದಯಾ (MR)ವು ಸೀಮಾಂತ ವೆಚ್ಚ (MC)ಕ್ಕೆ ಸಮವಾಗಿರುತ್ತದೆ. ಇನ್ನೂ ಉತ್ಪನ್ನವನ್ನು ಹೆಚ್ಚಿಸಿದರೆ ಲಾಭದಲ್ಲಿ ಹೆಚ್ಚಳವಾಗುವುದಿಲ್ಲ.

ಇನ್ನೊಂದೆಡೆಯಲ್ಲಿ, ಉದ್ಯಮ ಘಟಕವು $q_0$ಕ್ಕಿಂತ ಅಧಿಕ ಮಟ್ಟದ ಉತ್ಪನ್ನವನ್ನು ಉತ್ಪಾದಿಸಿದಾಗ MCಯು MR ಗಿಂತ ಅಧಿಕವಾಗುತ್ತದೆ. ಉತ್ಪನ್ನದ ಒಂದು ಘಟಕವನ್ನು ಕಡಿಮೆ ಮಾಡುವುದರಿಂದ ಒಟ್ಟು ವೆಚ್ಚದಲ್ಲಾಗುವ ಇಳಿಕೆಯು, ಈ ಇಳಿಕೆಯಿಂದ ಒಟ್ಟು ಆದಾಯದಲ್ಲಿ ಆಗುವ ನಷ್ಟಕ್ಕಿಂತ ಅಧಿಕವಾಗಿರುತ್ತದೆ ಎಂದರ್ಥವಾಗುತ್ತದೆ. ಆದುದರಿಂದ ಇಲ್ಲಿ ಉದ್ಯಮ ಘಟಕವು ಉತ್ಪನ್ನವನ್ನು ಕಡಿತಗೊಳಿಸಲು ಸಲಹೆ ನೀಡಬಹುದು. MC ರೇಖೆಯು MRಗಿಂತ ಮೇಲಿರುವವರೆಗೆ ಮತ್ತು ಉದ್ಯಮ ಘಟಕವು ತನ್ನ ಉತ್ಪನ್ನವನ್ನು ತನ್ನ ಉತ್ಪನ್ನವನ್ನು ಕಡಿಮೆ ಮಾಡುವವರೆಗೆ ಈ ವಾದವು ಸರಿಯೆನಿಸುತ್ತದೆ. ಒಮ್ಮೆ ಉತ್ಪನ್ನದ ಮಟ್ಟವು $q_0$ವನ್ನು ತಲುಪಿದಾಗ MC ಮತ್ತು MRಗಳ ಮೌಲ್ಯಗಳು ಸಮವಾಗುತ್ತವೆ ಮತ್ತು ಉದ್ಯಮ ಘಟಕವು ಉತ್ಪನ್ನವನ್ನು ಕಡಿತಗೊಳಿಸುವುದನ್ನು ನಿಲ್ಲಿಸುತ್ತದೆ.

ಉದ್ಯಮ ಘಟಕವು ಅನಿವಾರ್ಯವಾಗಿ $q_0$ ಮಟ್ಟವನ್ನು ತಲುಪುವುದರಿಂದ ಈ ಮಟ್ಟವನ್ನು ಉತ್ಪನ್ನದ ಸಮತೋಲನ ಮಟ್ಟ ಎಂದು ಕರೆಯಲಾಗುತ್ತದೆ. ಈ ಸಮತೋಲನ ಮಟ್ಟದ ಉತ್ಪನ್ನವು MR ಮತ್ತು MCಗಳು ಸಮವಾಗುವ ಬಿಂದುವಿಗೆ ಅನುಗುಣವಾಗಿರುವುದರಿಂದ ಈ ಸಮಾನತೆಯನ್ನು ಏಕಸ್ವಾಮ್ಯ ಉದಿಮ ಘಟಕವು ಉತ್ಪಾದಿಸುವ ಉತ್ಪನ್ನದ ಸಮತೋಲನದ ಸ್ಥಿತಿ ಎಂದು ಕರೆಯುತ್ತೇವೆ.

$q_0$ ಸಮತೋಲನ ಮಟ್ಟದ ಉತ್ಪನ್ನದಲ್ಲಿ '*d*' ಬಿಂದುವಿನಲ್ಲಿ ಸರಾಸರಿ ವೆಚ್ಚವನ್ನು ನೀಡಿದೆ. ಇಲ್ಲಿ $q_0$ದಿಂದ ಹೊರಟ ಲಂಬ ರೇಖೆಯು AC ರೇಖೆಯನ್ನು ಛೇದಿಸುತ್ತದೆ. ಹೀಗೆ ಸರಾಸರಿ ವೆಚ್ಚವನ್ನು $dq_0$ ಎತ್ತರದ ಮೂಲಕ ನೀಡಲಾಗಿದೆ. ಒಟ್ಟು ವೆಚ್ಚವು ACಯ ಉತ್ಪನ್ನಕ್ಕೆ ಸಮನಾಗಿರುವುದರಿಂದ ಹಾಗೂ ಉತ್ಪಾದಿಸಿದ ಪ್ರಮಾಣವು $q_0$ ಆಗಿರುವುದನ್ನು $Oq_0dc$ ಆಯತ ಕ್ಷೇತ್ರದಿಂದ ನೀಡಿದೆ.

ಈ ಹಿಂದೆ ತೋರಿಸಿದಂತೆ, ಒಮ್ಮೆ ಉತ್ಪಾದಿಸುವ ಉತ್ಪನ್ನ ಪ್ರಮಾಣವು ನಿರ್ಧಾರವಾದರೆ, ಅದು ಯಾವ ಬೆಲೆಯಲ್ಲಿ ಮಾರಾಟವಾಗುತ್ತದೆ ಎಂಬುದನ್ನು ಮಾರುಕಟ್ಟೆ ಬೇಡಿಕೆ ರೇಖೆಯ ಮೂಲಕ ಅಭಿವ್ಯಕ್ತಿಸಿದಂತೆ, ಅನುಭೋಗಿಯು ಪಾವತಿಸಲು ಇಚ್ಛಿಸುವ ಮೊತ್ತದಿಂದ ಬೆಲೆಯನ್ನು ನೀಡಲಾಗುತ್ತದೆ. ಹೀಗೆ '*a*'ಬಿಂದುವಿನಲ್ಲಿ ಬೆಲೆಯನ್ನು ನೀಡಲಾಗಿದೆ. ಈ ಬೆಲೆಯಲ್ಲಿ $q_0$ ಲಂಬ ರೇಖೆಯ ಮೂಲಕ ಮಾರುಕಟ್ಟೆ ಬೇಡಿಕೆ ರೇಖೆಯಾದ Dಯನ್ನು ಅದು ಸಂಧಿಸುತ್ತದೆ. ಇದು $aq_0$ಯ ಎತ್ತರದಿಂದ ನೀಡಿದ ಬೆಲೆಯನ್ನು ಒದಗಿಸುತ್ತದೆ. ಉದ್ಯಮ ಘಟಕವು ಸ್ವೀಕರಿಸಿದ ಬೆಲೆಯು ಪ್ರತಿ ಘಟಕದ ಆದಾಯವಾಗಿರುವುದರಿಂದ ಇದು ಉದ್ಯಮ ಘಟಕದ ಸರಾಸರಿ ಆದಾಯವಾಗಿದೆ. ಒಟ್ಟು ಆದಾಯವು AR ಮತ್ತು $q_0$ ಉತ್ಪನ್ನದ ಗುಣಲಬ್ದವಾಗಿರುವುದರಿಂದ ಇದನ್ನು '$Oq_0\ ab$' ಆಯತ ಕ್ಷೇತ್ರದಲ್ಲಿ ತೋರಿಸಲು ಸಾಧ್ಯವಿದೆ.

'$Oq_0\ ab$' ಆಯತ ಕ್ಷೇತ್ರವು '$Oq_0\ dc$' ಆಯತ ಕ್ಷೇತ್ರಕ್ಕಿಂತ ದೊಡ್ಡದಾಗಿರುತ್ತದೆ. ಅಂದರೆ ಒಟ್ಟು ಆದಾಯ (TR)ವು ಒಟ್ಟು ವೆಚ್ಚ (TC) ಕ್ಕಿಂತ ಅಧಿಕವಾಗಿರುತ್ತದೆ ಎಂಬುದನ್ನು ರೇಖಾಚಿತ್ರದಲ್ಲಿ ಕಾಣುತ್ತೇವೆ. cdab ಆಯತ ಕ್ಷೇತ್ರವು ಇವುಗಳ ನಡುವಿನ ವ್ಯತ್ಯಾಸವಾಗಿದೆ. ಹೀಗೆ ಲಾಭ = TR – TC ಯನ್ನು *cdab* ಕ್ಷೇತ್ರದಿಂದ ಪ್ರತಿನಿಧಿಸಿದೆ.

### ಪರಿಪೂರ್ಣ ಪೈಪೋಟಿಯೊಡನೆ ಮರು ಹೋಲಿಕೆ

ನಾವು ಏಕಸ್ವಾಮ್ಯ ಉದ್ಯಮ ಘಟಕದ ಸಮತೋಲನ ಪ್ರಮಾಣ ಮತ್ತು ಬೆಲೆಯನ್ನು ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಉದ್ಯಮ ಘಟಕದೊಡನೆ ಹೋಲಿಕೆ ಮಾಡುತ್ತೇವೆ. ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಉದ್ಯಮ ಘಟಕವು ಬೆಲೆ ಪಡೆಯುತ್ತದೆ ಎಂಬುದನ್ನು ನೆನಪಿಸಿಕೊಳ್ಳೋಣ. ನೀಡಿದ ಮಾರುಕಟ್ಟೆ ಬೆಲೆಯಲ್ಲಿ ಪರಿಪೂರ್ಣ ಪೈಪೋಟಿ ಮಾರುಕಟ್ಟೆ ಸಂರಚನೆಯಲ್ಲಿ ಉತ್ಪನ್ನವನ್ನು ಹೆಚ್ಚು ಉತ್ಪಾದಿಸುವುದರ ಮೂಲಕ ಅಥವಾ ಕಡಿಮೆ ಮಾಡುವುದರ ಮೂಲಕ ಬೆಲೆಯನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ನಂಬಲಾಗಿದೆ.

ನಾವು ಮೇಲೆ ಪರಿಗಣಿಸಿದ ಉದ್ಯಮ ಘಟಕದ ಸಮತೋಲನವು ಪರಿಪೂರ್ಣ ಪೈಪೋಟಿಯ ಉದ್ಯಮ ಘಟಕದ ಸಮತೋಲನ ಎಂದು ಕೊಳ್ಳೋಣ. ಉತ್ಪನ್ನದ ಮಟ್ಟವು $q_0$ ಹಾಗೂ ಸರಕಿನ ಬೆಲೆಯು $aq_0 = \mathrm{O}b$ ಆಗಿರುತ್ತದೆ. ಬೆಲೆಯು O*b*ಯಲ್ಲಿ ಸ್ಥಿರವಾಗಿದೆ ಎಂದು ನಿರೀಕ್ಷಿಸಲಾಗುತ್ತದೆ. ಆದುದರಿಂದ ಪ್ರತಿ ಹೆಚ್ಚುವರಿ ಉತ್ಪನ್ನದ ಪ್ರತೀ ಹೆಚ್ಚುವರಿ ಘಟಕವನ್ನು ಆ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತದೆ. ಒಂದು ಹೆಚ್ಚುವರಿ ಘಟಕವನ್ನು ಉತ್ಪಾದಿಸುವ ವೆಚ್ಚವು MCಯಲ್ಲಿ ನೀಡಲಾಗಿರುವುದರಿಂದ ಅದು '$eq_0$' ದಲ್ಲಿರುತ್ತದೆ ಹಾಗೂ ಇದು $aq_0$ ಗಿಂತ ಕಡಿಮೆ ಇರುತ್ತದೆ. ಉದ್ಯಮ ಘಟಕವು ತನ್ನ ಉತ್ಪನ್ನವನ್ನು ಹೆಚ್ಚಿಸುವುದರಿಂದ ಲಾಭವನ್ನು ಹೆಚ್ಚಿಸುವ ನಿರೀಕ್ಷೆಯಲ್ಲಿರುತ್ತದೆ. ಬೆಲೆಯು MCಗಿಂತ ಅಧಿಕವಾಗಿರುವವರೆಗೆ ಇದು ಮುಂದುವರೆಯುತ್ತದೆ. ರೇಖಾಚಿತ್ರ 6.8ರ '*f*' ಬಿಂದುವಿನಲ್ಲಿ MC ರೇಖೆಯು ಬೇಡಿಕೆ ರೇಖೆಯನ್ನು ಛೇದಿಸುತ್ತದೆ ಮತ್ತು ಇಲ್ಲಿ ಉದ್ಯಮ ಘಟಕವು ಸ್ವೀಕರಿಸುವ ಬೆಲೆಯು MCಗೆ ಸಮವಾಗಿರುತ್ತದೆ. ಆದ್ದರಿಂದ ಉತ್ಪನ್ನವನ್ನು ಹೆಚ್ಚಿಸುವುದನ್ನು ಪರಿಪೂಣ ಪೈಪೋಟಿ ಉದ್ಯಮ ಘಟಕವು ಲಾಭದಾಯಕವೆಂದು ಪರಿಗಣಿಸುವುದಿಲ್ಲ. ಈ ಕಾರಣದಿಂದಾಗಿ ಬೆಲೆ = ಸೀಮಾಂತ ವೆಚ್ಚವನ್ನು ಪರಿಪೂರ್ಣ ಪೈಪೋಟಿ ಉದ್ಯಮ ಘಟಕದ ಸಮತೋಲನ ಸ್ಥಿತಿಯೆಂದು ಪರಿಗಣಿಸಲಾಗಿದೆ.



ಈ ಉತ್ಪನ್ನದ ಮಟ್ಟದಲ್ಲಿ ಉತ್ಪಾದಿಸಿದ $q_c$ ಪ್ರಮಾಣವು $q_0$ ಪ್ರಮಾಣಕ್ಕಿಂತ ಅಧಿಕವಾಗಿದೆ ಎಂಬುದನ್ನು ರೇಖಾಚಿತ್ರ ತೋರಿಸುತ್ತದೆ. ಅಲ್ಲದೆ ಅನುಭೋಗಿಗಳು ಪಾವತಿಸಿದ ಬೆಲೆಯು $p_c$ಯಲ್ಲಿ ಕಡಿಮೆಯಾಗಿತ್ತದೆ. ಏಕಸ್ವಾಮ್ಯ ಉದ್ಯಮ ಘಟಕಕ್ಕೆ ಹೋಲಿಸಿದರೆ, ಪರಿಪೂರ್ಣ ಪೈಪೋಟಿ ಮಾರುಕಟ್ಟೆಯು ಅಧಿಕ ಪ್ರಮಾಣದ ಸರಕುಗಳ ಉತ್ಪಾದನೆ ಮತ್ತು ಮಾರಾಟವನ್ನು ಮಾಡುತ್ತದೆ ಎಂದು ತೀರ್ಮಾನಿಸಬಹುದಾಗಿದೆ. ಅಲ್ಲದೆ ಪರಿಪೂರ್ಣ ಪೈಪೋಟಿಯಲ್ಲಿ ಸರಕುಗಳ ಬೆಲೆಯು ಏಕಸ್ವಾಮ್ಯಕ್ಕೆ ಹೋಲಿಸಿದರೆ ಕಡಿಮೆಯಾಗಿರುತ್ತದೆ. ಪರಿಪೂರ್ಣ ಪೈಪೋಟಿ ಉದ್ಯಮ ಘಟಕವು ಗಳಿಸುವ ಲಾಭವೂ ಕೂಡ ಕಡಿಮೆಯಾಗಿರುತ್ತದೆ.

### ದೀರ್ಘಾವಧಿಯಲ್ಲಿ

ಮುಕ್ತ ಆಗಮನ ಮತ್ತು ನಿರ್ಗಮನದಿಂದಾಗಿ ಪರಿಪೂರ್ಣ ಪೈಪೋಟಿಯ ಉದ್ಯಮ ಘಟಕವು ಶೂನ್ಯ ಲಾಭಗಳನ್ನು ಪಡೆಯುತ್ತದೆ ಎಂಬುದನ್ನು ಅಧ್ಯಾಯ 5ರಲ್ಲಿ ನಾವು ನೋಡಿದ್ದೇವೆ. ಉದ್ಯಮ ಘಟಕಗಳು ಗಳಿಸುವ ಲಾಭವು ಧನಾತ್ಮಕವಾಗಿರುವುದರಿಂದ ಅಧಿಕ ಸಂಖ್ಯೆಯ ಉದ್ಯಮ ಘಟಕಗಳು ಮಾರುಕಟ್ಟೆಯನ್ನು ಪ್ರವೇಶಿಸುತ್ತವೆ ಮತ್ತು ಉತ್ಪನ್ನದಲ್ಲಿನ ಹೆಚ್ಚಳವು ಬೆಲೆಯನ್ನು ಕಡಿಮೆಯಾಗುವಂತೆ ಮಾಡುತ್ತವೆ. ಇದರಿಂದ ಅಸ್ತಿತ್ವದಲ್ಲಿರುವ ಉದ್ಯಮ ಘಟಕಗಳ ಗಳಿಕೆಯು ಕಡಿಮೆಯಾಗುತ್ತದೆ. ಅದೇ ರೀತಿ, ಉದ್ಯಮ ಘಟಕಗಳು ನಷ್ಟವನ್ನು ಎದುರಿಸಿದರೆ ಕೆಲವು ಉದ್ಯಮ ಘಟಕಗಳು ಮುಚ್ಚಲ್ಪಟ್ಟು ಉತ್ಪನ್ನ ಇಳಿಕೆಯಾಗಿ ಉಳಿದ ಉದ್ಯಮ ಘಟಕಗಳ ಉತ್ಪನ್ನದ ಬೆಲೆ ಏರಿಕೆಯಾಗಿ ಆ ಉದ್ಯಮ ಘಟಕಗಳ ಗಳಿಕೆ ಹೆಚ್ಚಾಗುತ್ತದೆ. ಏಕಸ್ವಾಮ್ಯ ಉದ್ಯಮ ಘಟಕದ ಸ್ಥಿತಿ ಈ ರೀತಿಯಿರುವುದಿಲ್ಲ. ಇತರ ಉದ್ಯಮ ಘಟಕಗಳ ಮಾರುಕಟ್ಟೆ ಪ್ರವೇಶವನ್ನು ನಿರ್ಬಂಧಿಸಿರುವುದರಿಂದ ದೀರ್ಘಾವಧಿಯಲ್ಲೂ ಏಕಸ್ವಾಮ್ಯ ಉದ್ಯಮ ಘಟಕಗಳು ಗಳಿಸುವ ಲಾಭಕ್ಕೆ ಧಕ್ಕೆಯಾಗುವುದಿಲ್ಲ.

### ಕೆಲವು ವಿಮರ್ಶಾತ್ಮಕ ದೃಷ್ಟಿಕೋನಗಳು

ಮೇಲೆ ನಿರೂಪಿಸಿದ ಫಲಿತಾಂಶಗಳು ಒಂದು ಸರಕು ಮಾರುಕಟ್ಟೆಯಲ್ಲಿ ಏಕಸ್ವಾಮ್ಯದ ಪರಿಣಾಮಗಳ ತೀವ್ರವಾದ ಋಣಾತ್ಮಕ ಚಿತ್ರಣವನ್ನು ನೀಡುತ್ತವೆ. ಅನುಭೋಗಿಗಳಿಗೆ ನಷ್ಟವನ್ನುಂಟು ಮಾಡಿ ಏಕಸ್ವಾಮ್ಯ ಉದ್ಯಮ ಘಟಕಗಳು ಮಾತ್ರ ಲಾಭವನ್ನು ಪಡೆಯುತ್ತವೆ. ದೀರ್ಘಾವಧಿಯಲ್ಲಿಯೂ ಏಕಸ್ವಾಮ್ಯ ಉದ್ಯಮ ಘಟಕಗಳು

ಹೆಚ್ಚಿನ ಧನಾತ್ಮಕ ಲಾಭವನ್ನು ಪಡೆಯುತ್ತವೆ. ಇನ್ನೊಂದೆಡೆಯಲ್ಲಿ, ಅನುಭೋಗಿಗಳು ಕಡಿಮೆ ಪ್ರಮಾಣದ ಉತ್ಪನ್ನವನ್ನು ಪಡೆಯುತ್ತಾರೆ ಮತ್ತು ಪ್ರತೀ ಘಟಕದ ಅನುಭೋಗಕ್ಕೆ ಹೆಚ್ಚು ಪಾವತಿ ಮಾಡಬೇಕಾಗುತ್ತದೆ.

ಆದಾಗ್ಯೂ, ಅರ್ಥಶಾಸ್ತ್ರಜ್ಞರು ಏಕಸ್ವಾಮ್ಯದ ವಿಷಯಕ್ಕೆ ಸಂಬಂಧಿಸಿದಂತೆ ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮೊದಲನೆಯದಾಗಿ, ನೈಜ ಜಗತ್ತಿನಲ್ಲಿ ಮೇಲೆ ವಿವರಿಸಿದಂತಹ ಏಕಸ್ವಾಮ್ಯ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಎಂದು ಹೇಳಬಹುದು. ಏಕೆಂದರೆ ಒಂದರ್ಥದಲ್ಲಿ ಎಲ್ಲಾ ಸರಕುಗಳು ಪರಸ್ಪರ ಬದಲಿ ಸರಕುಗಳಾಗಿರುತ್ತವೆ. ಎಲ್ಲಾ ಉದ್ಯಮ ಘಟಕಗಳು ಅಂತಿಮವಾಗಿ ಅನುಭೋಗಿಗಳ ಕೈಯಲ್ಲಿರುವ ಆದಾಯವನ್ನು ಪಡೆಯಲು ಪೈಪೋಟಿ ನಡೆಸುತ್ತವೆ.

ಒಂದು ಶುದ್ಧ ಏಕಸ್ವಾಮ್ಯ ಸನ್ನಿವೇಶದಲ್ಲಿನ ಉದ್ಯಮ ಘಟಕವು ಸಹ ಪೈಪೋಟಿಗೆ ಒಳಗಾಗದಿರುವುದಿಲ್ಲ. ಎಂಬುದು ಮತ್ತೊಂದು ವಾದವಾಗಿದೆ. ಏಕೆಂದರೆ ಆರ್ಥಿಕತೆಯು ಯಾವತ್ತೂ ನಿಶ್ಚಲವಾಗಿರುವುದಿಲ್ಲ. ಹೊಸ ತಂತ್ರಜ್ಞಾನವನ್ನು ಬಳಸಿ ಹೊಸ ಹೊಸ ಸರಕುಗಳು ಮಾರುಕಟ್ಟೆಗೆ ಯಾವಾಗಲೂ ಪ್ರವೇಶಿಸುತ್ತವೆ. ಅವು ಏಕಸ್ವಾಮ್ಯ ಉದ್ಯಮ ಘಟಕವು ಉತ್ಪಾದಿಸುವ ಸರಕಿಗೆ ನಿಕಟ ಪರ್ಯಾಯ ಸರಕುಗಳಾಗಿರುತ್ತದೆ. ಹೀಗೆ ದೀರ್ಘಾವಧಿಯಲ್ಲಿ ಏಕಸ್ವಾಮ್ಯ ಉದ್ಯಮ ಘಟಕಕ್ಕೆ ಯಾವಾಗಲೂ ಪೈಪೋಟಿ ಇರುತ್ತದೆ. ಅಲ್ಪಾವಧಿಯಲ್ಲಿಯೂ ಸಹ, ಯಾವಾಗಲೂ ಪೈಪೋಟಿಯ ಭಯ ಇರುತ್ತದೆ ಮತ್ತು ಏಕಸ್ವಾಮ್ಯ ಉದ್ಯಮ ಘಟಕವು ಮೇಲೆ ನಾವು ವಿವರಿಸಿದ ರೀತಿಯಲ್ಲಿ ವರ್ತಿಸಲು ಅಸಾಧ್ಯವಾಗುತ್ತದೆ.

ಏಕಸ್ವಾಮ್ಯದ ಅಸ್ತಿತ್ವವು ಸಮಾಜಕ್ಕೆ ಪ್ರಯೋಜನವನ್ನುಂಟು ಮಾಡುಬಹುದು ಎಂಬುದು ಇನ್ನೊಂದು ದೃಷ್ಟಿಕೋನದ ವಾದವಾಗಿದೆ. ಏಕಸ್ವಾಮ್ಯ ಉದ್ಯಮ ಘಟಕವು ಅಧಿಕ ಲಾಭವನ್ನು ಗಳಿಸುವುದರಿಂದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಕಷ್ಟು ನಿಧಿಯನ್ನು ಹೊಂದಿರುತ್ತವೆ. ಪರಿಪೂರ್ಣ ಪೈಪೋಟಿಯ ಸಣ್ಣ ಉದ್ಯಮ ಘಟಕಗಳಿಗೆ ಇದು ಸಾಧ್ಯವಾಗುವುದಿಲ್ಲ. ಇಂತಹ ಸಂಶೋಧನೆಗಳನ್ನು ಮಾಡುವುದರಿಂದ ಏಕಸ್ವಾಮ್ಯದ ಉದ್ಯಮ ಘಟಕಗಳು ಉತ್ತಮ ಗುಣಮಟ್ಟದ ಸರಕುಗಳನ್ನು ಉತ್ಪಾದಿಸಲು ಸಾಧ್ಯವಾಗುತ್ತದೆ. ಅಲ್ಲದೆ ಹೆಚ್ಚು ಆಧುನಿಕ ತಂತ್ರಜ್ಞಾನಗಳನ್ನು ಅಂತಹ ಉದ್ಯಮ ಘಟಕಗಳು ಉಪಯೋಗಿಸಲು ಸಮರ್ಥವಾಗಿರುತ್ತದೆ. ಅವುಗಳ ಸೀಮಾಂತ ವೆಚ್ಚವು ಉತ್ಪನ್ನದ ಸಮತೋಲನ ಮಟ್ಟಕ್ಕಿಂತ ಬಹಳಷ್ಟು ಕಡಿಮೆ ಇರಬಹುದು. ಇಲ್ಲಿ MC = MR ಆಗಿದ್ದು, ಅದು ಪರಿಪೂರ್ಣ ಪೈಪೋಟಿಯ ಸನ್ನಿವೇಶಕ್ಕಿಂತ ಹೆಚ್ಚಾಗಿರಲೂಬಹುದು.

## 6.2 ಇತರ ಪರಿಪೂರ್ಣ ಪೈಪೋಟಿಯೇತರ ಮಾರುಕಟ್ಟೆಗಳು *Other Non - Perfectly Competitive Markets*

### 6.2.1 ಸ್ವಾಮ್ಯಯುತ ಪೈಪೋಟಿ *Monopolistic Competition*

ಈಗ ನಾವು, ಅಧಿಕ ಸಂಖ್ಯೆಯ ಉದ್ಯಮ ಘಟಕಗಳಿರುವ ಮಾರುಕಟ್ಟೆ ಸಂರಚನೆಯನ್ನು ಪರಿಗಣಿಸೋಣ. ಇಲ್ಲಿ ಉದ್ಯಮ ಘಟಕಗಳ ಮುಕ್ತ ಪ್ರವೇಶ ಮತ್ತು ನಿರ್ಗಮನವಿರುತ್ತದೆ. ಆದರೆ ಅವರು ಉತ್ಪಾದಿಸುವ ಸರಕುಗಳು ಏಕರೂಪದಲ್ಲಿರುವುದಿಲ್ಲ. ಅಂತಹ ಮಾರುಕಟ್ಟೆ ಸಂರಚನೆಯನ್ನು ಸ್ವಾಮ್ಯಯುತ ಪೈಪೋಟಿ ಎಂದು ಕರೆಯುತ್ತೇವೆ.

ಈ ರೀತಿಯ ಉದ್ಯಮ ಘಟಕಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. **ಉದಾ:** ಬಿಸ್ಕತ್ತು ಉತ್ಪಾದಿಸುವ ಉದ್ಯಮ ಘಟಕಗಳು ಅಧಿಕ ಸಂಖ್ಯೆಯಲ್ಲಿವೆ. ಆದರೆ ಉತ್ಪಾದಿಸಲಾಗುವ ಅನೇಕ ಬಿಸ್ಕತ್‌ಗಳು ಕೆಲವು ಬ್ರಾಂಡ್ ಹೆಸರಿನೊಂದಿಗೆ ಗುರುತಿಸಲ್ಪಟ್ಟಿವೆ ಮತ್ತು ಅವುಗಳಲ್ಲಿ ಒಂದರಿಂದ ಇನ್ನೊಂದನ್ನು ಬ್ರಾಂಡ್ ಹೆಸರು, ಪ್ಯಾಕೇಜಿಂಗ್ ಮತ್ತು ರುಚಿಯಲ್ಲಿ ಇರುವ ಸ್ವಲ್ಪ ವ್ಯತ್ಯಾಸಗಳಿಂದ ಗುರುತಿಸಬಹುದು. ಅನುಭೋಗಿಯು ಕಾಲಾನಂತರದಲ್ಲಿ ಒಂದು ನಿರ್ದಿಷ್ಟ ಬ್ರಾಂಡ್‌ನ ಬಿಸ್ಕತ್ ಬಗ್ಗೆ ಅಭಿರುಚಿ ಬೆಳೆಸಿಕೊಂಡಿರುತ್ತಾಳೆ ಅಥವಾ ಒಂದು ನಿರ್ದಿಷ್ಟ ಬ್ರಾಂಡ್‌ಗೆ ಕೆಲವು ಕಾರಣಗಳಿಂದ ವಿಧೇಯಳಾಗಿರುತ್ತಾಳೆ. ಆದುದರಿಂದ ಅದನ್ನು ತಕ್ಷಣದಲ್ಲಿ ಇನ್ನೊಂದು ಬಿಸ್ಕತ್‌ಗೆ ಬದಲಾಯಿಸಲು ಬಯಸುವುದಿಲ್ಲ. ಆದಾಗ್ಯೂ, ಬೆಲೆಯಲ್ಲಿನ ವ್ಯತ್ಯಾಸವು ತುಂಬಾ ಹೆಚ್ಚಾದಾಗ ಇನ್ನೊಂದು ಬ್ಯಾಂಡ್‌ನ ಬಿಸ್ಕತ್‌ನ್ನು ಆಯ್ಕೆ ಮಾಡಲು ಬಯಸುತ್ತಾಳೆ. ಅನುಭೋಗಿಗೆ

ಅನುಭೋಗಿಸುವ ಬ್ರಾಂಡ್‌ನ್ನು ಬದಲಾಯಿಸಲು ಅಗತ್ಯವಾದ ಬೆಲೆ ವ್ಯತ್ಯಾಸವು ಬೇರೆ ಬೇರೆಯಾಗಿರಬಹುದು. ಆದುದರಿಂದ ಒಂದು ನಿರ್ದಿಷ್ಟ ಬ್ಯಾಂಡ್‌ನ ಬೆಲೆಯು ಕಡಿಮೆಯಾದಾಗ ಕೆಲವು ಅನುಭೋಗಿಗಳು ಆ ಬ್ರಾಂಡ್‌ನ್ನು ಅನುಭೋಗಿಸಲು ಪಲ್ಲಟಗೊಳ್ಳಬಹುದು. ಅಲ್ಲದೆ ಬೆಲೆಯಲ್ಲಿನ ಇಳಿಕೆಯು ಅಧಿಕ ಸಂಖ್ಯೆಯ ಅನುಭೋಗಿಗಳು ಕಡಿಮೆ ಬೆಲೆಯ ಬ್ಯಾಂಡ್‌ನತ್ತ ಪಲ್ಲಟಗೊಳ್ಳಲು ಕಾರಣವಾಗಬಹುದು.

ಹೀಗೆ ಉದ್ಯಮ ಘಟಕವು ಎದುರಿಸುವ ಬೇಡಿಕೆ ರೇಖೆಯು ಪರಿಪೂರ್ಣ ಪೈಪೋಟಿ ಸನ್ನಿವೇಶದಲ್ಲಿರುವಂತೆ ಸಮತಲವಾಗಿರುವುದಿಲ್ಲ (ಪರಿಪೂರ್ಣ ಸ್ಥಿತಿಸ್ಥಾಪಕ). ಏಕಸ್ವಾಮ್ಯ ಸನ್ನಿವೇಶದಲ್ಲಿರುವಂತೆ ಉದ್ಯಮ ಘಟಕವು ಎದುರಿಸುವ ಬೇಡಿಕೆ ರೇಖೆಯು ಮಾರುಕಟ್ಟೆ ಬೇಡಿಕೆ ರೇಖೆಯಾಗಿರುವುದಿಲ್ಲ. ಸ್ವಾಮ್ಯಯುತ ಪೈಪೋಟಿಯ ಸನ್ನಿವೇಶದಲ್ಲಿ ಉದ್ಯಮ ಘಟಕವು ಬೆಲೆಯನ್ನು ಇಳಿಸಿದರೆ ಅದು ಬೇಡಿಕೆಯಲ್ಲಿ ಸಣ್ಣ ಹೆಚ್ಚಳವನ್ನು ನಿರೀಕ್ಷಿಸುತ್ತದೆ. ಹೀಗೆ ಸೀಮಾಂತ ಆದಾಯವು ಸರಾಸರಿ ಆದಾಯಕ್ಕಿಂತ ಸ್ವಲ್ಪ ಕಡಿಮೆ ಇರುತ್ತದೆ. ಸೀಮಾಂತ ಆದಾಯ (MR)ವು ಸೀಮಾಂತ ವೆಚ್ಚಕ್ಕಿಂತ (MC) ಹೆಚ್ಚಾಗಿ ಇರುವವರೆಗೆ ಉದ್ಯಮ ಘಟಕವು ಅದರ ಉತ್ಪನ್ನವನ್ನು ಹೆಚ್ಚಿಸುತ್ತದೆ. ಆದರೆ ಪರಿಪೂರ್ಣ ಪೈಪೋಟಿಗೆ ಹೋಲಿಸಿದರೆ ಸೀಮಾಂತ ಆದಾಯವು ಬೆಲೆಗಿಂತ ಕಡಿಮೆಯಾಗಿರುವುದರಿಂದ ಕೆಳಮಟ್ಟದ ಉತ್ಪನ್ನದಲ್ಲಿ ಸೀಮಾಂತ ಆದಾಯವು (MR) ಸೀಮಾಂತ ವೆಚ್ಚಕ್ಕೆ (MC) ಸಮನಾಗುತ್ತದೆ.

ಈ ಕಾರಣದಿಂದಾಗಿ ಸ್ವಾಮ್ಯಯುತ ಪೈಪೋಟಿಯ ಉದ್ಯಮ ಘಟಕವು ಪರಿಪೂರ್ಣ ಪೈಪೋಟಿಯ ಉದ್ಯಮ ಘಟಕಕ್ಕೆ ಹೋಲಿಸಿದರೆ ಕಡಿಮೆ ಉತ್ಪನ್ನವನ್ನು ಉತ್ಪಾದನೆ ಮಾಡುತ್ತದೆ. ನೀಡಲಾದ ಕಡಿಮೆ ಉತ್ಪನ್ನದಲ್ಲಿ ಅನುಭೋಗಿಗಳೆಲ್ಲರೂ ಪ್ರತಿ ಘಟಕಕ್ಕೆ ಹೆಚ್ಚು ಪಾವತಿಸಲು ಇಚ್ಛಿಸುವುದರಿಂದ ಸರಕಿನ ಬೆಲೆಯು ಪರಿಪೂರ್ಣ ಪೈಪೋಟಿಗಿಂತ ಹೆಚ್ಚಾಗುತ್ತದೆ.





ಮೇಲೆ ವಿವರಿಸಿದ ಸನ್ನಿವೇಶವು ಅಲ್ಪಾವಧಿಯಲ್ಲಿ ಅಸ್ತಿತ್ವದಲ್ಲಿರುವ ಒಂದು ಸನ್ನಿವೇಶವಾಗಿದೆ. ಆದರೆ ಸ್ವಾಮ್ಯಯುತ ಪೈಪೋಟಿಯ ಮಾರುಕಟ್ಟೆ ಸಂರಚನೆಯು ಮಾರುಕಟ್ಟೆಗೆ ಹೊಸ ಉದ್ಯಮ ಘಟಕಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ. ಕೈಗಾರಿಕೆಯಲ್ಲಿರುವ ಉದ್ಯಮ ಘಟಕಗಳು ಅಲ್ಪಾವಧಿಯಲ್ಲಿ ಧನಾತ್ಮಕ ಲಾಭಗಳಿಸಿದರೆ, ಹೊಸ ಉದ್ಯಮ ಘಟಕಗಳು ಸರಕಿನ ಉತ್ಪಾದನೆಯನ್ನು ಆರಂಭಿಸಲು ಆಕರ್ಷಿಸುತ್ತದೆ (ಮಾರುಕಟ್ಟೆಗೆ ಪ್ರವೇಶ), ಸರಕಿನ ಉತ್ಪನ್ನವು ವಿಸ್ತರಣೆಯಾದಂತೆ ಲಾಭ ಶೂನ್ಯ ಆಗುವವರೆಗೆ ಮಾರುಕಟ್ಟೆಯಲ್ಲಿ ಬೆಲೆಗಳು ಇಳಿಕೆಯಾಗಬಹುದು ಮತ್ತು ಹೊಸ ಉದ್ಯಮ ಘಟಕಗಳಿಗೆ ಪ್ರವೇಶಿಸಲು ಯಾವುದೇ ಆಕರ್ಷಣೆ ಇರುವುದಿಲ್ಲ ಇದಕ್ಕೆ ವಿರುದ್ಧವಾಗಿ ಅಲ್ಪಾವಧಿಯಲ್ಲಿ ಉದ್ಯಮ ಘಟಕಗಳು ನಷ್ಟ ಅನುಭವಿಸಿದರೆ ಕೆಲವು ಉದ್ಯಮ ಘಟಕಗಳು ಉತ್ಪಾದನೆಯನ್ನು ನಿಲ್ಲಿಸುತ್ತವೆ. (ಮಾರುಕಟ್ಟೆಯಿಂದ ನಿರ್ಗಮನ) ಮತ್ತು ಉತ್ಪಾದನೆ ಪ್ರಮಾಣ ಕಡಿಮೆಯಾಗುವುದರಿಂದ ಬೆಲೆ ಹೆಚ್ಚಾಗುತ್ತದೆ. ಒಮ್ಮೆಲೆ ಲಾಭವು ಶೂನ್ಯವಾದಾಗ ಆಗಮನ ಮತ್ತು ನಿರ್ಗಮನ ನಿಂತು ಹೋಗುತ್ತವೆ. ಇದುವೇ ದೀರ್ಘಾವಧಿ ಸಮತೋಲನವಾಗಿದೆ.

ಇದರಿಂದ ಪ್ರತಿಯೊಂದು ಉದ್ಯಮ ಘಟಕದ ಉತ್ಪನ್ನಗಳ ಬ್ರಾಂಡ್‌ನ ಬೆಲೆ ಕಡಿಮೆಯಾದಾಗ ಬೇಡಿಕೆಯು ನಿರಂತರವಾಗಿ ಹೆಚ್ಚಳವಾಗುತ್ತದೆ. ಪರಿಪೂರ್ಣ ಪೈಪೋಟಿಗೆ ಹೋಲಿಸಿದರೆ, ದೀರ್ಘಾವಧಿ ಸಮತೋಲನವು ಕಡಿಮೆ ಮಟ್ಟದ ಉತ್ಪನ್ನ ಮತ್ತು ಹೆಚ್ಚಿನ ಬೆಲೆಗೆ ಸಂಬಂಧಿಸಿದೆ.

### 6.2.2 ಕೆಲಜನ ಸ್ವಾಮ್ಯದಲ್ಲಿ ಉದ್ಯಮ ಘಟಕಗಳು ಹೇಗೆ ವರ್ತಿಸುತ್ತವೆ?
### *How do Firms behave in Oligopoly?*

ಒಂದು ನಿರ್ದಿಷ್ಟ ಸರಕಿನ ಮಾರುಕಟ್ಟೆಯು ಒಬ್ಬ ಮಾರಾಟಗಾರನಿಗಿಂತ ಹೆಚ್ಚು ಆದರೆ ಕೆಲವೇ ಸಂಖ್ಯೆಯ ಮಾರಾಟಗಾರರನ್ನು ಹೊಂದಿದ್ದರೆ ಅಂತಹ ಮಾರುಕಟ್ಟೆ ಸಂರಚನೆಯನ್ನು ಕೆಲಜನ ಸ್ವಾಮ್ಯ ಎಂದು ಕರೆಯುತ್ತೇವೆ. ಇಬ್ಬರೇ ಮಾರಾಟಗಾರರಿರುವ ಕೆಲಜನ ಸ್ವಾಮ್ಯದ ವಿಶೇಷ ಸನ್ನಿವೇಶವನ್ನು ದ್ವಿಜನ ಸ್ವಾಮ್ಯ ಎಂದು ಕರೆಯುತ್ತೇವೆ. ಈ ಮಾರುಕಟ್ಟೆ ಸಂರಚನೆಯನ್ನು ವಿಶ್ಲೇಶಿಸುವಾಗ, ಎರಡು ಉದ್ಯಮ ಘಟಕಗಳು ಮಾರಾಟ ಮಾಡುವ ಉತ್ಪನ್ನವು ಏಕರೂಪದ್ದಾಗಿರುತ್ತದೆ ಮತ್ತು ಆ ಉತ್ಪನ್ನಕ್ಕೆ ಇತರ ಯಾವುದೇ ಉದ್ಯಮ ಘಟಕ ಉತ್ಪಾದಿಸುವ ಉತ್ಪನ್ನವು ಬದಲಿ ಸರಕು ಆಗಿರುವುದಿಲ್ಲವೆಂದು ನಾವು ಕಲ್ಪಿಸುತ್ತೇವೆ.

ಕೆಲವೇ ಉದ್ಯಮ ಘಟಕಗಳಿರುವುದರಿಂದ ಯಾವುದೇ ಒಂದು ಉದ್ಯಮ ಘಟಕವು ಉತ್ಪನ್ನದ ನಿರ್ಧಾರಗಳು ಮಾರುಕಟ್ಟೆ ಬೆಲೆಯ ಮೇಲೆ ಅಗತ್ಯವಾಗಿ ಪ್ರಭಾವ ಬೀರುತ್ತವೆ. ಆದುದರಿಂದ ಇತರ ಉದ್ಯಮ ಘಟಕಗಳು ಮಾರಾಟ ಮಾಡುವ ಪ್ರಮಾಣವು ಅವುಗಳ ಒಟ್ಟು ಆದಾಯದ ಮೇಲೂ ಪ್ರಭಾವ ಬೀರುತ್ತದೆ. ಆದುದರಿಂದ ಇತರ ಉದ್ಯಮ ಘಟಕಗಳು ಅವುಗಳ ಲಾಭಗಳನ್ನು ಸಂರಕ್ಷಿಸಲು ಮಾತ್ರ ಪ್ರತಿಕ್ರಿಯೆಯನ್ನು ತೋರಿಸುತ್ತವೆಂದು ನಿರೀಕ್ಷಿಸಬಹುದು. ಅವುಗಳ ಉತ್ಪನ್ನದ ಪ್ರಮಾಣ ಮತ್ತು ಉತ್ಪನ್ನದ ಬೆಲೆಗೆ ಸಂಬಂಧಿಸಿದ ಹೊಸ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೂಲಕ ಈ ಪ್ರತಿಕ್ರಿಯೆ ಇರುತ್ತದೆ. ಇದನ್ನು ಸೈದ್ಧಾಂತೀಕರಿಸಲು ಹಲವು ಮಾರ್ಗಗಳಿವೆ. ಅವುಗಳಲ್ಲಿ ಎರಡನ್ನು ಸಂಕ್ಷಿಪ್ತವಾಗಿ ವಿವರಿಸೋಣ.

ಮೊದಲನೆಯದಾಗಿ, ದ್ವಿಜನ ಸ್ವಾಮ್ಯದ ಉದ್ಯಮ ಘಟಕಗಳು ಒಗ್ಗೂಡಬಹುದು ಮತ್ತು ಪರಸ್ಪರ ಪೈಪೋಟಿ ನಡೆಸದಿರಲು ತೀರ್ಮಾನಿಸಬಹುದು ಮತ್ತು ಎರಡೂ ಉದ್ಯಮ ಘಟಕಗಳು ಒಟ್ಟಾಗಿ ಲಾಭವನ್ನು ಗರಿಷ್ಠಗೊಳಿಸಬಹುದು. ಅಂತಹ ಸನ್ನಿವೇಶದಲ್ಲಿ ಎರಡೂ ಉದ್ಯಮ ಘಟಕಗಳು ಏಕಸ್ವಾಮ್ಯದ ಉದ್ಯಮ ಘಟಕದಂತೆ ವರ್ತಿಸಿ ಎರಡು ವಿಭಿನ್ನ ಕಾರ್ಖಾನೆಗಳಲ್ಲಿ ಸರಕನ್ನು ಉತ್ಪಾದಿಸುತ್ತವೆ.

ಎರಡನೆಯದಾಗಿ ದ್ವಿಜನ ಸ್ವಾಮ್ಯ ಸನ್ನಿವೇಶವನ್ನು ತೆಗೆದುಕೊಳ್ಳೋಣ. ಇಲ್ಲಿ ಎರಡು ಉದ್ಯಮ ಘಟಕಗಳಲ್ಲಿ ಪ್ರತಿಯೊಂದು ಘಟಕವು ಇನ್ನೊಂದು ಉದ್ಯಮ ಘಟಕ ಅದು ಪೂರೈಸುವ ಪ್ರಮಾಣವನ್ನು ಬದಲಾಯಿಸುವುದಿಲ್ಲ ಎಂದು ಕಲ್ಪಿಸಿ ತನ್ನ ಲಾಭವನ್ನು ಗರಿಷ್ಠಗೊಳಿಸಲು ಎಷ್ಟು ಪ್ರಮಾಣವನ್ನು ಉತ್ಪಾದಿಸಬೇಕು ಎಂದು ನಿರ್ಧಾರಕ್ಕೆ ಬರುತ್ತದೆ.

ದ್ವಿಜನ ಸ್ವಾಮ್ಯದ ಎರಡೂ ಉದ್ಯಮ ಘಟಕಗಳ ವೆಚ್ಚ ಶೂನ್ಯಯಾಗಿರುವಾಗ ಒಂದು ಸರಳ ಉದಾಹರಣೆ ಬಳಸಿ ಪರಿಮಾಣವನ್ನು ನಾವು ಪರಿಶೀಲಿಸಬಹುದು. ವಿಭಾಗ 6.1.4ರಲ್ಲಿ ಶೂನ್ಯ ವೆಚ್ಚದ ಸರಳ ಸನ್ನಿವೇಶ ಎಂಬಲ್ಲಿ ಏಕಸ್ವಾಮ್ಯದ ಇಂತಹದೇ ಸನ್ನಿವೇಶವನ್ನು ಪರಿಗಣಿಸಿದೆ. ನೀಡಲಾದ ಒಂದು ಸರಳ ಬೇಡಿಕೆ ರೇಖೆಯಲ್ಲಿ ಶೂನ್ಯ ಬೆಲೆಗೆ 20 ಘಟಕಗಳಷ್ಟು ಗರಿಷ್ಠ ಬೇಡಿಕೆ ಇರುತ್ತದೆ ಎಂದು ತೋರಿಸಲು ಸಾಧ್ಯವಾಗಿದೆ ಎಂಬುದನ್ನು ನೆನಪಿಸಿಕೊಳ್ಳಿ. ಇದು ಪರಿಪೂರ್ಣ ಪೈಪೋಟಿಯ ಮಾರುಕಟ್ಟೆ ಸಂರಚನೆಯ ಸನ್ನಿವೇಶದಲ್ಲಿ ಸಮತೋಲನವಾಗಿತ್ತು. ಒಂದು ಏಕಸ್ವಾಮ್ಯದ ಸಂರಚನೆಯಲ್ಲಿ ಬೆಲೆ ರೂ. 5 ಇರುವಾಗ 10 ಘಟಕಗಳಷ್ಟು ಪೂರೈಕೆಯಾಗಿರುತ್ತದೆ. ಬೇಡಿಕೆ ರೇಖೆಯು ಸರಳ ರೇಖೆಯಾಗಿದ್ದು ಮತ್ತು ಒಟ್ಟು ವೆಚ್ಚವು ಶೂನ್ಯವಾಗಿದ್ದಾಗ, ಬೇಡಿಕೆಯ ಅರ್ಧದಷ್ಟನ್ನು ಪೂರೈಕೆ ಮಾಡುವುದು ಹೆಚ್ಚು ಲಾಭದಾಯಕ ಎಂದು ಏಕಸ್ವಾಮ್ಯ ಮಾರಾಟಗಾರ ನಿರ್ಧರಿಸಬಹುದೆಂಬುದನ್ನು ತೋರಿಸಲಾಗಿದೆ. ಎರಡು ದ್ವಿಜನ ಸ್ವಾಮ್ಯ ಉದ್ಯಮ ಘಟಕಗಳಿರುವ ಸನ್ನಿವೇಶದಲ್ಲಿ ಫಲಿತಾಂಶವನ್ನು ಪರಿಶೀಲಿಸಲು ಅದೇ ಉದಾಹರಣೆಯನ್ನು ನಾವು ಬಳಸಿಕೊಳ್ಳೋಣ. ಇಲ್ಲಿ A ಮತ್ತು B ಉದ್ಯಮ ಘಟಕಗಳು ಮೇಲೆ ವಿವರಿಸಿದ ರೀತಿಯಲ್ಲಿ ವರ್ತಿಸುತ್ತವೆ.

ಉದ್ಯಮ ಘಟಕ B ಯು ಶೂನ್ಯ ಪ್ರಮಾಣದಷ್ಟು ಸರಕನ್ನು ಪೂರೈಸುತ್ತದೆ ಎಂದು ಕಲ್ಪಿಸೋಣ. ಉದ್ಯಮ ಘಟಕ Aಯು ಗರಿಷ್ಠ ಬೇಡಿಕೆ 20 ಘಟಕಗಳು ಎನ್ನುವುದನ್ನು ಖಚಿತಪಡಿಸಿಕೊಂಡು ಅದರ ಅರ್ಧದಷ್ಟು ಅಂದರೆ 10 ಘಟಕಗಳನ್ನು ಪೂರೈಕೆ ಮಾಡಲು ನಿರ್ಧರಿಸುತ್ತದೆ. ಉದ್ಯಮ ಘಟಕ Aಯು 10 ಘಟಕಗಳನ್ನು ಪೂರೈಸುತ್ತದೆ ಎಂದುಕೊಂಡು B ಉದ್ಯಮ ಘಟಕವು ಗರಿಷ್ಠ ಬೇಡಿಕೆಯಾದ 20 ಘಟಕಗಳಲ್ಲಿ ಇನ್ನೂ ಕೂಡಾ 10 ಘಟಕಗಳ ಬೇಡಿಕೆ ಇದೆ ಎಂಬುದನ್ನು ಖಚಿತಪಡಿಸಿಕೊಂಡು ಅದು ಬೇಡಿಕೆಯ ಅರ್ಧದಷ್ಟು ಅಂದರೆ 5 ಘಟಕಗಳನ್ನು ಪೂರೈಸುತ್ತದೆ. ಉದ್ಯಮ ಘಟಕ B ಯು ತನ್ನ ಪೂರೈಕೆಯನ್ನು ಶೂನ್ಯದಿಂದ 5 ಘಟಕಗಳಿಗೆ ಬದಲಾಯಿಸುವುದರಿಂದ A ಉದ್ಯಮ ಘಟಕವು ಒಟ್ಟು ಬೇಡಿಕೆಯು 15 (20–5) ಘಟಕಗಳು ಎನ್ನುವುದನ್ನು ಖಚಿತಪಡಿಸಿಕೊಳ್ಳುತ್ತದೆ ಮತ್ತು ಅದರ ಅರ್ಧದಷ್ಟು ಅಂದರೆ 7.5ರಷ್ಟು ಪೂರೈಕೆ ಮಾಡುತ್ತದೆ. ಹೀಗೆ ಎರಡೂ ಉದ್ಯಮ ಘಟಕಗಳು ಕಾರ್ಯಪ್ರವೃತ್ತವಾಗಿ ಸಮತೋಲನಕ್ಕೆ ಮಾಡಿಕೊಡುತ್ತದೆ. ಈ ಹಂತಗಳನ್ನು ಪರೀಕ್ಷಿಸೋಣ.

| ಹಂತ | ಉದ್ಯಮ ಘಟಕ | ಪೂರೈಕೆಯಾದ ಪ್ರಮಾಣ |
|---|---|---|
| 1 | B | 0 |
| 2 | A | $\frac{1}{2} \quad 20 = \frac{20}{2}$ |
| 3 | B | $\frac{1}{2}\left(20 - \frac{1}{2} \quad 20\right) = \frac{20}{2} - \frac{20}{4}$ |
| 4. | A | $\frac{1}{2}\left(20 - \frac{1}{2} \quad \left(20 - \frac{1}{2} \quad 20\right)\right) = \frac{20}{2} - \frac{20}{4} + \frac{20}{8}$ |
| 5 | B | $\frac{1}{2}\left(20 - \frac{1}{2}\left(20 - \frac{1}{2}\left(20 - \frac{1}{2} \quad 20\right)\right)\right) = \frac{20}{2} - \frac{20}{4} + \frac{20}{8} - \frac{20}{16}$ |

ಮತ್ತು ಹೀಗೆ ಮುಂದುವರಿಯುತ್ತದೆ.



ಹಾಗಾಗಿ ಎರಡೂ ಉದ್ಯಮ ಘಟಕಗಳು ಅಂತಿಮವಾಗಿ ಈ ಕೆಳಗಿನಷ್ಟು ಉತ್ಪನ್ನಕ್ಕೆ ಸಮನಾದ ಉತ್ಪನ್ನವನ್ನು ಪೂರೈಕೆ ಮಾಡುತ್ತವೆ.

$$\frac{20}{2} - \frac{20}{4} + \frac{20}{8} - \frac{20}{16} + \frac{20}{32} - \frac{20}{64} + \frac{20}{128} .... = \frac{20}{3}$$

ಮಾರುಕಟ್ಟೆಯಲ್ಲಿ ಪೂರೈಕೆ ಮಾಡಿದ ಒಟ್ಟು ಪ್ರಮಾಣವು ಎರಡು ಉದ್ಯಮ ಘಟಕಗಳು ಪೂರೈಕೆ ಮಾಡಿದ ಪ್ರಮಾಣಕ್ಕೆ ಸಮವಾಗಿರುತ್ತದೆ.

$$\frac{20}{3} + \frac{20}{3} = 2 \quad \frac{20}{3}$$

ಇದು ಏಕಸ್ವಾಮ್ಯದ ಮಾರುಕಟ್ಟೆ ಸಂರಚನೆ ಪೂರೈಕೆ ಮಾಡಿದ ಪ್ರಮಾಣಕ್ಕಿಂತ ಅಧಿಕವಾಗಿದೆ ಮತ್ತು ಪರಿಪೂರ್ಣ ಪೈಪೋಟಿ ಮಾರುಕಟ್ಟೆ ಪೂರೈಕೆ ಮಾಡಿದ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಬೆಲೆಯು ಪೂರೈಕೆಯಾದ ಪ್ರಮಾಣವನ್ನು ಅವಲಂಬಿಸಿರುವುದರಿಂದ ಸೂತ್ರ

$P = 10 - 0.5q \quad q = \frac{40}{3}$, ಕ್ಕೆ ಬೆಲೆಯು $10 - \frac{20}{3}$ ರೂ. 3.33 ಇದು ಏಕಸ್ವಾಮ್ಯದ ಬೆಲೆಗಿಂತ ಕಡಿಮೆ ಮತ್ತು ಪರಿಪೂರ್ಣ ಪೈಪೋಟಿಯ ಬೆಲೆಗಿಂತ ಅಧಿಕವಾಗಿದೆ.

ಧನಾತ್ಮಕ ವೆಚ್ಚಗಳಿದ್ದ ಸನ್ನಿವೇಶದಲ್ಲೂ ಲೆಕ್ಕಾಚಾರವು ಹೆಚ್ಚು ಸಂಕೀರ್ಣವಾಗುತ್ತದೆ. ಆದರೆ ಫಲಿತಾಂಶ ಒಂದೇ ಆಗಿರುತ್ತದೆ. ಅನೇಕ ಸಂಖ್ಯೆಯ ಚಲನೆ ಮತ್ತು ಪ್ರತಿಚಲನೆಯ ಮೂಲಕ ಎರಡೂ ಉದ್ಯಮ ಘಟಕಗಳು ಸಮತೋಲನ ಉತ್ಪನ್ನ ಪ್ರಮಾಣಕ್ಕೆ ತಲುಪುತ್ತವೆ. ಎರಡು ಉದ್ಯಮ ಘಟಕಗಳು ಒಟ್ಟಾಗಿ ಉತ್ಪಾದಿಸಿದ ಸರಕಿನ ಪ್ರಮಾಣವು ಶುದ್ಧ ಏಕಸ್ವಾಮ್ಯ ಉದ್ಯಮ ಘಟಕ ಉತ್ಪಾದಿಸುವುದಕ್ಕಿಂತ ಅಧಿಕವಾಗಿರುತ್ತದೆ ಮತ್ತು ಪರಿಪೂರ್ಣ ಪೈಪೋಟಿಯ ಉದ್ಯಮ ಘಟಕ ಉತ್ಪಾದಿಸುವುದಕ್ಕಿಂತ ಕಡಿಮೆ ಇರುತ್ತದೆ. ಸಮತೋಲನ ಮಾರುಕಟ್ಟೆ ಬೆಲೆಯು ಸಹಜವಾಗಿ ಶುದ್ಧ ಏಕಸ್ವಾಮ್ಯ ಸನ್ನಿವೇಶಕ್ಕಿಂತ ಕಡಿಮೆ ಮತ್ತು ಪರಿಪೂರ್ಣ ಪೈಪೋಟಿಗಿಂತ ಅಧಿಕವಾಗಿರುತ್ತದೆ.

ಮೂರನೆಯದಾಗಿ ಕೆಲವು ಅರ್ಥಶಾಸ್ತ್ರಜ್ಞರು ಕೆಲಜನ ಸ್ವಾಮ್ಯದ ಮಾರುಕಟ್ಟೆ ಸಂರಚನೆಯು ಸರಕಿನ ಮಾರುಕಟ್ಟೆ ಬೆಲೆಯನ್ನು ಕಠಿಣಗೊಳಿಸುತ್ತದೆಂದು ವಾದಿಸುತ್ತಾರೆ. ಏಕೆಂದರೆ ಬೇಡಿಕೆಯ ಬದಲಾಣೆಗೆ

ಪ್ರತಿಕ್ರಿಯೆಯಾಗಿ ಮಾರುಕಟ್ಟೆ ಬೆಲೆಯು ಮುಕ್ತವಾಗಿ ಚಲಿಸುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಯಾವುದೇ ಉದ್ಯಮ ಘಟಕವು ಬೆಲೆಯಲ್ಲಿ ಮಾಡಿದ ಬದಲಾವಣೆಗಳಿಗೆ ಕೆಲಜನ ಸ್ವಾಮ್ಯದ ಉದ್ಯಮ ಘಟಕಗಳು ಹೇಗೆ ಪ್ರತಿಕ್ರಿಯಿಸುತ್ತದೆ ಎನ್ನುವುದನ್ನು ಅವಲಂಬಿಸಿದೆ. ಬೆಲೆ ಏರಿಕೆಯು ಹೆಚ್ಚು ಲಾಭದಾಯಕ ಎಂದು ಉದ್ಯಮ ಘಟಕವೊಂದು ಭಾವಿಸಿ ಮಾರಾಟ ಮಾಡುವ ಉತ್ಪನ್ನದ ಬೆಲೆಯನ್ನು ಹೆಚ್ಚಿಸಿದರೆ ಯಾವುದೇ ಇತರ ಉದ್ಯಮ ಘಟಕಗಳು ಅದನ್ನು ಅನುಸರಿಸುವುದಿಲ್ಲ. ಬೆಲೆ ಏರಿಕೆಯು ಆ ಉದ್ಯಮ ಘಟಕದ ಮಾರಾಟ ಪ್ರಮಾಣವನ್ನು ಕಡಿಮೆ ಮಾಡುತ್ತದೆ ಇದರಿಂದ ಆದಾಯ ಮತ್ತು ಲಾಭಗಳು ಕಡಿಮೆಯಾಗುತ್ತವೆ. ಆದುದರಿಂದ ಬೆಲೆ ಏರಿಸುವುದು ಯಾವುದೇ ಉದ್ಯಮ ಘಟಕಕ್ಕೆ ವಿವೇಚನಯುತವಾದುದಲ್ಲ. ಉದ್ಯಮ ಘಟಕವೊಂದು ಸರಕಿನ ಬೆಲೆ ಇಳಿಸಿ ಹೆಚ್ಚು ಪ್ರಮಾಣದ ಉತ್ಪನ್ನವನ್ನು ಮಾರಾಟ ಮಾಡಿ ಹೆಚ್ಚು ಆದಾಯ ಮತ್ತು ಲಾಭವನ್ನು ಗಳಿಸಬಹುದೆಂದು ಅಂದಾಜಿಸಿ, ಮಾರಾಟ ಮಾಡುವ ಸರಕಿನ ಬೆಲೆಯನ್ನು ಇಳಿಸಬಹುದು. ಈ ಕ್ರಿಯೆಯನ್ನು ಬೆದರಿಕೆಯೆಂದು ಉಳಿದ ಉದ್ಯಮ ಘಟಕಗಳು ಭಾವಿಸಿ ಮೊದಲ ಉದ್ಯಮ ಘಟಕವನ್ನು ಅನುಸರಿಸಿ ತಮ್ಮ ಉತ್ಪನ್ನದ ಬೆಲೆಯನ್ನು ಇಳಿಸುತ್ತವೆ. ಬೆಲೆ ಇಳಿಕೆಯಾದಾಗ ಒಟ್ಟು ಮಾರಾಟದ ಪ್ರಮಾಣದಲ್ಲಾಗುವ ಹೆಚ್ಚಳವನ್ನು ಎಲ್ಲಾ ಉದ್ಯಮ ಘಟಕಗಳು ಹಂಚಿಕೊಳ್ಳುತ್ತವೆ. ಆರಂಭದಲ್ಲಿ ಬೆಲೆ ಇಳಿಸಿದ ಉದ್ಯಮ ಘಟಕವು ಮಾರಾಟದ ಪ್ರಮಾಣದಲ್ಲಿ ಸ್ವಲ್ಪ ಮಾತ್ರವೇ ಹೆಚ್ಚಳವನ್ನು ಸಾಧಿಸಲು ಶಕ್ತವಾಗುತ್ತದೆ. ಸಾಪೇಕ್ಷವಾಗಿ ದೊಡ್ಡ ಪ್ರಮಾಣದಲ್ಲಿ ಬೆಲೆಯನ್ನು ಇಳಿಸುತ್ತಿರುವ ಮೊದಲ ಉದ್ಯಮ ಘಟಕವು ಮಾರಾಟದ ಪ್ರಮಾಣದಲ್ಲಿ ಸಾಪೇಕ್ಷವಾಗಿ ಸಣ್ಣ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹೀಗೆ ಈ ಉದ್ಯಮ ಘಟಕದ ಬೇಡಿಕೆ ರೇಖೆಯು ಸ್ಥಿತಿಸ್ಥಾಪಕ ರಹಿತವಾಗಿರುತ್ತದೆ ಮತ್ತು ಬೆಲೆ ಇಳಿಕೆಯ ತೀರ್ಮಾನವು ಆದಾಯ ಮತ್ತು ಲಾಭಗಳ ಇಳಿಕೆಗೆ ಕಾರಣವಾಗುತ್ತದೆ. ಯಾವುದೇ ಉದ್ಯಮ ಘಟಕವು ಬೆಲೆ ಇಳಿಕೆಯನ್ನು ವಿವೇಚನಾ ರಹಿತ ಎಂದು ಭಾವಿಸುತ್ತದೆ. ಇದರಿಂದಾಗಿ ಪರಿಪೂರ್ಣ ಪೈಪೋಟಿಗೆ ಹೋಲಿಸಿದರೆ ಕೆಲಜನ ಸ್ವಾಮ್ಯದಲ್ಲಿ ಬೆಲೆಗಳು ಹೆಚ್ಚು ಕಠಿಣವಾಗಿರುತ್ತವೆ.





## ಸಾರಾಂಶ *Summary*

- ಯಾವುದೇ ಮಾರುಕಟ್ಟೆಯಲ್ಲಿ ಒಬ್ಬನೇ ಒಬ್ಬ ಮಾರಾಟಗಾರನಿದ್ದರೆ ಅಂತಹ ಮಾರುಕಟ್ಟೆ ಸಂರಚನೆಯನ್ನು ಏಕಸ್ವಾಮ್ಯ ಎಂದು ಕರೆಯುತ್ತಾರೆ.
- ಒಂದು ಸರಕಿಗೆ ಒಬ್ಬನೇ ಮಾರಾಟಗಾರನಿದ್ದರೆ ಅಂತಹ ಸರಕಿನ ಮಾರುಕಟ್ಟೆಯು ಏಕಸ್ವಾಮ್ಯ ಸಂರಚನೆಯಾಗುತ್ತದೆ. ಆತ ಮಾರಾಟ ಮಾಡುವ ಸರಕಿಗೆ ಬದಲಿ ಸರಕು ಇರುವುದಿಲ್ಲ ಮತ್ತು ಕೈಗಾರಿಕೆಗೆ ಇತರ ಉದ್ಯಮ ಘಟಕದ ಪ್ರವೇಶವನ್ನು ನಿರ್ಬಂಧಿಸಲಾಗುತ್ತದೆ.
- ಸರಕಿನ ಮಾರುಕಟ್ಟೆ ಬೆಲೆಯು ಏಕಸ್ವಾಮ್ಯ ಉದ್ಯಮ ಘಟಕವು ಪೂರೈಕೆ ಮಾಡಿದ ಸರಕಿನ ಪ್ರಮಾಣವನ್ನು ಅವಲಂಬಿಸಿಕೊಂಡಿರುತ್ತದೆ. ಮಾರುಕಟ್ಟೆ ಬೇಡಿಕೆ ರೇಖೆಯು ಏಕಸ್ವಾಮ್ಯ ಉದ್ಯಮ ಘಟಕಕ್ಕೆ ಸರಾಸರಿ ಆದಾಯದ ರೇಖೆಯಾಗಿರುತ್ತದೆ.
- ಒಟ್ಟು ಆದಾಯ ರೇಖೆಯ ಆಕಾರವು ಸರಾಸರಿ ಆದಾಯ ರೇಖೆಯ ಆಕಾರವನ್ನು ಅವಲಂಬಿಸಿದೆ. ಋಣಾತ್ಮಕ ಇಳಿಜಾರಿನ ಸರಳ ಬೇಡಿಕೆ ರೇಖೆಯ ವಿಷಯದಲ್ಲಿ ಒಟ್ಟು ಆದಾಯ ರೇಖೆಯು ತಲೆ ಕೆಳಗಾದ ಲಂಬ ಪರವಲಯವಾಗಿರುತ್ತದೆ.
- ಮೂಲದಿಂದ ಒಟ್ಟು ಆದಾಯ ರೇಖೆಗೆ ಸಂಬಂಧಿಸಿದ ಬಿಂದುವಿಗೆ ಸರಳ ರೇಖೆಯ ಇಳಿಜಾರು ಯಾವುದೇ ಪ್ರಮಾಣದ ಮಟ್ಟದ ಸರಾಸರಿ ಆದಾಯವನ್ನು ಮಾಪನ ಮಾಡುತ್ತದೆ.
- ಒಟ್ಟು ಆದಾಯ ರೇಖೆಗೆ ಸಂಬಂಧಿಸಿದ ಬಿಂದುವಿಗೆ ಸ್ಪರ್ಶದ ಇಳಿಜಾರು ಯಾವುದೇ ಪ್ರಮಾಣದ ಮಟ್ಟದ ಸೀಮಾಂತ ಆದಾಯವನ್ನು ಮಾಪನ ಮಾಡುತ್ತದೆ.
- ಸೀಮಾಂತ ಆದಾಯದ ಮೌಲ್ಯವು ಸರಾಸರಿ ಆದಾಯದ ಮೌಲ್ಯಕ್ಕಿಂತ ಕಡಿಮೆಯಾದಾಗ ಮಾತ್ರ ಸರಾಸರಿ ಆದಾಯವು (A.R) ಇಳಿಕೆಯ ರೇಖೆಯಾಗಿರುತ್ತದೆ.
- ಋಣಾತ್ಮಕ ಇಳಿಜಾರು ಇರುವ ಬೇಡಿಕೆ ರೇಖೆಯು ಕಡಿದಾಗಿದ್ದಷ್ಟು ಸೀಮಾಂತ ಆದಾಯ ರೇಖೆಯು ಅದಕ್ಕಿಂತ ಇನ್ನು ಕೆಳಗಿರುತ್ತದೆ.

- ಸೀಮಾಂತ ಆದಾಯವು ಧನಾತ್ಮಕ ಮೌಲ್ಯವನ್ನು ಹೊಂದಿದ್ದಾಗ ಬೇಡಿಕೆ ರೇಖೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ. ಮತ್ತು ಸೀಮಾಂತ ಆದಾಯವು ಋಣಾತ್ಮಕ ಮೌಲ್ಯ ಹೊಂದಿದ್ದಾಗ ಸ್ಥಿತಿಸ್ಥಾಪಕರಹಿತವಾಗಿರುತ್ತದೆ.
- ಏಕಸ್ವಾಮ್ಯದ ಉದ್ಯಮ ಘಟಕವು ಶೂನ್ಯ ವೆಚ್ಚ ಅಥವಾ ಸ್ಥಿರ ವೆಚ್ಚವನ್ನು ಮಾತ್ರ ಹೊಂದಿದ್ದರೆ, M.R ಶೂನ್ಯ ಆಗಿರುವ ಬಿಂದುವಿನಲ್ಲಿ ಅದರ ಸಮತೋಲನದ ಪೂರೈಕೆಯ ಪ್ರಮಾಣವಿರುತ್ತದೆ. ಇದಕ್ಕೆ ವಿರುದ್ಧವಾಗಿ A.R ಶೂನ್ಯವಾಗಿರುವ ಬಿಂದುವಿನಲ್ಲಿ ಪರಿಪೂರ್ಣ ಪೈಪೋಟಿಯು ಒಂದು ಸಮತೋಲನದ ಪ್ರಮಾಣವನ್ನು ಪೂರೈಕೆ ಮಾಡುತ್ತದೆ.
- ಏಕಸ್ವಾಮ್ಯ ಉದ್ಯಮ ಘಟಕದ ಸಮತೋಲನವನ್ನು, MC ಏರುತ್ತಿರುವಾಗ MR=MC ಎಂದು ವ್ಯಾಖ್ಯಾನಿಸಲಾಗುತ್ತದೆ. ನೀಡಿದ ಸಮತೋಲನ ಪ್ರಮಾಣದಲ್ಲಿ ಬೇಡಿಕೆಯ ರೇಖೆಯು ಸಮತೋಲನ ಬೆಲೆಯನ್ನು ನೀಡುತ್ತದೆ.
- ಏಕಸ್ವಾಮ್ಯ ಉದ್ಯಮ ಸಂಸ್ಥೆಯ ಅಲ್ಪಾವಧಿ ಧನಾತ್ಮಕ ಲಾಭವು ದೀರ್ಘಾವಧಿಯಲ್ಲೂ ಮುಂದುವರೆಯುತ್ತದೆ.
- ಸರಕು ಮಾರುಕಟ್ಟೆಯಲ್ಲಿ ಸ್ವಾಮ್ಯಯುತ ಪೈಪೋಟಿಯು ಏಕರೂಪವಲ್ಲದ ಸರಕುಗಳಿಂದ ಉದ್ಭವವಾಗುತ್ತದೆ.
- ಸ್ವಾಮ್ಯಯುತ ಪೈಪೋಟಿಯಲ್ಲಿ ಪರಿಪೂರ್ಣ ಪೈಪೋಟಿ ಮಾರುಕಟ್ಟೆಗೆ ಹೋಲಿಸಿದರೆ ಅಲ್ಪಾವಧಿ ಸಮತೋಲನವು ಕಡಿಮೆ ಪ್ರಮಾಣದ ಉತ್ಪಾದನೆಗೆ ಮತ್ತು ಅಧಿಕ ಬೆಲೆಗಳಿಗೆ ಕಾರಣವಾಗುತ್ತದೆ. ಈ ಸನ್ನಿವೇಶವು ದೀರ್ಘಾವಧಿಯಲ್ಲಿಯೂ ಮುಂದುವರೆಯುತ್ತದೆ. ಆದರೆ ದೀರ್ಘಾವಧಿ ಲಾಭಗಳು ಶೂನ್ಯವಾಗಿರುತ್ತದೆ.
- ಒಂದೇ ರೀತಿಯ ಸರಕುಗಳನ್ನು, ಸಣ್ಣ ಸಂಖ್ಯೆಯ ಉದ್ಯಮ ಘಟಕಗಳು ಉತ್ಪಾದಿಸುತ್ತಿರುವುದರಿಂದ ಸರಕು ಮಾರುಕಟ್ಟೆಯಲ್ಲಿ ಕೆಲಜನ ಸ್ವಾಮ್ಯ ಉಂಟಾಗುತ್ತದೆ.



## ಪ್ರಮುಖ ಪರಿಭಾವನೆಗಳು *Key Concepts*

**ಏಕಸ್ವಾಮ್ಯ**

**ಸ್ವಾಮ್ಯಯುತ ಪೈಪೋಟಿ**

**ಕೆಲಜನ ಸ್ವಾಮ್ಯ**

## ಅಭ್ಯಾಸಗಳು *Exercises*

1. ಒಟ್ಟು ಆದಾಯ ರೇಖೆಯು

   (ಎ) ಮೂಲದಿಂದ ಹಾದು ಹೋಗುವ ಧನಾತ್ಮಕ ಇಳಿಜಾರು ಹೊಂದಿರುವ ಸರಳ ರೇಖೆಯಾಗಿದ್ದಾಗ,

   (ಬಿ) ಒಂದು ಸಮತಲ ರೇಖೆಯಾಗಿದ್ದಾಗ,

   ಬೇಡಿಕೆ ರೇಖೆಯ ಆಕಾರ ಹೇಗಿರುತ್ತದೆ?

2. ಕೆಳಗೆ ಒದಗಿಸಲಾದ ಅನುಸೂಚಿಯಿಂದ ಒಟ್ಟು ಆದಾಯ, ಬೇಡಿಕೆ ರೇಖೆ ಮತ್ತು ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ಲೆಕ್ಕಾಚಾರ ಮಾಡಿ

| ಪ್ರಮಾಣ | 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|---|
| ಸೀಮಾಂತ ಆದಾಯ | 10 | 6 | 2 | 2 | 2 | 0 | 0 | 0 | –5 |

3. ಸ್ಥಿತಿಸ್ಥಾಪಕ ಬೇಡಿಕೆ ರೇಖೆ ಇದ್ದಾಗ ಸೀಮಾಂತ ಆದಾಯದ ಮೌಲ್ಯವೇನು?

4. ಒಂದು ಏಕಸ್ವಾಮ್ಯ ಉದ್ಯಮ ಘಟಕವು ರೂ. 100 ರಷ್ಟು ಒಟ್ಟು ಸ್ಥಿರ ವೆಚ್ಚವನ್ನು ಹೊಂದಿದ್ದು, ಅದರ ಬೇಡಿಕೆ ಅನುಸೂಚಿ ಈ ರೀತಿಯಲ್ಲಿದೆ.

| | | | | | | | | | | |
|---|---|---|---|---|---|---|---|---|---|---|
| ಪ್ರಮಾಣ | 1 | 2 | 3 | 4 | 5 | 6 | 7 | 8 | 9 | 10 |
| ಬೆಲೆ | 100 | 90 | 80 | 70 | 60 | 50 | 40 | 30 | 20 | 10 |

ಅಲ್ಪಾವಧಿ ಸಮತೋಲನ ಪ್ರಮಾಣ ಬೆಲೆ ಮತ್ತು ಒಟ್ಟು ಲಾಭವನ್ನು ಕಂಡುಹಿಡಿಯಿರಿ. ದೀರ್ಘಾವಧಿಯಲ್ಲಿ ಸಮತೋಲನ ಯಾವುದಾಗಿರುತ್ತದೆ (ಹೇಗಿರುತ್ತದೆ)? ಒಂದು ವೇಳೆ ಒಟ್ಟು ವೆಚ್ಚವು ರೂ. 1000 ಗಳಷ್ಟಿದ್ದರೆ, ಅಲ್ಪಾವಧಿ ಮತ್ತು ದೀರ್ಘಾವಧಿ ಸಮತೋಲನವನ್ನು ವಿವರಿಸಿ.

5. ಸರಕಿನ ಮಾರುಕಟ್ಟೆ ಬೇಡಿಕೆ ರೇಖೆ ಮತ್ತು ಉದ್ಯಮ ಘಟಕವು ಉತ್ಪಾದಿಸುವ ಸರಕಿನ ಒಟ್ಟು ಉತ್ಪಾದನಾ ವೆಚ್ಚವನ್ನು ಈ ಕೆಳಗಿನ ಅನುಸೂಚಿಯಲ್ಲಿ ನಿಡಲಾಗಿದೆ. ಈ ಅನುಸೂಚಿಯಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಗಿನವುಗಳನ್ನು ಲೆಕ್ಕ ಹಾಕಿ.

| | | | | | | | | | |
|---|---|---|---|---|---|---|---|---|---|
| ಪ್ರಮಾಣ | 0 | 1 | 2 | 3 | 4 | 5 | 6 | 7 | 8 |
| ಬೆಲೆ | 52 | 44 | 37 | 31 | 26 | 22 | 19 | 16 | 13 |

| | | | | | | | | | |
|---|---|---|---|---|---|---|---|---|---|
| ಪ್ರಮಾಣ | 0 | 1 | 2 | 3 | 4 | 5 | 6 | 7 | 8 |
| ಬೆಲೆ | 10 | 60 | 90 | 100 | 102 | 105 | 109 | 115 | 125 |

(a) MR ಮತ್ತು MC ಅನುಸೂಚಿ

(b) ಯಾವ ಪ್ರಮಾಣದಲ್ಲಿ MR ಮತ್ತು MC ಗಳು ಸಮವಾಗಿರುತ್ತದೆ.

(c) ಉತ್ಪನ್ನದ ಸಮತೋಲನ ಪ್ರಮಾಣ ಮತ್ತು ಸರಕಿನ ಸಮತೋಲನ ಬೆಲೆ

(d) ಸಮತೋಲನದಲ್ಲಿ ಒಟ್ಟು ಆದಾಯ, ಒಟ್ಟು ವೆಚ್ಚ ಮತ್ತು ಒಟ್ಟು ಲಾಭ

8. ಅತ್ಯುತ್ತಮ ಮಟ್ಟದ ಅಲ್ಪಾವಧಿ ಉತ್ಪನ್ನದಲ್ಲಿ ಏಕಸ್ವಾಮ್ಯ ಉದ್ಯಮ ಘಟಕವು ನಷ್ಟವನ್ನು ಅನುಭವಿಸಿದರೆ ಅಲ್ಪಾವಧಿಯಲ್ಲಿ ಅದು ತನ್ನ ಉತ್ಪಾದನೆಯನ್ನು ಮುಂದುವರೆಸುತ್ತದೆಯೇ?

9. ಸ್ವಾಮ್ಯಯುತ ಪೈಪೋಟಿಯಲ್ಲಿ ಉದ್ಯಮ ಘಟಕವು ಋಣಾತ್ಮಕ ಇಳಿಜಾರು ಹೊಂದಿರುವ ಬೇಡಿಕೆ ರೇಖೆಯನ್ನು ಏಕೆ ಹೊಂದುತ್ತದೆ ಎಂಬುದನ್ನು ವಿವರಿಸಿ.

10. ಸ್ವಾಮ್ಯಯುತ ಪೈಪೋಟಿಯ ಉದ್ಯಮ ಘಟಕದ ದೀರ್ಘಾವಧಿ ಸಮತೋಲನವು ಶೂನ್ಯ ಲಾಭದಲ್ಲಿರಲು ಕಾರಣಗಳೇನು?

11. ಮೂರು ವಿಭಿನ್ನ ವಿಧಾನಗಳಲ್ಲಿ ಕೆಲಜನ ಸ್ವಾಮ್ಯ ಉದ್ಯಮ ಘಟಕದ ವರ್ತನೆಯನ್ನು ಪಟ್ಟಿ ಮಾಡಿ

12. ಕಾರ್ನಾಟ್‌ರವರು ದ್ವಿಜನ ಸ್ವಾಮ್ಯದ ವರ್ತನೆಯನ್ನು ವಿವರಿಸಿದಂತೆ ನಿಡಲಾದ ಮಾರುಕಟ್ಟೆ ಬೇಡಿಕೆ ರೇಖೆಯ ಸಮೀಕರಣವು $Q = 200 - 4P$ ಮತ್ತು ಎರಡು ಉದ್ಯಮ ಘಟಕಗಳು ಶೂನ್ಯ ವೆಚ್ಚವನ್ನು ಹೊಂದಿದ್ದಾಗ ಸಮತೋಲನದಲ್ಲಿ ಪ್ರತೀ ಉದ್ಯಮ ಘಟಕವು ಪೂರೈಕೆ ಮಾಡಿದ ಪ್ರಮಾಣ ಮತ್ತು ಸಮತೋಲನ ಮಾರುಕಟ್ಟೆ ಬೆಲೆಯನ್ನು ಕಂಡುಹಿಡಿಯಿರಿ.

13. ಬೆಲೆ ಕಾಠಿಣ್ಯತೆಯ ಅರ್ಥವೇನು? ಈ ರೀತಿಯ ಫಲಿತಾಂಶಕ್ಕೆ ಕೆಲಜನ ಸ್ವಾಮ್ಯದ ವರ್ತನೆಯು ಹೇಗೆ ಕಾರಣವಾಗಿದೆ?

❖ ❖ ❖ ❖

# ಶಬ್ಧಕೋಶ

* **ಸರಾಸರಿ ವೆಚ್ಚ** ಉತ್ಪನ್ನದ ಪ್ರತಿ ಘಟಕದ ಒಟ್ಟು ವೆಚ್ಚ.
* **ಸರಾಸರಿ ಸ್ಥಿರವೆಚ್ಚ** ಉತ್ಪನ್ನದ ಪ್ರತಿ ಘಟಕದ ಒಟ್ಟು ಸ್ಥಿರವೆಚ್ಚ.
* **ಸರಾಸರಿ ಉತ್ಪನ್ನ** ಬದಲಾಗುವ ಆದಾನದ ಪ್ರತಿಘಟಕದ ಉತ್ಪನ್ನ
* **ಸರಾಸರಿ ಬದಲಾಗುವ ವೆಚ್ಚ** ಉತ್ಪನ್ನದ ಪ್ರತಿಘಟಕದ ಒಟ್ಟು ಬದಲಾಗುವ ವೆಚ್ಚ.
* **ಸಮಸ್ಥಿತಿ ಬಿಂದುವು** ಒಂದು ಉದ್ಯಮದ ಘಟಕವು ಸಾಮಾನ್ಯ ಲಾಭವನ್ನು ಗಳಿಸುವ ಪೂರೈಕೆ ರೇಖೆಯ ಮೇಲಿನ ಒಂದು ಬಿಂದುವಾಗಿದೆ.
* **ಬಜೆಟ್ ರೇಖೆ** ಅನುಭೋಗಿಯ ಆದಾಯಕ್ಕೆ ಸರಿಸಮಾನವಾಗಿರುವ ವೆಚ್ಚವನ್ನು ಹೊಂದಿರುವ ಎಲ್ಲಾ ಸಂಯೋಜನೆಗಳನ್ನು ಒಳಗೊಂಡಿರುತ್ತದೆ.
* **ಬಜೆಟ್ ಗಣ** ಪ್ರಸ್ತುತ ಮಾರುಕಟ್ಟೆಯ ಬೆಲೆಗಳಲ್ಲಿ ಅನುಭೋಗಿಯು ಆಕೆಯ ಆದಾಯದಿಂದ ಖರೀದಿಸಬಹುದಾದ ಎಲ್ಲಾ ಸಂಯೋಜನೆಗಳ ಸಂಗ್ರಹವಾಗಿದೆ.
* **ಸ್ಥಿರ ಪ್ರತಿಫಲಗಳ ಪ್ರಮಾಣ** ಒಂದು ಉತ್ಪಾದನಾ ಬಿಂಬಕದ ಲಕ್ಷಣವಾಗಿದ್ದು, ಇದು ಎಲ್ಲಾ ಆದಾನಗಳಲ್ಲಿ ಪ್ರಮಾಣಾಗುಣ ಹೆಚ್ಚಳವಾದಗ, ಉತ್ಪನ್ನದಲ್ಲಿ ಅಷ್ಟೇ ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂಬುದನ್ನು ಸೂಚಿಸುತ್ತದೆ.
* **ವೆಚ್ಚ ಬಿಂಬಕ** ಉತ್ಪಾದನೆಯ ಪ್ರತಿ ಹಂತದಲ್ಲಿ ಉದ್ಯಮ ಘಟಕವು ಮಾಡುವ ಕನಿಷ್ಠ ವೆಚ್ಚ.
* **ಇಳಿಕೆಯ ಪ್ರತಿಫಲಗಳ ಪ್ರಮಾಣ** ಉತ್ಪಾದನಾ ಬಿಂಬಕದ ಲಕ್ಷಣವಾಗಿದ್ದು, ಎಲ್ಲಾ ಆದಾನಗಳಲ್ಲಿ ಪ್ರಮಾಣಾನುಗುಣ ಹೆಚ್ಚಳವಾದಾಗ, ಉತ್ಪನ್ನವು ಈ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚಳವಾಗುತ್ತದೆ ಎಂದು ತಿಳಿಸುತ್ತದೆ.
* **ಬೇಡಿಕೆ ರೇಖೆ** ಬೇಡಿಕೆಯ ಬಿಂಬಕದ ಒಂದು ರೇಖಾತ್ಮಕ ನಿರೂಪಣೆಯಾಗಿದ್ದು, ಇದು ಪ್ರತಿ ಬೆಲೆಯಲ್ಲಿ ಅನುಬೋಗಿಯ ಬೇಡಿಕೆಯ ಪ್ರಮಾಣವನ್ನು ಸೂಚಿಸುತ್ತದೆ.
* **ಬೇಡಿಕೆ ಬಿಂಬಕ** ಇತರೆ ಅಂಶಗಳು ಬದಲಾಗದೇ ಇದ್ದಾಗ, ಅನುಭೋಗಿಯು ವಿವಿಧ ಹಂತಗಳಲ್ಲಿನ ಬೆಲೆಯಲ್ಲಿ ಆಯ್ಕೆ ಮಾಡಿಕೊಳ್ಳುವ ಸರಕು ಸೇವೆಗಳ ಮೊತ್ತವೇ ಒಬ್ಬ ಅನುಭೋಗಿಯ ಬೇಡಿಕೆಯ ಬಿಂಬಕವಾಗಿದೆ.
* **ದ್ವಿಜನಸ್ವಾಮ್ಯ** ಕೇವಲ ಎರಡು ಉದ್ಯಮ ಘಟಕಗಳನ್ನು ಹೊಂದಿರುವ ಒಂದು ಮಾರುಕಟ್ಟೆ.

* **ಸಮತೋಲನ** ಮಾರುಕಟ್ಟೆಯಲ್ಲಿ ಎಲ್ಲಾ ಅನುಭೋಗಿಗಳು ಮತ್ತು ಉದ್ಯಮ ಘಟಕಗಳ ಯೋಜನೆಗಳು ಸರಿಸಮನಾದಾಗ ಇರುವ ಒಂದು ಸನ್ನಿವೇಶವಾಗಿದೆ.

* **ಅಧಿಕ ಬೇಡಿಕೆ** ಒಂದು ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯು, ಮಾರುಕಟ್ಟೆಯ ಪೂರೈಕೆಗಿಂತ ಅಧಿಕವಾಗಿದ್ದರೆ, ಆ ಬೆಲೆಯಲ್ಲಿ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆಯು ಅಸ್ತಿತ್ವದಲ್ಲಿದೆ ಎಂದು ಹೇಳಲಾಗುತ್ತದೆ.

* **ಅಧಿಕ ಪೂರೈಕೆ** ಒಂದು ಬೆಲೆಯಲ್ಲಿ ಮಾರುಕಟ್ಟೆ ಪೂರೈಕೆಯು ಮಾರುಕಟ್ಟೆ ಬೇಡಿಕೆಗಿಂತ ಅಧಿಕವಾಗಿದ್ದರೆ, ಅ ಬೆಲೆಯಲ್ಲಿ ಅಧಿಕ ಪೂರೈಕೆಯು ಮಾರುಕಟ್ಟೆಯಲ್ಲಿ ಅಸ್ತಿತ್ವದಲ್ಲಿರುತ್ತದೆ ಎಂಬುದನ್ನು ಇದು ಹೇಳುತ್ತದೆ.

* **ಉದ್ಯಮ ಘಟಕದ ಪೂರೈಕೆ ರೇಖೆ** ಮಾರುಕಟ್ಟೆಯ ಬೆಲೆಯ ವಿವಿಧ ಮೌಲ್ಯಗಳಲ್ಲಿ ಗರಿಷ್ಠ ಲಾಭ ಗಳಿಸುವ ಉದ್ಯಮ ಘಟಕವು ಉತ್ಪಾದಿಸಲು ಆಯ್ಕೆ ಮಾಡಿಕೊಳ್ಳುವ ಉತ್ಪನ್ನ ಮಟ್ಟಗಳನ್ನು ತೋರಿಸುತ್ತದೆ.

* **ಸ್ಥಿರ ಉತ್ಪನ್ನ** ಅಲ್ಪಾವಧಿಯಲ್ಲಿ ಬದಲಾಗದ ಉತ್ಪನ್ನವಾಗಿದ್ದು, ಇದನ್ನು ಸ್ಥಿರ ಉತ್ಪನ್ನ ಎಂದು ಕರೆಯುತ್ತೇವೆ.

* **ಆದಾಯದ ಪರಿಣಾಮ** ಬೆಲೆಯ ಬದಲಾವಣೆಯ ಕಾರಣದಿಂದ ಕೊಳ್ಳುವ ಶಕ್ತಿಯಲ್ಲಿ ಬದಲಾವಣೆಯಾದಾಗ, ಒಂದು ಸರಕಿನ ಗರಿಷ್ಠ ಪ್ರಮಾಣದಲ್ಲಾಗುವ ಬದಲಾವಣೆಯನ್ನು ಆದಾಯದ ಪರಿಣಾಮ ಎನ್ನುತ್ತೇವೆ.

* **ಏರಿಕೆ ಪ್ರತಿಫಲಗಳ ಪ್ರಮಾಣ** ಒಂದು ಉತ್ಪಾದನಾ ಬಿಂಬಕದ ಲಕ್ಷಣವಾಗಿದ್ದು, ಎಲ್ಲಾ ಆದಾನಗಳಲ್ಲಿ ಪ್ರಮಾಣಾನುಗುಣ ಏರಿಕೆಯಾದಾಗ, ಉತ್ಪನ್ನದಲ್ಲಿ ಅದಕ್ಕಿಂತ ಅಧಿಕ ಪ್ರಮಾಣದಲ್ಲಿ ಹೆಚ್ಚಾಗುವುದನ್ನು ಇದು ತಿಳಿಸುತ್ತದೆ.

* **ಔದಾಸೀನ್ಯ ವಕ್ರರೇಖೆ** ಅನುಭೋಗಿಯು ಔದಾಸೀನ್ಯತೆ ಹೊಂದಿರುವ ಎಲ್ಲಾ ಬಿಂದುಗಳನ್ನು ಸೇರಿಸುವಂತಹ ರೇಖೆಯನ್ನು ಔದಾಸೀನ್ಯ ವಕ್ರರೇಖೆ ಎನ್ನುತ್ತೇವೆ.

* **ಕೆಳದರ್ಜೆ ಸರಕು** ಅನುಭೋಗಿಯ ಅಧಿಕ ಆದಾಯದೊಂದಿಗೆ ಬೇಡಿಕೆ ಕಡಿಮೆಯಾಗುವ ಒಂದು ಸರಕನ್ನು ಕೆಳದರ್ಜೆ ಸರಕು ಎಂದು ಕರೆಯುತ್ತೇವೆ.

* **ಸಮ ಉತ್ಪನ್ನ** ಒಂದೇ ಗರಿಷ್ಠ ಸಾಧ್ಯತಾ ಮಟ್ಟದ ಉತ್ಪನ್ನವನ್ನು ನೀಡುವ ಎರಡು ಆದಾನಗಳ ಎಲ್ಲಾ ಸಾಧ್ಯತಾ ಸಂಯೋಜನೆಗಳ ಗಣವಾಗಿವೆ.

* **ಬೇಡಿಕೆ ನಿಯಮ** ಅನುಭೋಗಿಯ ಒಂದು ಸರಕಿನ ಬೇಡಿಕೆಯು ಅನುಭೋಗಿಯ ಆದಾಯದ ದಿಕ್ಕಿನಲ್ಲಿಯೇ ಚಲಿಸಿದರೆ, ಆ ಅನುಭೋಗಿಯ ಬೇಡಿಕೆಯು ಆ ಸರಕಿನ ಬೆಲೆಯೊಂದಿಗೆ ವಿರುದ್ಧ ಸಂಬಂಧವನ್ನು ಹೊಂದಿರಲೇಬೇಕು.

* **ಇಳಿಮುಖದ ಸೀಮಾಂತ ಉತ್ಪನ್ನದ ನಿಯಮ** ಇತರೆ ಆದಾನಗಳ ಸ್ಥಿರತೆಯೊಂದಿಗೆ ಒಂದು ಆದಾನವನ್ನು ಹೆಚ್ಚಿಸಿದಾಗ, ಆ ಆದಾನದ ಸೀಮಾಂತ ಉತ್ಪನ್ನವು ಕೊನೆಯಲ್ಲಿ ಒಂದು ಹಂತವನ್ನು ತಲುಪಿದ ನಂತರ ಇಳಿಮುಖವಾಗಲು ಪ್ರಾರಂಭಿಸುತ್ತದೆ.

* **ಬದಲಾಗುವ ಪರಿಣಾಮಗಳ ನಿಯಮ** ಒಂದು ಆದಾನದ ಬಳಕೆ ಮಟ್ಟ ಕಡಿಮೆಯಿದ್ದಾಗ, ಆ ಆದಾನ ಘಟಕದ ಸೀಮಾಂತ ಉತ್ಪನ್ನ ಪ್ರಾರಂಭದಲ್ಲಿ ಅದರ ಬಳಕೆ ಹಂತದೊಂದಿಗೆ ಏರಿಕೆಯಾಗುತ್ತದೆ. ಆದರೆ, ಒಂದು ನಿರ್ದಿಷ್ಟ ಬಳಕೆ ಹಂತವನ್ನು ತಲುಪಿದಾಗ ಇದು ಇಳಕೆಯಾಗಲು ಪ್ರಾರಂಭಿಸುತ್ತದೆ.
* **ದೀರ್ಘಾವಧಿ** ಎಲ್ಲಾ ಉತ್ಪಾದನಾಂಗಗಳು ಬದಲಾಗಬಹುದಾದ ಒಂದು ಕಾಲಾವಧಿ ಎಂದು ಉಲ್ಲೇಖಿಸಿಲಾಗಿದೆ.
* **ಸೀಮಾತ ವೆಚ್ಚ** ಉತ್ಪನ್ನದ ಪ್ರತೀ ಘಟಕದ ಬದಲಾವಣೆಯಿಂದ ಒಟ್ಟು ವೆಚ್ಚದಲ್ಲಾಗುವ ಬದಲಾವಣೆ.
* **ಸೀಮಾಂತ ಉತ್ಪನ್ನ** ಎಲ್ಲಾ ಆದಾನಗಳು ಸ್ಥಿರವಾಗಿದ್ದಾಗ, ಆದಾನದಲ್ಲಿನ ಪ್ರತೀ ಘಟಕದ ಬದಲಾವಣೆಯಿಂದ ಉತ್ಪನ್ನದಲ್ಲಾಗುವ ಬದಲಾವಣೆ.
* **ಸೀಮಾಂತ ಆದಾಯ** ಉತ್ಪನ್ನದ ಪ್ರತಿ ಘಟಕದ ಮಾರಾಟದ ಬದಲಾವಣೆಯಿಂದ ಒಟ್ಟು ಆದಾಯದಲ್ಲಾಗುವ ಬದಲಾವಣೆ.
* **ಒಂದು ಉತ್ಪಾದನಾಂಗದ ಸೀಮಾಂತ ಆದಾಯದ ಉತ್ಪನ್ನ (MRP)** ಉತ್ಪಾದನಾಂಗದ ಸೀಮಾಂತ ಉತ್ಪನ್ನ ಪಟ್ಟು ಅದರ ಸೀಮಾಂತ ಆದಾಯದಿಂದ ಗುಣಿಸಿದಾಗ ಲಭಿಸುತ್ತದೆ.
* **ಮಾರುಕಟ್ಟೆ ಪೂರೈಕೆ ರೇಖೆ** ಮಾರುಕಟ್ಟೆ ಬೆಲೆಯ ವಿವಿಧ ಮೌಲ್ಯಗಳಿಗನುಗುಣವಾಗಿ ಉದ್ಯಮ ಘಟಕಗಳು ಮಾರುಕಟ್ಟೆಯಲ್ಲಿ ಸಮಗ್ರವಾಗಿ ಉತ್ಪಾದಿಸಿದ ಉತ್ಪನ್ನದ ಮಟ್ಟಗಳನ್ನು ತೋರಿಸುತ್ತದೆ.
* **ಸ್ವಾಮ್ಯಯುತ ಪೈಪೋಟಿ** ಒಂದು ಮಾರುಕಟ್ಟೆಯ ರಚನೆಯಾಗಿದ್ದು, ಅಧಿಕ ಸಂಖ್ಯೆಯ ಮಾರಾಟಗಾರರು ವೈವಿಧ್ಯಮಯ, ಆದರೆ, ಬದಲೀ ಸರಕುಗಳನ್ನು ಮಾರಾಟ ಮಾಡುವ ಮಾರುಕಟ್ಟೆಯಾಗಿದೆ.
* **ಏಕಸ್ವಾಮ್ಯ** ಯಾವುದೇ ಎರಡು ಸಂಯೋಜನೆಗಳ ನಡುವೆ ಅನುಭೋಗಿಯು ಕೊನೆಪಕ್ಷ ಒಂದು ಸರಕು ಹೆಚ್ಚಾಗಿರುವ ಮತ್ತು ಇನ್ನೊಂದು ಸರಕು ಎರಡನೆ ಸಂಯೋಜನೆಗಿಂತ ಕಡಿಮೆಯಾಗದಂತಿರುವ ಸಂಯೋಜನೆಗೆ ಆದ್ಯತೆ ನೀಡಿದಾಗ ಮಾತ್ರ ಅನುಭೋಗಿಯ ಒಲವು ಏಕತಾನಾತ್ಮಕವಾಗಿರುತ್ತದೆ..
* **ಏಕಾತ್ಮಕ ಒಲವು** ಒಬ್ಬ ಅನುಭೋಗಿಯ ಒಲವು ಏಕಾತ್ಮಕವಾಗಿದ್ದು, ಯಾವುದೇ ಎರಡು ಬಂಡಲ್ (ಎರಡು ರೇಖೆಗಳಲ್ಲಿನ 2 ಸಂಯೋಜನೆಗಳು)ಳಿದ್ದಾಗ, ಅವುಗಳ ನಡುವೆ ಅನುಭೋಗಿಯು ಇನ್ನೊಂದು ಬಂಡಲ್‌ಗೆ ಹೋಲಿಸಿದಾಗ ಒಂದು ಸರಕು ಹೆಚ್ಚಾಗಿದ್ದು ಮತ್ತು ಇನ್ನೊಂದು ಸರಕು ಕಡಿಮೆಯಾದಂತಹ ಆ ಬಂಡಲ್ ಕಡೆಗೆ ತೋರುವ ಒಲವಾಗಿದೆ.
* **ಸಾಮಾನ್ಯ ಸರಕು** ಅನುಭೋಗಿಯ ಆದಾಯದ ಹೆಚ್ಚಳದೊಂದಿಗೆ ಬೇಡಿಕೆಯನ್ನು ಹೆಚ್ಚಿಸಿಕೊಳ್ಳುವ ಸರಕನ್ನು ಸಾಮಾನ್ಯ ಸರಕು ಎಂದು ಕರೆಯುತ್ತೇವೆ.
* **ಸಾಮಾನ್ಯ ಲಾಭ** ಉದ್ಯಮ ಘಟಕದ ಕೇವಲ ವ್ಯಕ್ತ ವೆಚ್ಚಗಳು ಮತ್ತು ಸದಾವಕಾಶ ವೆಚ್ಚಗಳನ್ನು ಭರಿಸುವಂತಹ ಲಾಭದ ಮಟ್ಟವನ್ನು ಸಾಮಾನ್ಯ ಲಾಭ ಎಂದು ಕರೆಯುತ್ತೇವೆ.
* **ಕೆಲಜನ ಸ್ವಾಮ್ಯ** ಒಂದಕ್ಕಿಂತ ಹೆಚ್ಚು ಮಾರಾಟಗಾರರ (ಆದರೆ ಕೆಲವು)ನ್ನು ಒಳಗೊಂಡಿರುವ ಒಂದು ಮಾರುಕಟ್ಟೆ.
* **ಸದಾವಕಾಶ ವೆಚ್ಚ** ಎರಡನೇ ಉತ್ತಮ ಚಟುವಟಿಕೆ ಬಿಟ್ಟುಕೊಟ್ಟ ಗಳಿಕೆಯಾಗಿದೆ.

* **ಪರಿಪೂರ್ಣ ಪೈಪೋಟಿ** (i) ಮಾರುಕಟ್ಟೆಯಲ್ಲಿ ಎಲ್ಲಾ ಉದ್ಯಮಘಟಕಗಳು ಒಂದೇ ಸರಕನ್ನು ಉತ್ಪಾದಿಸುವುದು ಮತ್ತು (ii) ಕೊಳ್ಳುವವರು ಮತ್ತು ಮಾರಾಟಗಾರರು ಬೆಲೆ ಪಡೆಯುವವರಾಗಿರುವ ಒಂದು ಮಾರುಕಟ್ಟೆಯ ಪರಿಸರ.

* **ಬೆಲೆಮಿತಿ** ಸರ್ಕಾರ ಸರಕು ಅಥವ ಸೇವೆಗಳ ಬೆಲೆಯ ಮೇಲೆ ವಿಧಿಸುವ ಮೇಲ್ಮಿತಿ (ಗರಿಷ್ಠ ಮಿತಿ) ಯನ್ನು ಬೆಲೆ ಮಿತಿ ಎನ್ನುತ್ತೇವೆ.

* **ಒಂದು ಸರಕಿನ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು** ಅದರ ಬೆಲೆಯಲ್ಲಿನ ಶೇಕಡವಾರು ಬದಲಾವಣೆಯಿಂದ ಭಾಗಿಸಲ್ಪಟ್ಟ ಬೇಡಿಕೆಯಲ್ಲಿನ ಶೇಕಡವಾರು ಬದಲಾವಣೆ ಎಂದು ವ್ಯಾಖ್ಯಾನಿಸಲಾಗಿದೆ.

* **ಬೆಲೆಪೂರೈಕೆ ಸ್ಥಿತಿಸ್ಥಾಪಕತ್ವ** ಸರಕಿನ ಮಾರುಕಟ್ಟೆ ಬೆಲೆಯಲ್ಲಿನ ಶೇಕಡ 1ರಷ್ಟು ಬದಲಾವಣೆಯ ಕಾರಣದಿಂದ ಪೂರೈಕೆ ಪ್ರಮಾಣದಲ್ಲಾದ ಶೇಕಡವಾರು ಬದಲಾವಣೆ.

* **ಬೆಲೆ ಅಂತಸ್ತು** ಒಂದು ನಿರ್ದಿಷ್ಠ ಸರಕು ಅಥವಾ ಸೇವೆಯ ಬೆಲೆಯ ಮೇಲೆ ಸರ್ಕಾರ ವಿಧಿಸುವ ಕೆಳಮಿತಿಯನ್ನು ಬೆಲೆ ಅಂತಸ್ತು ಎಂದು ಕರೆಯುತ್ತೇವೆ.

* **ಬೆಲೆ ಗೆರೆಯು ಒಂದು ಸಮತಲ ರೇಖೆಯಾಗಿದ್ದು,** ಇದು ಮಾರುಕಟ್ಟೆ ಬೆಲೆ ಮತ್ತು ಒಂದು ಉದ್ಯಮಘಟಕದ ಉತ್ಪನ್ನದ ನಡುವಿನ ಸಂಬಂಧವನ್ನು ತೋರಿಸುತ್ತದೆ.

* **ಉತ್ಪಾದನಾ ಬಿಂಬಕ** ಆದಾನಗಳ ವಿವಿದ ಸಂಯೋಜನೆಗಳ ಬಳಕೆಯಿಂದ ಉತ್ಪಾದಿಸಬಹುದಾದ ಗರಿಷ್ಠ ಪ್ರಮಾಣದ ಉತ್ಪನ್ನವನ್ನು ತೋರಿಸುತ್ತದೆ.

* **ಲಾಭ** ಒಂದು ಉದ್ಯಮ ಘಟಕದ ಒಟ್ಟು ಆದಾಯ ಮತ್ತು ಅದರ ಒಟ್ಟು ಉತ್ಪಾದನಾ ವೆಚ್ಚದ ನಡುವಿನ ವ್ಯತ್ಯಾಸವಾಗಿದೆ.

* **ಅಲ್ಪಾವಧಿ** ಕೆಲವು ಉತ್ಪಾದನಾಂಗಗಳು ಬದಲಾಗದೇ ಇರುವಂತಹ ಒಂದು ಕಾಲಾವಧಿ ಎಂದು ವ್ಯಾಖ್ಯಾನಿಸಲ್ಪಡುತ್ತದೆ.

* **ಸ್ಥಗಿತತೆಯ ಬಿಂದು ಮುಚ್ಚುವ ಬಿಂದು** ಅಲ್ಪಾವಧಿಯಲ್ಲಿ, ಇದು AVC ರೇಖೆಯ ಕನಿಷ್ಠ ಬಿಂದು ಮತ್ತು ದೀರ್ಘಾವಧಿಯಲ್ಲಿ, ಇದು LRAC ರೇಖೆಯ ಕನಿಷ್ಠ ಬಿಂದುವಾಗಿರುತ್ತದೆ.

* **ಬದಲಿಕೆಯ ಪರಿಣಾಮ** ಒಂದು ಸರಕಿನ ಬೆಲೆಯಲ್ಲಿ ಬದಲಾವಣೆಯಾದಾಗ ಅದರ ಗರಿಷ್ಠ ಪ್ರಮಾಣದಲ್ಲಾಗುವ ಬದಲಾವಣೆ ಮತ್ತು ಅನುಭೋಗಿಯ ಬೆಲೆ ಬದಲಾವಣೆಯ ಪೂರ್ವದಲ್ಲಿ ಖರೀದಿಸುವ ಪ್ರಮಾಣಕ್ಕಿಂತ ಖರೀದಿಸಬಹುದಾದ ಬಂಡಲ್‌ಗಳಿಗೆ ಆಕೆಯ ಆದಾಯವು ಹೊಂದಾಣಿಕೆಯಾಗುವುದನ್ನು ಬದಲಿಕೆಯ ಪರಿಣಾಮ ಎನ್ನುತ್ತೇವೆ.

* **ಅಸಾಧಾರಣ ಲಾಭ** ಒಂದು ಉದ್ಯಮ ಘಟಕವು ಗಳಿಸುವ ಸಾಧಾರಣ ಲಾಭಕ್ಕಿಂತ ಅಧಿಕವಾದ ಲಾಭವನ್ನು ಅಸಾಧರಣ ಲಾಭ ಎನ್ನುತ್ತೇವೆ.

* **ಒಟ್ಟು ವೆಚ್ಚ** ಒಟ್ಟು ಸ್ಥಿರ ವೆಚ್ಚ ಮತ್ತು ಒಟ್ಟು ಬದಲಾಗುವ ವೆಚ್ಚದ ಮೊತ್ತವಾಗಿದೆ.

* **ಒಟ್ಟು ಸ್ಥಿರ ವೆಚ್ಚ** ಒಂದು ಉದ್ಯಮ ಘಟಕವು ಸ್ಥಿರ ಆದಾನಗಳನ್ನು ನೇಮಕ ಮಾಡಲು ಮಾಡುವ ವೆಚ್ಚವನ್ನು ಒಟ್ಟು ಸ್ಥಿರ ವೆಚ್ಚ ಎನ್ನುತ್ತೇವೆ.

* **ಒಟ್ಟು ಭೌತಿಕ** ಉತ್ಪನ್ನವು ಒಟ್ಟು ಉತ್ಪನ್ನವೇ ಆಗಿದೆ.

* **ಒಟ್ಟು ಉತ್ಪನ್ನ** ಇತರೆ ಎಲ್ಲಾ ಆದಾನಗಳನ್ನು ಸ್ಥಿರವಾಗಿಟ್ಟು ನಾವು ಒಂದು ಆದಾನವನ್ನು ಬದಲಿಸಿದಾಗ, ಉತ್ಪಾದನಾ ಬಿಂಬಕದಿಂದ ಆ ಆದಾನದ ವಿವಿದ ಹಂತಗಳಲ್ಲಿ ಪಡೆಯುವ ವಿವಿದ ಹಂತದ ಉತ್ಪನ್ನ. ಬದಲಾಗುವ ಆದಾನ ಮತ್ತು ಉತ್ಪನ್ನ ನಡುವಿನ ಸಂಬಂಧವನ್ನು ಒಟ್ಟು ಉತ್ಪನ್ನ ಎಂದು ವ್ಯಾಖ್ಯಾನಿಸಲಾಗಿದೆ.
* **ಒಟ್ಟು ಪ್ರತಿಫಲ** ಒಟ್ಟು ಉತ್ಪನ್ನವೇ ಆಗಿದೆ.
* **ಒಟ್ಟು ಆದಾಯ** ಒಂದು ಉದ್ಯಮ ಘಟಕವು ಮಾರಾಟ ಮಾಡುವ ಸರಕುಗಳ ಪ್ರಮಾಣದಿಂದ ಗುಣಿಸಲ್ಪಟ್ಟ ಮಾರುಕಟ್ಟೆ ಬೆಲೆಗೆ ಸಮನಾಗಿರುತ್ತದೆ.
* **ಒಟ್ಟು ಆದಾಯದ** ರೇಖೆಯು ಉದ್ಯಮ ಘಟಕದ ಒಟ್ಟು ಆದಾಯದ ಮತ್ತು ಉದ್ಯಮ ಘಟಕದ ಉತ್ಪನ್ನ ಮಟ್ಟದ ನಡುವಿನ ಸಂಬಂದವನ್ನು ತಿಳಿಸುತ್ತದೆ.
* **ಒಟ್ಟು ಬದಲಾಗುವ ವೆಚ್ಚ** ಒಂದು ಉದ್ಯಮ ಘಟಕವು ಬದಲಾಗುವ ಆದಾನಗಳನ್ನು ನೇಮಕ ಮಾಡಲು ಮಾಡುವ ವೆಚ್ಚವನ್ನು ಒಟ್ಟು ಬದಲಾಗುವ ವೆಚ್ಚ ಎಂದು ಕರೆಯುತ್ತೇವೆ.
* **ಒಂದು ಉತ್ಪಾದನಾಂಗದ ಸೀಮಾಂತ ಉತ್ಪನ್ನದ ಮೌಲ್ಯ** ಒಂದು ಉತ್ಪಾದನಾಂಗದ ಸೀಮಾಂತ ಉತ್ಪನ್ನದ ಪ್ರಮಾಣಗಳ ಬೆಲೆ
* **ಬದಲಾಗುವ ಆದಾನ** ಬದಲಾಗಬಹುದಾದ ಆದಾನದ ಒಂದು ಮೊತ್ತ

❖ ❖ ❖ ❖